# ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ

## (ದಕ್ಷಿಣ ಕರ್ನಾಟಕ ಐಯ್ದು ಜಿಲ್ಲೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್, ಆಫ್ ಫಿಲಾಸಫಿ (ಪಿಎಚ್.ಡಿ.,) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)


ಸಂಶೋಧಕರು

**ನಟರಾಜು ಜೆ.ಆರ್.**

ಮಾರ್ಗದರ್ಶಕರು

**ಡಾ. ಸಾಂಬಮೂರ್ತಿ**

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ



ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭

478

# ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ

**(ದಕ್ಷಿಣ ಕರ್ನಾಟಕ ಆಯ್ದ ಜಿಲ್ಲೆಗಳನ್ನು ಅನುಲಕ್ಷಿಸಿ)**

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.,) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)



ಸಂಶೋಧಕರು
**ನಟರಾಜು ಜೆ.ಆರ್.**

ಮಾರ್ಗದರ್ಶಕರು
**ಡಾ. ಸಾಂಬಮೂರ್ತಿ**
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ

**ಕನ್ನಡ ಭಾಷಾಧ್ಯಯನ ವಿಭಾಗ**
ಭಾಷಾನಿಕಾಯ
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
ವಿದ್ಯಾರಣ್ಯ ೫೮೩೨೭೬

೨೦೧೭

# ಮಾರ್ಗದರ್ಶಕರ ಪ್ರಮಾಣ ಪತ್ರ

ನಟರಾಜು ಜೆ.ಆರ್. ಅವರು ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ (ದಕ್ಷಿಣ ಕರ್ನಾಟಕ ಆಯ್ದ ಜಿಲ್ಲೆಗಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 23.11.2017

## ಸಂಶೋಧಕರ ಪ್ರಮಾಣ ಪತ್ರ

ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ (ದಕ್ಷಿಣ ಕರ್ನಾಟಕ ಆಯ್ದ ಜಿಲ್ಲೆಗಳನ್ನು ಅನುಲಕ್ಷಿಸಿ) ೨೦೬ ಮಹಾಪ್ರಬಂಧವನ್ನು **ಡಾ. ಸಾಂಬಮೂರ್ತಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

**ನಟರಾಜು ಜೆ.ಆರ್.**
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ: 23.11.2017

## ಪರಿವಿಡಿ

## ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

೧.೧. ಅಧ್ಯಯನದ ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ತುಮಕೂರಿನ ಇತಿಹಾಸ

೧.೫. ಅಧ್ಯಯನದ ಮಿತಿ

೧.೬. ಅಧ್ಯಯನದ ವೈಧಾನಿಕತೆ

೧.೭. ಅಧ್ಯಯನದ ಸ್ವರೂಪ

## ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

### ೧.೧. ಪ್ರಸ್ತಾವನೆ

ಹೆಸರುಗಳಿಲ್ಲದ ವ್ಯಕ್ತಿಗಳಿಲ್ಲ, ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟ. ಹೆಸರಿಲ್ಲದ ಯಾವ ವಸ್ತು, ವ್ಯಕ್ತಿಯನ್ನು ಜಗತ್ತಿನಲ್ಲಿ ಕಾಣಲಾಗದು. ಮನುಷ್ಯನಿಗೆ ಸಂವಹನ ಮಾಧ್ಯಮವಾಗಿ ಭಾಷೆ ಎಷ್ಟು ಮುಖ್ಯವೋ ವ್ಯಕ್ತಿನಾಮಗಳು ಅಷ್ಟೇ ಮುಖ್ಯ. ಈ ಹೇಳಿಕೆಗೆ ಪೂರಕವಾಗಿ ಕೆಲವು ವಿದ್ವಾಂಸರ ಮಾತುಗಳನ್ನು ಉದಾಹರಣೆಯಾಗಿ ನೋಡುವುದಾದರೆ, "ನೈಜವಾದ ಜ್ಞಾನದ ವಿಕಾಸವು ಆರಂಭಗೊಳ್ಳುವುದು ವಸ್ತು ಮತ್ತು ವ್ಯಕ್ತಿಗಳಿಗೆ ಯೋಗ್ಯವಾದ ಹೆಸರನ್ನು ನೀಡಿದಾಗಲೇ ಎಂದು ಚೀನಾ ದೇಶದ ಗಾದೆಯೊಂದು ಹೇಳುತ್ತದೆ"(ನಾರಾಯಣ ಕೆ.ವಿ(ಸಂ), ೨೦೦೮, ಭಾಷಾ: ವಿಶ್ವಕೋಶ, ಪು.೧೧೪). ಹಾಗಯೆ ಬೃಹಸ್ಪತಿಯ ಹೇಳುತಾನೆ "ನಾಮಾಖಿಲಸ್ಯ ವ್ಯವಹಾರ ಹೇತು" ಅಂದರೆ ಎಲ್ಲಾ ವ್ಯವಹಾರಕ್ಕೂ ಮೂಲಕಾರಣ ಹೆಸರು(ಆರ್.ಬಿ.ಪಾಂಡೆ, ಹಿಂದೂ ಸಂಸ್ಕಾರಾಸ್, ಪು.೭೮,೮೦,೮೧). "ಪರಸ್ಪರ ವ್ಯವಹಾರಕ್ಕೆ ಹೆಸರುಗಳು ಅಗತ್ಯ, ಹೆಸರು ವ್ಯಕ್ತಿ (ಅಥವಾ ವಸ್ತು)ಯನ್ನು ಒಟ್ಟು ಸಮೂಹದಿಂದ ಪ್ರತ್ಯೇಕಿಸಿ ಅವನಿಗೆ (ಅಥವಾ ಅದಕ್ಕೆ) ಒಂದು ಅಸ್ತಿತ್ವವನ್ನು ತಂದುಕೊಡುತ್ತದೆ. ಹೆಸರಿಲ್ಲದ ವ್ಯಕ್ತಿ ಒಂದು ವಸ್ತು ಮಾತ್ರ, ಹೆಸರು ಅವನಿಗೆ ಒಂದು ವ್ಯಕ್ತಿತ್ವವನ್ನು, ಅವನದೇ ಆದ ಅಸ್ಮಿತೆಯನ್ನು ತಂದುಕೊಡುತ್ತದೆ"(ಚಿದಾನಂದಮೂರ್ತಿ ಎಂ., ೨೦೦೨, ವಾಗರ್ಥ, ಸಂ–೨, ಪು.೩೧).

"ವ್ಯಕ್ತಿಯನ್ನು ಸಮೂಹದಿಂದ ಗುರ್ತಿಸಿಕೊಡುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು ಮತ್ತು ಪ್ರಮುಖವಾದುದು, ಇದನ್ನು ಮೀರಿಸುವ ಬೇರೊಂದು ಸಾಧನ ಇನ್ನೂ ಶೋಧವಾಗಿಲ್ಲವೆಂದೇ ಹೇಳಬೇಕು"(ಕಲಬುರ್ಗಿ ಎಂ.ಎಂ., ೨೦೧೨, ಕನ್ನಡ ನಾಮ ವಿಜ್ಞಾನ, ಪು.೧).

ಈ ಮೇಲಿನ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿದರೆ ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳು ಇಲ್ಲ, ಅಂತಹ ವ್ಯಕ್ತಿಗಳನ್ನು ಒಟ್ಟು ಸಮೂಹದಿಂದ ಬೇರ್ಪಡಿಸಿ ಗುರುತಿಸಲು, ಅವರೊಂದಿಗೆ

ಸಂವಹನ ಮಾಡಲು ಸಾಧ್ಯವಿಲ್ಲ, ಇಂತಹ ಪ್ರಮುಖ ಸಾಧನವಾಗಿರುವ ವ್ಯಕ್ತಿನಾಮಗಳನ್ನು ಕುರಿತು ಅಧ್ಯಯನ ಮಾಡುವುದು ಅವಶ್ಯವೆನಿಸುತ್ತದೆ.

ಮನುಷ್ಯ ಆರಂಭ ಕಾಲದಿಂದ ತನ್ನ ಜೀವನ ವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡು ನಾಗರಿಕನಾಗಿ ಹೊಸ ಆಲೋಚನೆಗಳ ದಿಕ್ಕಿಗೆ ತನ್ನ ಚಿತ್ತವನ್ನು ಕೇಂದ್ರೀಕರಿಸಿಕೊಂಡು ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ ತಾನು ಸಂವಹನ ಸಾಧನವಾಗಿ ಬಳಸಿಕೊಂಡ ಹೆಸರುಗಳಲ್ಲಿ ಬದಲಾವಣೆಗಳಾಗಿರುವುದನ್ನು ಗುರುತಿಸಬಹುದಾಗಿದೆ. ವ್ಯಕ್ತಿನಾಮಗಳ ಬೆಳವಣಿಗೆಯನ್ನು ಆರಂಭಕಾಲದಿಂದ ಗಮನಿಸುತ್ತ ಬಂದರೆ ಇವು ಮನುಷ್ಯನ ಅವಿಭಾಜ್ಯ ಅಂಗಗಳಾಗಿ ಕಂಡುಬರುತ್ತವೆ. ಇಂತಹ ವಿಶಿಷ್ಟತೆ ಹೊಂದಿರುವ ವ್ಯಕ್ತಿನಾಮಗಳು ಒಟ್ಟು ಸಮುದಾಯದ ಜನರ ಸಂಸ್ಕೃತಿಯ ಚರಿತ್ರೆಯನ್ನು ಕಟ್ಟಿಕೊಡಬಲ್ಲ ಸಾಮರ್ಥ್ಯ ಪಡೆದುಕೊಂಡಿವೆ.

ಜಗತ್ತಿನಲ್ಲಿ ಮನುಷ್ಯ ಪ್ರಾಣಿಗಳಿಗಿಂತ ವಿಶೇಷ ಎನಿಸಿಕೊಳ್ಳಲು ಅವನ ಭಾಷೆಯೆ ಕಾರಣ. ತನ್ನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಭಾಷೆಯನ್ನು ಸೃಷ್ಟಿಸಿಕೊಂಡು ಸಂವಹನ ಸಾಧನವಾಗಿ ಬಳಸಿಕೊಂಡನು. ಭಾಷೆಯ ಸೃಷ್ಟಿಯಿಂದಾಗಿ ಮನುಷ್ಯನ ಚಿಂತನೆಗಳು ಹಲವು ಆಯಾಮಗಳನ್ನು ಪಡೆದುಕೊಂಡವು. ಈ ಚಿಂತನೆಗಳು ಮನುಷ್ಯನನ್ನು ಪ್ರಾಣಿ ಅವಸ್ಥೆಯಿಂದ ಬೇರ್ಪಡಿಸಿ ಸಂಘಜೀವಿಯಾಗಿ ಬದುಕಲು ಸಹಾಯಕವಾದವು. ಹೀಗೆ ಸಂಘಜೀವಿಯಾಗಿ ಬದುಕು ಆರಂಭಿಸಿದ ಮನುಷ್ಯನಿಗೆ ಆರಂಭದಲ್ಲಿ ಅನೇಕ ಸಮಸ್ಯೆಗಳು ಎದುರಾಗಿರುವ ಸಾಧ್ಯತೆಯಿದೆ. ಅದರಲ್ಲಿ ಪ್ರಮುಖವಾಗಿ ಒಟ್ಟು ಸಮುದಾಯದಿಂದ ವ್ಯಕ್ತಿಯನ್ನು ಬೇರ್ಪಡಿಸಿ ಗುರುತಿಸಲು ಸಾಧ್ಯವಾಗಿರಲಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಒಬ್ಬ ಇನ್ನೊಬ್ಬನ ಗೈರು ಹಾಜರಿಯಲ್ಲಿ ಆತನ ಬಗ್ಗೆ ಪರಿಚಯ ಮಾಡಿಕೊಡಬೇಕಾದರೆ ಆತ ಯಾರು, ಆತನನ್ನು ಗುರುತಿಸುವ ಬಗೆ ಹೇಗೆ, ಎನ್ನುವ ಪ್ರಶ್ನೆಗಳು ಮೂಡಿರುವ ಸಾಧ್ಯತೆಯಿದೆ. ಹೀಗೆ ಗೈರು ಹಾಜರಿಯಲ್ಲಿ ವ್ಯಕ್ತಿಯನ್ನು ಪ್ರತ್ಯೇಕಿಸಿ ಗುರುತಿಸುವುದು ಅತಿಮುಖ್ಯ ಎನಿಸಿದಾಗ, ಆ ವ್ಯಕ್ತಿಗೆ ಹೆಸರಿನ ಅನಿವಾರ್ಯತೆ ಸೃಷ್ಟಿಯಾಗಿರಬೇಕು. ಮುಂದುವರೆದು ವ್ಯಕ್ತಿಗೆ ಹೆಸರನ್ನು ನೇಮಿಸುವುದಾದರೂ ಹೇಗೆ ಎಂಬ ಪ್ರಶ್ನೆ ಮೂಡುವುದು ಸಹಜ. ಯಾವ ಹೆಸರು ಬಳಸಬೇಕು, ಆ ಹೆಸರನ್ನು ಯಾವ ಮೂಲದಿಂದ ಪಡೆಯಬೇಕು ಮುಂತಾದ ಪ್ರಶ್ನೆಗಳನ್ನು ಎದುರಿಸಿ ಕೊನೆಗೆ ಹೆಸರನ್ನು ಬಳಸುವುದನ್ನು ಆರಂಭಿಸಿರಬೇಕು. ಆದರೆ ಈ ಹೆಸರುಗಳನ್ನು ಇಂತಹದ್ದೇ ನಿರ್ದಿಷ್ಟ ಆಕರಗಳಿಂದ ಪಡೆಯುತ್ತಿದ್ದೇವೆ ಎಂಬ ಕಲ್ಪನೆ ಅವರಿಗಿಲ್ಲದಿದ್ದರೂ ತನಗೆ ಗೊತ್ತಿಲ್ಲದೆ ವ್ಯಕ್ತಿಯ ಚಹರೆಗಳ ಮೂಲಕವೋ ಅಥವಾ ಇತರೆ ಮೂಲಗಳಿಂದಲೋ ಹೆಸರಿಡಲು ಆರಂಭಿಸಿದರು. ಈಗಲೂ ಮನುಷ್ಯ ಗುರುತಿಸಲ್ಪಡುವುದು ಈ ಹೆಸರುಗಳಿಂದಲೇ ಎಂದು ತಿಳಿಯಬಹುದು.

ನಾಮ ನಿರ್ದೇಶನ ಮಾಡುವ ಸಂಪ್ರದಾಯ ಆರಂಭವಾದ ಮೊದಲಲ್ಲಿ ಎಲ್ಲಾ ವ್ಯಕ್ತಿಗಳಿಗೂ ಹೆಸರಿಡುವ ಸಂಪ್ರದಾಯ ರೂಢಿಗೆ ಬಂದಿರಲಾರದು. ದೈನಂದಿನ ವ್ಯವಹಾರಕ್ಕೆ ಅಗತ್ಯ ಎನಿಸುವ ವ್ಯಕ್ತಿಗಳಿಗೆ ಮೊದಲು ಹೆಸರಿಟ್ಟು, ಹಂತ ಹಂತವಾಗಿ ಮನುಷ್ಯ ಸಮುದಾಯ ವಿಸ್ತಾರ ಹೊಂದಿದಂತೆ ಎಲ್ಲಾ ವ್ಯಕ್ತಿಗಳು ಪರಸ್ಪರ ಅಗತ್ಯ ಎನಿಸಿದಾಗ ಸಾರ್ವತ್ರಿಕವಾಗಿ ಎಲ್ಲಾ ವ್ಯಕ್ತಿಗಳಿಗೂ ಹೆಸರಿಡುವ

ಪದ್ಧತಿ ಬಳಕೆಗೆ ಬಂದಿರಬೇಕು. ಹಾಗೂ ಈ ಹೆಸರುಗಳನ್ನು ವ್ಯಕ್ತಿ ಚಿಕ್ಕ ವಯಸ್ಸಿನಲ್ಲಿರುವಾಗಲೇ ಇಡುವ ಪದ್ಧತಿ ಅಸ್ತಿತ್ವಕ್ಕೆ ಬಂದಿರಬಹುದು. ಏಕೆಂದರೆ ವ್ಯಕ್ತಿ ಮಾತನಾಡಲು ಆರಂಭಿಸಿದ ಅವಧಿಯಿಂದಲೇ ಒಟ್ಟು ಸಮೂಹದೊಂದಿಗೆ ವ್ಯವಹರಿಸ ಬೇಕಾಗುವುದರಿಂದ ಹೆಸರುಗಳು ಅನಿವಾರ್ಯ ಎನಿಸುತ್ತವೆ.

ನಾಮ ನಿರ್ದೇಶನ ಮಾಡುವ ಆರಂಭದಲ್ಲಿ ಯಾವ ಸ್ವರೂಪದ ಹೆಸರುಗಳನ್ನು ಬಳಸುತ್ತಿದ್ದರು ಎಂಬುದು ಕುತೂಹಲದ ವಿಷಯವಾದರೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಈ ಕುರಿತ ಲಿಖಿತ ಆಕರಗಳು ಎಲ್ಲಿಯೂ ಲಭ್ಯವಾಗುವುದಿಲ್ಲ.

ಆದರೂ ನಾಮಾಧ್ಯಯನಕಾರರು ಕೆಲವು ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅಂದರೆ ವ್ಯಕ್ತಿಗೆ ಆರಂಭದಲ್ಲಿ ಅನ್ವರ್ಥಕ ನಾಮಗಳು ಬಳಕೆಯಾಗುತ್ತಿದ್ದಿರಬಹುದು(ಕಲಬುರ್ಗಿ ಎಂ.ಎಂ., ೨೦೧೨, ಕನ್ನಡ ನಾಮ ವಿಜ್ಞಾನ, ಪು–೧೧). ಅಂದರೆ ವ್ಯಕ್ತಿಯ ಶಾರೀರಿಕ ಲಕ್ಷಣ ಮತ್ತು ಗುಣಗಳಿಗೆ ಅನುಗುಣವಾಗಿ ಹೆಸರಿಡುತ್ತಿದ್ದರು.

| | | |
|---|---|---|
| ಕೆಂಪಗಿದ್ದರೆ | – | ಕೆಂಪ, ಕೆಂಪಿ, ಕೆಂಚ, ಕೆಂಚಿ |
| ದಪ್ಪವಾಗಿದ್ದರೆ | – | ದಡಿಯ, ದೊಡ್ಡ, ಡುಮ್ಮ, ಡುಮ್ಮಿ, ಡುಬ್ಬಿ |
| ಸಣ್ಣಗಿದ್ದರೆ | – | ಸಣ್ಣ, ಸಣ್ಣಿ, ಚಿಕ್ಕ, ಚಿಕ್ಕಿ |
| ಕಣ್ಣುಕಾಣದಿದ್ದರೆ | – | ಕುರುಡ, ಕುರುಡಿ |
| ಮಾತುಬಾರದವರಿಗೆ | – | ಮೂಗ, ಮೂಗಿ |
| ಕಿವಿ ಕೇಳದಿದ್ದರೆ | – | ಕಿವುಡ, ಕಿವುಡಿ, ಕೆಪರ, ಕೆಪರಿ |
| ಕಾಲು ಊನವಾಗಿದ್ದರೆ | – | ಕುಂಟ, ಕುಂಟಿ |
| ಸೊಂಟ ಊನವಾಗಿದ್ದರೆ | – | ಎಳವ, ಎಳವಿ |
| ಕೈ ಊನವಾಗಿದ್ದರೆ | – | ಮೋದ, ಮೋದಿ |
| ಕಪ್ಪಗಿದ್ದರೆ | – | ಕರಿಯ, ಕರ್ರಿ |
| ಎತ್ತರವಾಗಿದ್ದರೆ | – | ಲಂಬೂ, ಉದ್ದಾನಪ್ಪ, ಉದ್ದಾನಮ್ಮ |
| ಕುಳ್ಳಗಿದ್ದರೆ | – | ಕುಳ್ಳ ಕುಳ್ಳಿ, ಗಿಡ್ಡ, ಗಿಡ್ಡಿ |

ಹೀಗೆ ಇನ್ನೂ ಹಲವು ವಿಶೇಷಣಗಳಿಂದ ವ್ಯಕ್ತಿಗಳನ್ನು ಗುರುತಿಸುವ ಸಾಧ್ಯತೆ ಇರುತ್ತದೆ. ಈ ಅನ್ವರ್ಥಕ ನಾಮಗಳಲ್ಲಿಯು ಸಹ ಆರಂಭದ ದಿನಗಳಲ್ಲಿ ರೂಪವಾಚನಾಮಗಳಾಗಿದ್ದು ಅಂದರೆ ಶಾರೀರಿಕ ಲಕ್ಷಣಗಳ ಆಧಾರದ ಮೇಲೆ ನಾಮನಿರ್ದೇಶನ ಮಾಡುತ್ತಿದ್ದು ನಂತರದಲ್ಲಿ ವ್ಯಕ್ತಿಯ ಗುಣ ವಿಶೇಷಣಗಳನ್ನು ಬಳಸಿರುವ ಸಾಧ್ಯತೆ ಇದೆ.

ವ್ಯಕ್ತಿಯನ್ನು ಸಮೂಹದಿಂದ ಬೇರ್ಪಡಿಸಿ ಗುರುತಿಸುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು. ಇದನ್ನು ಮೀರಿ ನಿಲ್ಲುವಂತಹ ವಸ್ತು ಮತ್ತೊಂದಿಲ್ಲ. ಗ್ರಾಮನಾಮ, ಸ್ಥಳನಾಮ, ವ್ಯಕ್ತಿನಾಮ, ಕುಟುಂಬ ನಾಮಗಳಿಗಿಂತ ಸಮುದಾಯದಲ್ಲಿ ವ್ಯಕ್ತಿ ನಾಮಗಳೇ ಪ್ರಥಮಸ್ಥಾನ ಪಡೆದು ಕೊಳ್ಳುತ್ತವೆ ಮತ್ತು

ವೈವಿಧ್ಯಮಯವಾಗಿರುತ್ತದೆ. ಆಧುನಿಕ ಕಾಲದಲ್ಲಿ ವ್ಯಕ್ತಿನಾಮಗಳೆಲ್ಲವೂ ಅಂಕಿತ ನಾಮಗಳೇ ಆಗಿವೆ. ಹಾಗಾಗಿ ಅವುಗಳನ್ನು ನಿರ್ದೇಶಿಸಿದ ಹಿರಿಯರ ಬಯಕೆ ಹಾರೈಕೆಗಳು, ಅವರ ಕೌಟುಂಬಿಕ ಪರಂಪರೆಗಳು ಈ ಹೆಸರುಗಳಲ್ಲಿ ಅಡಗಿರುತ್ತವೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ.

ಸಮುದಾಯದಲ್ಲಿ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಂತೆಲ್ಲ ಕುಟುಂಬಗಳಾಗಿ ಗ್ರಾಮಗಳಾಗಿ ವೈವಿಧ್ಯಮಯ ಜೀವನ ವಿಧಾನವನ್ನು ರೂಢಿಸಿಕೊಂಡುದರ ಪರಿಣಾಮ ಅನ್ವರ್ಥ ನಾಮಗಳಿಂದ ಮಾತ್ರ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಾಗದೆ, ಅಂಕಿತನಾಮಗಳು ಪ್ರವೇಶ ಪಡೆದವು ಎಂದು ಊಹಿಸಬಹುದು. ಅನ್ವರ್ಥ ನಾಮಗಳಿಗೆ ಬದಲಾಗಿ ದೈವ, ಸಾಂಸ್ಕೃತಿಕ ನಾಯಕರ ಹೆಸರು, ಪ್ರಕೃತಿವಾಚಿ ಹೆಸರು ಇನ್ನೂ ಇತರೆ ಆಕರಗಳಿಂದ ಹೆಸರುಗಳನ್ನು ನಿರ್ದೇಶನ ಮಾಡಲು ಆರಂಭಿಸಿರಬೇಕು. ಈ ಸಂದರ್ಭದಲ್ಲಿ ಹೆಸರುಗಳು ಸಾಂಸ್ಕೃತಿಕ ಆಯಾಮವನ್ನು ಪಡೆದುಕೊಂಡಿರುವ ಸಾಧ್ಯತೆಯುಂಟು. ಈ ಎಲ್ಲಾ ಬದಲಾವಣೆಗಳು ಯಾವುದೋ ನಿರ್ದಿಷ್ಟ ಕಾಲಮಿತಿಯಲ್ಲಿ ಆಗಿರುವ ಬದಲಾವಣೆಗಳ ಬದಲಾಗಿ ವಿವಿಧ ಕಾಲಘಟ್ಟಗಳಲ್ಲಿ ಹಂತ ಹಂತವಾಗಿ ಬದಲಾವಣೆಯಾಗಿರುವಂತಹವುಗಳು.

ಪ್ರಾಚೀನ ಹೆಸರುಗಳು ಆಧುನಿಕತೆಯ ಪ್ರಭಾವದಿಂದಾಗಿ ಸ್ಥಿತ್ಯಂತರ ಪಡೆದುಕೊಳ್ಳುತ್ತಿವೆ ಹಾಗೂ ಈ ಕಾಲಮಾನದ ಜನ ಸಮುದಾಯದಿಂದ ಕಣ್ಮರೆಯಾಗುತ್ತಿವೆ ಎಂಬುದನ್ನು ಗಮನಿಸಬೇಕಿದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿ ನಾಮಗಳು ಆರಂಭ ಕಾಲದಿಂದ ಇಂದಿನವರೆಗೂ ಯಾವ ರೀತಿಯ ಬದಲಾವಣೆಗಳನ್ನು ಮಾಡಿಕೊಂಡಿವೆ ಎಂಬುದನ್ನು ದಾಖಲಿಸುವ ಮತ್ತು ವಿಶ್ಲೇಷಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಇದರ ಮೂಲಕ ಸಾಂಸ್ಕೃತಿಕ ಚರಿತ್ರೆಯ ಮೇಲೆ ವ್ಯಕ್ತಿನಾಮಗಳು ಬೀರಿರುವ ಪ್ರಭಾವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ದಿಸೆಯಲ್ಲಿ ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

### ೧.೨. ಅಧ್ಯಯನದ ಉದ್ದೇಶ

ಸಂಶೋಧನೆಯ ಉದ್ದೇಶ ಒಂದು ನಿರ್ದಿಷ್ಟ ಸಂಶೋಧನಾ ಯೋಜನೆ ಅಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕಾರ್ಯಕ್ಕೆ ಮಾರ್ಗ ಸೂಚಿಯೂ ಹೌದು. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯು ಒಂದು ಹೆಸರನ್ನು ಹೊಂದಿರುತ್ತಾನೆ ಹಾಗಾಗಿ ಸಂಶೋಧನೆಯಲ್ಲಿ ವ್ಯಕ್ತಿನಾಮಗಳ ಅಧ್ಯಯನವು ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು ಒಂದು ವಿಶೇಷ ಕ್ಷೇತ್ರವಾಗಿದೆ. ಇಂತಹ ವಿಶಾಲ ವ್ಯಾಪ್ತಿ ಹೊಂದಿರುವ ವ್ಯಕ್ತಿನಾಮಗಳು ವಿವಿಧ ಕಾಲಘಟ್ಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಬೆಳೆದುಬಂದ ಬದಲಾವಣೆಯ ಸ್ವರೂಪವನ್ನು ಗುರುತಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಭೌಗೋಳಿಕ ಪರಿಸರದಲ್ಲಿ ವಾಸಿಸುವ ಬೇರೆ ಬೇರೆ ಸಮುದಾಯಗಳು ತಮ್ಮ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ನಾಮ ನಿರ್ದೇಶನ ಮಾಡುವುದು ಸಾಮಾನ್ಯ. ಇಂತಹ ಸಂದರ್ಭದಲ್ಲಿ

ಪ್ರಾದೇಶಿಕವಾಗಿ ವ್ಯಕ್ತಿನಾಮಗಳು ಯಾವ ಸ್ವರೂಪ ಪಡೆದಿವೆ, ಈ ಸ್ವರೂಪ ಪಡೆಯಲು ಕಾರಣವೇನು ಎಂಬುದನ್ನು ಪ್ರಾದೇಶಿಕ ನೆಲೆಯಲ್ಲಿ ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

ವ್ಯಕ್ತಿನಾಮಗಳು ಕಾಲದಿಂದ ಕಾಲಕ್ಕೆ ತನ್ನ ಸ್ವರೂಪದಲ್ಲಿ ಮಾರ್ಪಾಡು ಮಾಡಿಕೊಳ್ಳುತ್ತಾ ಬಂದಿವೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಪ್ರಾಚೀನ ಕಾಲದಿಂದ ಇಂದಿನವರೆಗೂ ವ್ಯಕ್ತಿನಾಮಗಳ ಸ್ವರೂಪದಲ್ಲಾದ ಬದಲಾವಣೆಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಶ್ಲೇಷಿಸುವುದು ಅಧ್ಯಯನದ ಉದ್ದೇಶವಾಗಿದೆ.

ವ್ಯಕ್ತಿನಾಮಗಳು ಕೇವಲ ಅಂಕಿತನಾಮಗಳಾಗಿ ಉಳಿದಿಲ್ಲ, ಅವು ತನ್ನೊಳಗೆ ತಮ್ಮ ಸಮುದಾಯದ ಆಚಾರ-ವಿಚಾರ, ರೂಢಿ, ಸಂಪ್ರದಾಯ, ನಂಬಿಕೆ, ಜೀವನ ಪದ್ಧತಿಗಳನ್ನು ಒಳಗೊಂಡಿರುತ್ತವೆ. ಹಾಗೆಯೇ ಹೆಸರುಗಳು ಸಮುದಾಯದಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯ ಸಂಸ್ಕೃತಿಯ ಪ್ರತೀಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳ ಸಾಮಾಜಿಕ ನೆಲೆಯನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ.

ಆಧುನಿಕ ನೆಲೆಯಲ್ಲಿ ವ್ಯಕ್ತಿನಾಮಗಳ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳಿದ್ದು ಸಾಮಾಜಿಕ ಕಟ್ಟುಪಾಡುಗಳನ್ನು ತಿರಸ್ಕರಿಸಿ ಸಾರ್ವತ್ರಿಕವಾಗಿ ಯಾವ ಹೆಸರನ್ನು ಬೇಕಾದರೂ ಬಳಸಬಹುದಾದ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ. ಉದಾ:-ಮೇಲ್ಜಾತಿ, ಮೇಲ್ವರ್ಗದವರು ಬಳಸುವ ಸಂಸ್ಕೃತ ಮೂಲದ ಹೆಸರುಗಳನ್ನು ಕೆಳಸಮುದಾಯಗಳಲ್ಲಿ ಬಳಸಲಾಗುತ್ತದೆ. ಇವುಗಳೆಲ್ಲವುಗಳನ್ನು ಆಧುನಿಕ ನೆಲೆಯಲ್ಲಿ ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

ವ್ಯಕ್ತಿನಾಮಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವ ಮೂಲಕ ಸಮುದಾಯದ ನೆಲೆ, ವೃತ್ತಿ, ಜಾತಿ, ಮನೋಧರ್ಮ ಇತ್ಯಾದಿ ಅಂಶಗಳನ್ನು ಗುರುತಿಸಬಹುದಾಗಿದ್ದು, ಒಂದು ಜನಾಂಗದ ಸಾಂಸ್ಕೃತಿಕ ಮಹತ್ವವನ್ನು ಕಟ್ಟಿಕೊಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶದಿಂದ ಈ ಅಧ್ಯಯನ ನಡೆಸಲಾಗಿದೆ.

ವ್ಯಕ್ತಿನಾಮಗಳು ಮೂಲತಃ ಭಾಷಿಕ ರಚನೆಗಳೇ ಆಗಿವೆ. ಈ ವ್ಯಕ್ತಿನಾಮಗಳನ್ನು ಭಾಷಾ ವಿಜ್ಞಾನದ ಪರಿಭಾಷೆಯಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕ ಎಂದು ವಿಭಾಗ ಮಾಡಿಕೊಂಡು, ನಿರ್ದಿಷ್ಟದ ಸ್ಥಾನದಲ್ಲಿ ನಿಜನಾಮಗಳನ್ನು, ವಾರ್ಗಿಕದ ಸ್ಥಾನದಲ್ಲಿ ವೃತ್ತಿ, ಜಾತಿ, ಸಂಬಂಧ ವಾಚಕಗಳನ್ನು ಕುರಿತಂತೆ ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಭಾಷಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ವ್ಯಕ್ತಿನಾಮಗಳ ಮೂಲಕ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ತಿಳಿಯಬಹುದು. ಅಲ್ಲದೆ ಕಾಲಾಂತರದಲ್ಲಿ ನಾಮ ನಿರ್ದೇಶನದಲ್ಲಾಗುತ್ತಿರುವ ಬದಲಾವಣೆಗಳನ್ನು ಗುರುತಿಸಬಹುದು. ಇಂತಹ ಬದಲಾವಣೆಗಳನ್ನು ವಿವಿಧ ಕಾಲಘಟ್ಟಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ದೈವ, ಪುರಾಣ ಕಥೆ, ಹಿರಿಯರು, ಜನಪ್ರಿಯ ವ್ಯಕ್ತಿಗಳು, ರಾಜಕೀಯ ವ್ಯಕ್ತಿಗಳು, ಸಾಂಸ್ಕೃತಿಕ ವೀರರು, ಕುಲದೈವಗಳು, ಕ್ರೀಡಾ ಪಟುಗಳು, ಸಿನಿಮಾ ನಟರು, ಸ್ವಾತಂತ್ರ್ಯ ಹೋರಾಟಗಾರರು,

ತಮ್ಮ ಪೂರ್ವಿಕರು, ನವ ಮಾಧ್ಯಮಗಳು, ಆಧುನಿಕರಣದ ಪ್ರಭಾವ ಇತ್ಯಾದಿ ಅಂಶಗಳು ನಾಮ ನಿರ್ದೇಶನದ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

ವ್ಯಕ್ತಿ ನಾಮಗಳು ಭಾಷಿಕ ಸಾಧನಗಳಾಗಿರುವಂತೆ ಸಂಸ್ಕೃತಿಯ ಪಳೆಯುಳಿಕೆಯೂ ಆಗಿರುತ್ತವೆ. ಯಾವುದೇ ವ್ಯಕ್ತಿಗೆ ನಾಮ ನಿರ್ದೇಶನ ಮಾಡಬೇಕಾದರೆ ಅದರ ಹಿಂದೆ ಹಲವು ಕಾರಣಗಳಿರುತ್ತವೆ ಮತ್ತು ವ್ಯಕ್ತಿನಾಮಗಳು ಆಯಾ ಕಾಲದ ಸಾಂಸ್ಕೃತಿಕ ಅಭಿವ್ಯಕ್ತಿಗಳಾಗಿರುವುದರಿಂದ ಸಂಸ್ಕೃತಿ ಬದಲಾದಂತೆ ವ್ಯಕ್ತಿನಾಮಗಳು ಬದಲಾಗುತ್ತಿರುತ್ತವೆ. ಇದರಿಂದಾಗಿ ಪ್ರಾಚೀನ ಸಂಸ್ಕೃತಿ ಕಣ್ಮರೆಯಾದಂತಾಗುತ್ತದೆ. ಹಾಗಾಗಿ ವ್ಯಕ್ತಿ ನಾಮಗಳ ಚಾರಿತ್ರಿಕ ಅಧ್ಯಯನ ಮಾಡುವುದು ಸಂಸ್ಕೃತಿಯನ್ನು ದಾಖಲಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ್ನ ಮಾಡಲಾಗಿದೆ.

ಆಧುನೀಕರಣ ಮತ್ತು ಜಾಗತೀಕರಣ ದೇಸೀ ಸಂಸ್ಕೃತಿಗಳ ಮೇಲೆ ಗಾಢವಾದ ಪ್ರಭಾವ ಬೀರಿದೆ. ಪರಿಣಾಮವಾಗಿ ವ್ಯಕ್ತಿನಾಮಗಳ ಬಳಕೆಯಲ್ಲಿ ಹಲವು ಬದಲಾವಣೆಗಳಾಗಿವೆ. ಅಂತಹ ಬದಲಾವಣೆಗಳನ್ನು ಗುರುತಿಸುವ ಕೆಲಸ ಮಾಡಲಾಗಿದೆ.

ವ್ಯಕ್ತಿನಾಮಗಳಿಗೆ ವಾರ್ಗಿಕಗಳು ಸಂಬಂಧವಾಚಿಗಳಾಗಿ, ವೃತ್ತಿ ವಾಚಿಗಳಾಗಿ, ಜಾತಿವಾಚಿಗಳಾಗಿ ಯಾವ ಯಾವ ಕಾಲಮಾನಗಳಲ್ಲಿ ಬಳಕೆಯಾಗಿದ್ದವು, ಯಾವ ಕಾಲಮಾನದಲ್ಲಿ ಕಣ್ಮರೆಯಾದವು, ಪುನಃ ಯಾವ ಸಂದರ್ಭದಲ್ಲಿ ಇವುಗಳು ಪ್ರವೇಶ ಪಡೆದವು ಎಂಬುದನ್ನು ವಿಶ್ಲೇಷಿಸುವ ಉದ್ದೇಶದಿಂದ ಅಧ್ಯಯನ ನಡೆಸಲಾಗಿದೆ.

ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳು ಕಾಣಿಸಿಕೊಂಡಿದ್ದು ವಿಶೇಷವಾಗಿ ಭಾವನಾಮಗಳು ಹೆಚ್ಚಾಗಿ ಬಳಕೆಯಾಗುತ್ತಿವೆ ಹಾಗೂ ಸಂಸ್ಕೃತ ಜನ್ಯ ವ್ಯಕ್ತಿನಾಮಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದು ಇದಕ್ಕೆ ಕಾರಣಗಳನ್ನು ತಿಳಿಯುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳಿಗೆ ಜಾತಿವಾಚಿ ವಾರ್ಗಿಕಗಳು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ರೀತಿಯ ಬದಲಾವಣೆಗೆ ಕಾರಣ ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

### ೧.೩. ಅಧ್ಯಯನದ ವ್ಯಾಪ್ತಿ

ಸಂಶೋಧನೆ ಯಶಸ್ಸು ಕಾಣಬೇಕಾದರೆ ಅದಕ್ಕೆ ನಿರ್ದಿಷ್ಟ ಚೌಕಟ್ಟು ಅಗತ್ಯ. ಅಂದರೆ ವ್ಯಾಪ್ತಿ ಪ್ರಮುಖವಾಗುತ್ತದೆ. ಒಂದು ಚೌಕಟ್ಟಿನೊಳಗೆ ನಡೆಸಿದ ಅಧ್ಯಯನಗಳು ವ್ಯವಸ್ಥಿತವಾಗಿರುತ್ತವೆ. ಹಾಗಾಗಿ ಪ್ರಸ್ತುತ ಅಧ್ಯಯನವನ್ನು ಪ್ರಾದೇಶಿಕವಾಗಿ ಮತ್ತು ಕಾಲಮಿತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ದಿಷ್ಟ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ವ್ಯಕ್ತಿನಾಮಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡಬೇಕಾದರೆ ಅದರ ವ್ಯಾಪಕತೆ ತುಂಬಾ ವಿಸ್ತಾರವಾಗಿದುದಾಗಿದೆ. ಹಾಗಾಗಿ ದಕ್ಷಿಣ ಕರ್ನಾಟಕ ಪರಿಸರವನ್ನು ಅಧ್ಯಯನ ವ್ಯಾಪ್ತಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಆದರೆ ಅಧ್ಯಯನದಲ್ಲಿ ಚಾರಿತ್ರಿಕ ಅಂಶಗಳನ್ನು ಹೊರತುಪಡಿಸಿ

ಸಾಮಾಜಿಕ, ಪ್ರಾದೇಶಿಕ ಮತ್ತು ಆಧುನಿಕ ನೆಲೆಗಳನ್ನು ಕುರಿತು ವಿಶ್ಲೇಷಣೆ ಮಾಡುವಾಗ ಹೆಚ್ಚಿನ ವ್ಯಕ್ತಿನಾಮಗಳನ್ನು ತುಮಕೂರು ಪರಿಸರಕ್ಕೆ ಸೀಮಿತಗೊಳಿಸಲಾಗಿದೆ. ಈ ಪರಿಸರದ ವ್ಯಕ್ತಿನಾಮಗಳು ದಕ್ಷಿಣ ಕರ್ನಾಟಕದ ಇತರೆ ಭಾಗಗಳಲ್ಲಿಯೂ ಕಂಡುಬಂದಿದ್ದು ವ್ಯಕ್ತಿ ನಾಮಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವಾಗ ದೊರೆತ ಆಕರಗಳ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಪ್ರತಿನಿಧಿಸುವಂತಹವುಗಳಾಗಿವೆ. ಇದು ಪ್ರಸ್ತುತ ಅಧ್ಯಯನಕ್ಕೆ ಅನಿವಾರ್ಯವೂ ಆಗಿದೆ. ತುಮಕೂರು ಜಿಲ್ಲೆಯನ್ನು ಅನುಲಕ್ಷಿಸಿ ಎಂದು ಗುರುತಿಸಿಕೊಳ್ಳಲಾಗಿದ್ದು, ಪ್ರಾದೇಶಿಕವಾಗಿ ಅಧ್ಯಯನ ಮಾಡುವಲ್ಲಿ ತುಮಕೂರು ಪರಿಸರದ ವ್ಯಕ್ತಿನಾಮಗಳನ್ನು ಬಳಸಿಕೊಳ್ಳಲಾಗಿದೆ. ಈ ಎಲ್ಲಾ ಹೆಸರುಗಳು ದಕ್ಷಿಣ ಕರ್ನಾಟಕ ಪರಿಸರದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳ ಪ್ರಾತಿನಿಧಿಕವಾಗಿರುತ್ತವೆ. ಈ ಪರಿಸರದಲ್ಲಿ ಹಲವು ಜಾತಿ, ವರ್ಗ, ಧರ್ಮ, ಭಾಷೆಗೆ ಸೇರಿದ ಜನಾಂಗ ನೆಲೆಸಿದೆ. ಹಾಗಾಗಿ ನನ್ನ ಅಧ್ಯಯನಕ್ಕೆ ಕನ್ನಡ ಮಾತೃಭಾಷೆಯ, ಹಿಂದೂ ಧರ್ಮಕ್ಕೆ ಸೇರಿದ ಹಾಗೂ ಈ ಪರಿಸರದಲ್ಲಿ ಇರುವ ಸಮುದಾಯಗಳಿಗೆ ಸೇರಿದ ವ್ಯಕ್ತಿನಾಮಗಳನ್ನು ಗಮನಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಸ್ವಾತಂತ್ರ್ಯಾನಂತರದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದ್ದು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ವ್ಯಕ್ತಿನಾಮಗಳನ್ನು ಗಮನಿಸಲಾಗಿದೆ. ಅದರಲ್ಲಿ ಸುಮಾರು ಒಂದು ಸಾವಿರಕ್ಕು ಹೆಚ್ಚು ಸ್ವಾತಂತ್ರ್ಯನಂತರದ ಹೆಸರುಗಳನ್ನು ಹಾಗೂ ಎರಡು ನೂರಕ್ಕು ಹೆಚ್ಚು ಶಾಸನಗಳಲ್ಲಿ, ಕಾವ್ಯಗಳಲ್ಲಿ ಬಳಕೆಯಾಗಿರುವ ಹೆಸರುಗಳನ್ನು ಉದಾಹರಣೆಗಾಗಿ ಬಳಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಶಾಸನಗಳು, ಪುರಾಣ ಕಥೆಗಳು, ಕಾವ್ಯ, ಕೃತಿಗಳು ಮುಂತಾದವುಗಳ ಜೊತೆಗೆ ಸ್ವಾತಂತ್ರ್ಯಾ ನಂತರದ ಮತದಾರರ ಪಟ್ಟಿ, ಶಾಲಾ ದಾಖಲಾತಿ, ಕಂದಾಯ ಇಲಾಖೆಯ ದಾಖಲೆಗಳು ಹಾಗೂ ಇನ್ನು ಕೆಲವು ದಾಖಲೆಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಪ್ರಮುಖವಾಗಿ ವ್ಯಕ್ತಿನಾಮಗಳ ರಚನೆಯಲ್ಲಿ ಬರುವ ಎರಡು ಘಟಕಗಳಾದ ನಿರ್ದಿಷ್ಟ ಮತ್ತು ವಾರ್ಗಿಕಗಳನ್ನು ಕುರಿತು ವಿಶ್ಲೇಷಣೆ ಮಾಡುವಾಗ ನಿರ್ದಿಷ್ಟದ ಘಟಕಕ್ಕೆ ಹೆಚ್ಚು ಪ್ರಾಧಾನ್ಯವನ್ನು ನೀಡಲಾಗಿದೆ. ಅಂದರೆ ನಿರ್ದಿಷ್ಟವೇ ವ್ಯಕ್ತಿಯ ಮೂಲ ಹೆಸರಾಗಿರುವುದರಿಂದ ಅದರ ರಚನೆಯನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನವನ್ನು ಪ್ರಮುಖವಾಗಿ ಚಾರಿತ್ರಿಕ ನೆಲೆಗಳು, ಪ್ರಾದೇಶಿಕ ನೆಲೆಗಳು, ಸಾಮಾಜಿಕ ನೆಲೆಗಳು ಮತ್ತು ಆಧುನಿಕ ನೆಲೆಗಳು ಎಂಬ ನಾಲ್ಕು ಪ್ರಧಾನ ಅಂಶಗಳನ್ನಿಟ್ಟುಕೊಂಡು ಚರ್ಚಿಸಲಾಗಿದ್ದು ಇದರ ಜೊತೆಗೆ ಈ ನಾಲ್ಕು ನೆಲೆಗಳಲ್ಲಿನ ವ್ಯಕ್ತಿ ನಾಮಗಳನ್ನು ರಾಚನಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.

### ೧.೪. ತುಮಕೂರಿನ ಇತಿಹಾಸ

ತುಮಕೂರು ದಕ್ಷಿಣ ಕರ್ನಾಟಕದಲ್ಲಿ ಪ್ರಮುಖ ಜಿಲ್ಲಾ ಕೇಂದ್ರವಾಗಿದೆ. ತುಮಕೂರಿನ ಮೂಲ ಹೆಸರು ತುಮ್ಮೆಗನೂರು. ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಬೆಂಗಳೂರಿನಿಂದ ೭೧ ಕಿ.ಮೀ. ದೂರದಲ್ಲಿದೆ.

ತುಮಕೂರು–ಬೆಂಗಳೂರು ಹೆದ್ದಾರಿಯಲ್ಲಿ ಕ್ಯಾತಸಂದ್ರದ ಬಳಿ ಇರುವ ಶ್ರೀ ಸಿದ್ಧಗಂಗಾ ಮಠ ವಿಶ್ವವಿಖ್ಯಾತವಾಗಿದೆ. ಬೆಂಗಳೂರು–ಮಧುಗಿರಿ ಹೆದ್ದಾರಿಯಲ್ಲಿರುವ ಸಿದ್ಧರ ಬೆಟ್ಟವು ಗಿಡಮೂಲಿಕೆಗಳಿಗೆ ಮತ್ತು ಅಲ್ಲಿನ ಸಿದ್ಧರು ಮತ್ತು ಸಂತರಿಗಾಗಿ ಪ್ರಸಿದ್ಧವಾಗಿದೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿರುವ ಎಡೆಯೂರು ಸಿದ್ಧಲಿಂಗೇಶ್ವರ ಕ್ಷೇತ್ರ ಮತ್ತು ಕಗ್ಗೆರೆ ಪ್ರಮುಖ ವೀರಶೈವ ಪುಣ್ಯ ಕ್ಷೇತ್ರಗಳಾಗಿವೆ. ತುಮಕೂರು ಜಿಲ್ಲೆಯಲ್ಲಿರುವ ತಿಪಟೂರು ತೆಂಗಿನ ಕೃಷಿಗೆ ಹೆಸರಾಗಿದ್ದು ಕಲ್ಪತರು ನಾಡು ಎಂದು ಖ್ಯಾತಿ ಪಡೆದಿದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿರುವ ಶ್ರೀ ಲಕ್ಷ್ಮೀದೇವಸ್ಥಾನವು ರಾಜ್ಯಾದ್ಯಂತ ಪ್ರಸಿದ್ಧಿ ಪಡೆದಿರುವ ಪುಣ್ಯಕ್ಷೇತ್ರವಾಗಿದೆ. ದೇವರಾಯನದುರ್ಗದ ಯೋಗನರಸಿಂಹ, ಭೋಗನರಸಿಂಹ ಸ್ವಾಮಿ ದೇವಸ್ಥಾನವೂ ಇಲ್ಲಿ ಉಂಟು. ತುಮಕೂರು ಹಲವು ಕೈಗಾರಿಕೆಗಳನ್ನು ಹೊಂದಿದ್ದು ಪ್ರಸ್ತುತ ಮುಚ್ಚಲ್ಪಟ್ಟಿರುವ ಎಚ್.ಎಂ.ಟಿ., ಗ್ರಾನೈಟ್, ಆಹಾರ ಸಂಸ್ಕರಣ ಘಟಕ, ಅಕ್ಕಿಗಿರಣಿ, ಎಣ್ಣೆ ಗಿರಣಿ, ಸ್ಟೀಲ್ ಕಾರ್ಖಾನೆ ಮುಂತಾದವು. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ತವರು ಎನಿಸಿಕೊಂಡಿದೆ. ಸಿದ್ಧಗಂಗಾಮಠದ ಶಿಕ್ಷಣ ಸಂಸ್ಥೆಗಳು, ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ಶ್ರೀದೇವಿ ಶಿಕ್ಷಣ ಸಂಸ್ಥೆ, ಭಾರತಿ ಶಿಕ್ಷಣ ಸಂಸ್ಥೆ, ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆ, ಅಕ್ಷಯ ಶಿಕ್ಷಣ ಸಂಸ್ಥೆ, ಎಚ್.ಎಂ.ಎಸ್.ಶಿಕ್ಷಣ ಸಂಸ್ಥೆ ವಿಶ್ವಭಾರತಿ, ಸೇಕ್ರೇಡ್‌ಹಾರ್ಟ್, ಸರ್ವೋದಯ, ಸಪ್ತಗಿರಿ, ಮಾರುತಿ, ವಿದ್ಯಾನಿಕೇತನ, ವಿದ್ಯಾವಾಹಿನಿ, ವಿದ್ಯೋದಯ, ಆರ್ಯಭಾರತಿ, ಪ್ರಗತಿ, ಇಂದಿರಾ, ಎಸ್.ಆರ್.ಎಸ್., ಶೇಷಾದ್ರಿ ಮುಂತಾದವು ಪ್ರಮುಖ ಎನಿಸಿವೆ. ೨೦೦೪ರಿಂದ ತುಮಕೂರು ವಿಶ್ವವಿದ್ಯಾನಿಲಯ ಕಾರ್ಯಾರಂಭ ಮಾಡಿದೆ. ಪ್ರಖ್ಯಾತ ನಾಟಕ ಕಂಪನಿಯೂ, ಚಿತ್ರನಿರ್ಮಾಣ ಸಂಸ್ಥೆಯೂ ಆಗಿದ್ದ ಗುಬ್ಬಿ ನಾಟಕ ಕಂಪನಿಯ ಸಂಸ್ಥಾಪಕರಾದ ವೀರಣ್ಣನವರು ತುಮಕೂರು ಜಿಲ್ಲೆಯವರು. ತುಮಕೂರು ಜಿಲ್ಲೆಯಲ್ಲಿ ತುಮಕೂರು, ಗುಬ್ಬಿ, ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ, ಚಿಕ್ಕನಾಯಕನಹಳ್ಳಿ, ತಿಪಟೂರು, ಕುಣಿಗಲ್, ತುರುವೇಕೆರೆ ಎಂಬ ಹತ್ತು ತಾಲ್ಲೂಕುಗಳಿವೆ.

ಕರ್ನಾಟಕದಲ್ಲಿನ ನಾಟಕಗಳ ಹರಿಕಾರ ಪ್ರಸಿದ್ದ ಗುಬ್ಬಿಕಂಪನಿಯ ಸಂಸ್ಥಾಪಕ ಗುಬ್ಬಿವೀರಣ್ಣ, ನರಸಿಂಹರಾಜು, ಮಾಸ್ಟರ್ ಹಿರಣ್ಣಯ್ಯ, ಕೆ.ಹಿರಣ್ಣಯ್ಯ, ಜಗ್ಗೇಶ್, ಕುಣಿಗಲ್ ನಾಗಭೂಷಣ್, ಅರ್ಜುನ್ ಸರ್ಜಾ, ಕೆ.ಕಲ್ಯಾಣ್, ಮಂಜುಳ, ಚಿ.ಉದಯಶಂಕರ್, ರಂಗಾಯಣ ರಘು, ಎನ್.ಎಚ್.ನಾಗರಾಜ, ಪಿ.ಪ್ರಸಾದ್, ಬೆಳ್ಳಾವಿ ನರಹರಿಶಾಸ್ತ್ರಿ, ಬರಗೂರು ರಾಮಚಂದ್ರಪ್ಪ, ನಿಟ್ಟೂರು ನಂಜಯ್ಯ ಮುಂತಾದವರು ಈ ನಾಡಿನ ಪ್ರಸಿದ್ಧ ವ್ಯಕ್ತಿಗಳು. ತುಮಕೂರು ಪರಿಸರದಲ್ಲಿ ಎಡೆಯೂರು ಸಿದ್ಧಲಿಂಗೇಶ್ವರ, ಸೀಬಿ ನರಸಿಂಹಸ್ವಾಮಿ, ಸಿದ್ಧಗಂಗಾಮಠ, ಬೆಟ್ಟಹಳ್ಳಿ ಮಠ, ಉರಿಗದ್ದೇಶ್ವರ ದೇವಾಲಯ, ಗೂಳೂರುಗಣಪತಿ, ಕೈದಾಳ ಚೆನ್ನಕೇಶವ, ಗಂಗಾಧರೇಶ್ವರ ದೇವಾಲಯ, ಪಾತಾಳಗಂಗೆ, ದೇವರಾಯನ ದುರ್ಗದ ಯೋಗನರಸಿಂಹ, ಭೋಗನರಸಿಂಹ ದೇವಾಲಯ, ನಾಮದ ಚಿಲುಮೆ, ಮಂದರಗಿರಿ ಜೈನ ದೇವಸ್ಥಾನ, ನಿಜಗಲ್ಲು ಬೆಟ್ಟ, ಮಧುಗಿರಿ ಬೆಟ್ಟ, ಚೆನ್ನರಾಯದುರ್ಗ, ಸಿದ್ಧರಬೆಟ್ಟ, ಕ್ಯಾಮೇನಹಳ್ಳಿ ಜಾತ್ರೆ, ಮೈದಾಳ, ವಜ್ರ, ಮಾರ್ಕೋನಹಳ್ಳಿ ಅಣೆಕಟ್ಟೆ, ಕುಣಿಗಲ್ ಸೋಮೇಶ್ವರ, ಗುಬ್ಬಿ ಚನ್ನಬಸವೇಶ್ವರ,

ತುರುವೇಕೆರೆ ಚೆನ್ನಕೇಶವ, ಚಲುವನಾರಾಯಣ ಸ್ವಾಮಿ ದೇವಾಲಯ, ಹೆಬ್ಬೂರು ಕಾಮಾಕ್ಷಿಮಠ, ಚಿಕ್ಕಣಸ್ವಾಮಿ, ಜುಂಜಪ್ಪ ಸ್ವಾಮಿ, ರೇವಣಸಿದ್ಧೇಶ್ವರ ದೇವಸ್ಥಾನ, ಬೇವಿನಹಳ್ಳಿ ಕರಿಯಮ್ಮ, ಜುಂಜಪ್ಪ ದೇವಸ್ಥಾನ, ಹಾಗಲವಾಡಿ ಕರಿಯಮ್ಮ, ರಾಂಪುರದ ರಾಂಪುರದಮ್ಮ, ಮಧುಗಿರಿಯ ದಂಡಿನ ಮಾರಮ್ಮ, ಶಿರಾತಾಲೂಕಿನ ರಂಗಧಾಮ, ಮರಡಿ ರಂಗನಾಥ, ಮಾಗೂಡು ರಂಗನಾಥ, ಕಾರೆಹಳ್ಳಿ ಹನುಮಂತಪ್ಪ, ಪಾವಗಡ ಶನೇಶ್ವರ, ಅರಸಿಕೆರೆ ಗುಜ್ಜಾರಪ್ಪ, ಬಳ್ಳಾವಿ ಸೋಮೇಶ್ವರ, ಹರ್ತಿದುರ್ಗ, ಶಿರಾದ ಕೋಟೆ ಮುಂತಾದವು ಪ್ರಮುಖ ಪ್ರವಾಸಿ ಹಾಗೂ ಭಕ್ತಿ ಕೇಂದ್ರಗಳಾಗಿವೆ.

ತುಮಕೂರು ವಿಸ್ತೀರ್ಣದಲ್ಲಿ ೧೦,೫೯೭ ಕಿ.ಮಿ. ವಿಸ್ತಾರವನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ೨೬,೭೮,೯೮೦ ಜನಸಂಖ್ಯೆಯನ್ನು ಹೊಂದಿದ್ದು ಹತ್ತು ತಾಲೂಕುಗಳನ್ನು ಒಳಗೊಂಡ ಪ್ರದೇಶವಾಗಿದೆ.

ತುಮಕೂರು ಪ್ರದೇಶವು ಸಾಕಷ್ಟು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವುದನ್ನು ದೊರೆತ ಆಧಾರಗಳಿಂದ ಸ್ಪಷ್ಟಪಡಿಸ ಬಹುದಾಗಿದೆ. ಅವುಗಳಲ್ಲಿ ಮೊದಲನೆಯದು "ದ್ವಾಪರ ಯುಗದಲ್ಲಿ ಭರತಖಂಡದ ಸದ್ಧ್ಯುಮ್ನನೆಂಬ ರಾಜನಿದ್ದನು. ಅವನು ತನ್ನ ಅವಸಾನ ಕಾಲದಲ್ಲಿ ತನ್ನ ಮೂವರು ಮಕ್ಕಳಿಗೂ ರಾಜ್ಯವನ್ನು ಹಂಚಿಕೊಟ್ಟನು. ಅವರಲ್ಲಿ ನೀಲಧ್ವಜನಿಗೆ ಮಾಹಿಷ್ಮತಿಯೂ, ಹಂಸಧ್ವಜನಿಗೆ ಚಂದ್ರಪುರವೂ, ಮೂರನೆಯವನಿಗೆ ರತ್ನಪುರವೂ ಬಂದವು. ಹಂಸಧ್ವಜನ ಪಾಲಿಗೆ ಬಂದ ಚಂದ್ರಪುರದ ರಾಜ್ಯದಲ್ಲಿ ತುಮಕೂರು ಪ್ರದೇಶವೂ ಸೇರಿತ್ತು. ಹಂಸಧ್ವಜನ ಮಗ ಸುಧನ್ವಯ ತುಮಕೂರಿಗೆ ೨೦ ಮೈಲಿ ಪಶ್ಚಿಮಕ್ಕಿರುವ ಚಂಪಕಾಪುರ(ಇಂದಿನ ಸಂಪಿಗೆ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇವನು ಪಾಂಡವರ ಅಶ್ವಮೇಧ ಕುದುರೆಯನ್ನು ತಡೆದು ಅರ್ಜುನನೊಡನೆ ಯುದ್ಧ ಮಾಡಿದುದನ್ನು ಕನ್ನಡ ಜೈಮಿನಿ ಭಾರತದಲ್ಲಿ ವಿಸ್ತಾರವಾಗಿ ಹೇಳಿದೆ"(ಶ್ರೀಕಂಠಯ್ಯ ಎ., ೧೯೪೨, ಪ್ರಬುದ್ಧ ಕರ್ನಾಟಕ, ಸಂ–೨೪, ಸಂಚಿಕೆ–೧, ಪು.೩೫). ಎರಡನೆಯದು "ಸಾವಿರಾರು ವರ್ಷಗಳ ಕೆಳಗೆ ಕರ್ನಾಟಕ ದೇಶದ ರಾಜನಾದ ಹೇಮಚಂದ್ರನ ಮಗ ಸುಮತಿಯು ತಂದೆಯ ಅಪ್ಪಣೆ ಪ್ರಕಾರ ರಾಜಧಾನಿಯಾದ ಯದುಪಟ್ಟಣದಿಂದ ಹೊರಟು ಹದಿಮೂರು ದಿನ ಪ್ರಯಾಣ ಮಾಡಿ ಈಗ ನಾವು ದೇವರಾಯನದುರ್ಗ ಎಂದು ಕರೆಯುವ ಪರ್ವತ ಪ್ರದೇಶಕ್ಕೆ ಬಂದು ಅಲ್ಲಿದ್ದ ಕಳ್ಳರ ಮುಖಂಡನಾದ ಅಂಧಕನೆಂಬುವನ ಸಂಗಡ ಒಂದು ವರ್ಷದವರೆಗೆ ಹೋರಾಡಿ ಕೊನೆಗೆ ಅವನನ್ನು ಬಂಧು ಬಾಂಧವರೊಡನೆ ಕೊಂದುಹಾಕಿ ಆ ಪರ್ವತವನ್ನೂ, ಸುತ್ತಮುತ್ತ ಪ್ರದೇಶವನ್ನೂ ತನ್ನ ಸ್ವಾಧೀನ ಮಾಡಿಕೊಂಡನು. ಅನಂತರ ಇವನು ಭೂಮಂಡನಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಪ್ರಾಂತ್ಯವನ್ನೆಲ್ಲಾ ಆಳಿದನು. ಈ ಭೂಮಂಡನಪುರವು ನೆಲಮಂಗಲ ತಾಲ್ಲೂಕಿನ ಮಣ್ಣೆ ಇರಬಹುದೆಂದು ಚರಿತ್ರಾಕಾರರು ಹೇಳುತ್ತಾರೆ"(ಶ್ರೀಕಂಠಯ್ಯ ಎ., ೧೯೪೨, ಪ್ರಬುದ್ಧ ಕರ್ನಾಟಕ, ಸಂ–೨೪, ಸಂ–೧, ಪು.೩೬). ಈ ಮೇಲಿನ ಎರಡು ವಿಷಯಗಳು ಕೇವಲ ಪುರಾಣ ಕಥೆಗಳಾಗಿದ್ದು ಯಾವುದೇ ಆಧಾರಗಳಿರುವುದಿಲ್ಲ. ಇದರಲ್ಲಿ ಸತ್ಯಾಂಶ ಎಷ್ಟಿರಬಹುದೆಂದು ನಿರ್ಧಿಸಲು ಸಾಧ್ಯವಿಲ್ಲ. ವಿಜಯನಗರದ ಹರಿಹರರಾಯನ

ಕ್ರಿ.ಶ.೧೪೦೩ರಲ್ಲಿ ದೊರೆತ ಶಾಸನದಲ್ಲಿ ಈಗಿನ ಸೀಬಿಅಗ್ರಹಾರ ಪ್ರಾಂತ್ಯವೆಲ್ಲಾ ಅರಣ್ಯವಾಗಿತ್ತೆಂದು ಹೇಳಿದೆ. ಈ ಪ್ರದೇಶದ ಈಗಿನ ಸ್ಥಿತಿಯನ್ನು ನೋಡಿದರೆ ಐದುನೂರು ವರ್ಷಗಳ ಹಿಂದೆ ಈ ಪ್ರಾಂತ್ಯವು ಹೆಚ್ಚು ಜನರನ್ನು ಹೊಂದಿರದೆ ಅರಣ್ಯದಿಂದ ಕೂಡಿತ್ತೆಂದು ಹೇಳಲಾಗುತ್ತದೆ. ಈ ಪ್ರದೇಶದಲ್ಲಿ ಆನೆಗಳು ಇದ್ದವೆಂಬುದಕ್ಕೆ ಕರಿಗಿರಿ ಮಹಾತ್ಮೆಯೆಂಬ ಗ್ರಂಥದಲ್ಲಿ ಆಧಾರವಿದೆ ಎಂದು ಶ್ರೀಕಂಠಯ್ಯ ಎಂ., ಅವರು ಹೇಳಿದ್ದಾರೆ. ಕ್ರಿ.ಶ.೧೭೭೭ರಲ್ಲಿ ನವಾಬ್ ಹೈದರಾಲಿಯು ಸೀಬಿ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಬರೆಸಿಕೊಟ್ಟಿರುವ ಭೂಧಾನ ಶಾಸನದಲ್ಲಿ ಈ ಪ್ರದೇಶದ ವಾಯುವ್ಯದಲ್ಲಿ ೧೫೦ವರ್ಷಗಳ ಹಿಂದೆ ಅರಣ್ಯವಾಗಿದ್ದು ಕ್ರಿ.ಶ.೧೯೪೦ರ ದಶಕದಲ್ಲಿ ತುಮಕೂರಿನಲ್ಲಿ ವಾಸವಾಗಿದ್ದ ಕರಣಿಕ ನಲ್ಲಪ್ಪನವರ ಪೂರ್ವಜರು ಕಾಡು ಕಡಿದು ಆಕಾರ ಮಾಡಿದರೆಂದೂ, ಅದಕ್ಕೋಸ್ಕರವಾಗಿ ಸೀಬಿ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಆ ಪ್ರಾಂತ್ಯವನ್ನೆಲ್ಲಾ ದತ್ತಿಯಾಗಿ ಬಿಟ್ಟುಕೊಟ್ಟು ಅವರನ್ನೇ ದೇವಸ್ಥಾನದ ಆಡಳಿತ ನೋಡಿಕೊಳ್ಳುವುದಕ್ಕೆ ನೇಮಿಸಿದರೆಂದು ತಿಳಿಯುತ್ತದೆ. "ಈ ಪ್ರದೇಶದಲ್ಲಿ ಹಿಂದೆ ಕಾಡುಜನರು ಇದ್ದರೆಂದು ಇವರು ಇಲ್ಲಿ ಆಶ್ರಮಗಳನ್ನು ಮಾಡಿಕೊಂಡಿದ್ದ ಅಗಸ್ತ್ಯ, ಗೌತಮ, ಪರಾಶರ ಋಷಿಗಳ ತಪಸ್ಸಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದರಿಂದ ಈ ತಪೋದನರು ಅವರನ್ನು ನಿಗ್ರಹಿಸುವುದಕ್ಕೆ ಪ್ರಯತ್ನ ಪಡುತ್ತಿದ್ದರೆಂದು ತಿಳಿದುಬರುತ್ತದೆ. ಅಗಸ್ತ್ಯರು ಈ ಪ್ರದೇಶದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರುವ ಕಮ್ಮಸಂದ್ರವೆಂಬಲ್ಲಿಯೂ, ಗೌತಮರು ತುಮಕೂರಿನ ಕೌತುಮಾರನಹಳ್ಳಿ ಎಂಬಲ್ಲಿಯೂ, ಪರಾಶರರು ಕರಿಗಿರಿ ಎಂದರೆ ಇಂದಿನ ದೇವರಾಯನ ದುರ್ಗದಲ್ಲಿಯೂ ಬೇರೆ ಬೇರೆ ಕಾಲಗಳಲ್ಲಿ ಆಶ್ರಮಗಳನ್ನು ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ"(ಶ್ರೀಕಂಠಯ್ಯ ಎಂ., ೧೯೪೨, ಪ್ರಬುದ್ಧ ಕರ್ನಾಟಕ, ಸಂಪು.೨೪,ಸಂಚಿ-೧, ಪು.೩೭).

ತುಮಕೂರು ಪ್ರದೇಶದ ನಿಜವಾದ ಚರಿತ್ರೆಯನ್ನು ಅನುಮಾನಕ್ಕೆ ಅವಕಾಶವಿಲ್ಲದಂತೆ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಬಹುದು. ಗಂಗರು, ಚಾಲುಕ್ಯರು, ಕಾಕತೀಯರು, ಹೋಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು, ಹಾಗಲವಾಡಿ ಪಾಳೇಗಾರರು, ನವಾಬ್ ಹೈದರಾಲಿ, ಟಿಪ್ಪುಸುಲ್ತಾನರು, ಕೆಂಪೇಗೌಡ ಮುಂತಾದವರು ಈ ಪ್ರದೇಶವನ್ನು ಆಳ್ವಿಕೆ ಮಾಡಿದ್ದಾರೆ ಎಂಬುದಕ್ಕೆ ಅವರು ಹಾಕಿಸಿದ ಶಾಸನಗಳು ಆಧಾರವಾಗಿವೆ. ಇವರ ಶಾಸನಗಳಲ್ಲಿ ದೊರೆತ ಪ್ರಮುಖ ಸ್ಥಳಗಳೆಂದರೆ ತುಮಕೂರು, ಹೆಗ್ಗೆರೆ, ಕೈದಾಳ, ವುಳೇನಹಳ್ಳಿ, ಮುಳುಕುಂಟೆ, ವಿರೂಪಸಂದ್ರ, ಹೊನ್ನುಡುಕೆ, ಹೆಬ್ಬೂರು, ರಾಯಪುರ, ಹರಳೂರು, ಪಾಲಸಂದ್ರ, ಕೊಡಗೇನಹಳ್ಳಿ, ದೇವರಾಯನದುರ್ಗ, ಕೊಳಾಲ, ಮೈದಾಳ, ಪಂಡಿತನಹಳ್ಳಿ, ಬ್ಯಾಟರಾಯನಹಳ್ಳಿ, ಸೀತಕಲ್ಲು, ಮಮಚಿಹಳ್ಳಿ, ಚಿನ್ನಹಳ್ಳಿ, ಎಲಚಿಗೆರೆ, ಭೀಮಸಾಗರ, ಕೋರ, ಬ್ರಹ್ಮಸಂದ್ರ, ಕರಿಕೆರೆ, ನೆಲಹಾಳು, ಮಾವುಕೆರೆ, ಚಿಕ್ಕನಾರಮಂಗಲ, ದೊಡ್ಡನಾರಮಂಗಲ, ಕೊಟ್ನಹಳ್ಳಿ, ಚಿಕ್ಕಸೀಬಿ ಮುಂತಾದವುಗಳಾಗಿವೆ.

ತುಮಕೂರು ಪ್ರಾಂತ್ಯಕ್ಕೆ ಪ್ರಾಚೀನ ಕಾಲದಿಂದಲೂ ಆನೆಬಿದ್ದ ಸರಿ ಅಥವಾ ಆನೆಬಿದ್ದ ಜರಿರಾಜ್ಯವೆಂದು ಹೆಸರಿತ್ತು ಎಂಬುದನ್ನು ಕ್ರಿ.ಶ.೧೩೯ನೇ ಇಸವಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ

ಎಂದು ಶ್ರೀಕಂಠಯ್ಯ ಎ., ಅವರು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ "ಕರಿಗಿರಿ ಮಹಾತ್ಮೆಯಲ್ಲಿ ಬ್ರಹ್ಮನ ಸಭೆಯಲ್ಲಿ ದೇವದತ್ತ, ಧನಂಜಯ ಎಂಬಿಬ್ಬರು ಗಂಧರ್ವರು ಗಾನ ಮಾಡುತ್ತಿದ್ದಾಗ ಭೃಗು ಋಷಿಯು ಸಂತೋಷಪಟ್ಟು ಆ ಗಾಯಕರನ್ನು ಮತ್ತೊಮ್ಮೆ ಹಾಡಿ ಎಂದು ಕೇಳಿಕೊಂಡರಂತೆ. ಗರ್ವಿಷ್ಠರಾದ ಗಂಧರ್ವರು ಅವನನ್ನು ಕುರಿತು ಪರಿಹಾಸ್ಯದಿಂದ ಎಲೈ ಋಷಿಯೇ "ಫಲಗಳನ್ನು ತಿಂದು ಜೀವಿಸುವ ನಿನಗೆ ಗಂಧರ್ವ ವಿದ್ಯೆಯ ವಿಷಯವೇಕೆ? ನೀನು ದಂತಹೀನನಾದ ಮುದುಕನು ನಿನ್ನ ಉದ್ದವಾದ ನೆರೆತಿರುವ ಗಡ್ಡವನ್ನು ನೋಡಿದರೆ ನಮಗೆ ನಗೆ ಬರುತ್ತದೆ" ಎಂದು ಹೀಯಾಳಿಸಿದರಂತೆ ಇದರಿಂದ ಕೋಪಗೊಂಡ ಭೃಗು ಋಷಿಯು "ನೀವಿಬ್ಬರೂ ಆನೆ ಮತ್ತು ಬೆಟ್ಟವಾಗಿ ಭೂಲೋಕದಲ್ಲಿ ಹುಟ್ಟಿ" ಎಂದು ಶಾಪಕೊಟ್ಟರಂತೆ. ಶಪಿಸಲ್ಪಟ್ಟ ಗಾಯಕರು ಶಾಪವಿಮೋಚನೆಯ ಕಾಲವನ್ನು ಬೇಡಿಕೊಳ್ಳಲಾಗಿ ಋಷಿಯು ಅವರಲ್ಲಿ ಸ್ವಲ್ಪ ದಯೆಯಿಟ್ಟು "ಧನಂಜಯನು ಸದಾ ಬೆಟ್ಟವಾಗಿಯೇ ಇರಬೇಕೆಂತಲೂ, ದೇವದತ್ತನು ಮಾತ್ರ ಸ್ವಲ್ಪಕಾಲ ಆನೆಯಾಗಿ ಆ ಬೆಟ್ಟದಲ್ಲಿ ಸಂಚರಿಸಿದ ನಂತರ ಬೆಟ್ಟದ ಒಂದು ಕೋಡುಗಲ್ಲಿನಿಂದ ಜಾರಿಬಿದ್ದು ಸತ್ತಾಗ ಶಾಪವಿಮೋಚನೆಯಾಗುತ್ತದೆ" ಎಂದು ಹೇಳಿದನು. ಅದೇ ಪ್ರಕಾರವಾಗಿ ಧನಂಜಯನು ಕುಸುಮಾಚಲವೆಂದು ಕರೆಯಲ್ಪಡುವ ದೇವರಾಯನದುರ್ಗಬೆಟ್ಟವಾಗಿಯೂ ಹುಟ್ಟಿದನು. ದೇವದತ್ತನು ಒಂದು ದಿನ ಕೋಡುಗಲ್ಲನ್ನು ಹತ್ತಲುಹೋಗಿ ಜಾರಿಬಿದ್ದು ಸತ್ತನು. ಹೀಗೆ ಅವನಿಗೆ ಶಾಪವಿಮೋಚನೆಯಾಯಿತು. ಆ ಆನೆಯು ಬಿದ್ದ ಜಾಗಕ್ಕೆ ಆನೆಬಿದ್ದ ಜರಿ ಎಂದು ಹೆಸರಾಯಿತು"(ಶ್ರೀಕಂಠಯ್ಯ ಎ., ಪ್ರಬುದ್ಧ ಕರ್ನಾಟಕ,ಸಂ.೨೪,ಸಂ-೧,ಪು.೩೯,೪೦).

ತುಮಕೂರು ಎಂಬ ಹೆಸರು ಬೇರೆ ರೀತಿಯಲ್ಲಿತ್ತೆಂದು ಹೇಳಲಾಗಿದೆ. ಆರಂಭದಲ್ಲಿ 'ತುಮ್ಮೆಗೂರು' ಎಂಬ ಒಂದು ಸಣ್ಣ ಹಳ್ಳಿಯಾಗಿತ್ತೆಂದು ಹೇಳುತ್ತಾರೆ. 'ತೊಮ್ಮೆಗೂರು' ಎಂಬ ಹೆಸರನ್ನು ಗಂಗರಾಜನಾದ ಇಮ್ಮಡಿ ಭೂತುಗನ ಕಾಲದ ೯೫೫ನೇ ಇಸವಿಯ ಶಾಸನದಲ್ಲಿ ಹೇಳಲಾಗಿದೆ. ಈ ಶಾಸನವು ತುಮಕೂರಿನ ಸೋಮೇಶ್ವರ ದೇವಸ್ಥಾನದಲ್ಲಿ ಇಂದಿಗೂ ಕಾಣಬಹುದು. ಈ ಹೆಸರು ಬರುವುದಕ್ಕೆ ಇಲ್ಲಿ ಆ ಕಾಲದಲ್ಲಿ ಹೆದ್ದುಂಬೆ ಗಿಡಗಳು ಕಾಡು ಕಾಡಾಗಿ ಬೆಳೆದು ಕೊಂಡಿದ್ದವಂತೆ. ಮಧುಗಿರಿಯ ೨೭ನೇ ಶಾಸನದಲ್ಲಿ ತುಂಬಾಡಿ, ತುಂಬೆವಾಡಿ ಗ್ರಾಮದ ಹೆಸರು ಉಲ್ಲೇಖವಾಗಿದೆ. ಮತ್ತೊಂದು ಮೌಖಿಕ ಪುರಾಣ ಕಥೆಯ ಪ್ರಕಾರ ನೃಪರಾಯನೆಂಬ ರಾಜನು ತನಗೆ ಸೇರಿದ್ದ ಈ ಹಳ್ಳಿಯನ್ನು ತನ್ನ 'ಟುಮಕೆ' ಹೊಡೆಯುವವನಿಗೆ ಇನಾಮಾಗಿ ಕೊಟ್ಟಿದ್ದರಿಂದ 'ಟುಮಕೆ' ಊರು ಎಂದೂ ಹೆಸರು ಬಂದಂತೆ ತಿಳಿಯುತ್ತದೆ.

"ಈ ಪ್ರಾಂತ್ಯವು ಕ್ರಿ.ಶ.೭೦೦ ರಿಂದ ೯೫೫ರ ವರೆಗೆ ಗಂಗರಸರ ಅಧೀನದಲ್ಲಿಯೂ ಅನಂತರ ೧೧೦೦ರವರೆಗೆ ಚಾಲುಕ್ಯರ ಅಧೀನದಲ್ಲಿಯೂ, ಆಮೇಲೆ ೧೬೩೮ರವರೆಗೆ ವಿಜಯ ನಗರದ ಅರಸರುಗಳ ಅಧೀನದಲ್ಲಿಯೂ, ಆಮೇಲೆ ೧೬೮೭ರವರೆಗೆ ಸೀರ್‍ಯದ (ಸಿರಾ) ರಣದುಲ್ಲಾ ಖಾನನೇ ಮೊದಲಾಗಿ ಖಾಸಿಂಖಾನನವರೆಗೆ ಬಿಜಾಪುರದ ಮಹಮದೀಯರ ಅರಸರ ಕೈಕೆಳಗಿನ ಸುಬೇದಾರರುಗಳ

ವಶದಲ್ಲಿಯೂ, ಅನಂತರ ೧೬೮೭ರಿಂದ ೧೭೩೧ರವರೆಗೆ ಮೈಸೂರಿನ ಅರಸರ ಅಧೀನದಲ್ಲಿಯೂ, ನಂತರ ೩೦ವರ್ಷ ಅಂದರೆ ೧೭೩೧ರಿಂದ ೧೭೬೧ರವರೆಗೆ ಆ ರಾಜರ ಕಾಲದಲ್ಲಿ ದಳವಾಯಿಗಳ ಕೈಕೆಳಗೂ, ಆಮೇಲೆ ೧೭೬೧ರಿಂದ ೧೭೭೫ರವರೆಗೆ ಹಾಗಲವಾಡಿ ಚನ್ನಬಸಪ್ಪ ನಾಯ್ಕನ ಆಡಳಿತದಲ್ಲಿ, ಅನಂತರ ೧೭೭೬ರಿಂದ ೧೮೯೯ರವರೆಗೆ ಹೈದರ್ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಇದ್ದು, ಅದರಿಂದಾಚೆಗೆ ಮೈಸೂರು ಅರಸರ ಅಧೀನದಲ್ಲಿತ್ತು"(ಶ್ರೀಕಂಠಯ್ಯ ಎ., ೧೯೪೨, ಪ್ರಬುದ್ಧ ಕರ್ನಾಟಕ, ಸಂ.೨೪, ಸಂ-೧, ಪು.೪೨).

ಹೀಗೆ ಚಾರಿತ್ರಿಕವಾದ ಹಿನ್ನೆಲೆ ಹೊಂದಿರುವ ತುಮಕೂರು ಇಂದು ಜಿಲ್ಲಾ ಕೇಂದ್ರವಾಗಿದ್ದು ಹತ್ತು ತಾಲ್ಲೂಕಗಳನ್ನೊಳಗೊಂಡಿದೆ. ತುಮಕೂರು ಪರಿಸರವು ಪ್ರಮುಖವಾಗಿ ಕೃಷಿ ಪ್ರಧಾನವಾದದು. ಇಲ್ಲಿ ತೆಂಗು, ಅಡಿಕೆ, ಮಾವು, ಹುಣಸೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಶೈಕ್ಷಣಿಕವಾಗಿಯೂ ಮುಂದುವರೆದ ಜಿಲ್ಲೆಯಾಗಿದ್ದು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ.

ತುಮಕೂರು ಪರಿಸರದಲ್ಲಿ ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ, ಗೊಲ್ಲ, ಕುರುಬ, ನಾಯಕ, ಚಲವಾದಿ, ಮಾದಿಗ, ಲಂಬಾಣಿ, ತಿಗುಳ, ವಿಶ್ವಕರ್ಮ, ಕುಂಬಾರ, ಕಮ್ಮಾರ, ಉಪ್ಪಾರ ಮುಂತಾದ ಜಾತಿಗೆ ಸೇರಿದ ಜನರಿದ್ದಾರೆ. ತಮ್ಮ ಜಾತಿಗನುಗುಣವಾದ ಸಂಸ್ಕೃತಿಯನ್ನು ಹೊಂದಿದ್ದು ಹಲವು ಕುಲದೈವಗಳು, ಇಷ್ಟದೈವಗಳು ಸಾಂಸ್ಕೃತಿಕ ವೀರರ ದೇವಾಲಯಗಳನ್ನು ಈ ಪ್ರದೇಶದಲ್ಲಿ ಕಾಣಬಹುದಾಗಿದೆ. ಹಾಗಾಗಿ ಈ ಪ್ರದೇಶದಲ್ಲಿರುವ ಜನರ ಹೆಸರುಗಳು ಭಿನ್ನವಾಗಿದ್ದು ಅವುಗಳ ಸ್ವರೂಪವನ್ನು ತಿಳಿಯುವ ಉದ್ದೇಶದಿಂದ ತುಮಕೂರು ಪರಿಸರದ "ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

### ೧.೫. ಅಧ್ಯಯನದ ಮಿತಿಗಳು

ಕನ್ನಡದಲ್ಲಿ ವ್ಯಕ್ತಿನಾಮಗಳ ಕುರಿತು ಅಧ್ಯಯನಗಳು ನಡೆದಿರುವುದು ಬಹಳ ವಿರಳ, ಚಿದಾನಂದ ಮೂರ್ತಿ ಎಂ., ಕಲಬುರ್ಗಿ ಎಂ.ಎಂ., ದೇ.ಜವರೇಗೌಡ ಇದನ್ನು ಹೊರತು ಪಡಿಸಿದರೆ ಕನ್ನಡ ವಿಶ್ವವಿದ್ಯಾಲಯದ ಭಾಷಾಧ್ಯಯನ ವಿಭಾಗದಲ್ಲಿ ನಡೆದ ವ್ಯಕ್ತಿನಾಮಗಳ ಕುರಿತ ವಿಚಾರ ಸಂಕಿರಣವೇ ಮೊದಲನೆಯದು ಎನ್ನಬಹುದು. ನಂತರದಲ್ಲಿ ಇಲ್ಲಿಯವರೆಗೂ ದೊರೆತ ಆಕರಗಳ ಹಿನ್ನೆಲೆಯಲ್ಲಿ ಮೂರು ಪಿಎಚ್.ಡಿ ಸಂಶೋಧನ ಪ್ರಬಂಧಗಳು ಸಿದ್ಧವಾಗಿರುವುದನ್ನು ಕಾಣಬಹುದು. ಆದರೆ ಚಾರಿತ್ರಿಕ ಅಧ್ಯಯನ ಮಾದರಿಯಲ್ಲಿ ಕೈಗೊಂಡಿರುವ ಸಂಶೋಧನೆಗಳಲ್ಲಿ ಪ್ರಸ್ತುತ ಅಧ್ಯಯನವು ಮೊದಲನೆಯದು ಎಂಬುದು ವಿಶೇಷ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಹಲವು ಮಿತಿಗಳನ್ನು ಒಳಗೊಂಡಿದೆ. ಈ ಪ್ರಬಂಧದಲ್ಲಿ ವ್ಯಕ್ತಿನಾಮಗಳ ರಚನೆ, ಚಾರಿತ್ರಿಕ ನೆಲೆಗಳು, ಪ್ರಾದೇಶಿಕ ನೆಲೆಗಳು, ಸಾಮಾಜಿಕ ನೆಲೆಗಳು, ಆಧುನಿಕ ನೆಲೆಗಳು ಅಧ್ಯಯನದ ಪ್ರಮುಖ ಅಂಶಗಳೆಂದು ಗುರುತಿಸಿಕೊಂಡು ಅಧ್ಯಾಯ ಹಾಗೂ ಉಪಘಟಕಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಅಧ್ಯಯನದ ಕೆಲವು ಸಂದರ್ಭಗಳಲ್ಲಿ ಅಧ್ಯಯನ ವ್ಯಾಪ್ತಿಗೆ ಒಳಪಡದ ಕೆಲವು ವ್ಯಕ್ತಿನಾಮಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಪ್ರಾದೇಶಿಕ

ವ್ಯಾಪ್ತಿಯನ್ನು ದಕ್ಷಿಣ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿಕೊಂಡು ವಿಶ್ಲೇಷಿಸಬಹುದಾಗಿತ್ತು. ಆದರೆ ಕಾಲಮಿತಿ ಮತ್ತು ಆಕರಗಳ ವ್ಯಾಪ್ತಿ ವಿಸ್ತಾರವಾದುದರಿಂದ ಹಾಗೂ ಒಂದು ಜಿಲ್ಲೆಯ ಹೆಸರುಗಳು ಸಾಮಾನ್ಯವಾಗಿ ದಕ್ಷಿಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳ ಹೆಸರುಗಳನ್ನು ಪ್ರತಿನಿಧಿಸುವುದರಿಂದ ತುಮಕೂರು ಜಿಲ್ಲೆಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಇದು ಅಧ್ಯಯನದ ಮಿತಿಯೂ ಹೌದು.

ಪ್ರಸ್ತುತ ಅಧ್ಯಯನವು ವ್ಯಕ್ತಿನಾಮಗಳ ಚಾರಿತ್ರಿಕ, ಸಾಮಾಜಿಕ, ಪ್ರಾದೇಶಿಕ, ಆಧುನಿಕ ಮತ್ತು ರಾಚನಿಕ ಸ್ವರೂಪವನ್ನು ಮಾತ್ರ ತಿಳಿಸುವಂತಹದ್ದಾಗಿದ್ದು ಈ ರೀತಿಯ ಸ್ವರೂಪಕ್ಕೆ ಕಾರಣವಾದ ಪ್ರಭಾವ ಮತ್ತು ಪ್ರೇರಣೆಗಳನ್ನು ಕುರಿತು ವಿಶ್ಲೇಷಿಸುವ ಕಡೆಗೆ ಹೆಚ್ಚಿನ ಗಮನವನ್ನು ನೀಡಲಾಗಿಲ್ಲ. ಏಕೆಂದರೆ ಅಧ್ಯಯನದಲ್ಲಿ ವ್ಯಕ್ತಿನಾಮಗಳ ಬೆಳವಣಿಗೆಯ ಸ್ವರೂಪವನ್ನು ಕುರಿತು ಹೆಚ್ಚು ಚರ್ಚಿಸಲಾಗಿದೆ.

ಪ್ರಸ್ತುತ ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನಕ್ಕೆ ಕನ್ನಡದ ಮಟ್ಟಿಗೆ ಸಿದ್ಧಮಾದರಿಗಳು ತುಂಬಾ ಕಡಿಮೆ. ಹಾಗಾಗಿ ಕನ್ನಡದಲ್ಲಿ ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ ಕ್ಷೇತ್ರಕ್ಕೆ ಒಂದು ಹೊಸ ಬಗೆಯ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡತಹ ಫಲಿತಗಳು ಯಾವುವೂ ಅಂತಿಮವಾಗಿರುವುದಿಲ್ಲ. ಸಂಶೋಧನೆಯ ಅವಧಿಯಲ್ಲಿ ಅಧ್ಯಯನದ ವಿಧಿವಿಧಾನಗಳ ಮಿತಿಯಲ್ಲಿ ಕಂಡುಕೊಂಡಂತಹ ಫಲಿತಗಳಾಗಿರುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಫಲಿತಗಳು ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವಂತಿದ್ದು ಕಾಲಾನಂತರದಲ್ಲಿ ಬದಲಾವಣೆ ಆಗಬಹುದು.

**೧.೬. ಅಧ್ಯಯನದ ವಿಧಾನ**

ಸಂಶೋಧನೆಗೆ ಅಧ್ಯಯನ ಕ್ರಮ ಅತಿಮುಖ್ಯವಾಗುತ್ತದೆ. ಪ್ರಸ್ತುತ ಸಂಶೋಧನೆಯಲ್ಲಿ ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಪ್ರಾದೇಶಿಕವಾಗಿ, ಆಧುನಿಕವಾಗಿ ಮತ್ತು ಭಾಷಿಕ ರಚನೆಯಲ್ಲಿ ವ್ಯಕ್ತಿನಾಮಗಳ ಸ್ವರೂಪವನ್ನು ತಿಳಿಯಲು ಭಾಷಾ ಶಾಸ್ತ್ರದ ಶಿಸ್ತಿಗೆ ಅಧ್ಯಯನದ ಚೌಕಟ್ಟನ್ನು ಅಳವಡಿಸಿಕೊಳ್ಳಲಾಗಿದೆ. ಅಂದರೆ ಭಾಷೆಯ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಯನ್ನು ಅಥವಾ ಅವಸ್ಥೆಗಳನ್ನು ಹೋಲಿಸಿ ನೋಡಿ ಬದಲಾವಣೆಗಳನ್ನು ಗುರುತಿಸುವುದನ್ನು ಚಾರಿತ್ರಿಕ ಭಾಷಾ ವಿಜ್ಞಾನ ಎಂದು ಕರೆಯಲಾಗುತ್ತದೆ.

ಚಾರಿತ್ರಿಕ ಭಾಷಾವಿಜ್ಞಾನವು ಭಾಷೆಯ ಬದಲಾವಣೆ, ಬದಲಾವಣೆಯ ವೈವಿಧ್ಯ, ತಂತ್ರಗಳು, ಸ್ವೀಕರಣ, ಅದರ ಅವಶ್ಯಕತೆ, ಸಾದೃಶ್ಯ ಸೃಷ್ಟಿ, ಧ್ವನಿ ಬದಲಾವಣೆ ಮತ್ತು ಅದರ ಪರಿಣಾಮ, ಭಾಷಿಕ ಭೂಗೋಳ, ಭಾಷಾಭಿನ್ನತೆ, ಕೃತಕ ಭಾಷೆ, ಭೌಗೋಳಿಕ ಪ್ರಸಾರ, ತೌಲನಿಕ ಪದ್ಧತಿ, ಭಾಷೆಗಳ ವರ್ಗೀಕರಣ, ಅವುಗಳ ಅನುವಂಶಿಕ ಸಂಬಂಧ ಹಾಗೂ ಆಂತರಿಕ ಪುನರಚನೆ, ಭಾಷಾ ಕಾಲಾನುಕ್ರಮ ವಿಜ್ಞಾನ, ಜಗತ್ತಿನ ಭಾಷೆ ಮತ್ತು ಪ್ರಮಾಣ ಭಾಷೆ ಮೊದಲಾದವುಗಳನ್ನು ಕುರಿತು ಅಧ್ಯಯನ ಮಾಡುತ್ತದೆ.

ಭಾಷೆಯ ಬದಲಾವಣೆ ಆದಂತೆ ಭಾಷೆಯ ವಿವಿಧ ನೆಲೆಗಳಲ್ಲಿಯೂ ಬದಲಾವಣೆ ಆಗುತ್ತಿರುತ್ತದೆ. ಭಾಷೆಯ ಅಧ್ಯಯನದ ವ್ಯಾಪ್ತಿಗೆ ಬರುವ ವ್ಯಕ್ತಿನಾಮಗಳ ಚರಿತ್ರೆಯನ್ನು ಗಮನಿಸಿದರೆ ಅಲ್ಲಿಯೂ ಸಹ ಬದಲಾವಣೆಯನ್ನು ಕಾಣಬಹದು. ಹಾಗಾಗಿ ವ್ಯಕ್ತಿನಾಮಗಳ ಸ್ವರೂಪದಲ್ಲಾಗಿರುವ ಬದಲಾವಣೆಗಳನ್ನು ವಿವಿಧ ಕಾಲಘಟ್ಟಗಳು ಹಾಗೂ ವಿವಿಧ ಅವಸ್ಥೆಗಳನ್ನು ಕುರಿತು ಈ ಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ. ಹಾಗಾಗಿ "ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ" ಎಂಬ ಪ್ರಸ್ತುತ ಅಧ್ಯಯನವು ಕ್ಷೇತ್ರ ಮಾಹಿತಿ ಮತ್ತು ಕೆಲವು ಲಿಖಿತ ಆಕರಗಳ ನೆರವಿನಿಂದ ರೂಪಿತವಾಗಿರುವಂತಹದ್ದಾಗಿದ್ದು, ಅಧ್ಯಯನದ ವ್ಯಾಪ್ತಿಯಲ್ಲಿ ದೊರೆತ ಆಕರಗಳಿಗೆ ಅನುಗುಣವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಸಾಮಾಜಿಕ, ಪ್ರಾದೇಶಿಕ, ಆಧುನಿಕ ನೆಲೆಯಲ್ಲಿ ವ್ಯಕ್ತಿನಾಮಗಳ ಸ್ವರೂಪಗಳನ್ನು ಗಮನಿಸಿಕೊಂಡು ಮೇಲ್ಜಾತಿ, ಕೆಳಜಾತಿ, ಮೇಲ್ವರ್ಗ, ಕೆಳವರ್ಗ, ಗ್ರಾಮೀಣ, ನಗರ, ಅಕ್ಷರಸ್ಥ, ಅನಕ್ಷರಸ್ಥ, ವಲಯಗಳಲ್ಲಿ ಹೇಗೆ ಪ್ರಭಾವ ಬೀರಿವೆ ಎಂಬುದನ್ನು ದಾಖಲಿಸಲಾಗಿದೆ. ಹಾಗೂ ಪ್ರಾದೇಶಿಕವಾಗಿ ಕುಲದೈವಗಳು ಹೇಗೆ ಪ್ರಭಾವ ಬೀರಿವೆ ಎಂಬುದನ್ನು ತಿಳಿಯಲಾಗಿದೆ.

ವ್ಯಕ್ತಿನಾಮಗಳ ಕುರಿತು ಇದವರೆಗೂ ನಡೆದಿರುವ ಅಧ್ಯಯನಗಳಿಗೆ ಸಂಬಂಧಿಸಿದ ಕೃತಿಗಳು, ಪಿಎಚ್.ಡಿ ಮಹಾಪ್ರಬಂಧಗಳು, ಲೇಖನಗಳು ಪ್ರಸ್ತುತ ಅಧ್ಯಯನಕ್ಕೆ ಆಕರಗಳಾಗಿವೆ. ಇವುಗಳಿಗೆ ಪೂರಕವಾಗಿ, ಶಾಸನಗಳು, ಕಾವ್ಯ, ಪುರಾಣ ಕಥೆಗಳು, ಜಾನಪದೀಯ ಅಂಶಗಳು, ಲಾವಣಿಗಳು, ವಚನಗಳು, ಅಷ್ಟೋತ್ತರ ಪುರಾಣ, ಸಹಸ್ರನಾಮ, ಚರಿತ್ರೆ, ಕೈಫಿಯತ್ತುಗಳು, ಪಟ್ಟಾವಳಿ, ವೃತ್ತಪತ್ರಿಕೆ, ಶಾಲಾ ದಾಖಲೆಗಳು, ಸಾಹಿತ್ಯ ಕೃತಿಗಳು, ಚುನಾವಣಾ ಮತದಾರರ ಪಟ್ಟಿ, ಸಾಮಾಜಿಕ ಜಾಲತಾಣ ಮುಂತಾದವುಗಳಿಂದ ಹೆಸರುಗಳನ್ನು ಸಂಗ್ರಹಿಸಿಕೊಂಡಿದ್ದು ಈ ಎಲ್ಲಾ ಆಕರಗಳನ್ನು ಗಮನಿಸಿ ಚಾರಿತ್ರಿಕ ವಿಧಾನದಲ್ಲಿ ಪ್ರಬಂಧ ಸಿದ್ಧಪಡಿಸಲಾಗಿದೆ.

ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಭಾಷಿಕವಾಗಿ, ಪ್ರಾದೇಶಿಕವಾಗಿ, ವ್ಯಕ್ತಿನಾಮಗಳ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳನ್ನು ತಿಳಿಯಲು ವಿವಿಧ ಕಾಲಘಟ್ಟಗಳಲ್ಲಿ ಗುರುತಿಸಲು ಪ್ರಮುಖವಾಗಿ ಚಾರಿತ್ರಿಕ ಅಧ್ಯಯನ ಮಾದರಿಯನ್ನು ಬಳಸಲಾಗಿದೆ. ಜೊತೆಗೆ ಭಾಷಾವಿಜ್ಞಾನದ ಶಿಸ್ತಿಗೆ ಅಧ್ಯಯನ ಒಳಪಟ್ಟಿದ್ದು ಕೆಲವು ಸಂದರ್ಭಗಳಲ್ಲಿ ಅಂದರೆ ವ್ಯಕ್ತಿನಾಮಗಳ ಚಾರಿತ್ರಿಕ ನೆಲೆಗಳು, ಸಾಮಾಜಿಕ ನೆಲೆಗಳು, ಪ್ರಾದೇಶಿಕ ನೆಲೆಗಳು, ಆಧುನಿಕ ನೆಲೆಗಳಲ್ಲಿನ ವಿವರಗಳನ್ನು ಚಾರಿತ್ರಿಕ ಮಾದರಿಯಲ್ಲಿಯೆ ಕಟ್ಟಿಕೊಡಲಾಗಿದೆ.

### ೧.೭. ಅಧ್ಯಯನದ ಸ್ವರೂಪ

ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗ ಮಾಡಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯ ಅಧ್ಯಯನದ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಈ ಭಾಗದ ಆರಂಭದಲ್ಲಿ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಏಕೆಂದರೆ ಯಾವುದೇ ಒಂದು

ಸಂಶೋಧನೆಗೆ ಮುನ್ನೋಟ ಎಂಬುದು ಅತಿಮುಖ್ಯವಾಗುತ್ತದೆ. ಹಾಗೆಯೇ ಯಾವುದೇ ಒಂದು ಕಾರ್ಯಸಾಧನೆಗೆ ಪೀಠಿಕೆ ಪ್ರಮುಖವೆನಿಸುತ್ತದೆ. ಹಾಗಾಗಿ ಪ್ರಸ್ತಾವನೆಯ ಭಾಗ ಇಡೀ ನಮ್ಮ ಮುಂದಿನ ಅಧ್ಯಯನದ ಸ್ವರೂಪ ಹಿಡಿದಿಡುವ ಶಕ್ತಿಯನ್ನು ಹೊಂದಿರುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನದ ಮಹತ್ವವನ್ನು ತಿಳಿಸಿಕೊಡುವ ಕೆಲಸವನ್ನು ಪ್ರಸ್ತಾವನೆ ಭಾಗದಲ್ಲಿ ಹೇಳಲಾಗಿದೆ. ವ್ಯಕ್ತಿನಾಮಗಳ ಕುರಿತು ಜನರ ಮನೋಧೋರಣೆಗಳೇನು, ಸಮುದಾಯಗಳಲ್ಲಿ ವ್ಯಕ್ತಿನಾಮಗಳ ಸ್ವರೂಪ ಮತ್ತು ಪ್ರಭಾವ ಎಂತಹದ್ದು, ವ್ಯಕ್ತಿನಾಮಗಳ ಮಹತ್ವವೇನು ಎಂಬುದನ್ನು ಇಲ್ಲಿ ತಿಳಿಸಿಕೊಡಲಾಗಿದೆ. ನಂತರ ಅಧ್ಯಯನದ ಉದ್ದೇಶಗಳನ್ನು ತಿಳಿಸಲಾಗಿದ್ದು ಅಧ್ಯಯನದ ಮೂಲ ಆಶಯವೇನು, ಯಾವ ಕಾರಣಕ್ಕಾಗಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನದಿಂದಾಗುವ ಪ್ರಯೋಜನಗಳೇನು ಮುಂತಾದ ವಿಚಾರಗಳನ್ನು ಕುರಿತಂತೆ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸಲಾಗಿದೆ. ಅನಂತರ ಅಧ್ಯಯನಕ್ಕೆ ವ್ಯಾಪ್ತಿ ಏಕೆ ಮುಖ್ಯ, ಅಧ್ಯಯನದ ವ್ಯಾಪ್ತಿಯನ್ನು ನಿರ್ದಿಷ್ಟ ಚೌಕಟ್ಟಿಗೆ ಸೀಮಿತಗೊಳಿಸಲು ಕಾರಣಗಳೇನು? ಅದರಿಂದ ಅಧ್ಯಯನಕಾರರಿಗೆ ಮತ್ತು ಅಧ್ಯಯನಕ್ಕೆ ಅನುಕೂಲಗಳೇನು? ಎಂಬ ಅಂಶಗಳನ್ನು ಸ್ಪಷ್ಟಪಡಿಸಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಮಿತಿಗಳನ್ನು ಗುರ್ತಿಸಿಕೊಂಡಿದ್ದು ಎಲ್ಲವನ್ನು ಸಾಧಿಸಲು ಕಾಲಮಿತಿಯಲ್ಲಿ ಸಾಧ್ಯವಾಗಿಲ್ಲದ ಕಾರಣ ಅಧ್ಯಯನಕ್ಕೆ ಒಂದು ಮಿತಿಯನ್ನು ಹಾಕಿಕೊಳ್ಳಲಾಗಿದೆ ಎಂಬುದನ್ನು ತಿಳಿಸಲಾಗಿದೆ. ವ್ಯಾಪ್ತಿಗೆ ಸಂಬಂಧಿಸಿದಂತೆ ತುಮಕೂರು ಪರಿಸರದ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಅಧ್ಯಯನಕ್ಕೆ ವೈಧಾನಿಕತೆ ಏಕೆ ಮುಖ್ಯ, ವೈಧಾನಿಕತೆ ಇಲ್ಲದ ಅಧ್ಯಯನಗಳು ಯಶಸ್ವಿಯಾಗಲಾರವು ಎಂಬುದನ್ನು ಅರಿತು ಅಧ್ಯಯನಕ್ಕೆ ವೈಧಾನಿಕತೆಯನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಅಂತಿಮವಾಗಿ ಅಧ್ಯಯನದ ಸ್ವರೂಪವನ್ನು ಹೇಳಲಾಗಿದ್ದು ಪರಿವಿಡಿಯಲ್ಲಿ ಜೋಡಿಸಿಕೊಂಡಂತೆ ವಿವಿಧ ಅಧ್ಯಾಯಗಳಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಕುರಿತು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಅಂದರೆ ಅಧ್ಯಯನಕ್ಕೆ ಒಂದು ಸ್ವರೂಪ ಇರಲೇಬೇಕು ಹಾಗಾಗಿ ಅಧ್ಯಯನದ ಸ್ವರೂಪವನ್ನು ಕುರಿತಂತೆ ಮೊದಲ ಅಧ್ಯಾಯದಲ್ಲಿ ಸ್ಪಷ್ಟಪಡಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯ ವ್ಯಕ್ತಿನಾಮ ಅಧ್ಯಯನಗಳ ಸಮೀಕ್ಷೆ. ಈ ಭಾಗದಲ್ಲಿ ಇದುವರೆಗೂ ವ್ಯಕ್ತಿನಾಮಗಳ ಕುರಿತು ನಡೆದಿರುವ ಅಧ್ಯಯನಗಳು ಮತ್ತು ಅವುಗಳ ಮೇಲೆ ರಚಿತವಾಗಿರುವ ಕೃತಿಗಳು, ಲೇಖನಗಳು, ಪಿಎಚ್.ಡಿ ಮತ್ತು ಎಂ.ಫಿಲ್ ಪ್ರಬಂಧಗಳು, ದಿನ ಪತ್ರಿಕೆಗಳು ಮುಂತಾದ ಆಕರ ಸಾಮಗ್ರಿಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳನ್ನು ಕುರಿತು ಸಮೀಕ್ಷೆ ಮಾಡಲಾಗಿದೆ. ಅಧ್ಯಯನದಲ್ಲಿ ಸಮೀಕ್ಷೆಯೂ ಕೂಡ ಒಂದು ಪ್ರಮುಖ ಕೆಲಸವಾಗಿದ್ದು, ಈ ಸಮೀಕ್ಷೆಯ ಮೂಲಕ ವ್ಯಕ್ತಿನಾಮಗಳ ಕುರಿತು ಒಟ್ಟು ಅಧ್ಯಯನದ ಸಮಗ್ರ ಚಿತ್ರಣ ಅಧ್ಯಯನಕಾರರಿಗೆ ಲಭ್ಯವಾಗುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಅಧ್ಯಯನಕಾರ ಸಂಶೋಧನೆಗೆ ತೊಡಗಿಸಿಕೊಳ್ಳಲು ಸಹಾಯಕವಾಗುತ್ತದೆ. ಹಾಗಾಗಿ ಎರಡನೇ ಅಧ್ಯಾಯದಲ್ಲಿ ವ್ಯಕ್ತಿನಾಮಗಳನ್ನು ಕುರಿತು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ ಕಾರ್ಯವನ್ನು ದಾಖಲಿಸಲಾಗಿದೆ.

ಮೂರನೆಯ ಅಧ್ಯಾಯ ವ್ಯಕ್ತಿನಾಮಗಳ ರಾಚನಿಕ ಸ್ವರೂಪ. ಈ ಭಾಗದಲ್ಲಿ ವ್ಯಕ್ತಿನಾಮಗಳನ್ನು ರಾಚನಿಕವಾಗಿ ಮತ್ತು ಭಾಷಿಕವಾಗಿ ಗಮನಿಸಲಾಗಿದೆ. ವ್ಯಕ್ತಿನಾಮಗಳ ಪ್ರವೇಶ, ವ್ಯಕ್ತಿನಾಮಗಳ ಸ್ವರೂಪ, ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳು ಹೇಗೆ ಪ್ರವೇಶ ಪಡೆದವು, ವಾರ್ಗಿಕಗಳಾಗಿ ಬಳಕೆಯಾದ ಅಂಶಗಳು, ನಿರ್ದಿಷ್ಟದ ಭಾಗದಲ್ಲಿನ ನಿಜನಾಮಗಳು ಜಾತಿವಾಚಿಗಳಾಗಿ, ವೃತ್ತಿವಾಚಿಗಳಾಗಿ ಹೇಗೆ ಬದಲಾವಣೆಗಳನ್ನು ಪಡೆದುಕೊಂಡವು ಎಂಬ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯ "ವ್ಯಕ್ತಿನಾಮಗಳ ಸ್ವರೂಪ ಮತ್ತು ವಿಶ್ಲೇಷಣೆ" ಭಾಗದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ವ್ಯಕ್ತಿನಾಮಗಳ ಸ್ವರೂಪದಲ್ಲಾಗಿರುವ ಬದಲಾವಣೆಗಳನ್ನು ವಿವಿಧ ನೆಲೆಗಳಲ್ಲಿ ಅಂದರೆ ಚಾರಿತ್ರಿಕ ನೆಲೆಗಳು, ಪ್ರಾದೇಶಿಕ ನೆಲೆಗಳು, ಸಾಮಾಜಿಕ ನೆಲೆಗಳು ಮತ್ತು ಆಧುನಿಕ ನೆಲೆಗಳು ಎಂದು ವಿಶ್ಲೇಷಿಸಲಾಗಿದೆ. ಅಂದರೆ ವ್ಯಕ್ತಿನಾಮಗಳು ಈ ನೆಲೆಗಳಲ್ಲಿ ಯಾವ ಯಾವ ಸ್ವರೂಪದಲ್ಲಿರುತ್ತದೆ. ಈ ರೀತಿಯ ಸ್ವರೂಪಕ್ಕೆ ಕಾರಣವಾಗಿರುವ ಅಂಶಗಳೇನು, ಯಾವ ಅಂಶಗಳು ಹೆಸರುಗಳ ಮೇಲೆ ಪ್ರಭಾವ ಬೀರಿವೆ. ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿ ವ್ಯಕ್ತಿನಾಮಗಳು ಹೇಗೆ ಬದಲಾವಣೆಯಾಗುತ್ತವೆ ಎಂಬ ಅಂಶಗಳನ್ನು ಕುರಿತು ಪ್ರಸ್ತುತ ಸಂದರ್ಭದವರೆಗೆ ದೊರೆತ ಆಕರಗಳಿಂದ ವಿಶ್ಲೇಷಣೆ ಮಾಡಲಾಗಿದೆ.

ಐದನೆಯ ಅಧ್ಯಾಯ "ಸಮಾರೋಪ" ಈ ಭಾಗದಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಫಲಿತಗಳು, ಅಧ್ಯಯನದ ಮಿತಿಗಳನ್ನು ಕುರಿತು ಒಟ್ಟಾರೆ ಅಧ್ಯಯನದ ರೂಪುರೇಷೆಯನ್ನು ತಿಳಿಸಲಾಗಿದೆ.

ಅಂತಿಮವಾಗಿ ಅಧ್ಯಯನಕ್ಕೆ ಪೂರಕವಾದ ಪರಾಮರ್ಶನ ಗ್ರಂಥಗಳು, ಮಾಹಿತಿ ಸಂಗ್ರಹಣೆಯಲ್ಲಿ ನೆರವು ನೀಡಿದ ವಕ್ತೃಗಳ ಪಟ್ಟಿ, ಅನುಬಂಧಗಳನ್ನು ನೀಡಲಾಗಿದೆ. ಹೀಗೆ ಪ್ರಸ್ತುತ ಅಧ್ಯಯನದ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

* * *

## ಅಧ್ಯಾಯ ಎರಡು

# ವ್ಯಕ್ತಿನಾಮ ಅಧ್ಯಯನಗಳ ಸಮೀಕ್ಷೆ

## ಅಧ್ಯಾಯ–ಎರಡು

# ವ್ಯಕ್ತಿನಾಮ ಅಧ್ಯಯನಗಳ ಸಮೀಕ್ಷೆ

ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಸಮಗ್ರವಾದ ಅಧ್ಯಯನಗಳು ನಡೆದಿಲ್ಲ, ಆದರೆ ಪೂರಕವಾದ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಇದರ ಹೊರತಾಗಿ ವ್ಯಕ್ತಿನಾಮಗಳ ಕುರಿತಂತೆ ಸಮಗ್ರವಾದ ಅಧ್ಯಯನಗಳು ನಡೆದಿಲ್ಲವಾದರೂ ಕೆಲವು ಕೃತಿಗಳು, ಹಲವು ಲೇಖನಗಳು ಹಾಗೂ ಪಿಎಚ್.ಡಿ ಮಹಾಪ್ರಬಂಧಗಳು ಸಿದ್ಧವಾಗಿರುವುದನ್ನು ನೋಡಲಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ಇವುಗಳ ಸಮೀಕ್ಷೆ ಮಾಡುವುದು ಮುಖ್ಯ ಎನಿಸುತ್ತದೆ. ಈ ಸಮೀಕ್ಷೆಯ ಮೂಲಕ ವ್ಯಕ್ತಿ ನಾಮಗಳ ಕುರಿತು ಒಟ್ಟು ಅಧ್ಯಯನಗಳ ಸಮಗ್ರ ಚಿತ್ರಣ ಅಧ್ಯಯನಕಾರರಿಗೆ ಲಭ್ಯವಾಗುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಅಧ್ಯಯನಕಾರ ಸಂಶೋಧನೆಯಲ್ಲಿ ಯಾವ ವಿಷಯಕ್ಕೆ ಎಷ್ಟು ಮಹತ್ವ ನೀಡಬೇಕು ಎಂಬುದನ್ನು ಅರ್ಥಮಾಡಿಕೊಂಡು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗುತ್ತದೆ. ಹಾಗಾಗಿ ಪ್ರಸ್ತುತ ಅಧ್ಯಾಯದಲ್ಲಿ ವ್ಯಕ್ತಿನಾಮಗಳ ಕುರಿತು ನಡೆದಿರುವ ಅಧ್ಯಯನ ಸಮೀಕ್ಷೆ ಮಾಡಲಾಗಿದೆ.

ಚಿದಾನಂದಮೂರ್ತಿ ಎಂ., ಇವರು ವಾಗರ್ಥ ಕೃತಿಯಲ್ಲಿ ಕರ್ನಾಟಕದ ವ್ಯಕ್ತಿನಾಮಗಳು (೨೦೦೨) ಎಂಬ ಮೂವತ್ತು ಪುಟಗಳ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನ ಕನ್ನಡದ ಮಟ್ಟಿಗೆ ವ್ಯಕ್ತಿನಾಮಗಳ ಕುರಿತು ಬೆಳಕು ಚೆಲ್ಲುವ ಮೊದಲ ಪ್ರಯತ್ನವಾಗಿದೆ. ಈ ಲೇಖನದಲ್ಲಿ ವ್ಯಕ್ತಿಗೆ ಹೆಸರು ವ್ಯಕ್ತಿತ್ವವನ್ನು ಮತ್ತು ಅವನದೇ ಆದ ಅಸ್ಮಿತೆಯನ್ನು ತಂದುಕೊಡುತ್ತದೆ ಎಂದಿದ್ದಾರೆ. ಹಾಗಾಗಿ ಹೆಸರಿಲ್ಲದ ವ್ಯಕ್ತಿ ಬರಿಯ ವಸ್ತು ಮಾತ್ರ. ಆದ್ದರಿಂದ ಹೆಸರೆಂಬುದು ವ್ಯಕ್ತಿ ಅಥವಾ ವಸ್ತುವನ್ನು ಒಟ್ಟು ಸಮೂಹದಿಂದ ಪ್ರತ್ಯೇಕಿಸಿ ಅವನಿಗೆ ಅಥವಾ ಆ ವಸ್ತುವಿಗೆ ಅಸ್ತಿತ್ವವನ್ನು ತಂದುಕೊಡುತ್ತದೆ ಎಂದಿದ್ದಾರೆ. ವ್ಯಕ್ತಿನಾಮಗಳಿಗೆ ಹಲವಾರು ಆಕರಗಳನ್ನು ಗುರ್ತಿಸಿರುವುದರಿಂದ ಅಧ್ಯಯನಕಾರರಿಗೆ ಅನುಕೂಲವಾಗಿದೆ. ವಾರ್ಗಿಕಗಳಲ್ಲಿ ಬಳಕೆಯಾಗುವ ವೃತ್ತಿ, ಜಾತಿ ಸೂಚಕವಾದ

ಆಕೃತಿಮಾಗಳು (ಶೆಟ್ಟಿ/ಗೌಡ) ಬಳಕೆಯಾಗುವುದನ್ನು ಗಮನಿಸಬಹುದು. ಆದರೆ ನಿರ್ದಿಷ್ಟಗಳಾದ ಆಕೃತಿಮಾಗಳು ವಾರ್ಗಿಕಗಳಾಗಿ ಬಳಕೆಯಾಗಲು ಸಾಧ್ಯವಿಲ್ಲ. ಒಂದು ವೇಳೆ ವಾರ್ಗಿಕದ ಸ್ಥಾನದಲ್ಲಿ ಬಂದರೂ ಸಹ ನಿಯಮಿತವಾಗಿ ಬರುವುದಿಲ್ಲವಾದ್ದರಿಂದ ಅವುಗಳನ್ನು ವಾರ್ಗಿಕಗಳೆಂದು ಪರಿಗಣಿಸಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಉದಾಹರಣೆಗೆ ರಾಮಚಂದ್ರ ಎಂಬ ಹೆಸರಿನಲ್ಲಿ ‘ಚಂದ್ರ’ವು ಅಪ್ಪ>ಅಯ್ಯ>ಅಣ್ಣ>ನಾಯಕ>ನಾಯ್ಕ>ಗೌಡ>ಶೆಟ್ಟಿ ಮುಂತಾದ ವಾರ್ಗಿಕ ಸ್ಥಾನದಲ್ಲಿ ಬಂದರೂ, ‘ರಾಮ’ಪದದ ಜೊತೆ ಸಮಸ್ತ ಪದವಾಗಿ ಮಾತ್ರವೇ ಬಂದಿದೆ ಎಂಬುದು ವಿಶೇಷ. ಇಲ್ಲಿ ಆಕೃತಿಮಾವು (ಚಂದ್ರ) ಮತ್ತೆ ಮತ್ತೆ ಆವರ್ತನೆಗೊಳ್ಳುವುದಿಲ್ಲವೆಂಬ ತಾತ್ವಿಕ ವಿಚಾರವನ್ನು ಗಮನಿಸಬಹುದು. ವಾರ್ಗಿಕಗಳನ್ನು ಸಂಬಂಧವಾಚಿ ಮತ್ತು ಜಾತಿವಾಚಿಗಳೆಂದು ಎರಡು ವಿಧಗಳಲ್ಲಿ ಗುರುತಿಸಲಾಗಿದೆ. ಆದರೆ ವಾರ್ಗಿಕಗಳಾಗಿ ಇವುಗಳ ಜೊತೆಗೆ ವೃತ್ತಿ, ಅಧಿಕಾರ, ಮನೆತನ ಮುಂತಾದ ಅಂಶಗಳು ಬಳಕೆಯಾಗುತ್ತಿರುವುದನ್ನು ಸ್ಪಷ್ಟಪಡಿಸಿಲ್ಲ. ವಾರ್ಗಿಕಗಳು ಕನ್ನಡದ ಹೆಸರಿನ ರಚನೆಗೆ ಅವಶ್ಯವಾದರೂ ಅನಿವಾರ್ಯವೇನೂ ಅಲ್ಲ ಎಂಬ ಲೇಖಕರ ಮಾತು ಪ್ರಸ್ತುತ ಅಧ್ಯಯನ ವಿಷಯಕ್ಕೆ ಹೆಚ್ಚು ಒಪ್ಪುವಂತಹದ್ದಾಗಿದೆ. ಏಕೆಂದರೆ ನಾಮನಿರ್ದೇಶನ ಮಾಡುವಲ್ಲಿ ಅದು ನಿರ್ದಿಷ್ಟವೋ, ವಾರ್ಗಿಕವೋ ಎಂಬುದು ಮುಖ್ಯವಾಗುವುದಿಲ್ಲ. ಸ್ತ್ರೀಯರ ಹೆಸರುಗಳಿಗೆ ಯಾವುದೇ ಜಾತಿವಾಚಕಗಳಾಗಲೀ ವೃತ್ತಿವಾಚಕಗಳಾಗಲಿ ಸೇರುವುದಿಲ್ಲ ಎಂಬುದು ವಿಶೇಷ ಎಂದಿದ್ದಾರೆ. ಆದರೆ ಇಂದು ಈ ರೀತಿಯ ಸಾಧ್ಯತೆಗಳು ಬಳಕೆಯಲ್ಲಿವೆ. ಪ್ರಾಚೀನಕಾಲದಲ್ಲಿ ಗೌಡಿ, ನಾಯಕಿತಿ, ಗೌಡ್ತಿ ಎಂಬ ವಾರ್ಗಿಕಗಳಿದ್ದವು ಎಂಬುದಕ್ಕೆ ನಿದರ್ಶನಗಳನ್ನು ನೀಡಿದ್ದಾರೆ. ಇವರ ಈ ಹೇಳಿಕೆಗಳನ್ನು ಇಂದಿನ ಸಂಶೋಧಕರು ಸಾಧಿಸಿ ತೋರಿಸಬಹುದಾಗಿದೆ. ವ್ಯಕ್ತಿ ನಾಮಗಳ ಅಧ್ಯಯನದಲ್ಲಿ ಅಡ್ಡ ಹೆಸರುಗಳು ಬಹಳ ಸ್ವಾರಸ್ಯಕರವಾದವುಗಳು. ವ್ಯಕ್ತಿಯ ಆಕಾರದ ಯಾವುದೋ ವೈಶಿಷ್ಟ್ಯದಿಂದಾಗಿ ಈ ರೀತಿಯ ಹೆಸರುಗಳು ಬರಲು ಕಾರಣವಾಗಿದೆ ಎಂಬ ವಿಚಾರವನ್ನು ತಿಳಿಸಿದ್ದಾರೆ. ಆರಂಭದ ಕಾಲದಲ್ಲಿ ಪರಲೋಕ, ದೈವ, ಧರ್ಮ, ಪ್ರಾಚೀನ ಮೌಲ್ಯಗಳ ಬಗ್ಗೆ ಶಂಕಿಸಿ ಮಾನಸಿಕವಾಗಿ ಭೂತಕಾಲದಲ್ಲಿದ್ದಂತಹ ಜನ ಸಮುದಾಯ ಇಂದು ಸಮಕಾಲೀನ ಅರಿವಿನ ಬಗ್ಗೆ ಯೋಚಿಸುತ್ತಿದ್ದಾರೆ. ಈ ಬದಲಾವಣೆಯು ಹೆಸರುಗಳನ್ನಿಡುವುದರಲ್ಲಿಯೂ ಕಾಣಿಸಿಕೊಂಡಿದ್ದು, ಸಂಸ್ಕೃತ ಹೆಸರುಗಳು ಹೆಚ್ಚು ಪ್ರಚಾರವಾಗುತ್ತಿವೆ. ಆದರೂ ಸಹ ಹಳೆಯ–ಹೊಸತುಗಳೆರಡೂ ಒಟ್ಟಿಗೆ ಇರುವ ಇಂದಿನ ಪರಿಸ್ಥಿತಿಯಲ್ಲಿ ಹೆಸರಿಡುವಲ್ಲಿಯೂ ಹಳೆಯ ಮತ್ತು ಹೊಸದು ಎರಡೂ ಒಟ್ಟೊಟ್ಟಿಗೆ ಕಾಣಿಸಿಕೊಂಡಿವೆ. ಆದ್ದರಿಂದ ಸಂಸ್ಕೃತೀಕರಣ ಎಂಬುದು ಪ್ರವೃತ್ತಿ ಎಂದು ಮಾತ್ರವೇ ಗ್ರಹಿಸಬೇಕೆಂದು ಲೇಖಕರು ಸಂಶೋಧಕರಿಗೆ ನೀಡುವ ಸಲಹೆಯಾಗಿದೆ. ಒಟ್ಟಾರೆಯಾಗಿ ವ್ಯಕ್ತಿನಾಮಗಳ ತಳಸ್ಪರ್ಶಿ ಅಧ್ಯಯನ ಮಾಡುವ ವಿಧಾನವನ್ನು ಈ ಲೇಖನದಲ್ಲಿ ಆಧಾರ ಸಹಿತವಾಗಿ ಸಾಧಿಸಿ ತೋರಿಸಿದ್ದಾರೆ. ಈ ಲೇಖನವನ್ನು ಮೀರಿ ನಿಲ್ಲುವ ಯಾವೊಂದು ಅಧ್ಯಯನಗಳು ನಂತರದಲ್ಲಿ ಆಗಿಲ್ಲ ಎಂದರೆ ತಪ್ಪಾಗಲಾರದು.

ಕಲಬುರ್ಗಿ ಎಂ.ಎಂ., ಅವರು 'ಕನ್ನಡ ನಾಮ ವಿಜ್ಞಾನ'(೨೦೧೦) ಎಂಬ ಕೃತಿಯನ್ನು ಬರೆದಿದ್ದು ಇದು ಒಟ್ಟಾರೆ ಹೆಸರುಗಳ ಬಗೆಗೆ ಮಾಹಿತಿ ನೀಡುತ್ತದೆ. ಈ ಕೃತಿಯಲ್ಲಿ ಬರುವ 'ವ್ಯಕ್ತಿನಾಮ' ಎಂಬ ಭಾಗದಲ್ಲಿ ವ್ಯಕ್ತಿಯನ್ನು ಸಮೂಹದಿಂದ ಬೇರ್ಪಡಿಸಿ ಗುರುತಿಸುವಂತಹ ಸಾಧನಗಳಲ್ಲಿ ಹೆಸರು ಪ್ರಮುಖವಾದುದು ಎಂದಿದ್ದಾರೆ. ವ್ಯಕ್ತಿನಾಮಗಳೆಲ್ಲ ಅಂಕಿತ ನಾಮಗಳೇ ಆಗಿರುವುದರಿಂದ ಇವುಗಳನ್ನಿಟ್ಟ ಹಿರಿಯರ ಒತ್ತಾಸೆಗಳೆಲ್ಲವೂ ಇವುಗಳಲ್ಲಿಯೇ ಅಡಗಿರುತ್ತದೆ. ಹಾಗಾಗಿ ಈ ಲೇಖನ ವ್ಯಕ್ತಿನಾಮಗಳ ಸಂಸ್ಕೃತಿಯ ಅಧ್ಯಯನಕ್ಕೆ ಉಪಯುಕ್ತ ಆಕರ ಸಾಮಗ್ರಿಯಾಗಿದೆ. ವ್ಯಕ್ತಿನಾಮದ ಅಧ್ಯಯನಕ್ಕೆ ಬೇಕಾದಂತಹ ಎಲ್ಲಾ ರೀತಿಯ ಆಕರಗಳು, ವಿಧಾನಗಳು, ಮಾಡಬೇಕಾದ ಕಾರ್ಯಗಳು ಮುಂತಾದ ಅಂಶಗಳ ಕುರಿತಂತೆ ಹೊಸ ಅಧ್ಯಯನಕಾರರಿಗೆ ಮಾರ್ಗದರ್ಶಿ ಕೈಪಿಡಿಯಂತೆ ಈ ಲೇಖನ ಮೂಡಿ ಬಂದಿದೆ. ಇದರ ಆಧಾರದ ಮೇಲೆ ಅಧ್ಯಯನಕಾರರು ತಮಗೆ ಬೇಕಾದಂತಹ ಪೂರಕ ಆಕರಗಳನ್ನು ಸಂಗ್ರಹಿಸಿ ಮಾಹಿತಿ ಸಂಗ್ರಹಿಸಲು ಸಹಾಯಕವಾಗುತ್ತದೆ. ಹಾಗೂ ಯಾವ ಮಾರ್ಗದ ಮೂಲಕ ಯಾವ ಕೆಲಸ ಮಾಡಬೇಕು ಎಂಬಂತಹ ಅಂಶಗಳನ್ನು ಸಂಶೋಧಕರಿಗೆ ಒದಗಿಸಿಕೊಡುತ್ತದೆ. ಈ ಲೇಖನದಲ್ಲಿ ವ್ಯಕ್ತಿನಾಮದ ಮೂಲರೂಪವನ್ನು ನಾಮ ವಿಜ್ಞಾನಿಗಳು ಹೇಗೆ ಪತ್ತೆ ಹಚ್ಚಬೇಕೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಹೆಸರುಗಳಲ್ಲಾದಂತಹ ಬದಲಾವಣೆಗಳನ್ನು ಗಮನಿಸಿದಾಗ ವಿಭಿನ್ನ ಅಂಶಗಳು ಕಂಡುಬರುತ್ತದೆ. ಆರಂಭದಲ್ಲಿ ವ್ಯಕ್ತಿಗಳಿಗೆ ಹೆಸರುಗಳೇ ಇರಲಿಲ್ಲ ಎಂಬುದು ಇಲ್ಲಿ ನೀಡಿರುವ ಪ್ರಾಚೀನ ಆಧಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ತದನಂತರದಲ್ಲಿ ಗುಂಪು ಗುಂಪಾಗಿ ಜೀವಿಸುತ್ತಿದ್ದ ಮನುಷ್ಯ ಒಬ್ಬರಿಂದ ಮತ್ತೊಬ್ಬರನ್ನು ಗುರುತಿಸುವುದಕ್ಕಾಗಿ ಹೆಸರುಗಳು ಹುಟ್ಟಿಕೊಂಡಿರಬೇಕು. ಆದರೆ ಪ್ರಸ್ತುತ ಸಂದರ್ಭದಲ್ಲಿ ಹುಟ್ಟಿಗಿಂತ ಮೊದಲಿಗೆ ಮಗುವಿನ ಹೆಸರನ್ನು ನಿರ್ಧರಿಸಿಕೊಳ್ಳುವಂತಹ ಉದಾಹರಣೆಗಳನ್ನು ನೋಡಬಹುದು. ಈ ಎಲ್ಲಾ ಅಂಶಗಳು ಇರುವ ಕೃತಿಯ ಈ ಭಾಗ ವ್ಯಕ್ತಿನಾಮಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ಬೆಳೆದುಬಂದ ಬಗೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಹೆಸರುಗಳನ್ನು ಭಾಷಿಕವಾಗಿ ನಿರ್ದಿಷ್ಟ ಮತ್ತು ವಾರ್ಗಿಕ ಎಂಬುದಾಗಿ ವಿಂಗಡಿಸಿಕೊಂಡು ಅವುಗಳ ರಚನಾ ಸ್ವರೂಪವನ್ನು ತಿಳಿಯಲು ಸಹಾಯಕವಾಗಿದೆ. ಮುಂದುವರೆದು ಈ ಎರಡು ಘಟಕಗಳನ್ನೇ ಕಾಲವಾಚಿ, ದೇಶವಾಚಿ, ಸಾಮಾಜಿಕ ಶ್ರೇಣೀವಾಚಿಯಾಗಿಯೂ ಅಧ್ಯಯನ ಮಾಡಬಹುದೆಂದು ತಿಳಿಸಲಾಗಿದೆ. ಹೆಸರನ್ನು ಕರೆಯುವ ಸಂದರ್ಭದಲ್ಲಿ ಹಲವಾರು ಕಾರಣಗಳಿಂದ ವ್ಯತ್ಯಾಸಗಳನ್ನು ಕಾಣಬಹುದು. ಅವುಗಳು ಉದ್ದೇಶ ಪೂರ್ವಕವಾಗಿಯಾದರೂ ಬದಲಾಗಬಹುದು ಅಥವಾ ಅನುದ್ದೇಶಿತವಾಗಿಯಾದರೂ ಬದಲಾಗಬಹುದು. ಅಂದರೆ ರೂಪಾಂತರ, ಭಾಷಾಂತರ, ನಾಮಾಂತರ ಮುಂತಾದ ವಿಧಾನಗಳಲ್ಲಿ ಬದಲಾವಣೆಗಳಾಗುವುದನ್ನು ಇಲ್ಲಿ ತಿಳಿಸಲಾಗಿದೆ. ಪ್ರಾಚೀನ ಕಾಲಘಟ್ಟದಲ್ಲಿ ದಾಖಲಾಗಿರುವ ಹೆಸರುಗಳನ್ನು ಪುರುಷವಾಚಿ ನಾಮಗಳು ಮತ್ತು ಸ್ತ್ರೀವಾಚಿ ನಾಮಗಳೆಂದು ವಿಂಗಡಿಸಿಕೊಂಡು ಅವುಗಳು ಆಯಾ ಕಾಲಘಟ್ಟದಲ್ಲಿ ಮಾಡಿಕೊಂಡಂತಹ ಬದಲಾವಣೆಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. ಆಧುನಿಕ ಕಾಲದಲ್ಲಿಯೂ ಕೂಡ ಹೆಸರುಗಳು ಆಧುನೀಕರಣಕ್ಕೆ

ತಕ್ಕಂತೆ ಬದಲಾಗುತ್ತಾ ಹೋಗುತ್ತವೆ. ೨೦ನೇ ಶತಮಾನವು ಯಾಂತ್ರಿಕ ಯುಗವಾಗಿದ್ದು ಇದರಿಂದ ಆಂತರಿಕ ಭಾವನೆಯಲ್ಲಿ, ಬಾಹ್ಯ ಜೀವನದಲ್ಲಿ ವೇಗವಾದ ಬದಲಾವಣೆಗಳು ಸಂಭವಿಸುತ್ತಿವೆ. ಇದರ ಪರಿಣಾಮ ಹೆಸರಿನ ಮೇಲೂ ಆಗಿದ್ದು ಹೆಸರಿಡುವ ದೃಷ್ಟಿಕೋನ, ಹೆಸರಿನ ಸ್ವರೂಪದಲ್ಲಿನ ಬದಲಾವಣೆ ಇಟ್ಟ ಹೆಸರಿನ ಬದಲಾವಣೆ ಮುಂತಾದ ಅಂಶಗಳನ್ನು ಗಮನಿಸಲಾಗಿದೆ. ಇವೆಲ್ಲದರ ಪರಿಣಾಮ ಆಧುನಿಕ ಕಾಲಘಟ್ಟದಲ್ಲಿ ಹೆಸರುಗಳು ಹೇಗೆ ಆಧುನಿಕತೆಗೆ ತಮ್ಮನ್ನು ಒಡ್ಡಿಕೊಳ್ಳುತ್ತದೆ ಎಂಬುದನ್ನು ಈ ಲೇಖನದಲ್ಲಿ ಗುರುತಿಸಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಪ್ರಸ್ತುತ ಅಧ್ಯಯನದ ಅನುಕೂಲತೆಗಾಗಿ ಬಳಸಿಕೊಳ್ಳಲಾಗಿದೆ.

ನಾರಾಯಣ ಕೆ.ವಿ., ಅವರು ಸಂಪಾದಿಸಿರುವ 'ವ್ಯಕ್ತಿನಾಮಗಳು : ಸ್ವರೂಪ ಮತ್ತು ವಿಶ್ಲೇಷಣೆ' (೨೦೦೮) ಕೃತಿ ವ್ಯಕ್ತಿನಾಮಗಳ ಬಗೆಗೆ ಸಂಶೋಧನಾತ್ಮಕ ಮಾದರಿಯಲ್ಲಿ ಇಡಿಯಾಗಿ ಪ್ರಕಟವಾಗಿರುವ ಮೊದಲ ಕೃತಿಯಾಗಿದೆ. ಇದು ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ಒಟ್ಟು ಪ್ರಬಂಧಗಳ ಈ ಕೃತಿಯಲ್ಲಿ ನಾರಾಯಣ ಕೆ.ವಿ., ಅವರ ಹೆಸರು: ತಾತ್ವಿಕತೆ ಎಂಬ ಪ್ರಬಂಧದಲ್ಲಿ ಹೆಸರು ಮತ್ತು ವ್ಯಕ್ತಿಯ ನಡುವೆ ಒಂದು ನಿರಂತರ ಅಸಮತೋಲನ ಇರುತ್ತದೆ. ಇವುಗಳೆರಡೂ ಒಂದು ಮತ್ತೊಂದಕ್ಕೆ ಸಮ ಅಥವಾ ಪರ್ಯಾಯವೆಂದು ತಿಳಿಯುವ ಸ್ಥಿತಿ ಸಾಧ್ಯವಿಲ್ಲ ಎಂದಿದ್ದಾರೆ. ವ್ಯಕ್ತಿಯನ್ನು ನಿರ್ದೇಶಿಸಲು ಹಲವು ಹೆಸರುಗಳನ್ನು ಸಮುದಾಯಗಳು ಬಳಸುತ್ತವೆ. ಹಾಗೆಯೇ ಅಧಿಕೃತತೆಯನ್ನು ಒತ್ತಿ ಹೇಳುವುದನ್ನು ಗಮನಿಸುತ್ತವೆ ಎಂದಿದ್ದಾರೆ. ಒಂದು ಸಲ ನಿಗದಿಯಾದ ಹೆಸರನ್ನು ಸ್ವತಃ ವ್ಯಕ್ತಿಯೇ ಬದಲಿಸಿಕೊಳ್ಳುವುದನ್ನು ಒಪ್ಪುವುದಿಲ್ಲ ಆದರೆ ಬದಲೀ ಹೆಸರುಗಳನ್ನು ವರ್ಣನಾತ್ಮಕ ನೆಲೆಯಲ್ಲಿ ಸಮುದಾಯದ ಜನರು ವ್ಯಕ್ತಿಗೆ ನೀಡುತ್ತಿರಬಹುದು. ಇದು ಛಿದ್ರಗೊಂಡ ಅಸ್ಮಿತೆಯನ್ನು ಸೂಚಿಸಬಹುದು ಎಂಬುದಾಗಿ ತಾತ್ವಿಕ ಅಂಶಗಳನ್ನು ಈ ಪ್ರಬಂಧದಲ್ಲಿ ತಿಳಿಸಿದ್ದಾರೆ.

ಇದೇ ಕೃತಿಯಲ್ಲಿ ಅಶೋಕ ಕುಮಾರ್ ರಂಜೇರೆ ಅವರ 'ವ್ಯಕ್ತಿನಾಮ: ಆಕರಗಳು' ಎಂಬ ಪ್ರಬಂಧದಲ್ಲಿ ವ್ಯಕ್ತಿ ನಾಮಗಳಿಗೆ ಎರಡು ಬಗೆಯ ಆಕರಗಳಿರುವುದನ್ನು ಗುರುತಿಸಿದ್ದಾರೆ. ಮೊದಲನೆಯದಾಗಿ ಚರಿತ್ರೆಯ ಆರಂಭದಿಂದ ಇಲ್ಲಿಯವರೆಗೆ ಇಟ್ಟಿರುವ ಹೆಸರುಗಳಿಗೆ ಇರುವ ಆಕರಗಳು (ಕಾವ್ಯ,ಪುರಾಣ, ಶಾಸನ ಇತ್ಯಾದಿ), ಎರಡನೆಯದು ಹಿಂದಿನಿಂದ ಇಲ್ಲಿಯವರೆಗೂ ಮಗುವಿಗೆ ಹುಟ್ಟಿನಿಂದ ಹೆಸರಿಡುತ್ತಾ ಬರಲಾಗಿದೆ. ಹೀಗೆ ಹೆಸರಿಡುವಾಗ ಆ ಹೆಸರು ಯಾವ ಮೂಲದಿಂದ ಅಥವಾ ಯಾವ ಆಕರದಿಂದ ಪಡೆಯುತ್ತಾ ಬರಲಾಗಿದೆ ಎಂಬುದನ್ನು ಚರ್ಚಿಸಲಾಗಿದೆ. ಉದಾಹರಣೆಗೆ ದೈವ, ಪುರಾಣ, ಚರಿತ್ರೆ, ನಿಸರ್ಗ, ಪ್ರಸಿದ್ಧ ವ್ಯಕ್ತಿಗಳು, ಹಿರಿಯರು, ಸಂಬಂಧ ವಾಚಿ, ಮೌಲ್ಯ ಆರೋಪಿತ ಮುಂತಾದ ಮೂಲಗಳನ್ನು ನೀಡಿದ್ದಾರೆ. ಈ ಎಲ್ಲಾ ಆಕರ ಮೂಲಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲು ಇದು ಸಹಕಾರಿಯಾಗಿದೆ.

ಇದೇ ಕೃತಿಯಲ್ಲಿರುವ ಸಾಂಬಮೂರ್ತಿ ಅವರ 'ವ್ಯಕ್ತಿನಾಮಗಳ ರಾಚನಿಕ ಅಧ್ಯಯನ' ಎಂಬ ಪ್ರಬಂಧ ಹೆಸರಿಡುವ ಬಗೆಗಳನ್ನು ಗುರುತಿಸುತ್ತದೆ ಹಾಗೂ ಆ ನಂತರದಲ್ಲಿ ಅವುಗಳ ರಚನೆಗಳ ಸ್ವರೂಪ ಮತ್ತು ವಿಶ್ಲೇಷಣೆ ಮಾಡುವ ಮೂಲಕ ಭಾಷಿಕ ಅಂಶಗಳು, ಸಾಮಾಜಿಕ ಸ್ಥಾನಮಾನ,

ಐತಿಹಾಸಿಕ ನೆಲೆಗಳು ಮುಂತಾದ ಅಂಶಗಳ ಮೇಲೆ ಬೆಳಕು ಬೀರುತ್ತದೆ. ಇದರಿಂದಾಗಿ ಅಧ್ಯಯನಕಾರರು ವ್ಯಕ್ತಿನಾಮಗಳ ಭಾಷಿಕ ಅಧ್ಯಯನದಲ್ಲಿ ತೊಡಗಿಕೊಳ್ಳಲು ಸಹಾಯಕವಾಗಿದೆ. ಪ್ರಸ್ತುತ ಅಧ್ಯಯನದ ರಾಚನಿಕ ಸ್ವರೂಪ ಕುರಿತು ಚರ್ಚಿಸುವ ಸಂದರ್ಭದಲ್ಲಿ ಈ ಪ್ರಬಂಧ ಹೆಚ್ಚು ಸಹಾಯಕವಾಗಿದೆ.

ಇದೇ ಕೃತಿಯ ಮಹಾದೇವಯ್ಯ ಪಿ., ಅವರ 'ವ್ಯಕ್ತಿನಾಮಗಳ ಚಾರಿತ್ರಿಕ ನೆಲೆ' ಎಂಬ ಪ್ರಬಂಧದಲ್ಲಿ ಮನುಷ್ಯನ ಅವಿಭಾಜ್ಯ ಅಂಗವಾಗಿರುವ ವ್ಯಕ್ತಿನಾಮಗಳು ಚರಿತ್ರೆ ಕಟ್ಟಿಕೊಡಲು ಹೇಗೆ ಸಹಾಯಕವಾಗಿದೆ ಎಂಬುದು ಕುತೂಹಲದ ಸಂಗತಿ ಎನ್ನುತ್ತಾರೆ. ಮನುಷ್ಯ ನಾಗರಿಕತೆಯೆಡೆಗೆ ಸಾಗುತ್ತಿದ್ದಂತೆ ಪ್ರಾಚೀನ ವ್ಯಕ್ತಿನಾಮಗಳು ಕಣ್ಮರೆಯಾಗುತ್ತಿವೆಯೆಂದೂ ಹಾಗಾಗಿ ನಮ್ಮಿಂದ ದೂರಾಗುತ್ತಿರುವ ಹೆಸರುಗಳನ್ನು ಒಂದೆಡೆ ಸಂಗ್ರಹಿಸುವ, ವಿಶ್ಲೇಷಿಸುವ ಅವುಗಳ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಮಾಡಬೇಕೆಂಬ ವಿಚಾರವನ್ನು ಅಧ್ಯಯನ ಮಾಡುವ ಸಂಶೋಧಕರಿಗೆ ಸೂಚನೆ ನೀಡಿದ್ದಾರೆ. ಈ ಎಲ್ಲಾ ಸೂಚನೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಇದೇ ಕೃತಿಯ ಪಾಂಡುರಂಗಬಾಬು ಡಿ., ಅವರ 'ವ್ಯಕ್ತಿನಾಮಗಳು : ಸಾಮಾಜಿಕ ನೆಲೆ' ಎಂಬ ಪ್ರಬಂಧದಲ್ಲಿ ವ್ಯಕ್ತಿನಾಮಗಳು ಮತ್ತು ಸಮಾಜದ ನಡುವೆ ಇರುವ ಸಂಬಂಧಗಳು ಒಂದೇ ಆಗಿರಲೂಬಹುದು, ಬೇರೆ–ಬೇರೆಯಾಗಿಯೂ ಆಗಿರಬಹುದು ಎಂದು ಹೇಳುವ ಮೂಲಕ ವಿಮರ್ಶಾತ್ಮಕ ಚಿಂತನಾ ದೃಷ್ಟಿಕೋನವನ್ನು ಹಾಕಿಕೊಟ್ಟಿದ್ದಾರೆ. ಹಾಗಾಗಿ ಈ ಸಾಧ್ಯತೆಗಳನ್ನು ಪ್ರಸ್ತುತ ಅಧ್ಯಯನದ ಸಾಮಾಜಿಕ ನೆಲೆಗಳು ಎಂಬ ಘಟಕದಲ್ಲಿ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.


ಈ ಕೃತಿಯ ಕೊನೆಯಲ್ಲಿ ಅಂಗಡಿ ಎಸ್.ಎಸ್., ಅವರು 'ಕರ್ನಾಟಕದ ಕುಲನಾಮಗಳು' ಎಂಬ ಪ್ರಬಂಧದಲ್ಲಿ ವ್ಯಕ್ತಿ ನಾಮಗಳು ಮತ್ತು ಕುಲನಾಮಗಳು ಒಂದು ಜನಾಂಗದ ಸಂಸ್ಕೃತಿ ಅರಿಯಲು ಸಮಾಜಶಾಸ್ತ್ರಜ್ಞರಿಗೂ ನೆರವಾಗುತ್ತವೆ ಎಂದಿದ್ದಾರೆ. ಈ ಅಂಶಗಳು ವ್ಯಕ್ತಿನಾಮಗಳು ಹಾಗೂ ಕುಲನಾಮಗಳಿಂದ ಭಾಷೆ, ಸಮಾಜ, ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಸಂಶೋಧಕರಿಗೆ ಸಹಕಾರಿಯಾಗುತ್ತವೆ.

ಜವರೇಗೌಡ ದೇ., ಅವರ ಜಾನಪದ ಮಹಾಸಂಪುಟ (೨೦೧೦) ಕೃತಿಯ 'ವ್ಯಕ್ತಿನಾಮಗಳು' ಎಂಬ ಲೇಖನದಲ್ಲಿ ವ್ಯಕ್ತಿನಾಮಗಳ ಅಧ್ಯಯನ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಇಂತಹ ಅಧ್ಯಯನಗಳು ಇತಿಹಾಸ, ಭೂಗೋಳ, ಸಾಮಾಜಿಕ ಪದ್ಧತಿ ಹಾಗೂ ಜನ ಸಮುದಾಯದ ಮನೋಧೋರಣೆಗಳ ಮೇಲೆ ಬೆಳಕು ಚೆಲ್ಲುತ್ತವೆ ಹಾಗೂ ಜನರ ನಡುವೆ ಸಾಮ್ಯ–ವೈಷಮ್ಯಗಳನ್ನು ಗುರುತಿಸುತ್ತವೆ ಎಂದಿದ್ದಾರೆ. ಭಾಷೆಯ ಬೆಳವಣಿಗೆಯಲ್ಲಿ ಅದರ ಸ್ವರೂಪ ರಚನೆಗಳ ಅಧ್ಯಾಯಗಳಲ್ಲಿ ವ್ಯಕ್ತಿನಾಮಗಳ ಪಾತ್ರ ಮಹತ್ವವಾದುದು ಎಂಬ ವಿಚಾರಗಳನ್ನು ವಿವರಿಸಿದ್ದಾರೆ. ಬೇರೆ ಬೇರೆ ನಾಮ ವಿಜ್ಞಾನಿಗಳು ಪ್ರಾಚೀನ ಕಾಲದ ಮಾನವನಿಗೆ ಹೆಸರು ಕೇವಲ ವ್ಯಕ್ತಿ ವ್ಯಕ್ತಿಗಳ ನಡುವೆ ಗುರುತಿಸುವುದಕೋಸ್ಕರ ಬಳಕೆಯಾಗುತ್ತಿದ್ದವು ಎಂದು ಹೇಳಿದರೆ, ಈ ಲೇಖನದಲ್ಲಿ ವ್ಯಕ್ತಿನಾಮಗಳು ಪಂಚೇಂದ್ರಿಯಗಳಂತೆ, ಉಸಿರಿನಂತೆ ವ್ಯಕ್ತಿಯ ಒಂದು ಪ್ರಧಾನ ಭಾಗವೆಂದು ಪ್ರಾಚೀನ ಮಾನವನ ನಂಬಿಕೆಯಾಗಿತ್ತು ಎಂಬುದಾಗಿ ಹೇಳಿದ್ದಾರೆ. ವೇದಗಳ ಕಾಲದಲ್ಲಿಯೂ ಒಬ್ಬ ವ್ಯಕ್ತಿಗೆ ಎರಡು

ಹೆಸರುಗಳಿದ್ದವು. ಒಂದು ನಿಜನಾಮ ಮತ್ತೊಂದು ತಂದೆಯ ಅಥವಾ ಗೋತ್ರದ ಹೆಸರು. ಕಾಲಾನಂತರದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಅನುಗುಣವಾಗಿ ಜನರ ಸಂಸ್ಕಾರಾಭಿರುಚಿಗೆ ತಕ್ಕಂತೆ ಹೆಸರುಗಳು ವ್ಯತ್ಯಾಸಗಳಾಗಿರುವುದುಂಟು ಎಂಬುದನ್ನು ವಿವರಿಸಿದ್ದಾರೆ. ವ್ಯಕ್ತಿನಾಮಗಳಲ್ಲಿ ಸಾಮಾನ್ಯವಾಗಿ ನಿಜನಾಮ ಮತ್ತು ಉಪನಾಮಗಳೆಂಬ ಎರಡು ಬಗೆಯ ಅಂಶಗಳು ಸೇರಿಕೊಂಡಿವೆ. ಇದರಲ್ಲಿ ಉಪನಾಮಗಳ ಹಿಂದೆ ಸ್ವಾರಸ್ಯಕರವಾದ ಇತಿಹಾಸವಿದೆ ಎಂದಿದ್ದಾರೆ. ಈ ಎಲ್ಲಾ ವಿಚಾರಗಳ ಜೊತೆಗೆ ನಿಜನಾಮ ಮತ್ತು ಉಪನಾಮ ಎಂಬ ಎರಡು ಪ್ರಕಾರಗಳಿಂದಾಗಿ ಭಾಷೆಯ ಬೆಳವಣಿಗೆಯಲ್ಲಿ ವ್ಯಕ್ತಿನಾಮಗಳು ಮಹತ್ವದ ಪಾತ್ರ ವಹಿಸುವುದರ ಜೊತೆಗೆ ಒಂದು ಜನಾಂಗದ ಬೌದ್ಧಿಕ ಸಾಮರ್ಥ್ಯ, ಸಂಸ್ಕೃತಿಯ ಬೆಳವಣಿಗೆಯನ್ನು ಅರಿಯಲು ಸಾಧ್ಯವಾಗಿದೆ ಎಂದಿದ್ದಾರೆ. ಈ ಎಲ್ಲಾ ಅಂಶಗಳನ್ನು ವಿಭಿನ್ನ ಆಯಾಮಗಳಲ್ಲಿ ಅಧ್ಯಯನ ಮಾಡಲು ಪೂರಕವಾದ ಆಕರವಾಗಿ ಈ ಲೇಖನವನ್ನು ಬಳಸಿಕೊಳ್ಳಬಹುದಾಗಿದ್ದು ಪ್ರಸ್ತುತ ಅಧ್ಯಯನಕ್ಕೆ ಸಹಾಯಕವಾಗಿದೆ.

ನೇಗಿನಹಾಳ ಎಂ.ಬಿ., ಅವರ ನೇಗಿನಹಾಳ ಪ್ರಬಂಧಗಳು (೧೯೯೯) ಕೃತಿಯಲ್ಲಿ 'ಕರ್ನಾಟಕದ ಸ್ಥಳನಾಮ–ವ್ಯಕ್ತಿನಾಮಗಳ ಅಧ್ಯಯನ' ಲೇಖನದಲ್ಲಿ ಚರಿತ್ರೆಯಲ್ಲಿ ಕಳೆದು ಹೋದ ಹಲವಾರು ವಿಚಾರಗಳನ್ನು ತುಂಬಿಕೊಳ್ಳಲು ನಾಮಾಧ್ಯಯನ ಸಾಕಷ್ಟು ಹೊಸ ವಿಷಯಗಳನ್ನು ಒದಗಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ. ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿ ದೊರೆಯುವ ಶಾತವಾಹನ ರಾಜರ ಹೆಸರುಗಳಲ್ಲಿ ಗೌತಮಿಪುತ್ರ, ವಾಶಿಷ್ಠ ಪುತ್ರ, ಮಾಂಡಲೀ ಪುತ್ರ ಎಂದು ತಪ್ಪದೆ ತಾಯಂದಿರ ಹೆಸರು ಹೇಳುವುದು ಕಂಡುಬರುತ್ತಿತ್ತು. ಇದರಿಂದಾಗಿ ಆಗಿನ ಕಾಲದ ರಾಜ ಮನೆತನಗಳಲ್ಲಿ ತಾಯಿಯ ಹೆಸರಿಗೆ ಪ್ರಾಧಾನ್ಯತೆ ಇರುವುದು ಕಂಡುಬರುತ್ತದೆ. ಸಮುದ್ರಗುಪ್ತನ ತಾಯಿ 'ಲಿಚ್ಛವಿ' ಮನೆತನದವಳು, ಗಂಗರ ದೊರೆ ದುರ್ವಿನೀತನ ತಾಯಿ ಪುನ್ನಾಟ ಮನೆತನದವಳು ಎಂಬ ಅಂಶಗಳು ಕಂಡುಬರುತ್ತವೆ. ಇವೆಲ್ಲವುಗಳ ಆಧಾರದಿಂದ ಅಂದಿನ ಕಾಲದಲ್ಲಿ ಮಾತೃಪ್ರಧಾನ ಕುಟುಂಬ ಆಚರಣೆಯಲ್ಲಿತ್ತೆಂದು ಗ್ರಹಿಸಬಹುದು. ಪ್ರಾಕೃತ ಶಾಸನ ಮತ್ತು ನಾಣ್ಯಗಳಲ್ಲಿ ಕಂಡುಬರುವ ಪುಳುಮಾವಿ, ನಿಳಿವಾಯುಕರತರೆಂಬೆ, ಕೊಂಡಮಾಣ, ವಳೀವೇರ, ಮೊದಲಾದ ವ್ಯಕ್ತಿ ವಾಚಕಗಳು ಪ್ರಾಕೃತ ಅಥವಾ ಸಂಸ್ಕೃತ ಮೂಲವಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಹಾಗೆಯೇ ಕೆಲವನ್ನು ದ್ರಾವಿಡ ಮೂಲದವು ಎಂದು ಹೇಳಲು ಕಷ್ಟ ಎಂದಿದ್ದಾರೆ. ನಮ್ಮಲ್ಲಿ ನಾಮಗಳ ಚರ್ಚೆ ಆಗಿಂದಾಗ್ಗೆ ನಡೆಯುತ್ತಲೇ ಬಂದಿದೆ. ಪಂಪ, ಪುಲಿಕೇಶಿ, ಕಪ್ಪೆ ಆರಭಟ್ಟ, ಅಲ್ಲಮ, ಅಬ್ಬಣಬ್ಬೆ, ಮುದ್ರಾಚಾರ್ಯ, ಮೈಲಾರ, ಖಂಡೋಬಾ, ಎಲ್ಲಮ್ಮ, ಗೋಕರ್ಣ, ಬಾದುಬ್ಬೆ, ಭಳಾರಿ, ಬಸಿದಬ್ಬೆ, ಚುಂಚ, ಜುಂಜಪ್ಪ, ಮಲ್ಲಿಕಾರ್ಜುನ ಇತ್ಯಾದಿ ಹೆಸರುಗಳ ಚರ್ಚೆಯು ನಡೆಯುತ್ತಾ ಬಂದಿದೆ. ಈ ದೇವತಾ ವಾಚಕಗಳನ್ನು ಸರಿಯಾಗಿ ವಿಶ್ಲೇಷಿಸುವುದು ಸಾಧ್ಯವಾದರೆ ನಮ್ಮ ಸಂಸ್ಕೃತಿಯ ಚಿತ್ರಣ ಹೆಚ್ಚು ಸ್ಪಷ್ಟವಾಗಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಈ ಕೃತಿಯ 'ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿಯ (ವ್ಯಕ್ತಿ)ನಾಮಗಳು–೧' ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ಸುಮಾರು ೧೦೫ ಪ್ರಾಕೃತ ಶಾಸನಗಳು ಪತ್ತೆಯಾಗಿವೆ ಎಂದಿದ್ದಾರೆ. ಕಾರ್ಶಿಯ ಚೈತ್ಯಾಲಯದ ಶಾಸನದಲ್ಲಿ ಕಂಡುಬರುವ ಬನವಾಸಿಯ ವ್ಯಾಪಾರಿ ಭೂತಪಾಲನ

ಹೆಸರನ್ನು ಮಾತ್ರ ಇಲ್ಲಿ ಹೆಸರಿಸಿದ್ದಾರೆ. ಕ್ಷತ್ರಪರು ಆರ್ಯಮೂಲದವರೇ ಆದರೂ, ಇನ್ನಿತರ ಭಾರತೀಯ ಆರ್ಯ ಭಾಷೆಗಳಿಗಿಂತ ಕೊಂಚ ಭಿನ್ನವಾದ ಭಾಷೆಯನ್ನಾಡುತ್ತಿದ್ದರೆಂದು ಹೇಳಲಾಗಿದೆ. ಈ ಶಾಸನಗಳಲ್ಲಿ ಸುಮಾರು ೧೭೫ಕ್ಕಿಂತ ಹೆಚ್ಚು ವ್ಯಕ್ತಿನಾಮಗಳು ಮತ್ತು ಅವುಗಳ ವಿಶೇಷಣ ರೂಪಗಳು ಕಂಡುಬಂದಿದೆ. ಅವುಗಳನ್ನು ಈ ಲೇಖನದಲ್ಲಿ ಪಟ್ಟಿ ಮಾಡಿದ್ದಾರೆ. ಇದೇ ಕೃತಿಯಲ್ಲಿ ಇವರು 'ಕರ್ನಾಟಕ ಪ್ರಾಕೃತ ಶಾಸನಗಳಲ್ಲಿಯ ವ್ಯಕ್ತಿನಾಮಗಳು–೨' ಈ ಲೇಖನದಲ್ಲಿ ಶಾಸನದಲ್ಲಿ ದೊರೆತ ವ್ಯಕ್ತಿನಾಮಗಳನ್ನು ಹಲವಾರು ರೀತಿಯಲ್ಲಿ ವರ್ಗೀಕರಣ ಮಾಡಿದ್ದಾರೆ. ಅವುಗಳೆಂದರೆ,




ಇದೇ ಕೃತಿಯಲ್ಲಿ ಇವರು 'ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿ ವ್ಯಕ್ತಿನಾಮಗಳು–೩' ಎಂಬ ಲೇಖನದಲ್ಲಿ ಅಶೋಕನ ಶಾಸನಗಳ ಭಾಷೆ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಕರ್ನಾಟಕದಲ್ಲಿ ದೊರೆಯುವ ಆ ಕಾಲದ ೧೪ ಶಾಸನಗಳಲ್ಲಿಯ ವಿಭಿನ್ನ ಅಂಶಗಳು ಗೋಚರಿಸಿರುವುದನ್ನು ನೋಡಬಹುದು. 'ದೇವನಾಂಪ್ರಿಯೆ' ಎಂದು ನಿಟ್ಟೂರಿನ ಪಾಠದಲ್ಲಿದ್ದರೆ, 'ದೇವಾಣಂಪ್ರಿಯೆ' ಎಂದು ಬ್ರಹ್ಮಗಿರಿಯ ಶಾಸನದಲ್ಲಿದೆ ಎಂದು ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ದೀರ್ಘಸ್ವರಗಳು ಹ್ರಸ್ವವಾಗುವುದು, ಋ–ೠ, ಶ–ಷ ಲೋಪ, ವಿಸರ್ಗ ಲೋಪ, ಮೂರ್ಧನ್ಯೀಕರಣ, ಮಹಾಪ್ರಾಣೀಕರಣ, ಕೆಲವೊಮ್ಮೆ ಮೂರ್ಧನ್ಯಗಳು ದಂತೀಕರಣಗೊಳ್ಳುವುದು ಮೊದಲಾದ ಧ್ವನಿಮಾತ್ಮಕ ಪರಿವರ್ತನೆಗಳು ಕರ್ನಾಟಕದ ಶಾಸನಗಳಲ್ಲೂ ಇರುವುದನ್ನು ಗುರ್ತಿಸಿದ್ದಾರೆ. ಅಷ್ಟೇ ಅಲ್ಲದೆ ಪೂರ್ವಭಾಗದ ಶಾಸನಗಳಲ್ಲಿ ಮಾತ್ರ ಕಂಡುಬರುತ್ತಿದ್ದ ಘೋಷಗಳು ಅಘೋಷಗಳಾಗಿ ಪರಿವರ್ತಿಸುವ ವಿಶಿಷ್ಟ ಪ್ರಕ್ರಿಯೆ ಕರ್ನಾಟಕದ ಶಾಸನಗಳಲ್ಲಿ ಕಂಡುಬಂದಿರುವುದನ್ನು ತಿಳಿಸಿದ್ದಾರೆ. ಉದಾಹರಣೆಗೆ (ಪೌರಾಣ ಭಕ್ತಿ) ಪೋರಾಣಪಕಿತಿ. ಹೀಗೆ ಹಲವಾರು ಅಂಶಗಳು ವ್ಯತ್ಯಾಸವಾಗಿರುವುದನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ. ಈ ಲೇಖನದಲ್ಲಿನ ಅಂಶಗಳು ಪ್ರಸ್ತುತ ಅಧ್ಯಯನದಲ್ಲಿ ಚಾರಿತ್ರಿಕ ನೆಲೆಗಳ ವಿಶ್ಲೇಷಣೆಗೆ ಸಹಕಾರಿಯಾಗಿದೆ.

ವೀರಭದ್ರ ಶರ್ಮ ಕೆ.ಎಂ., ಅವರು ಭಾಷೆ–ವಿಶ್ವಕೋಶ(೨೦೦೯) ಕೃತಿಯಲ್ಲಿ 'ಭಾಷೆಯಲ್ಲಿ ಹೆಸರುಗಳು' ಎಂಬ ಲೇಖನದಲ್ಲಿ ಭಾಷೆಯಲ್ಲಿರುವಂತಹ ಪದಗಳು ಅದರ ಆರಂಭಿಕ ಹಂತದಲ್ಲಿ

ನಮಗೆ ತೋಚಿದಂತೆ ಕೇವಲ ಗುರುತಿಸುವುದಕೋಸ್ಕರ ಇಟ್ಟುಕೊಂಡ ಹೆಸರುಗಳನ್ನು ತಿಳಿಸುವ ಅಂಕಿತನಾಮ ಅಥವಾ ಅರ್ಥಾನುಸಾರಿಯಾಗಿ ಬಂದ ಅನ್ವರ್ಥಕ ನಾಮಗಳಾಗಿರಬಹುದೆಂದು ಭಾವಿಸಲಾಗಿದೆ. ರೂಢನಾಮಗಳು ಸಾರ್ವತ್ರಿಕ ಅರ್ಥವನ್ನುಂಟು ಮಾಡುವ ಕಾರಣದಿಂದ ಒಬ್ಬ ಮನುಷ್ಯನನ್ನು ಪ್ರತ್ಯೇಕಿಸಿ ನೋಡಬೇಕಾದ ಅನಿವಾರ್ಯತೆ ಉದ್ಭವಿಸುತ್ತದೆ. ಹಾಗಾಗಿ ಇವುಗಳನ್ನು ಬಳಸದೆ ಹೋದರೆ ಅದು ವ್ಯಾವಹಾರಿಕ ಗೊಂದಲಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅಂಕಿತನಾಮಗಳು ಅಥವಾ ಸಂಜ್ಞಾವಾಚಕಗಳು ಭಾಷೆಯಲ್ಲಿ ಸ್ಥಾನ ಪಡೆದುಕೊಂಡಿವೆ ಎಂಬ ವಿಚಾರ ತಿಳಿಸಲಾಗಿದೆ. ಗುರುತಿಸುವುದು ಮಾತ್ರ ಹೆಸರಿನ ಉದ್ದೇಶವಾಗಿರದೆ ನಾಮಕರಣದಲ್ಲಿ ಸಾಂಸ್ಕೃತಿಕ ಅಂಶವೂ ಕೂಡ ಕೂಡಿರುತ್ತದೆ. ನಾಮಕರಣಗೊಂಡ ಸ್ಥಳ, ವ್ಯಕ್ತಿ, ವಸ್ತುವಿನ ವೈಶಿಷ್ಟ್ಯತೆ, ಆಂತರಿಕ ಗುಣ, ಮೌಲ್ಯ, ಸ್ವರೂಪಗಳನ್ನು ಹೊಂದಿರುತ್ತದೆ ಎಂಬ ಅಂಶಗಳನ್ನು ಗುರುತಿಸಲಾಗಿದೆ. ಭಾಷೆಯಲ್ಲಿ ಹೆಸರುಗಳು ಅದರಲ್ಲೂ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು ಹೇಗೆ ರೂಪಗೊಳ್ಳುತ್ತವೆ ಮತ್ತು ಅವುಗಳಿಗೆ ಕಾರಣಗಳೆಂದರೆ ವ್ಯಕ್ತಿನಾಮಗಳಿಗೆ ವ್ಯಕ್ತಿಗಳ ಕುಲ, ಕಸುಬು, ಜಾತಿ ಮತ್ತು ಧರ್ಮ, ನಂಬಿಕೆಗಳು, ದೈವ, ಸಂಪ್ರದಾಯ ಇವುಗಳು ಆಧಾರವಾದರೆ ಸ್ಥಳನಾಮಗಳಿಗೆ ಪ್ರಕೃತಿ, ತೋಟ, ಊರು, ಕೇರಿ, ಹೊಳೆ, ದಾರಿ, ಕೆರೆ ಇವು ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಸಿದ್ದಾರೆ. ಹೆಸರುಗಳ ಬದಲಾವಣೆಯನ್ನು ಕುರಿತಂತೆ ಸಾಂಪ್ರದಾಯಿಕ ಹೆಸರುಗಳು ತಮ್ಮ ಹಿರಿಯರಿಂದ ಪಡೆದವರಲ್ಲಿ ಕೆಲವರು ತಮ್ಮ ಹೆಸರಿನೊಂದಿಗೆ ಕುಲ, ಕಸುಬು, ಜಾತಿ ಸೂಚಕವಾದ ಉಪನಾಮಗಳನ್ನು ತ್ಯಜಿಸುತ್ತಾರೆ, ಇಲ್ಲವೆ ಪೂರ್ಣವಾಗಿ ಹೊಸ ಹೆಸರನ್ನು ಬಳಸುತ್ತಾರೆ ಎಂಬುದನ್ನು ತಿಳಿಸಿದ್ದಾರೆ.

ಹಾಗೆಯೇ ಈ ಕೃತಿಯಲ್ಲಿ ಮಹಾದೇವಯ್ಯ ಪಿ., ಅವರು 'ವ್ಯಕ್ತಿನಾಮಗಳು' ಎಂಬ ಲೇಖನದಲ್ಲಿ ವ್ಯಕ್ತಿನಾಮಗಳು ಸಮುದಾಯದ ನಂಬಿಕೆಯ ಭಾಗವಾಗಿ ಬಳಕೆಯಾಗುತ್ತವೆ ಎಂಬುದನ್ನು, ನಂಬಿಕೆ ಮತ್ತು ವ್ಯಕ್ತಿನಾಮ ಹೇಗೆ ಒಂದಕ್ಕೊಂದು ಪ್ರಭಾವ ಬೀರಿವೆ ಎಂಬುದನ್ನು ತಿಳಿಸಿದ್ದಾರೆ. ಕೆಲವು ಸಮುದಾಯಗಳಲ್ಲಿ  ಮೂರು ತಲೆಮಾರಿನ ಹಿಂದಿನ ಹೆಸರು ಇಡುವ ಪದ್ಧತಿ ಇದೆ. ಇದಕ್ಕೆ ಕಾರಣ ತಮ್ಮ ವಂಶಸ್ಥರ ನೆನಪಿಗಾಗಿ ಎಂಬುದನ್ನು ನೆನಪು ಮತ್ತು ವ್ಯಕ್ತಿನಾಮ ಎಂಬುದಾಗಿ ತಿಳಿಸಿದ್ದಾರೆ. ಮುಂದುವರೆದು ವ್ಯಕ್ತಿನಾಮಗಳ ರಾಚನಿಕ ಸ್ವರೂಪ, ಚಾರಿತ್ರಿಕ ಅಂಶಗಳು, ಸಾಮಾಜಿಕ ಅಂಶಗಳು, ವ್ಯಕ್ತಿ, ಜಾತಿ, ಸ್ತರದ ಅಂಶಗಳ ಸಂಕಥನಗಳಲ್ಲಿ ವ್ಯಕ್ತಿನಾಮಗಳ ಬಳಕೆ, ವ್ಯಕ್ತಿನಾಮಗಳು ಬದಲಾವಣೆಯ ಸ್ಥಿತ್ಯಂತರವನ್ನು ಹೇಗೆ ಪಡೆದುಕೊಂಡವು ಮುಂತಾದ ಅಂಶಗಳನ್ನು ಉದಾಹರಣೆಯೊಂದಿಗೆ ವಿಶ್ಲೇಷಿಸಿದ್ದಾರೆ. ಈ ಲೇಖನದ ಮೂಲಕ ಪ್ರಸ್ತುತ ಅಧ್ಯಯನದಲ್ಲಿ ಚಾರಿತ್ರಿಕತೆಯನ್ನು ಅಧ್ಯಯನ ಮಾಡುವಾಗ ತಲೆಮಾರಿನಿಂದ ತಲೆಮಾರಿಗೆ ವ್ಯಕ್ತಿನಾಮಗಳು ಹೇಗೆ ಬಳಕೆಯಾಗುತ್ತವೆ ಎಂಬುದನ್ನು ತಿಳಿಸಲು ಸಹಾಯಕವಾಗಿದೆ.

ರಾಮಕೃಷ್ಣ ಆರ್., ಅವರ ಭಾಷಾವೀಕ್ಷಣ (೨೦೦೦) ಕೃತಿಯ 'ಕನ್ನಡ ವ್ಯಕ್ತಿನಾಮಗಳ ಭಾಷಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿ, ಹೆಸರು ವ್ಯಕ್ತಿಯನ್ನು ಗುರುತಿಸುವುದಕ್ಕಾಗಿಯೇ ಇಟ್ಟಂಥದ್ದಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಂದರೆ ಅದು ವ್ಯಕ್ತಿಯ ಜೀವನದಲ್ಲಿ ಅವಿನಾಭಾವ ಸಂಬಂಧವನ್ನು

ಇಟ್ಟುಕೊಂಡು ಜೀವನ ಹೀಗೆಯೇ ಇರಬೇಕೆಂದು ರೂಪಿಸುವುದು, ಹಾಗೆಯೇ ನಡೆಸುವುದು ಮತ್ತು ಕೆಡಿಸುವುದು ಕೂಡ ಸಾಧ್ಯ ಎಂಬ ವಿಚಾರ ಎಲ್ಲರಿಗೂ ಅರ್ಥವಾಗುವಂತಹದ್ದು ಎಂದು ಈ ಲೇಖನದಲ್ಲಿ ತಿಳಿಸಿದ್ದಾರೆ. ವ್ಯಕ್ತಿನಾಮಗಳ ಅಧ್ಯಯನ ಬಹು ಸ್ವಾರಸ್ಯಕರವಾದುದು. ಈ ನಿಟ್ಟಿನಲ್ಲಿ ಭಾಷಾಧ್ಯಯನಕಾರರಿಗೆ ಭಾಷಿಕ ಸ್ವೀಕರಣ, ಪ್ರಸರಣ, ಸಂಸ್ಕೃತೀಕರಣಗಳನ್ನು ಶೋಧಿಸುವುದು, ವ್ಯಕ್ತಿ ಸಮುದಾಯದ ಸಾಂಸ್ಕೃತಿಕ ಇತಿಹಾಸ ರೂಪಿಸುವುದು, ನಾಮ ನಿಷ್ಪತ್ತಿ ತಿಳಿಯುವುದು, ಅಕ್ಷರಗಳ ವಿನ್ಯಾಸ, ಧ್ವನಿಮಾಗಳ ವಿತರಣೆ, ಸಂಯುಕ್ತಾಕ್ಷರಗಳ ರಚನೆ ಮುಂತಾದ ವಿಚಾರಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗಿದೆ. ಈ ಲೇಖನವು ಪ್ರಧಾನವಾಗಿ ಕರ್ನಾಟಕದ ವ್ಯಕ್ತಿನಾಮಗಳ ಸಾಂಸ್ಕೃತಿಕ ವಿಶಿಷ್ಟ ಪೂರ್ಣ ಲಕ್ಷಣಗಳನ್ನು ಗುರುತಿಸುವಲ್ಲಿ ಹೆಚ್ಚು ಸಹಾಯಕವಾಗಿದೆ ಹಾಗೂ ಪ್ರಸ್ತುತ ಅಧ್ಯಯನಕ್ಕೆ ರಾಚನಿಕ ವಿಶ್ಲೇಷಣೆ ಮಾಡಲು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ.

ನಂಜಯ್ಯ ಹೊಂಗನೂರು ಎಂ., ಅವರು ದಕ್ಷಿಣ ಭಾರತೀಯ ಜಾನಪದಕೋಶ (ಸಂ.೩)ದ 'ವ್ಯಕ್ತಿನಾಮ' ಲೇಖನದಲ್ಲಿ ವ್ಯಕ್ತಿನಾಮಗಳಿಗೆ ವಿಭಿನ್ನ ನೆಲೆಗಳಿದ್ದು ಒಂದೊಂದು ನೆಲೆಯನ್ನು ವಿಶ್ಲೇಷಣೆಗೆ ಒಳಪಡಿಸಿದರೆ ವೈವಿಧ್ಯಮಯ ಸಾಂಸ್ಕೃತಿಕ ಸಂರಚನೆಗಳು ತೆರೆದುಕೊಳ್ಳುತ್ತವೆ ಎಂಬ ವಿಚಾರವನ್ನು ತಿಳಿಸಿದ್ದಾರೆ. ಇಂದು ವ್ಯಕ್ತಿನಾಮಗಳಲ್ಲಿ ಹೊಸ-ಹೊಸ ರೂಪಗಳು ಕಂಡುಬಂದು ತನ್ನ ಸಂಸ್ಕೃತಿಯ ನೆಲೆಯನ್ನು ಮೀರಿ ಮುನ್ನೆಡೆಯುತ್ತಿರುವುದು ಇಂದಿನ ಸಮಾಜದ ಗುಣ ವಿಶೇಷವಾಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಇವು ಆಯಾ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಭಾಷಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಜನರ ಸಂಸ್ಕಾರಗಳಿಗೆ ತಕ್ಕಂತೆ ಬದಲಾವಣೆಯಾಗುತ್ತಾ ಹೋಗುತ್ತವೆ ಎಂಬುದನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ. ಈ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಸಾಮಾಜಿಕ ನೆಲೆಗಳನ್ನು ಕುರಿತು ಚರ್ಚಿಸುವಲ್ಲಿ ಬಳಸಿಕೊಳ್ಳಲಾಗಿದೆ.

ಗುರುಮೂರ್ತಿ ಕೆ.ಜಿ., ಅವರು ಸ್ಥಳನಾಮಗಳ ಅಧ್ಯಯನ ಲೇಖನಗಳ ಸಂಗ್ರಹ (೨೦೦೮) ಎಂಬ ಸಂಪಾದನಾ ಕೃತಿಯ 'ವ್ಯಕ್ತಿನಾಮಗಳು' ಎಂಬ ಲೇಖನದಲ್ಲಿ ವ್ಯಕ್ತಿ ಮತ್ತು ಕುಟುಂಬ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೆ ತಕ್ಕಂತೆ ಒಬ್ಬ ವ್ಯಕ್ತಿಯ ನಾಮ ನಿರ್ದೇಶನದಲ್ಲಿಯೂ ಹಿಮ್ಮುಖ ಅಥವಾ ಮುಮ್ಮುಖ ಬದಲಾವಣೆಯಾಗಬಹುದು ಎಂಬುದನ್ನು ತಿಳಿಸಿದ್ದಾರೆ. ಈ ಬದಲಾವಣೆಗೆ ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಅಂಶಗಳು ಪ್ರಭಾವ ಬೀರುತ್ತವೆ ಎಂದು ಹೇಳಿದ್ದಾರೆ. ಹಾಗಾಗಿ ಈ ಅಂಶಗಳು ಪ್ರಸ್ತುತ ಅಧ್ಯಯನದ ವಿಶ್ಲೇಷಣೆಗೆ ಸಹಾಯಕವಾಗಿವೆ.

ರಘುಪತಿ ಭಟ್ ಕೆ., ಅವರ 'ಹೆಸರಿನಲ್ಲೇನಿದೆ?' (೧೯೮೯) ಎಂಬ ಕೃತಿಯಲ್ಲಿ ಹೆಸರೇ ಸೂಚಿಸುವಂತೆ ಹೆಸರಿನಲ್ಲೇನಿದೆ ಎಂದು ನೋಡಿದರೆ ಹೆಸರಿನಲ್ಲಿ ಏನಿಲ್ಲ ಎಂಬ ಅಂಶಗಳನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಹೆಸರುಗಳು ಇಂದು ಸಮಾಜದಲ್ಲಿ ವ್ಯಕ್ತಿಯ ಇರುವಿಕೆಯನ್ನು ಗುರುತಿಸಲು ಪ್ರಧಾನ ಸಾಧನವಾಗಿದೆ ಎಂಬುದನ್ನು ಹೇಳಲಾಗಿದೆ.

ಸೇಡಿಯಾಪು ಕೃಷ್ಣ ಭಟ್ಟ ಅವರು 'ಕೆಲವು ದೇಶನಾಮಗಳು' ಎಂಬ ಲೇಖನದಲ್ಲಿ ವಿವಿಧ ಪ್ರದೇಶಗಳ ಹೆಸರುಗಳು ಹೇಗೆ ಭಿನ್ನ ಅರ್ಥಗಳಲ್ಲಿ ಬಳಕೆಯಾಗುತ್ತಿವೆ ಎಂಬುದನ್ನು ತಿಳಿಸಿದ್ದಾರೆ.

ಬೆನಗಲ್ ರಾಮರಾವ್ ಮತ್ತು ವಿದ್ವಾನ್ ಪಾನ್ಯಂ ಸುಂದರ ಶಾಸ್ತ್ರಿ ಅವರ 'ಪುರಾಣ ನಾಮ ಚೂಡಾಮಣಿ' (೨೦೧೦) ಕೃತಿಯಲ್ಲಿ ಪುರಾಣ ಕೃತಿಗಳಲ್ಲಿ ಬಳಕೆಯಾಗಿರುವ ಹೆಸರುಗಳನ್ನು ಅಕಾರಾಧಿಯಾಗಿ ಒಂದೆಡೆ ಸಂಗ್ರಹಿಸಿ ಅವುಗಳ ಪರಿಚಯ ಮಾಡಿಕೊಡುವ ಪ್ರಯತ್ನಮಾಡಲಾಗಿದೆ. ಸಂಸ್ಕೃತ ಭಾಷೆಯಲ್ಲಿ ಬಳಕೆಯಲ್ಲಿರುವ, ಪುರಾಣಗಳಲ್ಲಿರುವ, ಚರಿತ್ರೆಯಲ್ಲಿರುವ, ದೇವತೆಗಳು, ಋಷಿಗಳ, ಪುಣ್ಯಕ್ಷೇತ್ರಗಳ, ನದಿ, ಪರ್ವತ, ದೇಶ, ರಾಜರುಗಳು, ಕಾಲದ ವೈಚಿತ್ರಗಳು, ಅವುಗಳ ಹೆಸರುಗಳ ಮಹತ್ವವನ್ನು ತಿಳಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಜೊತೆಗೆ ರಾಮಾಯಣ, ಮಹಾಭಾರತ, ದೇವಿ ಭಾಗವತ, ಮಾರ್ಕಾಂಡೇಯ ಪುರಾಣ, ಹರಿವಂಶ ಲಿಂಗಪುರಾಣ, ಸ್ಕಂದ ಪುರಾಣ, ಆಧ್ಯಾತ್ಮ ರಾಮಾಯಣ, ತತ್ತ್ವಸಂಗ್ರಹ ರಾಮಾಯಣ ಇನ್ನೂ ಮುಂತಾದ ಕೃತಿಗಳಲ್ಲಿನ ಹೆಸರುಗಳನ್ನು ಈ ಕೃತಿಯಲ್ಲಿ ನೀಡಲಾಗಿದೆ. ಇವುಗಳನ್ನು ಪ್ರಸ್ತುತ ಅಧ್ಯಯನದ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಚಿದಾನಂದ ಮೂರ್ತಿ ಎಂ., ಅವರು 'ವಾಗರ್ಥ' ಎಂಬ ಕೃತಿಯಲ್ಲಿ 'ಆದಯ್ಯ ಹೆಸರಿನ ನಿಷ್ಪತ್ತಿ ಮತ್ತು ಅದರಿಂದ ಹೊರಡುವ ಕೆಲವು ಧ್ವನಿಗಳು' ಎಂಬ ಲೇಖನದಲ್ಲಿ ಆದಯ್ಯ ಒಬ್ಬ ವಚನಕಾರ ಮತ್ತು ಕಥಾ ನಾಯಕರಾಗಿ ಬಂದಿರುವುದನ್ನು ಚರ್ಚಿಸಿದ್ದಾರೆ. ಆದಿಮಯ್ಯ–ಆದಿ+ಮ+ಅಯ<ಆದಿ+ಅಮ್ಮನ್+ಅಯ್ಯ, ಅಮ್ಮನ್ ಎಂಬುದು ತಂದೆ ಎಂದರ್ಥದಲ್ಲಿ ಬಳಕೆಯಲ್ಲಿದ್ದ ಶಬ್ದ ಮತ್ತು ಅದು ಸವೆದು 'ಮ' ಆಗಿ ಪುರುಷರ ಹೆಸರುಗಳಲ್ಲಿ ಹಿಂದೆ ಕಾಣಿಸಿಕೊಳ್ಳುತ್ತಿತ್ತು. (ಅಲ್ಲಮ್<ಅಲ್ಲಮ್ಮನ್) ಈಗಲೂ ಇದೆ. ಆದಿ+ಶೆಟ್ಟಿ>ಆದಿಶೆಟ್ಟಿ ಹೀಗೆ ಆದಯ್ಯ ಹೆಸರಿನ ಮೂಲದಲ್ಲಿ 'ಆದ' ಎಂಬ ಶಬ್ದವಿದೆ ಎಂಬುದಕ್ಕೆ 'ಆದಿಮಯ್ಯ' ಎಂಬುದು ಪೋಷಕವಾಗಿದೆ. ಆದಯ್ಯ ಎಂಬುದು ಅಂದು, ಇಂದು ಜೈನರಲ್ಲಿ ಬಳಕೆಯಲ್ಲಿರುವ ಹೆಸರು ಜೈನೇತರರಲ್ಲಿ ವಿರಳವಾಗಿ ಬಳಕೆಯಲ್ಲಿದ್ದವು. ಜೈನ ಪರಿಸರದ ಆದಿಯಮ್ಮನ್, ಆದಿಯಪ್ಪ, ಆದಪ್ಪ ಮೊದಲಾದ ಹೆಸರುಗಳು ಈಗ ಮುಖ್ಯವಾಗಿ ಉತ್ತರ ಕರ್ನಾಟಕದ ಜೈನರಲ್ಲಿ ಬಳಕೆಯಲ್ಲಿವೆ. ಇಲ್ಲಿಯ 'ಆದಿ'–ಯು ಆದಿತೀರ್ಥಂಕರನ ಹೆಸರನ್ನು ಸೂಚಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಂದು ಸಂಕೀರ್ಣ ಹೆಸರಿನ ಪೂರ್ವಭಾಗವನ್ನು ತೆಗೆದುಕೊಂಡು ಅದನ್ನೇ ಪೂರ್ಣ ಹೆಸರನ್ನಾಗಿ ಮಾಡಿಕೊಳ್ಳುವುದು ಕನ್ನಡಿಗರಲ್ಲಿ ಬಳಕೆಯಲ್ಲಿದೆ ಎಂದಿದ್ದಾರೆ ಹಾಗಾಗಿ ಇಲ್ಲಿನ ನಾಮ ನಿಷ್ಪತ್ತಿಯನ್ನು ಗುರುತಿಸುವ ವಿಧಾನವು ಗುಬ್ಬಿಯಪ್ಪ, ತೋಂಟದ(ಸಿದ್ಧಲಿಂಗಯತಿ)>ತೋಟದಪ್ಪ, ತೋಟಪ್ಪ, ತೋಂಟಾರಾಧ್ಯ. ಹೀಗೆ ಗುಬ್ಬಣ, ತೋಟಪ್ಪ ಹೆಸರುಗಳು ಹುಟ್ಟಿಕೊಂಡಿರುವ ರೀತಿಯಲ್ಲಿಯೇ ಆದಿ(ವೃಷಭ, ತೀರ್ಥಂಕರ)>ಆದಿಯಣ್ಣ, ಆದಯ್ಯ ಹೆಸರುಗಳು ಹುಟ್ಟಿಕೊಂಡಿವೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇಂತಹ ನಿರ್ಧಾರ ತೆಗೆದುಕೊಳ್ಳಬೇಕೆಂದರೆ ಹೆಚ್ಚಿನ ಆಧಾರಗಳ ಅಗತ್ಯವಿರುವುದನ್ನು ಒಪ್ಪಿಕೊಂಡಿದ್ದಾರೆ. ಇದೇ ಕೃತಿಯ 'ತಮ್ಮ' ಕೊನೆಯಲ್ಲಿ ಬರುವ ಹೆಸರುಗಳು ಎಂಬ ಲೇಖನದಲ್ಲಿ ಅಣ್ಣ ಕೊನೆಯಲ್ಲಿರುವ ಹೆಸರುಗಳು ಪ್ರಾಯಶಃ ಕರ್ನಾಟಕದ ಎಲ್ಲಾ ಭಾಗಗಳಲ್ಲಿದ್ದವು ಈಗಲೂ ಇವೆ. ಆದರೆ 'ತಮ್ಮ' ಕೊನೆಯಲ್ಲಿರುವ ಹೆಸರುಗಳಿಗೆ ಒಂದು ಮಿತಿಯಿದೆ ಎಂದಿದ್ದಾರೆ. ಅಂತಹ ಹೆಸರುಗಳು ಎಲ್ಲೆಲ್ಲಿ ಸಿಕ್ಕಿವೆ ಎಂಬುದನ್ನು ಗಮನಿಸಿದರೆ ಸ್ಥೂಲವಾಗಿ

ಅವುಗಳು ಬಳಕೆಯಲ್ಲಿದ್ದ ಪ್ರದೇಶವನ್ನು ನಿರ್ಧರಿಸಬಹುದು. ಮಲ್ಲಿ ತಮ್ಮ ಮತ್ತು ಮಸಣಿ ತಮ್ಮ, ಎಂಬ ಹೆಸರುಗಳ ಕೊನೆಯಲ್ಲಿರುವ ಪ್ರತ್ಯಯ 'ಅಮ್ಮ' ಎಂದು ಭಾವಿಸುತ್ತಾರೆ. ಇದನ್ನು ಒಪ್ಪಿಕೊಂಡರೆ 'ತ' ಎಂಬುದಕ್ಕೆ ವಿವರಣೆಯನ್ನು ಕೊಡುವುದು ಕಷ್ಟವಾಗುತ್ತದೆ. (ಮಲ್ಲಿ+ತ+ಅಮ್ಮ) ಹೆಸರಿನ ಕೊನೆಯಲ್ಲಿರುವುದು 'ಅಮ್ಮ' ಅಲ್ಲ ಕಿರಿಯ ಸಹೋದರ ಎಂದರ್ಥದ 'ತಮ್ಮ' ಎಂಬ ಪದ ಎಂದು ಭಾವಿಸಿದರೆ ಆಗ ಯಾವ ಸಮಸ್ಯೆಯೂ ಇಲ್ಲ ಎಂದಿದ್ದಾರೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ವ್ಯಕ್ತಿನಾಮಗಳ ರಾಚನಿಕ ಸ್ವರೂಪ ವಿಶ್ಲೇಷಣೆಯಲ್ಲಿ ವಾರ್ಗಿಕವಾಗಿ ಸಂಬಂಧವಾಚಕಗಳಲ್ಲಿ 'ತಮ್ಮ' ಎಂಬುದನ್ನು ಕುರಿತು ಚರ್ಚಿಸಲು ಈ ಲೇಖನವನ್ನು ಬಳಸಿಕೊಳ್ಳಲಾಗಿದೆ.

ಕಲಬುರ್ಗಿ ಎಂ.ಎಂ., ಅವರು ಮಾರ್ಗ ಸಂಪುಟ-೨ ಕೃತಿಯ 'ಅಡ್ಡ ಹೆಸರು' ಲೇಖನದಲ್ಲಿ ಅಡ್ಡ ಹೆಸರಿನ ಉದ್ದೇಶ ಒಬ್ಬ ವ್ಯಕ್ತಿಯನ್ನು ಮತ್ತೊಬ್ಬರಿಂದ ಪ್ರತ್ಯೇಕಿಸಿ ಕೊಡುವುದು ಆಗಿರುತ್ತದೆ. ಇವುಗಳು ಆತನ ಪೂರ್ವಜರ ನೆಲೆ, ಜೀವನ ವಿಧಾನ, ಸಂಸ್ಕೃತಿ, ಪರಂಪರೆಗಳನ್ನು ಪ್ರತಿನಿಧಿಸುತ್ತವೆ ಎಂಬ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅಡ್ಡ ಹೆಸರುಗಳು ಗ್ರಾಮ, ಕುಟುಂಬ, ವಂಶ, ವೃತ್ತಿ ಜಾತಿಗಳ ಎಲ್ಲಾ ಸದಸ್ಯರನ್ನು ಮಾನಸಿಕವಾಗಿ ಬೆಸೆಯುತ್ತವೆ. ಇಂದು ಕರ್ನಾಟಕದಾದ್ಯಂತ ಹೆಸರಿನೊಂದಿಗೆ ಅಡ್ಡ ಹೆಸರನ್ನು ಬಳಸಲಾಗುತ್ತಿದ್ದು ಅವುಗಳನ್ನು ಬಳಕೆಯ ವಿಧಾನ, ಸ್ವರೂಪ, ಇತರ ಸಂಗತಿಗಳೆಂದು ವಿಭಾಗ ಮಾಡಿಕೊಂಡು ಉದಾಹರಣೆಯೊಂದಿಗೆ ವಿಶ್ಲೇಷಿಸಿದ್ದಾರೆ. ಬಳಕೆಯ ವಿಧಾನದಲ್ಲಿ

ಅಡ್ಡ ಹೆಸರು ಪ್ರಧಾನ ಹೆಸರು ಅಪ್ರಧಾನ-ಫ.ಗು.ಹಳಕಟ್ಟಿ

ಅಡ್ಡ ಹೆಸರು ಅಪ್ರಧಾನ ಹೆಸರು ಪ್ರಧಾನ- ತೀ.ನಂ.ಶ್ರೀಕಂಠಯ್ಯ

ಅಡ್ಡ ಹೆಸರು ಪ್ರಧಾನ ಹೆಸರು ಪ್ರಧಾನ-ಲೀಲಾವತಿ ಮಹಡಿ, ಸರೋಜಿನಿ ಮಹಿಷಿ

ಸ್ವರೂಪದಲ್ಲಿ ಗ್ರಾಮನಾಮವಾಚಿ – ಮಾಳವಾಡ (ಎನ್.ಎನ್)

ವೃತ್ತಿನಾಮವಾಚಿ-ಕುಂದಣಗಾರ (ಕೆ.ಜಿ)

ವಸ್ತುನಾಮವಾಚಿ-ಕಂಬಳಿ (ಸಿದ್ದಪ್ಪ)

ಇತರೆ ನಾಮವಾಚಿ-ರೆಡ್ಡಿ, ಪಂಡಿತ, ಮರಾಠ, ರಾಠೋಡ, ರಜಪೂತ ಹಾಗೂ ಇತರ ಸಂಗತಿಗಳನ್ನು ಕುರಿತು ಒಬ್ಬ ವ್ಯಕ್ತಿ ಬೇರೊಂದು ಮನೆತನಕ್ಕೆ ಹೋದರೆ, ಒಬ್ಬ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಗೆ ಬಂದರೆ ಮೊದಲಿನ ಅಡ್ಡ ಹೆಸರು ಬದಲಿಸಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಅಡ್ಡ ಹೆಸರು ಪ್ರಧಾನವಾಗಿದ್ದರೂ ಅದನ್ನು ಕೆಲವರು ಸಂಕ್ಷೇಪಿಸುವುದಕ್ಕೆ ಸೌಲಭ್ಯಾಕಾಂಕ್ಷೆಗಿಂತ ಸುಂದರವಾಗಿರಬೇಕೆಂಬ ಕಾರಣವಿರುತ್ತದೆ. ಉದಾಹರಣೆಗೆ ಕರಿಗೌಡರ-ಈಶ್ವರ್>ಕೆ.ಈಶ್ವರ್, ಕೋಣದ ಚೆನ್ನಬಸಪ್ಪ>ಕೋ.ಚೆನ್ನಬಸಪ್ಪ. ಕರ್ನಾಟಕದಲ್ಲಿ ಅಡ್ಡ ಹೆಸರು ಅಧ್ಯಯನದ ವಸ್ತುವಾಗಿ ವಿದ್ವಾಂಸರ ಗಮನವನ್ನು ಅಷ್ಟಾಗಿ ಸೆಳೆದಿಲ್ಲ. ಈಗ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಅಡ್ಡ ಹೆಸರುಗಳನ್ನು ಪಟ್ಟಿ ಮಾಡಿ ಬಳಸುವ ವಿಧಾನ, ಸ್ವರೂಪ ಇತ್ಯಾದಿ ದೃಷ್ಟಿಗಳಿಂದ ವರ್ಗೀಕರಿಸಿ ವಿಶ್ಲೇಷಿಸಿದಲ್ಲಿ ಅದು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಜನಾಂಗ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ. ಹಾಗೆಯೇ ಒಂದು ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗುತ್ತದೆ.

ಆದ್ದರಿಂದ ಇಲ್ಲಿನ ಕೆಲವು ಅಂಶಗಳು ಪ್ರಸ್ತುತ ಅಧ್ಯಯನದ ಸಾಮಾಜಿಕ ನೆಲೆಗಳನ್ನು ಕುರಿತು ಚರ್ಚಿಸಲು ಸಹಕಾರಿಯಾಗಿದೆ. ಇದೇ ಕೃತಿಯಲ್ಲಿನ 'ಸ್ತ್ರೀನಾಮಗಳ ಕೊನೆಯಲ್ಲಿ ಕಂಡುಬರುವ ಬಾಯಿ' ಲೇಖನದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಇಂದು ಪ್ರಚಲಿತದಲ್ಲಿರುವ ಸ್ತ್ರೀನಾಮಗಳ ಕೊನೆಯಲ್ಲಿ ಬಳಕೆಯಲ್ಲಿರುವ 'ಬಾಯಿ' ಆಕೃತಿಮಾದ ನಿಷ್ಪತ್ತಿಯನ್ನು ಚರ್ಚಿಸಿದ್ದಾರೆ. ಶಾಸನಗಳಲ್ಲಿ ಕಂಡುಬರುವ ಪ್ರಾಚೀನ ಕರ್ನಾಟಕದ ಸ್ತ್ರೀಯರ ಹೆಸರುಗಳು ಒಂದು ಆಕೃತಿಮಾಗಳಲ್ಲ, ಎರಡು ಅಥವಾ ಹೆಚ್ಚಿನ ಆಕೃತಿಮಾಗಳಾಗಿವೆ ಎಂದಿದ್ದಾರೆ. ಉದಾಹರಣೆಗೆ ಕನಕ+ಅಬ್ಬೆ=ಕನಕಬ್ಬೆ, ಕಂಚಿ+ಅಕ್ಕ+ಅಬ್ಬೆ=ಕಂಚಿಕಬ್ಬೆ, ಚಟ್ಟಿ+ಅಕ್ಕೆ+ಅಬ್ಬೆ+ಗಾವುಂಡಿ=ಚಟ್ಟಕಬ್ಬೆಗಾವುಂಡಿ, ಈ ಹೆಸರುಗಳ ನಿಷ್ಪತ್ತಿಯಿಂದ ಸ್ತ್ರೀಯರ ವಯಸ್ಸು, ಅಂತಸ್ತು, ಬೆಳವಣಿಗೆಯೊಂದಿಗೆ ಅವರ ಹೆಸರುಗಳ ರೂಪಗಳಲ್ಲಿ ವ್ಯತ್ಯಾಸವಾಗಿರುವುದನ್ನು ಗುರುತಿಸಬಹುದಾಗಿದೆ. ಇವುಗಳ ಹಿನ್ನೆಲೆಯಲ್ಲಿ 'ಬಾಯಿ' ಆಕೃತಿಮಾ ನಿಷ್ಪತ್ತಿಯನ್ನು ನೋಡಲಾಗಿದೆ. ಇಂದು ಗ್ರಾಮೀಣ ಪ್ರದೇಶದಲ್ಲಿ ಅವ್ವ, ಅಮ್ಮ, ಬಾಯಿ ಕೊನೆಯಾಗುವ ಪಾರ್ವತವ್ವ–ಸಾಮಾನ್ಯವರ್ಗ, ಪಾರ್ವತಮ್ಮ–ಮಧ್ಯಮ ವರ್ಗ, ಪಾರ್ವತೀ ಬಾಯಿ–ಪ್ರತಿಷ್ಠಿತ ವರ್ಗದ ಹೆಸರುಗಳಾಗಿ ಬಳಕೆಯಲ್ಲಿವೆ. ಶಾಸನಗಳಲ್ಲಿ ಹೀರೂಬಾಯಿ, ಚಿಕ್ಕರಸಿ, ಗಂಗಾಬಾಯಿ, ಸಾವಿಬಾಯಿ, ಅರಸುಬಾಯಿ, ಮಲ್ಲುಬಾಯಿ, ಎಕ್ಕಲಬಾಯಿ ಎಂಬ ಹೆಸರುಗಳು ೧೨ನೇ ಶತಮಾನದಲ್ಲಿ ಸಿಗುತ್ತವೆ. ಅಬ್ಬೆ+ಅಪ್ಪೆ ಎಂಬ ಉಭಯ ಆಕೃತಿಮಾಗಳು 'ಬಾಯಿ' ಎಂದು ರೂಪಾಂತರ ಹೊಂದಿ ಹೆಸರುಗಳಿಗೆ ಹತ್ತುತ್ತವೆಂದು ಹೇಳಿದ್ದಾರೆ. ಇಲ್ಲಿನ ಕೆಲವು ವಿಚಾರಗಳನ್ನು ಪ್ರಸ್ತುತ ಅಧ್ಯಯನದ ರಾಚನಿಕ ಸ್ವರೂಪದಲ್ಲಿ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ. ಇದೇ ಕೃತಿಯಲ್ಲಿ ಇರುವ ಇವರ ಮತ್ತೊಂದು ಲೇಖನ 'ವೀರಶೈವ ವರ್ತಕ ವರ್ಗದ ಅಡ್ಡ ಹೆಸರುಗಳು', ವೀರಶೈವ ಮತ್ತು ವೀರಶೈವೇತರ ಸಮಾಜಗಳಿಗೆ ಸಾಮಾನ್ಯವಾಗಿರುವ ಅಡ್ಡ ಹೆಸರುಗಳನ್ನು ಬಿಟ್ಟರೆ ಬಣಜಿಗರೆಂದು ಕರೆಸಿಕೊಳ್ಳುವ ವೀರಶೈವ ವ್ಯಾಪಾರಿ ವರ್ಗಕ್ಕೆ ವಿಶಿಷ್ಟವಾದ ಕೆಲವು ಅಡ್ಡ ಹೆಸರುಗಳು ಕರ್ನಾಟಕದಲ್ಲಿ ರೂಢಿಯಲ್ಲಿವೆ. ಚಿನವಾಲ, ವಾರದ, ಪಸಾರದ, ಕೋರಿ, ಬಿತ್ತಿ, ಕತ್ತಿ, ಪಟ್ಟಣಶೆಟ್ಟಿ, ವಾಲಿ, ಹತ್ತಿ, ಲಿಗಾಡೆ, ಮಹಾಜನಶೆಟ್ಟಿ ಮುಂತಾದವು ಕುತೂಹಲಕಾರಿ ಫಲಿತಾಂಶಗಳನ್ನು ಪ್ರಕಟಿಸಬಹುದಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ವೀರಶೈವ ಬಣಜಿಗ ವರ್ಗದ ಕೆಲವು ಅಡ್ಡ ಹೆಸರುಗಳಿಗೆ ಇಲ್ಲಿ ಅರ್ಥ ಹೇಳುವ ಪ್ರಯತ್ನ ಮಾಡಿದ್ದಾರೆ. ವೀರಶೈವದಲ್ಲಿ ಪ್ರಚಲಿತವಿರುವ ಅಡ್ಡ ಹೆಸರುಗಳ ಅಭ್ಯಾಸಕ್ಕೆ ತೊಡಗಿದರೆ ಹೊಸ ಅಧ್ಯಯನ ಕ್ಷೇತ್ರವೊಂದು ಸೃಷ್ಟಿಯಾಗುತ್ತದೆ. ನಮ್ಮ ಜನಜೀವನಕ್ಕೆ ಸಂಬಂಧಿಸಿದ ಅನೇಕ ಕುತೂಹಲಕರ ವಿಷಯಗಳು ಬಳಕೆಗೆ ಬರುತ್ತವೆ ಎಂಬ ವಿಚಾರಗಳನ್ನು ಈ ಲೇಖನದಲ್ಲಿ ಹೇಳಲಾಗಿದೆ. ಇಲ್ಲಿನ ವೀರಶೈವರ ಕೆಲವು ಹೆಸರುಗಳನ್ನು ಪ್ರಸ್ತುತ ಅಧ್ಯಯನದ ಸಾಮಾಜಿಕ ನೆಲೆಯಲ್ಲಿ ಜಾತಿವಾಚಿ ವ್ಯಕ್ತಿನಾಮಗಳನ್ನು ಕುರಿತು ಚರ್ಚಿಸಲು ಬಳಸಿಕೊಳ್ಳಲಾಗಿದೆ.

ವಿಶ್ವನಾಥ ಅವರು 'ಗ್ರಾಮನಾಮ ದೀಪಿಕೆ" (೨೦೦೯) ಕೃತಿಯಲ್ಲಿ ಗ್ರಾಮನಾಮಗಳು ವ್ಯಕ್ತಿನಾಮಗಳಾಗಿ ಹೇಗೆ ಬಳಕೆಯಾಗುತ್ತವೆ ಮತ್ತು ವ್ಯಕ್ತಿನಾಮಗಳು ಗ್ರಾಮನಾಮಗಳಾಗಿ ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಭಾಷಿಕವಾಗಿ ಚರ್ಚಿಸಿ ಅವುಗಳ ಸಾಂಸ್ಕೃತಿಕ ಮಹತ್ವವನ್ನು ತಿಳಿಸಿದ್ದಾರೆ.

ಜವರೇಗೌಡ ದೇ., ಇವರ 'ಸ್ಥಳನಾಮ ವ್ಯಾಸಂಗ' (೧೯೯೦) ಕೃತಿಯಲ್ಲಿ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಉಪಯುಕ್ತವಾದ ಮಾಹಿತಿಯನ್ನು ನೀಡಿದ್ದಾರೆ. ಈ ಕೃತಿಯಲ್ಲಿ ಸ್ಥಳನಾಮಗಳು ಹೇಗೆ ಆರಂಭಗೊಂಡಿವೆ, ವ್ಯಾಪ್ತಿ ಎಷ್ಟು, ಅದರ ಪ್ರಭಾವ ಎಂತಹದ್ದು, ಸಂಶೋಧನಾ ವಿಧಾನ ಮತ್ತು ಸಾಧನಗಳು ಹೇಗಿರಬೇಕು ಮುಂತಾದ ಅಂಶಗಳನ್ನು ತಿಳಿಸಿಕೊಟ್ಟಿದ್ದಾರೆ. ಹೆಸರುಗಳು ಬದಲಾವಣೆಗೊಳ್ಳಲು ಕಾರಣವೇನು ಎಂಬ ಅಂಶವನ್ನು ಚರ್ಚಿಸಿದ್ದಾರೆ.

ಸಣ್ಣಪಾಪಯ್ಯ ಅವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ 'ಚಿತ್ರದುರ್ಗ ಪರಿಸರದ ವ್ಯಕ್ತಿ ನಾಮಗಳು' (೨೦೦೬) ಮಹಾಪ್ರಬಂಧದಲ್ಲಿ ವ್ಯಕ್ತಿನಾಮಗಳ ಕುರಿತು ಈವರೆಗೆ ಕನ್ನಡದಲ್ಲಿ ನಡೆದಿರುವ ಅಧ್ಯಯನಗಳನ್ನು ಗಮನಿಸಿ ಅವುಗಳ ನೆರವಿನೊಂದಿಗೆ ಪ್ರಸ್ತುತ ಪ್ರಬಂಧಕ್ಕೆ ಹೊಸ ಮಾದರಿಯೊಂದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಚಿತ್ರದುರ್ಗ ಪರಿಸರವು ಬಹುಭಾಷಾ ಸಮುದಾಯಗಳಿರುವ ವೈವಿಧ್ಯಮಯ ಸಂಸ್ಕೃತಿಯುಳ್ಳ ಪ್ರದೇಶವಾಗಿದೆ. ಇಲ್ಲಿನ ದತ್ತ ಮಾಹಿತಿಯನ್ನು ಅನುಲಕ್ಷಿಸಿ ಹೆಸರಿನ ರಚನೆಯ ವಿಧಾನ ಮತ್ತು ವೈವಿಧ್ಯತೆಗಳನ್ನು ಕಂಡುಕೊಳ್ಳಲಾಗಿದೆ. ಪೂರಕವಾಗಿ ಕರ್ನಾಟಕದ ಇತರ ಭಾಷೆ ಮತ್ತು ಸಾಮಾಜಿಕ ಪರಿಸರಗಳ ನಾಮರಚನೆಯ ಕೆಲವು ಬಗೆಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಸಾಮಾಜಿಕ ಏಣೀಶ್ರೇಣೀಕರಣಕ್ಕೆ ಅನುಗುಣವಾಗಿ ನಾಮರಚನಾ ಸ್ವರೂಪದಲ್ಲಿ ಕಾಣಬರುವ ಕೆಲವು ವಿಶಿಷ್ಟತೆಗಳನ್ನು ಗುರುತಿಸಲಾಗಿದೆ. ತೆಲುಗು ಮತ್ತು ಉರ್ದು ಭಾಷಾ ಪ್ರಭಾವ ಕನ್ನಡದ ಮೇಲೆ ಆಗಿದೆ. ಇದರಿಂದ ಉರ್ದು ಮತ್ತು ತೆಲುಗು ಭಾಷಾ ಪ್ರೇರಣೆಯಿಂದ ಕನ್ನಡ ವ್ಯಕ್ತಿನಾಮಗಳ ಮೇಲಾದ ಪ್ರಭಾವವನ್ನು ಸ್ಪಷ್ಟಪಡಿಸಲಾಗಿದೆ. ಮತಾಂತರ ಹೊಂದಿದಾಗ ಹೆಸರನ್ನು ಬದಲಾಯಿಸಿಕೊಳ್ಳುವುದು ಕ್ರಿಶ್ಚಿಯನ್ ಧರ್ಮಕ್ಕೆ ಸೀಮಿತವಾಗಿದೆ. ಇದರಿಂದ ಸಂಸ್ಕೃತಿಗಳಿಂದಾದ ನಾಮರಚನೆಯ ವೈಶಿಷ್ಟ್ಯಗಳನ್ನು ಕಂಡುಕೊಳ್ಳಲಾಗಿದೆ. ಮದುವೆ ಮತ್ತಿತರ ಸಂದರ್ಭಗಳಲ್ಲಿ ನಾಮರಚನೆಯ ಸ್ವರೂಪವನ್ನು ಗಮನಿಸಲಾಗಿದೆ. ಈ ಅಧ್ಯಯನದಿಂದ ಅಲ್ಲಿನ ಜನರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಹಿನ್ನೆಲೆಯನ್ನು ಅರಿಯಲಾಗಿದೆ. ವಾಸ್ತವವಾಗಿ ಹೆಸರುಗಳು ಭಾಷಿಕ ರಚನೆಗಳಾಗಿದ್ದರೂ ಅವುಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳಿವೆ. ಸಮಾಜದ ಚಲನಶೀಲತೆಯನ್ನು ವ್ಯಕ್ತಿನಾಮಗಳ ಮೂಲಕ ತಿಳಿಯಲು ಪ್ರಯತ್ನಿಸಲಾಗಿದೆ. ಸಮುದಾಯಗಳ ಜೀವನ ಕ್ರಮ ಬದಲಾದಂತೆ ವ್ಯಕ್ತಿನಾಮಗಳು ಬದಲಾಗುತ್ತವೆ. ಈ ಬದಲಾವಣೆಯ ಆಯಾಮಗಳನ್ನು ತಲೆಮಾರುಗಳ ಅಂತರದಿಂದ ಕಂಡುಕೊಳ್ಳಲಾಗಿದೆ. ಸಮುದಾಯಗಳು ಪಾರಂಪರಿಕವಾಗಿ ನಿರ್ದೇಶನ ಮಾಡಿಕೊಂಡು ಬರುತ್ತಿದ್ದ ವೃತ್ತಿ, ಜಾತಿ, ದೈವ ಮತ್ತು ಚರಿತ್ರೆ ಸಂಬಂಧಿ ಹೆಸರುಗಳ ಬಳಕೆ ಕಡಿಮೆಯಾಗುತ್ತಿದ್ದು, ಪರ್ಯಾಯವಾಗಿ ಆಧುನಿಕ ಸಂದರ್ಭಕ್ಕೆ ಒಪ್ಪುವಂತೆ ವಿನೂತನ ಹೆಸರು, ಭಾವನಾಮಗಳು ಹೆಚ್ಚಾಗಿ ಚಾಲ್ತಿಗೆ ಬಂದಿರುವುದು ತಿಳಿದುಬಂದಿದೆ. ಸಮಾಜದ ಎಲ್ಲಾ ಸಮುದಾಯಗಳಲ್ಲಿ ದೈವ ಸಂಬಂಧಿ ವ್ಯಕ್ತಿನಾಮಗಳೇ ಅಧಿಕವಾಗಿರುವುದು ಕಂಡುಬಂದಿದೆ. ದೈವ ಸಂಬಂಧಿ ಹೆಸರುಗಳು ಸ್ತ್ರೀಯರಿಗಿಂತ ಪುರುಷರಲ್ಲಿ ಅಧಿಕವಾಗಿದ್ದು ಕ್ರಮೇಣವಾಗಿ ಪುರುಷರಿಗಿಂತ ಸ್ತ್ರೀಯರಲ್ಲಿ ಹೆಚ್ಚಾಗುತ್ತಿರುವುದು ಸಂಗ್ರಹಿತ ಮಾಹಿತಿಯಲ್ಲಿ

ವ್ಯಕ್ತವಾಗಿದೆ ಹಾಗೂ ಈ ಪ್ರಕ್ರಿಯೆ ನಗರ ಪ್ರದೇಶದವರಿಗಿಂತ ಗ್ರಾಮೀಣ ಪ್ರದೇಶದವರಲ್ಲಿ ಅಧಿಕವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಚಿತ್ರದುರ್ಗದ ಪಾಳೇಗಾರರ ಹೆಸರಿನ ಪ್ರಭಾವ ಅಲ್ಲಿನ 'ನಾಯಕ' ಸಮುದಾಯದವರ ಹೆಸರುಗಳಲ್ಲಿ ಬಳಕೆಯಾಗುತ್ತಿದ್ದು, ವೃತ್ತಿ, ಜಾತಿ ವಾರ್ಗಿಕಗಳು ಇತ್ತೀಚಿನ ಜನ ಸಮುದಾಯದಿಂದ ಕಣ್ಮರೆಯಾಗಿವೆ ಎಂದು ಹೇಳಿದ್ದಾರೆ. ಗೌಡ, ರಾವ್ ಮತ್ತು ಬಾಯಿ ವಾರ್ಗಿಕಗಳು ಮೇಲ್ಜಾತಿ ಸಮಾಜದ ವೃತ್ತಿನಾಮಗಳಲ್ಲಿ ಬಳಕೆಯಾಗಿರುವುದನ್ನು ತಿಳಿಸಿದ್ದಾರೆ. ಈ ವಾರ್ಗಿಕಗಳು ಹಿಂದಿನ ನಿರ್ದಿಷ್ಟನಾಮಗಳ ಮೂಲಕ ಭಿನ್ನ ಸಾಮಾಜಿಕ ವರ್ಗಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

'ರೆಡ್ಡಿ'ವಾರ್ಗಿಕವು ಆಂಧ್ರದ ಬಲಿಷ್ಠ ಸಮುದಾಯದ ಹೆಸರುಗಳಲ್ಲಿ ಬಳಕೆಯಾಗುತ್ತಿದ್ದು ಚಿತ್ರದುರ್ಗದ ಪರಿಸರದ ಗಡಿಭಾಗದಲ್ಲಿ ಇದರ ಪ್ರಭಾವ ಅತ್ಯಂತ ಕೆಳಸಮುದಾಗಳ ಮೇಲಾಗಿದೆ. ಅಲ್ಲದೆ 'ಗೌಡ' ಮತ್ತು 'ರೆಡ್ಡಿ' ವಾರ್ಗಿಕಗಳು ಸಂಬಂಧಪಟ್ಟ ಜಾತಿಯವರ ಹೆಸರುಗಳಲ್ಲಿ ಜಾತಿವಾಚಿಯಾಗಿ ಬಳಕೆಯಾಗಿದೆ ಎಂದಿದ್ದಾರೆ. ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಿ ಸಾಮಾಜಿಕತೆ ಮತ್ತು ಭೌಗೋಳಿಕತೆಯನ್ನು ಗುರುತಿಸಬಹುದಾದಂತೆ ವ್ಯಕ್ತಿನಾಮಗಳ ಬಳಕೆಯನ್ನು ಗಮನಿಸಿ ವ್ಯಕ್ತಿಯ ಜಾತಿ, ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಬಹುದಾಗಿದೆ. ಚಿತ್ರದುರ್ಗ ಪರಿಸರದಲ್ಲಿ ವ್ಯಕ್ತಿನಾಮ ಸಂಬೋಧನೆಯು ಸಾಮಾಜಿಕವಾಗಿ ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ. ಹೆಸರಿನ ಬಳಕೆಗೆ ಮತ್ತು ನಿಷೇಧಕ್ಕೆ ಜಾತಿ, ವರ್ಗ, ಶಿಕ್ಷಣ, ಲಿಂಗ, ವಯಸ್ಸು, ಸಾಮಾಜಿಕ ಸ್ಥಾನಮಾನ, ವ್ಯಕ್ತಿಯ ವ್ಯಕ್ತಿತ್ವ, ಸಂಬಂಧ, ಸಂದರ್ಭಗಳು ಕಾರಣವಾಗಿವೆ ಎಂಬುದನ್ನು ಸ್ಪಷ್ಟಪಡಿಸಿಕೊಂಡಿದ್ದಾರೆ. ಕುಟುಂಬ–ಕುಟುಂಬೇತರ, ಔಪಚಾರಿಕ–ಅನೌಪಚಾರಿಕ, ಹಾಜರಿ ಮತ್ತು ಗೈರುಹಾಜರಿ ನೆಲೆಯ ಸಂಬೋಧನೆಯ ಹಲವು ಆಯಾಮಗಳನ್ನು ಗುರುತಿಸಲಾಗಿದೆ. ಚಿತ್ರದುರ್ಗ ಪರಿಸರದ ಜನರಲ್ಲಿ ಹೆಸರಿನ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ನಾಮಕರಣ ವಿಧಾನವು ಸಾಮಾಜಿಕವಾಗಿ ಬೇರೆ ಬೇರೆಯಾಗಿದ್ದು, ನಾಮಕರಣ ಬಗೆಗಿನ ನಂಬಿಕೆಗಳು ಮತ್ತು ಈ ನಂಬಿಕೆಗಳಿಂದ ನಿರ್ದೇಶಿಸಲ್ಪಡುವ ಹೆಸರುಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಹಿರಿಯರ ಹೆಸರನ್ನು ಕಿರಿಯರಿಗೆ ನಾಮನಿರ್ದೇಶನ ಮಾಡಿದಾಗ ನೇರವಾಗಿ ಹೆಸರಿನಿಂದ ಕರೆಯಬಾರದೆಂಬ ನಂಬಿಕೆಯಿರುವುದು ಸ್ಪಷ್ಟವಾಗುತ್ತದೆ. ಹಾಗಾಗಿ 'ಅಜ್ಜಪ್ಪ', 'ತಾತಣ್ಣ', 'ಮುತ್ತಪ್ಪ' ಎಂಬ ಹೆಸರುಗಳು ನಿರ್ದೇಶನ ನಾಮಗಳಾಗದೆ ರೂಢಿಗತವಾಗಿ ವ್ಯಕ್ತಿಗೆ ಸೇರುತ್ತವೆ ಎಂಬುದನ್ನು ಗುರುತಿಸಲಾಗಿದೆ. ಸಾಮಾಜಿಕ ಅಧ್ಯಯನದಲ್ಲಿ ವ್ಯಕ್ತಿನಾಮಗಳ ಆಯಾಮಗಳನ್ನು ನೋಡದೆ ಸಮಾಜದ ಮೂಲಕ ಆಕರಗಳ ಸಾಮಾಜಿಕ ಸಂಗತಿಗಳನ್ನು ಚರ್ಚಿಸಲಾಗಿದೆ. 'ವ್ಯಕ್ತಿನಾಮಗಳು ಮತ್ತು ಪ್ರಾಚೀನತೆ' ಎಂಬ ಹೆಸರಿನಲ್ಲಿ ಪ್ರತ್ಯೇಕ ಅಧ್ಯಯನ ಮಾಡಬಹುದು. ಶಾಸನೋಕ್ತ ವ್ಯಕ್ತಿನಾಮಗಳು, ಕಾವ್ಯೋಕ್ತ ವ್ಯಕ್ತಿನಾಮಗಳು, ದಾಸರ ಹೆಸರುಗಳು, ವಚನಕಾರರ ಹೆಸರುಗಳು ಎಲ್ಲಾ ವಿಷಯಗಳನ್ನು ಬೇರೆಬೇರೆಯಾಗಿ ಚರ್ಚಿಸಬಹುದಾಗಿತ್ತು. ಆದರೆ ಮಿತಿಯನ್ನು ಹಾಕಿಕೊಂಡಿದ್ದಾರೆ. ವ್ಯಕ್ತಿನಾಮಗಳ ಸಂಬೋಧನೆಯ ಮೂಲಕ ಏಣಿಶ್ರೇಣಿಕರಣದ ಸಾಮಾಜಿಕ ವ್ಯವಸ್ಥೆಯನ್ನು ಚರ್ಚಿಸುವ ಸಂದರ್ಭದಲ್ಲಿ ಹೊಸದಾದ ಅಧ್ಯಯನದ ಕ್ರಮವನ್ನು

ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅದೇ ರೀತಿ ಸಾಮಜಿಕ ಮತ್ತು ಸಾಂಸ್ಕೃತಿಕ ಅಧ್ಯಾಯಗಳಲ್ಲಿ ಮೊದಲ ಬಾರಿಗೆ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಹಾಗಾಗಿ ಈ ಪ್ರಬಂಧದಲ್ಲಿನ ಹಲವಾರು ಅಂಶಗಳು ಪ್ರಸ್ತುತ ಅಧ್ಯಯನಕ್ಕೆ ಆಕರಗಳಾಗಿರುವುದರಿಂದ ಹೆಚ್ಚು ಬಳಸಿಕೊಳ್ಳಲಾಗಿದೆ.

ಶೇಖರಾಚಾರಿ ಕೆ., ಇವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ 'ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ' (೨೦೧೦) ಎಂಬ ಮಹಾಪ್ರಬಂಧದಲ್ಲಿ ಪಾಂಚಾಳ ಸಮುದಾಯಗಳು ಪಾರಂಪರಿಕವಾಗಿ ನಿರ್ದೇಶನ ಮಾಡಿಕೊಂಡು ಬರುತ್ತಿದ್ದ ವೃತ್ತಿ, ಜಾತಿ, ದೈವ ಮತ್ತು ಚರಿತ್ರೆ ಸಂಬಂಧಿ ಹೆಸರುಗಳ ಬಳಕೆ ಕಡಿಮೆಯಾಗುತ್ತಿದ್ದು ಪರ್ಯಾಯವಾಗಿ ಆಧುನಿಕ ಸಂದರ್ಭಕ್ಕೆ ಒಪ್ಪುವಂತೆ ವೈವಿಧ್ಯಮಯ ಹೆಸರು, ಭಾವನಾಮಗಳು ಹೆಚ್ಚಾಗಿ ಚಾಲ್ತಿಗೆ ಬರುತ್ತಿರುವುದು ತಿಳಿದು ಬಂದಿದೆ ಎಂಬುದನ್ನು ತಿಳಿಸಿದ್ದಾರೆ. ಸಮುದಾಯದಲ್ಲಿ ದೈವಸಂಬಂಧಿ ವ್ಯಕ್ತಿನಾಮಗಳೇ ಅಧಿಕವಾಗಿರುವುದು ಕಂಡುಬಂದಿದೆ. ದೈವ ಸಂಬಂಧಿ ಹೆಸರುಗಳು ಸ್ತ್ರೀಯರಿಗಿಂತ ಪುರುಷರಲ್ಲಿ ಅಧಿಕವಾಗಿದ್ದು ಕ್ರಮೇಣವಾಗಿ ಪುರುಷರಿಗಿಂತ ಸ್ತ್ರೀಯರಲ್ಲಿ ಹೆಚ್ಚಾಗುತ್ತಿರುವುದು ಸಂಗ್ರಹಿತ ಮಾಹಿತಿಯಲ್ಲಿ ತಿಳಿಸಿದ್ದರೆ. ಈ ಪ್ರಕ್ರಿಯೆಯು ನಗರ ಪ್ರದೇಶಕ್ಕಿಂತ ಗ್ರಾಮೀಣದವರಲ್ಲಿ ಅಧಿಕವಾಗಿದೆ ಎಂದು ಹೇಳಿದ್ದಾರೆ. ಜಾತಿಯ ಮೇಲಿನ ಅಂಶಗಳು ಹೆಚ್ಚಳವಾಗಿರುವುದರಿಂದ ಪಾಂಚಾಳರಲ್ಲಿ ವಾರ್ಗಿಕಗಳು ತಮ್ಮ ವೃತ್ತಿ ವಾಚಿಯಾಗಿ ಹಿಂದಿಗಿಂತ ಇಂದು ಹೆಚ್ಚು ವ್ಯಾಪಕವಾಗಿ ಬಳಕೆಯಾಗಿರುವುದನ್ನು ತಿಳಿಸಿದ್ದಾರೆ. ಜಾತಿವಾಚಿ ವಾರ್ಗಿಕಗಳು ಪಾಂಚಾಳರ ಪುರುಷರಲ್ಲಿ ಬಳಕೆಯಾಗುವಂತೆ ಸ್ತ್ರೀನಾಮಗಳಲ್ಲಿ ಬಳಕೆಯಾಗುವುದಿಲ್ಲವೆಂದಿದ್ದಾರೆ. ಈ ಪ್ರಬಂಧದಲ್ಲಿ ವ್ಯಕ್ತಿನಾಮಗಳನ್ನು ಕುರಿತು ಒಂದು ಉಪಘಟಕದಲ್ಲಿ ಮಾತ್ರ ಚರ್ಚಿಸಲಾಗಿದ್ದು ಅಲ್ಲಿನ ಕೆಲವು ಅಂಶಗಳು ಪ್ರಸ್ತುತ ಅಧ್ಯಯನಕ್ಕೆ ಸಹಕಾರಿಯಾಗಿವೆ.

ಜೋಗಿನಕಟ್ಟೆ ಮಂಜುನಾಥ ಇವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ 'ಮಸ್ಕಿ ಕನ್ನಡ : ಒಂದು ಭಾಷಿಕ ಅಧ್ಯಯನ' (೨೦೧೨) ಮಹಾಪ್ರಬಂಧದಲ್ಲಿ ಮಸ್ಕಿ ಪರಿಸರದ ವ್ಯಕ್ತಿನಾಮಗಳನ್ನು ಕುರಿತು ಒಂದು ಅಧ್ಯಾಯದ ಉಪಘಟಕವಾಗಿ ಚರ್ಚಿಸಲಾಗಿದೆ. ಅದರಲ್ಲಿ ಆಧುನೀಕರಣವು ವ್ಯಕ್ತಿನಾಮಗಳ ಮೇಲೆ ಉಂಟುಮಾಡಿರುವ ಪರಿಣಾಮವನ್ನು ಕುರಿತು ಚರ್ಚಿಸಲಾಗಿದೆ. ಮಾದಿಗ, ಯಾದವ ಮುಂತಾದ ಸಾಮಾಜಿಕವಾಗಿ ಗುರುತಿಸಲ್ಪಟ್ಟ ಕೆಳಸಮುದಾಯಗಳು ಜಾತಿಯ ಹೆಸರನ್ನು ಬಹಿರಂಗವಾಗಿ ಹೇಳಿಕೊಳ್ಳುವುದು ಒಂದು ಕಾಲದವರೆಗೂ ಅವಮಾನಕರವಾಗಿತ್ತು. ಆದರೆ ಇಂದು ಅವುಗಳ ಮೇಲೆ ಅಭಿಮಾನ, ಗೌರವದಿಂದ ಜಾತಿಯ ಹೆಸರನ್ನು ವ್ಯಕ್ತಿನಾಮಗಳಲ್ಲಿ ಸೂಚಿಸಿಕೊಳ್ಳುವುದನ್ನು ಗುರ್ತಿಸಿದ್ದಾರೆ. ಜಾತಿ ಸಂಘಟನೆಗಳು ಇಂದು ವ್ಯಾಪಕವಾಗಿ ನಡೆಯುತ್ತಿದ್ದು ತಮ್ಮ ಅನನ್ಯತೆಯನ್ನು ಜಾತಿಯ ಮೂಲಕ ಗುರುತಿಸಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಹಾಗಾಗಿ ರಾಜಕೀಯ ಅಧಿಕಾರದ ವ್ಯವಸ್ಥೆಯೂ ಜಾತಿಯ ಹೆಸರಿನಲ್ಲಿ ವ್ಯಾಪಕವಾಗಿ ಬಳಸಲು ಕಾರಣವಾಗಿದೆ ಎಂಬುದನ್ನು ತಿಳಿಸಿದ್ದಾರೆ. ಗ್ರಾಮ ಸಮಾಜಗಳು ಆಧುನಿಕತೆಗೆ ತೆರೆದುಕೊಂಡು ಸಮೂಹ ಮಾಧ್ಯಮಗಳ ಪ್ರಭಾವದಿಂದ ಸಿನಿಮಾ ತಾರೆಯರ, ಕ್ರೀಡಾಪಟುಗಳು ಹೆಸರುಗಳ ಕಡೆಗೆ ಒಲವು ತೋರಿಸಿರುವುದನ್ನು

ತಿಳಿಸಿದ್ದಾರೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮುಂದುವರೆದ ವರ್ಗವು ತಮ್ಮ ಸಮುದಾಯದ ಮೂಲದೈವ, ಮೂಲಪುರುಷರ ಹೆಸರನ್ನು ತಮ್ಮ ಮಕ್ಕಳಿಗೆ ನಿರ್ದೇಶಿಸುವ ಕ್ರಮವನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಸಮುದಾಯಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರಿದಂತೆಲ್ಲ ಪಾರಂಪರಿಕ ದೈವಸಂಬಂಧಿ ವ್ಯಕ್ತಿನಾಮಗಳ ಬಳಕೆ ಕಡಿಮೆಯಗುತ್ತಿದ್ದು, ಆಧುನಿಕ ಕಾಲದ ಹೊಸ ಹೆಸರುಗಳು ಹೆಚ್ಚು ಬಳಕೆಗೆ ಬಂದಿವೆ. ವಾರ್ಗಿಕಗಳು ಕಡಿಮೆಯಾಗಿ ನಿರ್ದಿಷ್ಟಗಳು ಹೆಚ್ಚಾಗಿ ನಿರ್ದೇಶಿಸಲ್ಪಡುತ್ತಿವೆ ಎಂಬುದನ್ನು ತಿಳಿಸಿದ್ದಾರೆ. ಈ ಅಂಶಗಳನ್ನು ಪ್ರಸ್ತುತ ಅಧ್ಯಯನದ ಆಧುನಿಕ ನೆಲೆಗಳನ್ನು ಕುರಿತು ಚರ್ಚಿಸುವಲ್ಲಿ ಬಳಸಿಕೊಳ್ಳಲಾಗಿದೆ.

ಓಂಪ್ರಕಾಶ ನಾಯ್ಕ ಇವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ 'ಅದೋನಿ ಕನ್ನಡ' (೨೦೦೬) ಎಂಬ ಮಹಾಪ್ರಬಂಧದಲ್ಲಿ ಒಂದು ಅಧ್ಯಾಯದ ಉಪಘಟಕವಾಗಿ ವ್ಯಕ್ತಿನಾಮಗಳನ್ನು ಕುರಿತು ಚರ್ಚಿಸಿದ್ದಾರೆ. ಅದೋನಿ ಪರಿಸರದಲ್ಲಿ ವ್ಯಕ್ತಿನಾಮಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕಗಳ ಮೂಲಕ ಸಾಮಾಜಿಕ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಕೆಲವೇ ನಿದರ್ಶನಗಳನ್ನು ಆಯ್ದುಕೊಂಡು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಅಧ್ಯಯನ ಕ್ಷೇತ್ರದ ವ್ಯಾಪ್ತಿ ವಿಸ್ತಾರದಿಂದಾಗಿ ಈ ಮಿತಿಗೆ ತಂದುಕೊಳ್ಳಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಮುದಾಯಗಳ ವ್ಯಕ್ತಿನಾಮಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ ವಿಸ್ತೃತ ಚರ್ಚೆ ಮಾಡಲು ಅನುಕೂಲವಾಗುತ್ತಿತ್ತು. ಇಸ್ಲಾಂ ಸಮುದಾಯದ ವ್ಯಕ್ತಿನಾಮಗಳ ಕುರಿತು ಅಧ್ಯಯನ ಮಾಡುವಾಗ ಸೂಫಿಗಳ ಬಗೆಗಿನ ಅಧ್ಯಯನದಲ್ಲಿ ಕ್ಷೇತ್ರ ಮಿತಿಯ ಕಾರಣ ನೀಡಿದ್ದಾರೆ. ಕರ್ನಾಟಕದಲ್ಲಿ ಭಿನ್ನ ಸಮಾಜಗಳ ಮೇಲೆ ಸೂಫಿಗಳ ಪ್ರಭಾವವನ್ನು ಗಮನಿಸಿ ವ್ಯಾಪಕ ಅಧ್ಯಯನ ಕೈಗೊಂಡಲ್ಲಿ ವ್ಯಕ್ತಿನಾಮಗಳ ಸಾಮಾಜಿಕ, ಸಂಸ್ಕೃತಿಯ ಅನೇಕ ಹೊಸ ವಿಚಾರಗಳು ಅನಾವರಣಗೊಳ್ಳಲು ಸಾಧ್ಯವಾಗಬಹುದೆಂದು ತಿಳಿಸಿದ್ದಾರೆ. ಈ ಪ್ರಬಂಧದ ಹಲವು ವಿಚಾರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಮರಿಸ್ವಾಮಿ ಆರ್., ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ಸೋಲಿಗ : ಸಮಾಜೋಭಾಷಿಕ ಅಧ್ಯಯನ' (೨೦೧೪) ಎಂಬ ಮಹಾಪ್ರಬಂಧದಲ್ಲಿ ಸೋಲಿಗರ ವ್ಯಕ್ತಿನಾಮಗಳನ್ನು ಕುರಿತು ಒಂದು ಉಪಘಟಕವನ್ನಾಗಿ ಮಾಡಿಕೊಂಡು ಚರ್ಚಿಸಿದ್ದಾರೆ. ಸೋಲಿಗರಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಸ್ತ್ರೀನಾಮ ಮತ್ತು ಪುರುಷನಾಮ ಎಂದು ವಿಭಾಗ ಮಾಡಿಕೊಂಡು ಚರ್ಚಿಸಲಾಗಿದೆ. ಪುರುಷನಾಮಗಳು ಬಹುತೇಕ 'ಗೌಡ' ಎಂಬ ವಾರ್ಗಿಕವನ್ನು ಹೊಂದುತ್ತದೆ ಎಂದಿದ್ದಾರೆ. ಆದರೆ ಸ್ತ್ರೀನಾಮಗಳಿಗೆ ಈ ವಾರ್ಗಿಕ ಹೊಂದುವುದಿಲ್ಲ ಹಾಗೂ ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳಿಗೆ ಜಾತಿ ಸೂಚಕ, ವೃತ್ತಿ ಸೂಚಕ ಅಥವಾ ಬಂಧು ಸೂಚಕವಾದ ವಾರ್ಗಿಕಗಳು ಹೊಂದುವುದಿಲ್ಲ ಎಂದು ಹೇಳಿದ್ದಾರೆ. ಈ ಹೇಳಿಕೆಗೆ ಪೂರಕವಾಗಿ ಮೂರು ತಲೆಮಾರುಗಳ ವ್ಯಕ್ತಿನಾಮಗಳನ್ನು ಉದಾಹರಣೆಯನ್ನು ನೀಡಿದ್ದಾರೆ. ಸೋಲಿಗ ಸಮುದಾಯದಲ್ಲಿ ನಾಗರೀಕತೆಯ ಸ್ಪರ್ಶದಿಂದಾಗಿ ಅವರ ಜೀವನ ಶೈಲಿಯಲ್ಲಿ ಬದಲಾವಣೆಯಾಗಿದ್ದು ಇದರಿಂದ ಅವರ ನಾಮ ನಿರ್ದೇಶನದಲ್ಲಿಯು ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದಿದ್ದಾರೆ.

ಲಾವಣ್ಯ ಸಿ.ಪಿ., ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ಕೊಡಗಿನ ಗೌಡ ಕನ್ನಡದ ಭಾಷಿಕ ನೆಲೆಗಳು' (೨೦೧೬) ಮಹಾಪ್ರಬಂಧದಲ್ಲಿ ಕೊಡಗಿನ ಪರಿಸರದ ವ್ಯಕ್ತಿನಾಮಗಳನ್ನು ಕುರಿತು ಒಂದು ಉಪಘಟಕದಲ್ಲಿ ಚರ್ಚಿಸಿದ್ದಾರೆ. ಕೊಡಗು ಜಿಲ್ಲೆಯ ಕೊಡವರು ಮತ್ತು ಗೌಡರ ಹೆಸರುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದಿದ್ದಾರೆ. ಜೊತೆಗೆ ಕೊಡಗಿನ ಪರಿಸರದ ಕೊಡಗಗೌಡರ ವ್ಯಕ್ತಿನಾಮಗಳ ಮೇಲೆ ಕೊಡವ ಸಮುದಾಯದ ವ್ಯಕ್ತಿನಾಮಗಳ ಪ್ರಭಾವ ಮತ್ತು ಪ್ರಾದೇಶಿಕತೆ ಪ್ರಭಾವ ಬೀರಿದೆ ಎಂದಿದ್ದಾರೆ. ಸಾಮಾನ್ಯವಾಗಿ ಅಜ್ಜ-ಅಜ್ಜಿಯರ ಹೆಸರುಗಳು, ಮೊಮ್ಮಕ್ಕಳಿಗೆ ಬರುತ್ತವೆ. ಕೆಲವೊಮ್ಮೆ ಹಿರಿಯರ ಗುರುವಿನ ಹೆಸರನ್ನು ಬಳಸುತ್ತಾರೆ. ಕೊಡಗಿನ ಗೌಡರಲ್ಲಿ ದೈವಸಂಬಂಧಿ ವ್ಯಕ್ತಿನಾಮಗಳಿವೆ ಎಂದಿದ್ದಾರೆ. ಕೊಡಗಿನಲ್ಲಿ ಹಿಂದಿನ ತಲೆಮಾರುಗಳಲ್ಲಿದ್ದ ಕೆಲವು ಹೆಸರುಗಳು ವಿಚಿತ್ರವಾದವುಗಳಾಗಿವೆ ಎಂದಿದ್ದಾರೆ. ಪ್ರಸಿದ್ಧ ವ್ಯಕ್ತಿಗಳ ಹೆಸರುಗಳು ಈ ಪರಿಸರದ ನಾಮ ನಿರ್ದೇಶನದಲ್ಲಿ ಪ್ರಭಾವ ಬೀರಿವೆ ಎಂದಿದ್ದಾರೆ. ಜೊತೆಗೆ ಕೊಡಗಿನ ಗೌಡ ಸಮುದಾಯದ ವ್ಯಕ್ತಿನಾಮಗಳನ್ನು ರಾಚನಿಕವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿನ ವ್ಯಕ್ತಿನಾಮಗಳು ಮಲಯಾಳಂ, ತುಳು, ಕನ್ನಡ, ತೆಲುಗು, ತಮಿಳು ಈ ಪಂಚ ದ್ರಾವಿಡ ಭಾಷೆಗಳ ಶಬ್ದಗಳಿಂದ ಕೂಡಿವೆ ಎಂಬುದನ್ನು ವಿದ್ವಾಂಸರ ಹೇಳಿಕೆಗಳ ಮೂಲಕ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಕುಟುಂಬ ನಾಮಗಳೊಂದಿಗೆ ಕೊಡಗಿನ ಗೌಡರ ಮತ್ತು ಕೊಡವರ ಹೆಸರುಗಳು ಹೇಗೆ ಬಳಕೆಯಾಗಿವೆ ಎಂಬುದನ್ನು ಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಈ ಪ್ರಬಂಧದಲ್ಲಿನ ವ್ಯಕ್ತಿನಾಮ ಸಂಬಂಧಿ ಅಂಶಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಶ್ರೀನಿವಾಸ ಬೇಂದ್ರೆ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ಬೀದರ್ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು' ಎಂಬ ಮಹಾ ಪ್ರಬಂಧದಲ್ಲಿ ವ್ಯಕ್ತಿನಾಮಗಳ ಕುರಿತು ಸಣ್ಣ ಚರ್ಚೆಯನ್ನು ಮಾಡಲಾಗಿದ್ದು, ಬೀದರ್ ಜಿಲ್ಲೆಯ ಅಡ್ಡ ಹೆಸರುಗಳ ಸ್ವರೂಪವನ್ನು ಕುರಿತು ಬ್ರಾಹ್ಮಣರ ಅಡ್ಡ ಹೆಸರುಗಳು, ಲಿಂಗಾಯತರ ಅಡ್ಡ ಹೆಸರುಗಳು, ಮರಾಠರ ಅಡ್ಡ ಹೆಸರುಗಳು, ಹೊಲೆಮಾದಿಗರ ಅಡ್ಡಹೆಸರುಗಳು, ಮುಸಲ್ಮಾನರ ಅಡ್ಡ ಹೆಸರುಗಳು ಎಂದು ಐದು ವಿಭಾಗಗಳಾಗಿ ವರ್ಗೀಕರಣ ಮಾಡಿಕೊಂಡು ಸಾಮಾಜಿಕವಾಗಿ ಈ ಅಡ್ಡ ಹೆಸರುಗಳು ಉಚ್ಚಾರಗೊಳ್ಳುವ ವಿಧಾನವನ್ನು ಅಂತರಾಷ್ಟ್ರೀಯ ಧ್ವನಿ ಲಿಪಿಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಬೀದರ್ ಕನ್ನಡದ ಪರಿಸರದಲ್ಲಿ ವ್ಯಕ್ತಿನಾಮಗಳು ವ್ಯಂಜನಾಂತ್ಯಗಳಾಗುತ್ತವೆ ಎಂಬುದನ್ನು ಉದಾಹರಣೆಯೊಂದಿಗೆ ಚರ್ಚಿಸಿದ್ದಾರೆ.

ದೇಶಪಾಂಡೆ ಎಸ್.ಎಲ್., ಅವರು 'ಕರ್ನಾಟಕದ ಸ್ಥಳನಾಮಗಳು : ಒಂದು ಅಧ್ಯಯನ' (೨೦೦೭-೦೮) ಎಂಬ ಕೃತಿಯಲ್ಲಿ ವ್ಯಕ್ತಿನಾಮಗಳ ಮೇಲೆ ಗ್ರಾಮದೇವತೆಗಳ ಹೆಸರುಗಳು ಪ್ರಭಾವ ಬೀರಿವೆ ಎಂಬುದನ್ನು ತಿಳಿಸಿದ್ದಾರೆ.

ಶಶಿಕಲಾ ಎಚ್., ಅವರು ಸಂಪಾದಿಸಿರುವ 'ನಾಮ ವ್ಯಾಸಂಗ' ಕೃತಿಯಲ್ಲಿ ಕಲಬುರ್ಗಿ ಎಂ.ಎಂ., ಅವರು ಬರೆದಿರುವ ಮಾರ್ಗ ಸಂಪುಟಗಳಲ್ಲಿ ನಾಮಾಧ್ಯಯನಕ್ಕೆ ಸಂಬಂಧಪಟ್ಟ

ಲೇಖನಗಳನ್ನು ಒಂದು ಕಡೆ ಸೇರಿಸಿದ್ದಾರೆ. ಈ ಕೃತಿಯಲ್ಲಿ ಬೈರವ, ಜುಂಜಪ್ಪ ಮತ್ತು ಮೈಲಾರ, ಮುದಿಮಲ್ಲಯ್ಯ, ಮುದಿವೀರಣ್ಣ, ಮುದಿಸಂಗಯ್ಯ, ಮೈಲಾರ, ಮಾಳಚಿ, ಎರೆಯಪ್ಪ, ಬೂದುಗ, ಹೊನ್ನುಗ್ಗಿ, ವಿರೂಪಾಕ್ಷ, ಪಾಡುರಂಗ, ಎಕ್ಕಲಮ್ಮ, ಎಲ್ಲಮ್ಮ, ಬಾದುಬ್ಬೆ, ಬಳರಿದೇವತೆ, ಉಡುಪಾದೇವಿ, ಹರಿಹರನ ಹೆಸರಿನ ನಿಜರೂಪ, ಕುಮಾರರಾಮ, ಹಕ್ಕಬುಕ್ಕ, ಪ್ರೌಢದೇವರಾಯ ಹೆಸರಿನ ನಿಜರೂಪ, ಮಲ್ಲೇಶ, ಆದಿಶೇಷ ಹೀಗೆ ಪ್ರಾಚೀನ ವ್ಯಕ್ತಿನಾಮ, ಗ್ರಾಮನಾಮಗಳನ್ನು ಅಧ್ಯಯನಕ್ಕೊಳಪಡಿಸಿ ವಿಶ್ಲೇಷಿಸಿದ್ದಾರೆ.

ಸುರೇಶ ಕೆ.ಸಿ., ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ' (೨೦೧೧) ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲಿ ಶೈವ, ವೈಷ್ಣವ, ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಮೊದಲಾದ ಧರ್ಮದವರು ಅವರ ನಂಬಿಕೆ, ಆಚಾರ, ವಿಚಾರಗಳಿಗೆ ಅನುಗುಣವಾಗಿ ಆರಾಧ್ಯದೈವಗಳನ್ನು ಸೃಷ್ಟಿಸಿಕೊಂಡಿರುವುದನ್ನು ಕಾಣಬಹುದು ಎಂದಿದ್ದಾರೆ. ಈ ದೈವ, ಧರ್ಮಗಳು ಭಾರತೀಯ ಸಂಸ್ಕೃತಿಯ ನಿಯಂತ್ರಕಗಳಾಗಿ ಮಹತ್ವದ ಪಾತ್ರವಹಿಸುತ್ತವೆ ಎಂದಿದ್ದಾರೆ. ಆದ್ದರಿಂದ ಈ ಎಲ್ಲ ಅಂಶಗಳು ಅವರ ವ್ಯಕ್ತಿಗಳಿಗೆ ನಾಮ ನಿರ್ದೇಶನ ಮಾಡುವ ಸಂದರ್ಭದಲ್ಲಿ ದೈವ ವಾಚಿಗಳನ್ನು ಬಳಸುತ್ತಾರೆ. ದೈವಗಳ ಸ್ಮರಣೆಯಾಗಲಿ ಎಂಬ ಪ್ರಬಲ ನಂಬಿಕೆ ಜನರ ಮನೋಧೋರಣೆಯಾಗಿದೆ. ಇದರಿಂದ ಕುಲದೈವ, ಇಷ್ಟದೈವ, ಸಿದ್ಧಪುರುಷರ ಹಾಗೂ ಗ್ರಾಮದೇವತೆಗಳ ಹೆಸರುಗಳನ್ನು ವ್ಯಕ್ತಿಗಳಿಗೆ ನೀಡುವುದನ್ನು ಗುರುತಿಸಬಹುದು ಎಂದಿದ್ದಾರೆ.

ಉಪಾಧ್ಯ ಜಿ.ಎಸ್., ಅವರು ಮುಂಬೈ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ಗೋದಾವರಿವರಂ ಇರ್ದ ಕನ್ನಡ ನಾಡು' (೨೦೦೦) ಪ್ರಬಂಧದ ಸ್ಥಳನಾಮಗಳು ಎಂಬ ಅಧ್ಯಾಯದಲ್ಲಿ ಶಾಸನಗಳ ಮೂಲಕ ಮಹಾಕಾವ್ಯದಲ್ಲಿರುವ ಗ್ರಾಮನಾಮಗಳು ಮತ್ತು ವ್ಯಕ್ತಿನಾಮಗಳನ್ನು ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ಆದರ್ಶವಾಚಿ ಎಂದು ವಿಭಾಗ ಮಾಡಿಕೊಂಡು ಚರ್ಚಿಸಿದ್ದಾರೆ.

ನಾಗಭೂಷಣ ಸಿ., ಅವರು ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನ (೧೯೯೯) ಕೃತಿಯಲ್ಲಿ 'ದೇವಾಲಯಗಳ ಹೆಸರುಗಳು' ಎಂಬ ಲೇಖನದಲ್ಲಿ ಶಾಸನ ಮತ್ತು ಸಾಹಿತ್ಯ ಉಲ್ಲೇಖದಿಂದ ಪ್ರಸಿದ್ಧ ದೇವರ ಹೆಸರಿನಲ್ಲಿ ದೇವಾಲಯಗಳ ನಿರ್ಮಾಣ ಮತ್ತು ನಾಮನಿರ್ದೇಶನ ಪುಣ್ಯ ಕ್ಷೇತ್ರಗಳ ಹೆಸರಿನಲ್ಲಿ, ಗುರುಗಳ ಹೆಸರಿನಲ್ಲಿ, ವ್ಯಕ್ತಿಗಳ ಹೆಸರಿನಲ್ಲಿ, ದಂಡನಾಯಕರ, ಏಣಿಕರ, ಸಾಮಾನ್ಯ ಜನರ, ಗ್ರಾಮದೇವತೆಗಳ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ ಅವರವರಿಗೆ ಸಂಬಂಧಿಸಿದ ನಾಮನಿರ್ದೇಶನ ಮಾಡುವ ಬಗೆಯನ್ನು ವಿವರಿಸಿದ್ದಾರೆ.

ಸಾಂಬಮೂರ್ತಿ ಅವರು ಕನ್ನಡ ಭಾಷಾ ವಿಜ್ಞಾನ ಸಂಶೋಧನೆ : ಇಂದು (ಸಂ.ರೇಣುಕಾ ಕೋಡಗುಂಟಿ) ಎಂಬ ಕೃತಿಯಲ್ಲಿ 'ವ್ಯಕ್ತಿನಾಮಗಳ ರಾಚನಿಕ ಅಧ್ಯಯನ' (೨೦೧೧) ಲೇಖನದಲ್ಲಿ ವ್ಯಕ್ತಿನಾಮಗಳನ್ನು ದೈವದ ಹೆಸರುಗಳು, ಪೂರ್ವಜರ ಹೆಸರುಗಳು, ಅನಿಷ್ಟ ಹೆಸರುಗಳು, ಜನಪ್ರಿಯ ಹೆಸರುಗಳು, ಮುದ್ದು ಹೆಸರುಗಳು, ಅಡ್ಡ ಹೆಸರುಗಳು, ಕಾವ್ಯನಾಮ ಎಂಬುದಾಗಿ ವಿಭಾಗ ಮಾಡಿಕೊಂಡು ಅವುಗಳನ್ನು ಭಾಷಿಕ ವಿಶ್ಲೇಷಣೆ ಮಾಡಿದ್ದಾರೆ. ಭಾಷಿಕವಾಗಿ ವ್ಯಕ್ತಿನಾಮಗಳನ್ನು ನಿರ್ದಿಷ್ಟ ಮತ್ತು

ವಾರ್ಗಿಕಗಳಾಗಿ ವರ್ಗೀಕರಿಸಿಕೊಂಡು ವಾರ್ಗಿಕಗಳನ್ನು ಸಂಬಂಧವಾಚಿ, ಜಾತಿವಾಚಿ, ವೃತ್ತಿ ವಾಚಿ, ಕುಲವಾಚಿಗಳಾಗಿ ವಿಶ್ಲೇಷಣೆ ಮಾಡಿದ್ದಾರೆ. ಈ ರೀತಿಯ ವ್ಯಕ್ತಿನಾಮಗಳ ಅಧ್ಯಯನದಿಂದ ಸಾಮಾಜಿಕ ಸ್ಥಾನಮಾನ, ಐತಿಹಾಸಿಕ ಅಂಶಗಳು, ಭಾಷಿಕ ಅಂಶಗಳು, ಗೋಚರಿಸುತ್ತವೆ ಎಂದು ತಿಳಿಸಿದ್ದಾರೆ. ಈ ಲೇಖನವನ್ನು ಪ್ರಸ್ತುತ ಅಧ್ಯಯನದಲ್ಲಿ ರಾಚನಿಕ ಸ್ವರೂಪ ಕುರಿತು ಚರ್ಚಿಸುವಲ್ಲಿ ಬಳಸಿಕೊಳ್ಳಲಾಗಿದೆ.

ಆಂಜನೇಯ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ 'ಮ್ಯಾಸಬೇಡರ ಕನ್ನಡ : ಸಮಾಜೋಭಾಷಿಕ ಅಧ್ಯಯನ' ಎಂಬ ಮಹಾ ಪ್ರಬಂಧದಲ್ಲಿ ವ್ಯಕ್ತಿನಾಮಗಳನ್ನು ಕುರಿತ ಉಪಘಟಕದಲ್ಲಿ ವ್ಯಕ್ತಿನಾಮಗಳ ಬಳಕೆಯ ಸ್ವರೂಪವನ್ನು ಪರಂಪರೆ ಮತ್ತು ಆಧುನಿಕ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಮೂರು ತಲೆಮಾರುಗಳ ನೆಲೆಯಲ್ಲಿ ಗುರ್ತಿಸಿದ್ದಾರೆ.

ನಾರಾಯಣ ಕೆ.ವಿ., ಸಂಪಾದಕತ್ವದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಪ್ರಕಟವಾಗಿರುವ 'ನಮ್ಮ ಕನ್ನಡ' ನಿಯತಕಾಲಿಕೆಯ ೫೦ನೇ ಹೊನ್ನ ಸಂಚಿಕೆಯಲ್ಲಿರುವ ಸಣ್ಣ ಪಾಪಯ್ಯ ದೇವರಹಟ್ಟಿ ಅವರು 'ಕನ್ನಡ ಪರಿಸರದ ಮುಸ್ಲಿಂ ವ್ಯಕ್ತಿನಾಮಗಳು' ಎಂಬ ಲೇಖನದಲ್ಲಿ ಮುಸ್ಲಿಂ ಸಮುದಾಯದ ಹೆಸರುಗಳನ್ನು ದೈವ ಮೂಲ, ಪುರಾಣ ಮೂಲ, ಚಾರಿತ್ರಿಕ ಮೂಲ, ಸೂಫಿ ಸಂತರ ಮೂಲ ಹಾಗೂ ಇತರ ಮೂಲದವುಗಳೆಂದು ವಿಭಾಗ ಮಾಡಿಕೊಂಡು ವ್ಯಕ್ತಿ ನಾಮಗಳ ಸ್ವರೂಪವನ್ನು ಗುರ್ತಿಸಿದ್ದಾರೆ. ಇವುಗಳ ಜೊತೆಗೆ ಕುಲನಾಮ, ಅಡ್ಡ ಹೆಸರು ಹೀಗೆ ಬಳಕೆಯಾಗುತ್ತವೆ ಎಂಬುದನ್ನು ಚರ್ಚಿಸಿದ್ದಾರೆ. ಭಾಷಿಕ ರಚನೆಯಲ್ಲಿ ವಾರ್ಗಿಕಗಳು ಯಾವ ಸ್ವರೂಪದಲ್ಲಿರುತ್ತವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಮುಸ್ಲಿಂ ಹೆಸರುಗಳಲ್ಲಿ ಕನ್ನಡದ ವಿಶೇಷಣಗಳು ಕಂಡುಬರುತ್ತವೆ ಎಂಬುದು ವಿಶೇಷವಾಗಿದೆ ಎಂದಿದ್ದಾರೆ. ಹೆಸರುಗಳು ಒಂದು ಧರ್ಮದ, ಜಾತಿಯ ಆಸ್ತಿಯಿದ್ದಂತೆ ಹೆಸರಿನಿಂದಾಗುವ ಸಾಧಕ ಬಾಧಕಗಳೇನು ಎಂಬುದನ್ನು ಈ ಲೇಖನದಲ್ಲಿ ತಿಳಿಸಲಾಗಿದೆ. ಈ ಲೇಖನದಿಂದ ಮುಸ್ಲಿಂ ಹೆಸರುಗಳ ಬಗೆಗೆ ಒಂದು ಸ್ಥೂಲ ನೋಟವನ್ನು ಬೀರಲಾಗಿದೆ.

ಹೆಗ್ಡಾಳ್ ಹುಲುಗಪ್ಪ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ 'ದೈವ ಮೂಲ ವ್ಯಕ್ತಿ ಮತ್ತು ಸ್ಥಳನಾಮಗಳು ಸಮಾಜೋಭಾಷಿಕ ಅಧ್ಯಯನ' (೨೦೧೬) ಪ್ರಬಂಧದಲ್ಲಿ ವ್ಯಕ್ತಿನಾಮಗಳ ಸ್ವರೂಪವನ್ನು ಕುರಿತು ಗ್ರಾಮದೇವತೆಗಳಿಗೆ ಸಂಬಂಧಿಸಿದ, ಶಿಷ್ಟ ದೇವತೆಗಳಿಗೆ ಸಂಬಂಧಿಸಿದ, ದೈವತ್ವಕ್ಕೇರಿದ ದಾರ್ಶನಿಕರಿಗೆ ಸಂಬಂಧಿಸಿದ ವ್ಯಕ್ತಿನಾಮಗಳು ಬಳ್ಳಾರಿ ಪರಿಸರದಲ್ಲಿ ಬಳಕೆಯಲ್ಲಿವೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಇವರು ಬಳ್ಳಾರಿ ಪರಿಸರವನ್ನು ಅನುಲಕ್ಷಿಸಿ ಅಧ್ಯಯನ ನಡೆಸಿದ್ದು ಅಲ್ಲಿನ ವ್ಯಕ್ತಿನಾಮಗಳನ್ನು ರಾಚನಿಕ ನೆಲೆಯಲ್ಲಿ ಸ್ಥಳವಾಚಿ, ವೃತ್ತಿವಾಚಿ, ಜಾತಿವಾಚಿ, ವ್ಯಕ್ತಿವಾಚಿ, ವಸ್ತುವಾಚಿ, ಬಂಧುವಾಚಿ, ಶಿಲಾವಾಚಿ, ಶರೀರ ಅವಯಸೂಚಿ ವ್ಯಕ್ತಿ ನಾಮಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಿದ್ದಾರೆ. ಈ ಪ್ರಬಂಧದಲ್ಲಿ ದೈವ ಮೂಲ ವ್ಯಕ್ತಿನಾಮಗಳು ಸಾಮಾಜಿಕವಾಗಿ ಮತ್ತು ಮೌಖಿಕ ದೃಷ್ಟಿಕೋನದಲ್ಲಿ ವಿವಿಧ ಸಮುದಾಯಗಳು ನಾಮನಿರ್ದೇಶನ ಹೇಗೆ ಬಳಕೆ ಮಾಡುತ್ತಿವೆ ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ವ್ಯಕ್ತಿನಾಮ ದ್ವೀಪಗಳು ಹೇಗೆ ಸೃಷ್ಟಿಯಾಗುತ್ತದೆ ಎಂಬುದನ್ನು ತಿಳಿಸಿದ್ದಾರೆ. ಒಗಟು, ಗಾದೆ, ಒಡಪು ಜನಪದ ಹಾಡುಗಳಲ್ಲಿ ದೈವ

ಸಂಬಂಧಿ ವ್ಯಕ್ತಿನಾಮಗಳ ಬಳಕೆಯ ನೆಲೆಗಳನ್ನು ಗುರ್ತಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳು ಪರಂಪರೆ, ಜಾತಿ, ವೃತ್ತಿ, ದೈವ, ಚರಿತ್ರೆ, ಸಾಮಾಜಿಕ ಆಯಾಮಗಳು, ಲಿಂಗಸಂಬಂಧಿ ಆಯಾಮಗಳು ಮುಂತಾದ ಅಂಶಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ. ಬದಲಾಗುತ್ತಿರುವ ಸಮಾಜದಲ್ಲಿ ದೈವ ಮೂಲ ವ್ಯಕ್ತಿ ನಾಮಗಳು ಎಲ್ಲಾ ವರ್ಗಗಳಲ್ಲು ಕಣ್ಮರೆಯಾಗುತ್ತಿವೆ ಎಂದಿದ್ದಾರೆ. ಸಮುದಾಯದ ಪ್ರತಿಯೊಂದು ವರ್ಗಗಳಲ್ಲಿ ಒಂದು ಮತ್ತು ಎರಡನೇ ತಲೆಮಾರಿನ ಹೆಸರುಗಳಲ್ಲಿ ದೈವ ಸಂಬಂಧಿ ವ್ಯಕ್ತಿನಾಮಗಳಿವೆ ಎಂದಿದ್ದಾರೆ. ವ್ಯಕ್ತಿನಾಮಗಳ ರಚನೆಯ ಸ್ವರೂಪ ಮತ್ತು ಬಳಕೆಯನ್ನು ಗಮನಿಸಿ ವ್ಯಕ್ತಿಯ ಜಾತಿ ಮತ್ತು ಸಾಮಾಜಿಕ ಸ್ಥಾನ ಮಾನಗಳನ್ನು ಗುರುತಿಸಲಾಗಿದೆ. ಬಳ್ಳಾರಿ ಪರಿಸರದ ವ್ಯಕ್ತಿನಾಮಗಳ ಸಂಬೋಧನೆಯು ಸಾಮಾಜಿಕವಾಗಿ ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ.

ಮಧುಸೂದನ ಕೆ.ಎಸ್., ಅವರ 'ಕ್ರಿಶ್ಚಿಯನ್ ಹೆಸರುಗಳು' ಎಂಬ ಲೇಖನವು ದಿನಾಂಕ ೧೨.೦೫.೨೦೧೫ರ ಕನ್ನಡ ಪ್ರಭ ದಿನ ಪತ್ರಿಕೆಯ 'ಹಳೆಯ ಹೊನ್ನು' ಅಂಕಣದಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಕಿ॥ಗಾಸ್ತವ್ ಅವರು ಕ್ರಿಶ್ಚಿಯನ್ ನೇಮ್ಸ್ ಇನ್ ಕ್ಯಾನರೀಸ್ ಎನ್ನುವ ಹೆಸರಿನ ಕೃತಿಯನ್ನು ರಚಿಸಿರುವುದು ತಿಳಿದುಬರುತ್ತದೆ. ಈ ಕೃತಿಯನ್ನು ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನ ವತಿಯಿಂದ ೧೮೬೬ರಲ್ಲಿ ಕ್ಯಾಸ್ಟರ್ ಸ್ಟಾಲ್ಸ್ ಮತ್ತು ಜಿ.ಪ್ಲೆಬ್‌ಸ್ತ್ ಅವರು ಪ್ರಕಟ ಮಾಡಿದ್ದಾರೆ. ಈ ಕೃತಿಯಲ್ಲಿ ವೇದೋಪನಿಷತ್ತುಗಳಲ್ಲಿ, ಗ್ರೀಕ್ ಪುರಾಣಗಳಲ್ಲಿ, ವಿಷ್ಣು, ಶಿವ, ಲಕ್ಷ್ಮೀ, ಲಲಿತಾ ಸಹಸ್ರ ನಾಮಗಳಲ್ಲಿ, ಬೈಬಲ್, ಕುರಾನ್‌ಗಳಲ್ಲಿ ಆಯಾಯ ಧರ್ಮಿಯರ ಸಾವಿರಾರು ಹೆಸರುಗಳು ಪ್ರಸ್ತಾವಗೊಂಡಿವೆ. ಜಗತ್ತಿನಾದ್ಯಂತ ರಚನೆಗೊಂಡಿರುವ ವಿವಿಧ ದೇಶಗಳ ಮಹಾಕಾವ್ಯಗಳಲ್ಲಿಯೂ ಅತ್ಯಂತ ಸುಂದರವೂ, ಸಂಗೀತಾತ್ಮಕವೂ ಆದ ಹೆಸರುಗಳನ್ನು ಕಾಣಬಹುದು. ಆದರೆ ವ್ಯಕ್ತಿನಾಮ ವಿಜ್ಞಾನದ ರೀತಿ ನಾಮನಿರ್ದೇಶನ ಮಾಡುವುದು ಬೇರೆಯೇ ರೀತಿಯ ಶಿಸ್ತು. ನಿರ್ದಿಷ್ಟ ಪ್ರದೇಶದ, ನಿರ್ದಿಷ್ಟ ಜನಾಂಗಗಳ ಮತಾಂತರಗೊಂಡ ವ್ಯಕ್ತಿಗಳಿಗೆ ಶಾಸ್ತ್ರೀಯವಾದ ರೀತಿಯಲ್ಲಿ ಹೆಸರುಗಳನ್ನು ನಾಮ ನಿರ್ದೇಶನ ಮಾಡುವುದು ಒಂದು ರೀತಿಯ ವ್ಯಕ್ತಿನಾಮ ವಿಜ್ಞಾನವೇ ಆಗಿದೆ ಎಂದಿದ್ದಾರೆ. ಈ ಕೆಲಸವನ್ನು ಕನ್ನಡದಲ್ಲಿ ಜರ್ಮನ್ ಪಾದ್ರಿಯೊಬ್ಬರು ಸುಮಾರು ೧೫೦ವರ್ಷಗಳ ಹಿಂದೆಯೇ ಮಾಡಿರುವುದು ವಿಶೇಷ. ಗಾಸ್ತವ್ ಕೇಸ್ ಅವರು ಭಾರತದ ಹಾಗೂ ಕನ್ನಡದ ಸ್ಥಳೀಯ ಕ್ರಿಶ್ಚಿಯನ್ನರಿಗೆ ಈ ಪರಿಸರಕ್ಕೆ ಹೊಂದುವ ಸೂಕ್ತ ಹೆಸರುಗಳನ್ನು ಸೂಚಿಸಿದ್ದಾರೆ. ಇದರಲ್ಲಿ ೧೯೪ ಪುರುಷವಾಚಿ, ೯೨ ಸ್ತ್ರೀವಾಚಿ ಹೆಸರುಗಳ ಪಟ್ಟಿಯನ್ನು ನೀಡಿದ್ದಾರೆ. ಹೆಸರಿಡುವ ಕ್ರಿಯೆ ಸಾಂಸ್ಕೃತಿಕ ಪ್ರಕ್ರಿಯೆಯೂ ಹೌದು. ಒಂದು ದೇಶದಲ್ಲಿ ಒಂದು ಧರ್ಮದವರು ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದಿದಾಗ ಅನಿವಾರ್ಯವಾಗಿ ಹಳೆಯ ಹೆಸರನ್ನು ಬಿಟ್ಟು ಹೊಸ ಹೆಸರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದು ಆಯಾ ದೇಶದ ಸಾಮಾಜಿಕ, ಸಾಂಸ್ಕೃತಿಕ, ಪರಿಸರಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಭಾರತೀಯ ಕನ್ನಡ ಪರಿಸರದ ಕ್ರಿಶ್ಚಿಯನ್ನರಿಗೆ ಹೆಸರುಗಳನ್ನು ಸೂಚಿಸುವಾಗ ಅವುಗಳನ್ನು ಕೇಸ್‌ರವರು ಗಂಡಸರಿಗೆ ಇಡುವ ಪುರುಷನಾಮಗಳು, ದೇವ ವಾಕ್ಯದಿಂದ ತೆಗೆದ ಪುರುಷನಾಮಗಳು, ಗ್ರೀಕ್ ಮತ್ತು ಲ್ಯಾಟಿನ್ ಮೂಲದ ಪುರುಷನಾಮಗಳು, ಶುದ್ಧಾಂಗ ಪುರುಷನಾಮಗಳು, ಹೆಂಗಸರಿಗೆ ಇಡುವಂತಹ

ಸ್ತ್ರೀನಾಮಗಳು, ಶುದ್ಧಾಂಗ ಮಹಿಳೆಯರ ಸ್ತ್ರೀನಾಮಗಳು ಎಂಬುದಾಗಿ ಎಂಟು ರೀತಿಯಲ್ಲಿ ವರ್ಗೀಕರಣ ಮಾಡಿದ್ದಾರೆ. ಹೆಸರುಗಳ ತಾತ್ವಿಕ ಚಿಂತನೆಗೆ ಸಂಬಂಧಿಸಿದಂತೆ ವಿವರವಾಗಿ ವಿಶ್ಲೇಷಣೆ ಮಾಡಲಾಗಿದ್ದು ಪುರುಷ ಮತ್ತು ಸ್ತ್ರೀಯರಿಗೆ ಹೆಸರನ್ನು ಶಾಸ್ತ್ರೀಯವಾಗಿಯೂ, ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯಲ್ಲಿ ವೈಧಾನಿಕ ನೆಲೆಯಲ್ಲಿ ಔಚಿತ್ಯ ಪೂರ್ಣವಾಗಿ ವಿವರಿಸಿದ್ದಾರೆ ಎಂದು ಮಧುಸೂದನ್ ಕೆ.ಎಸ್.,ಅವರು ಲೇಖನದಲ್ಲಿ ಹೇಳಿದ್ದಾರೆ. ಸುಮಾರು ೧೮೦ ವರ್ಷಗಳ ಹಿಂದೆ ಗಾಸ್ತವ್ ಕೇಸ್ ಅವರು ಈ ಪುಸ್ತಕದಲ್ಲಿ ಸೂಚಿಸಿರುವ ಹೆಸರುಗಳನ್ನೇ ಕ್ರಿಶ್ಚಿಯನ್ನರು ಇಂದಿಗೂ ಬಳಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ 'ಕನ್ನಡದಲ್ಲಿ ಕ್ರಿಶ್ಚಿಯನ್ ಹೆಸರುಗಳು' ಎಂಬ ಈ ಕೃತಿ ಕನ್ನಡದ ಮುದ್ರಿತ ಪುಸ್ತಕ ಪ್ರಪಂಚದಲ್ಲಿ ವ್ಯಕ್ತಿನಾಮ ವಿಜ್ಞಾನಕ್ಕೆ ಸಂಬಂಧಿಸಿದ ಮೊದಲ ಕೃತಿಯಾಗಿದೆ ಎಂದು ಮಧುಸೂಧನ ಕೆ.ಎಸ್., ಅವರು ಈ ಲೇಖನದಲ್ಲಿ ಹೇಳಿದ್ದಾರೆ.

ಬಿ.ವ್ಹಿ.ಜಿ. ಅವರು ಕರ್ನಾಟಕ ಭಾರತಿ ತ್ರೈಮಾಸಿಕ ಪತ್ರಿಕೆಯ ಸಂಪುಟ ೬ರ ಸಂಚಿಕೆ೨ ಪು.೪೦,೪೧,೪೨ರಲ್ಲಿ 'ಚೇಂಜ್ ಆಫ್ ನೇಮ್' ಎಂಬ ಲೇಖನದಲ್ಲಿ ಹುಟ್ಟು ಹೆಸರನ್ನು ಬದಲಿಸಿಕೊಂಡರೆ ಸಮಾಜದ ದೃಷ್ಟಿಯಲ್ಲಿ ಆಗುವಂತಹ ಅವಾಂತರಗಳು ಮತ್ತು ಎದುರಿಸಬೇಕಾದ ಟೀಕೆಗಳನ್ನು ಈ ಕವನದ ಮೂಲಕ ತಿಳಿಸಿಕೊಟ್ಟಿದ್ದಾರೆ. ಆದ್ದರಿಂದ ಹುಟ್ಟು ಹೆಸರನ್ನು ಅಷ್ಟು ಸುಲಭವಾಗಿ ಬದಲಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಈ ಕವನದಲ್ಲಿ ತಿಳಿಸಿದ್ದಾರೆ. ಇವರು ಕವನದ ಆರಂಭದಲ್ಲಿ ಹೆಸರು ಬದಲಿಸಿಕೊಂಡ ವಿಷಯವನ್ನು ಬಹಳ ಸಂಭ್ರಮದಿಂದ ಹೇಳಿಕೊಳ್ಳುತ್ತಾರೆ. ನಂತರ ಅನುಭವಿಸಿದ ಸಂದರ್ಭಗಳನ್ನು ವಿವರಿಸುತ್ತ ಕೊನೆಯಲ್ಲಿ ಹುಟ್ಟು ಹೆಸರನ್ನು ಬದಲಿಸಿಕೊಳ್ಳಲಾರೆ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಆರಂಭದ ಪದ್ಯ– ಮೊನ್ನೆ ಮೊನ್ನೆನ ಪೇಪರದಾಗ
ನಡುವಿನ ಪುಟದ ಒಂದು ಮೂಲ್ಯಾಗ
ಚೌಕಾಗಿ ಎಳೆದ ಕರೀಗೆರ್‍ಯಾಗ
CHANGE OF NAME ಎಂದು
ನಮ್ಮಪ್ಪ ಇಟ್ಟ ಹೆಸರ್‍ನ ನಾ ಬದಲಿಸಿ ಕೊಂಡಿದ್ದೆ...

ಕೊನೆಯಪದ್ಯ– ಸಂಭ್ರಮದಿಂದ ಹೇಲಗುಗ್ರಿ ತಿಂದು ಹಂಚಿ
ನಮ್ಮವ್ವ ಅಪ್ಪಾ ಇಟ್ಟ ಹೆಸರ ನಾ
ಕರಕೊಳಾಂವ ಇನ್ನ ಮುಂದ
CHANGE ಆದ NAME ದ
ಪ್ಲೇಟ್ ತಿರುವಿ ಹಾಕಾಂವ ಇದ ಕೊನೆಯಲ್ಲಿ.

ಗುರುವ ಆರ್.ಎನ್., ಅವರು ಕರ್ನಾಟಕ ಭಾರತಿ ತ್ರೈಮಾಸಿಕ ಪತ್ರಿಕೆಯ ಸಂಪುಟ–೬, ಸಂಚಿಕೆ–೨, ಪು.೧೩೨ ರಿಂದ ೧೩೪ರವರೆಗಿನ 'ಬಾದುಬ್ಬೆ' ಲೇಖನದಲ್ಲಿ ಗೋವೆಯ ಕದಂಬ ಮಹಾಮಂಡಳೇಶ್ವರ ಇಮ್ಮಡಿ ಚಟ್ಟಯ್ಯನ ಶಾಸನದಲ್ಲಿ ಎಡಹಳ್ಳಿಗಾಲಯ್ಯ(ನಣು)ಗ ಮಾರಯ್ಯ

ಮಾಡಿಸಿದಂ ಕನ್ನಲೆಯಲು ಬಾದುಬ್ಬೆಯಂ ಎಂದು ಉಲ್ಲೇಖ ಬರುತ್ತದೆ ಎಂದಿದ್ದಾರೆ. ಶಾಸನಗಳಲ್ಲಿ 'ಬಾದುಬ್ಬೆ'ಯ ಉಲ್ಲೇಖಗಳು ಕ್ರಿ.ಶ.೮೭೨ರಿಂದ ಬರುತ್ತವೆ ಎಂದಿದ್ದಾರೆ. ದೇಸಾಯಿ ಪಿ.ಬಿ., ಅವರು 'ದವನದ ಹುಣ್ಣಿಮೆ', ನರಸಿಂಹಾಚಾರ್ ಡಿ.ಎಲ್., ಅವರ 'ಶಬ್ದವಿಹಾರ', ಚಿದಾನಂದ ಮೂರ್ತಿ ಎಂ., ಅವರ 'ಸಂಶೋಧನಾ ತರಂಗ' ಕೃತಿಯಲ್ಲಿ ಈ ದೇವತೆಯ ಬಗ್ಗೆ ಉಲ್ಲೇಖಗಳು ಇರುವುದನ್ನು ಸಂಗ್ರಹಿಸಿದ್ದಾರೆ. ಪ್ರಸ್ತುತ ವಿಚಾರಗಳು ಬಂಧುವಾಚಿ 'ಅಬ್ಬೆ' ವಾರ್ಗಿಕಗಳನ್ನು ಕುರಿತು ಚರ್ಚಿಸಲು ಸಹಾಯಕವಾಗಿವೆ.

ರಾಮಭಟ್ ಪಿ., ಅವರು ಸಾಧನ ಪತ್ರಿಕೆಯ ಸಂಪುಟ–೯ ಸಂಚಿಕೆ–೩ ಪು.೬೯–೭೬ರವರೆಗೆ 'ಹವ್ಯಕರಲ್ಲಿ ಅಡ್ಡ ಹೆಸರುಗಳು' ಎಂಬ ಲೇಖನ ಬರೆದಿದ್ದಾರೆ. ಈ ಲೇಖನದಲ್ಲಿ ವರ್ಣಾಶ್ರಮ ಧರ್ಮದ ಪ್ರಕಾರ ಬ್ರಾಹ್ಮಣ ವರ್ಗ ಒಂದೇ ಎನಿಸಿದರೂ ಬೇರೆ ಬೇರೆ ಪ್ರದೇಶ, ಗೋತ್ರ, ಭಾಷೆ, ಸೂತ್ರ, ವೇದಗಳಿಗೆ ಸಂಬಂಧಿಸಿದ ಹಲವು ವರ್ಗಗಳಿವೆ. ದಕ್ಷಿಣ ಭಾರತದ ಬ್ರಾಹ್ಮಣರೆಲ್ಲ ಉತ್ತರ ಭಾರತದಿಂದ ಬಂದು ಇಲ್ಲಿ ವೈವಾಹಿಕ ಸಂಬಂಧ ಬೆಳಸಿ ಇಲ್ಲಿ ನೆಲೆಸಿದರೆಂಬ ನಂಬಿಕೆ ಇದೆ ಎಂದಿದ್ದಾರೆ. ಹವ್ಯಕರು 'ಅಹಿಚ್ಛತ್ರ'ದಿಂದ ಬಂದವರೆಂಬುದು ಸಾಮಾನ್ಯ ನಂಬಿಕೆ, ಹವ್ಯಕರು ಪ್ರಧಾನವಾಗಿ ಕೃಷಿಯನ್ನು ಅವಲಂಭಿಸಿದವರು. ಹವ್ಯಕರು ವೈಧಿಕ ಬ್ರಾಹ್ಮಣರಾದುದರಿಂದ ಅವರ ಹೆಸರುಗಳಲ್ಲೆಲ್ಲಾ ದೈವಿಕತೆ ಎದ್ದು ತೋರುತ್ತದೆ. ಇವರು ಸಂಸ್ಕೃತದ ದೇವನಾಮಗಳನ್ನಿಡುವುದಲ್ಲದೆ, ಅಜ್ಜನ ಹೆಸರನ್ನು ಮೊಮ್ಮನಿಗೂ, ಅಜ್ಜಿ ಹೆಸರನ್ನು ಮೊಮ್ಮಳಿಗೂ, ತಂದೆಯ ಹೆಸರನ್ನು ಮೊದಲನೇ ಮಗನಿಗೂ, ತಾಯಿಯ ಹೆಸರನ್ನು ಎರಡನೇ ಮಗನಿಗೂ ಇದೇ ರೀತಿ ಹುಡುಗಿಯರಿಗೆ ಹೆಚ್ಚಿನ ಮಕ್ಕಳಿಗೆ ಮುತ್ತಜ್ಜ (ತೊಂಡಜ್ಜ) ಅಥವಾ ಇನ್ನಾವುದೇ ಹೆಸರನ್ನಿಡುತ್ತಾರೆ. ಅಡ್ಡ ಹೆಸರು ಬಳಸುವುದಕ್ಕೆ ಕೆಲವು ಕಾರಣಗಳನ್ನು ಗುರ್ತಿಸಿದ್ದಾರೆ. ಹೆಸರು ಉದ್ದವಾಗಿದ್ದು ಬಳಸಲು ಕಷ್ಟವಾದರೆ, ಒತ್ತಕ್ಷರಗಳಿದ್ದರೆ, ವಿಜಾತಿಯ ಒತ್ತಕ್ಷರಗಳನ್ನು ಸಜಾತಿಯ ಒತ್ತಕ್ಷರ ಮಾಡಿಕೊಳ್ಳುವುದು, ಕೊಂಡಾಟದಿಂದ ಕರೆಯುವ ಸಹಜ ದ್ರಾವಿಡ ಹೆಸರುಗಳು, ಗೌರವ, ಪ್ರೀತಿದ್ಯೋತಕವಾಗಿ, ಬೈಗುಳ ಸಂದರ್ಭ, ಒಂದೇ ಹೆಸರಿನವರು ಕುಟುಂಬದಲ್ಲಿ ಹೆಚ್ಚಾಗಿದ್ದರೆ, ಸಂಬಂಧವಾಚಕಗಳು ಸೇರುವಿಕೆಯಿಂದ ಅಡ್ಡ ಹೆಸರುಗಳು ಸೇರ್ಪಡೆಗೊಳ್ಳುತ್ತವೆ ಎಂದಿದ್ದಾರೆ. ಹವ್ಯಕರ ಇನ್ನೊಂದು ವೈಶಿಷ್ಟ್ಯವನ್ನು ಹೇಳಿದ್ದಾರೆ ಅಂದರೆ ಎಲ್ಲಾ 'ಅ'ಕಾರಾಂತ ಪುಲಿಂಗ ನಾಸಿಕಗಳು ಸಾನುನಾಸಿಕಗಳಾಗಿವೆ. ಅಪ್ಪ, ಅಜ್ಜ, ಅಣ್ಣ ಈ ಅನುವಾಚಿಕಗಳು ಅಸ್ಪಷ್ಟವಾಗಿದ್ದರೂ ಅದು 'ನ' ಕಾರದ ಅವಶೇಷವೆಂಬುದು ಮುಂದೆ ಸ್ವರ ಬಂದಾಗ ಸ್ಪಷ್ಟವಾಗುತ್ತದೆ ಎಂದಿದ್ದಾರೆ. ಅಪ್ಪ+ನ–ಅಪ್ಪನ, ಅಪ್ಪ+ಅಲ್ಲಿ–ಅಪ್ಪನಲ್ಲಿ, ಅಪ್ಪಂಗೆ, ಅಣ್ಣಂಗೆ ಇವುಗಳು ಅಪ್ಪನ್ಗೆ, ಅಣ್ಣನ್ಗೆ ಎಂಬಂತಿರುತ್ತವೆ ಎಂದಿದ್ದಾರೆ. ಕೆಲವು ಸ್ತ್ರೀವಾಚಕಗಳಲ್ಲಿಯೂ ಇದೇ ರೀತಿ ಸಾನುನಾಸಿಕತೆಯಿದೆ ಎಂಬುದನ್ನು ಹೇಳಿದ್ದಾರೆ. ಅಕ್ಕ, ಅಮ್ಮ, ಕಮಲ, ಲೀಲಾ, ಇವುಗಳನ್ನು ಉದಾಹರಣೆಯಾಗಿ ಬಳಕೆ ಮಾಡಿಕೊಂಡು ವಿವರಿಸಿದ್ದಾರೆ. ಇಲ್ಲಿನ ಕೆಲವು ನಿಯಮಗಳು ರಾಚನಿಕ ಸ್ವರೂಪ ವಿವರಿಸುವಲ್ಲಿ ಸಹಕಾರಿಯಾಗಿವೆ.

ಒಟ್ಟಾರೆ ಇದುವರೆಗಿನ ಹೆಸರುಗಳನ್ನು ವಿವಿಧ ನೆಲೆಗಳಲ್ಲಿ ಕಂಡಿರುವುದು ತಿಳಿದುಬರುತ್ತದೆ. ಕೃತಿ ಸ್ವರೂಪದಲ್ಲಿ, ಲೇಖನ ಸ್ವರೂಪದಲ್ಲಿ, ಸಂಶೋಧನೆಯ ಸ್ವರೂಪದಲ್ಲಿ ಅಧ್ಯಯನಗಳು ನಡೆದಿವೆ. ಇವುಗಳಲ್ಲಿ ಹೆಸರುಗಳನ್ನು ರಾಚನಿಕವಾಗಿ, ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಅಧ್ಯಯನಿಸುತ್ತಾ ಆಧುನಿಕರಣದ ನೆಲೆಯಲ್ಲಿನ ಹೆಸರುಗಳ ಬೆಳವಣಿಗೆಯನ್ನು ತಿಳಿಸಲಾಗಿದೆ.

* * *

## ಅಧ್ಯಾಯ ಮೂರು

# ವ್ಯಕ್ತಿನಾಮಗಳ ರಾಚನಿಕ ಸ್ವರೂಪ

# ಅಧ್ಯಾಯ ಮೂರು
# ವ್ಯಕ್ತಿನಾಮಗಳ ರಾಚನಿಕ ಸ್ವರೂಪ

## ೩.೧. ಪ್ರಸ್ತಾವನೆ

ಪ್ರಪಂಚದಲ್ಲಿ ಹೆಸರಿಲ್ಲದ ವ್ಯಕ್ತಿ ಯಾರೂ ಇಲ್ಲ. ಭೂಮಿಗೆ ಬಂದ ಬಳಿಕ ಯಾವ ವ್ಯಕ್ತಿಯೇ ಆಗಲಿ, ಉನ್ನತ ಮಟ್ಟದಲ್ಲಿರಲಿ, ಕೆಳಮಟ್ಟದಲ್ಲಿರಲಿ, ಆ ವ್ಯಕ್ತಿಗೆ ಹೆಸರಿಲ್ಲದಿರುವುದು ಸಾಧ್ಯವಿಲ್ಲ ಎಂಬ ಮಾತು ಒಡಿಯಾ ಕೃತಿಯಲ್ಲಿ ತಿಳಿದುಬರುತ್ತದೆ(ರಾಮಕೃಷ್ಣ ಆರ್.೨೦೦೦, ಭಾಷಾ ವೀಕ್ಷಣ, ಪು.೫೪). ಇಂತಹ ಮಹತ್ವವನ್ನು ಹೊಂದಿರುವ ವ್ಯಕ್ತಿನಾಮಗಳ ಕುರಿತು ಆಳವಾದ ಅಧ್ಯಯನಗಳು ನಡೆಯದಿರುವುದು ಸೋಜಿಗದ ಸಂಗತಿ. ವ್ಯಕ್ತಿನಾಮಗಳ ಕುರಿತು ಬಿಡಿ ಲೇಖನಗಳು ಬಂದಿದ್ದರೂ ಚಾರಿತ್ರಿಕವಾಗಿ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಪ್ರಸ್ತುತ ಅಧ್ಯಯನ ವ್ಯಕ್ತಿನಾಮಗಳನ್ನು ಚಾರಿತ್ರಿಕ ನೆಲೆಯಲ್ಲಿ ನೋಡುವ ಪ್ರಯತ್ನವಾಗಿದೆ. ಈ ಅಧ್ಯಯನದಲ್ಲಿ ವ್ಯಕ್ತಿ ನಾಮಗಳನ್ನು ಚಾರಿತ್ರಿಕವಾಗಿ ನೋಡಬೇಕೆಂದರೆ ಅವುಗಳ ಸ್ವರೂಪವನ್ನು ಕುರಿತು ವಿಶ್ಲೇಷಿಸುವುದು ಹೆಚ್ಚು ಸೂಕ್ತ ಎನಿಸುತ್ತದೆ. ವ್ಯಕ್ತಿನಾಮಗಳ ಸ್ವರೂಪವನ್ನು ಕುರಿತು ಅಧ್ಯಯನಕ್ಕೆ ತೊಡಗಿಸಿಕೊಳ್ಳಬೇಕೆಂದರೆ ನಮಗೆ ಪ್ರಮುಖವಾಗಿ ಅವುಗಳ ರಚನೆಯ ಬಗ್ಗೆ ತಿಳುವಳಿಕೆ ಇರಬೇಕಾಗುತ್ತದೆ. ಏಕೆಂದರೆ ವ್ಯಕ್ತಿನಾಮಗಳು ರಾಚನಿಕವಾಗಿ ಯಾವ ಸ್ವರೂಪದಲ್ಲಿವೆ ಎಂಬುದನ್ನು ಗಮನಿಸದೇ ಹೋದರೆ ಅವುಗಳ ಸ್ವರೂಪ ತಿಳಿಯುವುದು ಸಾಧ್ಯವಾಗುವುದಿಲ್ಲ. ವ್ಯಕ್ತಿನಾಮಗಳನ್ನು ರಾಚನಿಕವಾಗಿ ಒಂದು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಿ ನೋಡಿದಾಗ ಅವುಗಳ ಸ್ವರೂಪದ ಬಗ್ಗೆ ಹೆಚ್ಚು ವಿಷಯ ಅರ್ಥವಾಗುತ್ತದೆ. ಹಾಗಾಗಿ ವ್ಯಕ್ತಿನಾಮಗಳ ಸ್ವರೂಪ ಅರಿಯುವಲ್ಲಿ ರಾಚನಿಕತೆ ಬಹಳ ಮುಖ್ಯ ಎನಿಸುತ್ತದೆ. ಜೊತೆಗೆ ವ್ಯಕ್ತಿನಾಮಗಳ ಸ್ವರೂಪದಲ್ಲಾದ ಬದಲಾವಣೆಗಳನ್ನು ಗುರುತಿಸುವಲ್ಲಿಯೂ ರಾಚನಿಕತೆ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ವ್ಯಕ್ತಿನಾಮಗಳ ಸ್ವರೂಪವನ್ನು ರಾಚನಿವಾಗಿ ಹೇಗೆ ಗಮನಿಬಹುದು ಎಂಬುದನ್ನು ತಿಳಿಸಲಾಗಿದೆ.

ವ್ಯಕ್ತಿನಾಮಗಳನ್ನು ಕುರಿತು ರಾಚನಿಕವಾಗಿ ಅಧ್ಯಯನ ಮಾಡುವಾಗ ಹಲವಾರು ಸಾಂಸ್ಕೃತಿಕ ವಿಚಾರಗಳನ್ನು ತಿಳಿಯಬಹುದಾಗಿದೆ. ಅಂದರೆ ಯಾವುದೇ ಒಂದು ಸಂಸ್ಕೃತಿಯ ಅಧ್ಯಯನದಲ್ಲಿ ವ್ಯಕ್ತಿನಾಮಗಳು ಸಹಾಯಕವಾಗುತ್ತವೆ. ಹೇಗೆಂದರೆ ಯಾವುದೇ ಒಂದು ಹೆಸರಿನ ನಿರ್ದೇಶನದಲ್ಲಿ ಆ ಸಮಾಜದ ಸಂಸ್ಕೃತಿ ಅಡಗಿರುತ್ತದೆ ಎಂಬುದನ್ನು ಗುರುತಿಸಬಹುದು. ಆದ್ದರಿಂದ ಇಂತಹ ವಿಷಯಗಳಲ್ಲಿ ಸಂಸ್ಕೃತಿಯ ಜೊತೆಗೆ ಭಾಷಿಕ ಅಂಶಗಳು ಅಡಕವಾಗಿರುತ್ತವೆ.

ವ್ಯಕ್ತಿನಾಮಗಳನ್ನು ಕುರಿತು ರಾಚನಿಕ ಸ್ವರೂಪವನ್ನು ನೋಡುವಾಗ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗಿನ ಅವಧಿಯಲ್ಲಿ ಆದಂತಹ ಬದಲಾವಣೆಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ವ್ಯಕ್ತಿನಾಮಗಳನ್ನು ಭಾಷಿಕ ಘಟಕಗಳೆಂದೂ ಸಹ ಕರೆಯಲಾಗಿದೆ. ಇಂತಹ ಅಂಶಗಳನ್ನಿಟ್ಟುಕೊಂಡು ಅಧ್ಯಯನ ಮಾಡುವಾಗ ಪ್ರಾದೇಶಿಕವಾಗಿ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಅಂದರೆ ಪ್ರಾದೇಶಿಕ ಸಂಸ್ಕೃತಿಯು ಆ ಸಮಾಜದ, ಆ ಸಮುದಾಯದ ವ್ಯಕ್ತಿನಾಮಗಳ ಮೇಲಾಗಿರುವುದನ್ನು ಗುರುತಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ವ್ಯಕ್ತಿನಾಮಗಳನ್ನು ಸಾಮಾನ್ಯವಾಗಿ ಪುರುಷನಾಮ ಮತ್ತು ಸ್ತ್ರೀನಾಮಗಳೆಂದು ಎರಡು ವಿಧಗಳಲ್ಲಿ ನೋಡಬಹುದು. ಈ ಬಗೆಯ ವ್ಯಕ್ತಿನಾಮಗಳ ಸ್ವರೂಪವನ್ನು ತಿಳಿಯುವ ಆರಂಭದಲ್ಲಿ ವ್ಯಕ್ತಿನಾಮಗಳಲ್ಲಿನ ರಚನೆಯನ್ನು ತಿಳಿಯುವುದು ಹೆಚ್ಚು ಸೂಕ್ತ, ಅಂದರೆ ವ್ಯಕ್ತಿನಾಮಗಳಲ್ಲಿ ಪೂರ್ವ ನಾಮ ಮತ್ತು ಉತ್ತರನಾಮಗಳು ಎಂಬ ಎರಡು ಘಟಕಗಳಿರುತ್ತದೆ. ಈ ಪ್ರತ್ಯೇಕ ಘಟಕಗಳು ಸೇರಿ ಪೂರ್ಣ ನಾಮವಾಗುತ್ತವೆ. ಸಾಮಾನ್ಯವಾಗಿ ವ್ಯಕ್ತಿನಾಮದ ಪೂರ್ವನಾಮವು ಆ ವ್ಯಕ್ತಿಯ ನಿಜನಾಮವಾಗಿರುತ್ತದೆ. ಉತ್ತರ ಘಟಕದ ನಾಮವು ಯಾವುದೇ ವ್ಯಕ್ತಿಗಾದರೂ ಸೇರಿ ಪೂರ್ಣನಾಮ ಘಟಕವಾಗುತ್ತದೆ. ಆದರೆ ಈ ನಿಯಮ ಎಲ್ಲಾ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲ. ಅಂದರೆ ಪೂರ್ವ ಘಟಕದಲ್ಲಿ ವ್ಯಕ್ತಿಯ ನಿಜನಾಮವಿದ್ದು, ಉತ್ತರ ಘಟಕದಲ್ಲಿ ವಾರ್ಗಿಕಗಳು ಬಂದರೆ ಆಗ ಈ ನಿಯಮ ಸರಿಹೊಂದುತ್ತದೆ. ಇದರ ಬದಲಾಗಿ ಪೂರ್ವಘಟಕ ಮತ್ತು ಉತ್ತರ ಘಟಕ ಎರಡರಲ್ಲೂ ನಿಜನಾಮವೇ ಬಂದರೆ ಅಥವಾ ನಾಮಪದಗಳೇ ಬಂದರೆ ಆ ಸಂದರ್ಭದಲ್ಲಿ ಈ ನಿಯಮ ಅನ್ವಯವಾಗುವುದಿಲ್ಲ. ಹಾಗಾಗಿ ವ್ಯಕ್ತಿನಾಮ ಘಟಕಗಳನ್ನು ವಿವಿಧ ರೀತಿಯ ಘಟಕಗಳಾಗಿ ವಿಭಾಗ ಮಾಡಿಕೊಂಡು ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ನಾಮಾಧ್ಯಯನ ಕ್ಷೇತ್ರದಲ್ಲಿ ವ್ಯಕ್ತಿನಾಮಗಳ ಪೂರ್ವ ಘಟಕವನ್ನು ನಿರ್ದಿಷ್ಟ(ಜೆನೆರಿಕ್)ವೆಂದೂ, ಉತ್ತರ ಘಟಕವನ್ನು ವಾರ್ಗಿಕ(ಸ್ಪೆಸಿಫಿಕ್)ಗಳೆಂದು ಕರೆಯಲಾಗಿದೆ. ಹಾಗಾಗಿ ನಿರ್ದಿಷ್ಟ ಮತ್ತು ವಾರ್ಗಿಕಗಳು ಎಂಬ ಎರಡು ಅಂಶಗಳನ್ನಿಟ್ಟುಕೊಂಡು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ವ್ಯಕ್ತಿನಾಮಗಳು ಯಾವ ಯಾವ ಸ್ವರೂಪದಲ್ಲಿದ್ದವು, ಅವುಗಳು ಭಾಷಿಕವಾಗಿ ಹೇಗೆ ಪ್ರಾಮುಖ್ಯತೆ ಪಡೆದುಕೊಂಡವು ಎಂಬುದನ್ನು ಕುರಿತಂತೆ ಅದ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸಮುದಾಯದಲ್ಲಿ ಅಧಿಕೃತವಾಗಿ ದಾಖಲಾಗಿರುವ ವ್ಯಕ್ತಿನಾಮಗಳನ್ನು ಕುರಿತು ಚರ್ಚಿಸಲಾಗಿದೆ.

ಬಳಕೆಯ ರೂಪದಲ್ಲಿ ಅಥವಾ ಸಂಬೋಧನೆಯ ರೂಪದಲ್ಲಿರುವ ವ್ಯಕ್ತಿನಾಮಗಳ ಸ್ವರೂಪವನ್ನು ಕುರಿತು ಹೆಚ್ಚು ಚರ್ಚಿಸಲಾಗಿಲ್ಲ. ಏಕೆಂದರೆ ಪ್ರಸ್ತುತ ಅಧ್ಯಯನದಲ್ಲಿ ಅಧಿಕೃತವಾಗಿ ದಾಖಲಾಗಿರುವ ವ್ಯಕ್ತಿನಾಮಗಳ ಸ್ವರೂಪ ತಿಳಿಯುವುದು ಪ್ರಮುಖ ಉದ್ದೇಶವಾಗಿದೆ. ಹಾಗಾಗಿ ಈ ರೀತಿಯ ಚರ್ಚೆಯನ್ನು ಗೌಣ ಮಾಡಲಾಗಿದೆ.

**೩.೨. ಹೆಸರಿಲ್ಲದ ಅವಧಿ/ಸಂಕೇತಗಳ ಬಳಕೆ**

ವ್ಯಕ್ತಿನಾಮಗಳನ್ನು ಕುರಿತು ರಾಚನಿಕವಾಗಿ ಅಧ್ಯಯನ ಮಾಡುವಾಗ ನಮಗೆ ಅವುಗಳ ಇತಿಹಾಸ ತಿಳಿಯುವುದು ಪ್ರಮುಖ ಎನಿಸುತ್ತದೆ. ಏಕೆಂದರೆ "ವ್ಯಕ್ತಿನಾಮಗಳು ಭಾಷಿಕ ಘಟಕಗಳು ಹೌದು" (ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೧೩) ಎಂದು ಈಗಾಗಲೇ ತಿಳಿದಿದ್ದೇವೆ. ಹಾಗಾಗಿ ಭಾಷಾ ಘಟಕವಾದಂತಹ ವ್ಯಕ್ತಿನಾಮಗಳು ಆರಂಭದಲ್ಲಿ ಹೇಗಿದ್ದವು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಇಲ್ಲಿಯವರೆಗೂ ಯಾರಿಗೂ ಸಾಧ್ಯವಾಗಿಲ್ಲ. ಆದರೆ ಭಾಷೆಯು ಆರಂಭವಾದ ಕಾಲದಲ್ಲಿ ವ್ಯಕ್ತಿಗಳಿಗೆ ಹೆಸರುಗಳಿರಲಿಲ್ಲ ಎಂದು ಊಹಿಸಬಹುದು. ಏಕೆಂದರೆ ಆರಂಭದ ಕಾಲದಲ್ಲಿ ಒಬ್ಬರಿಂದ ಮತ್ತೊಬ್ಬರನ್ನು ಗುರುತಿಸುವುದು ಕಷ್ಟದ ವಿಷಯವಾಗಿರಲಿಲ್ಲ. ಹಾಗಾಗಿ ವ್ಯಕ್ತಿಗಳಿಗೆ ನಾಮ ನಿರ್ದೇಶನ ಮಾಡುವ ಪ್ರಕ್ರಿಯೆ ಆರಂಭದಲ್ಲಿ ಇರಲಿಲ್ಲವೆಂದು ಊಹಿಸಬಹುದು. ಆದರೆ ಸಂವಹನಕ್ಕಾಗಿ ಮನುಷ್ಯ ಬೇರೆ ಬೇರೆ ತಂತ್ರಗಳನ್ನು ರೂಪಿಸಿಕೊಂಡಿದ್ದಿರಬಹುದೆಂದು ಅಂದಾಜಿಸಬಹುದು. ಅಂದರೆ ವ್ಯಕ್ತಿಯನ್ನು ಗುರುತಿಸಲು ಅಥವಾ ಸಂಬೋಧಿಸಲು ಕೆಲವು ಸಂಕೇತಗಳನ್ನು ಬಳಸಿರುವ ಸಾಧ್ಯತೆ ಇದೆ. ಆದರೆ ಇದಕ್ಕೆ ನಿರ್ದಿಷ್ಟ ಆಧಾರಗಳಿಲ್ಲ. ಅವರು ಸಂವಹನಕ್ಕಾಗಿ

ಕೇಕೇ ಹಾಕುವುದು

ಸಿಳ್ಳೆ ಹೊಡೆಯುವುದು

ಚಪ್ಪಾಳೆ ತಟ್ಟುವುದು

ವಿಶಿಷ್ಟ ಧ್ವನಿಗಳಲ್ಲಿ ಕೂಗುವುದು

ಆಂಗಿಕ ಸಂಜ್ಞೆಗಳನ್ನು ಮಾಡುವುದು(ಅವನು, ಅವಳು, ಇವರು ಇತ್ಯಾದಿಯಾಗಿ ಗುರುತಿಸಲು) ಇಂತಹ ಹಲವಾರು ಅಶಾಬ್ದಿಕ ಸಂಕೇತಗಳನ್ನು ಬಳಸುತ್ತಿದ್ದಿರಬಹುದು ಎಂದು ಊಹಿಸಬಹುದು. ಈ ರೀತಿಯ ಸಂವಹನ ವಿಧಾನವು ಹೆಚ್ಚು ಕಾಲ ಬಳಕೆಯಲ್ಲಿರಲು ಸಾಧ್ಯವಾಗಿರಲಿಕ್ಕಿಲ್ಲ. ಏಕೆಂದರೆ ಕೆಲವೇ ಕೆಲವು ಜನರ ಗುಂಪು ಇದ್ದಾಗ ಮಾತ್ರ ಇಂತಹ ತಂತ್ರಗಳು ಸಾಧ್ಯವಾಗುತ್ತವೆ. ಜನರ ಗುಂಪು ದೊಡ್ಡ ಪ್ರಮಾಣದಲ್ಲಿದ್ದಾಗ ಇಂತಹ ಪ್ರಯತ್ನಗಳು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ನಾಮನಿರ್ದೇಶನ ಮಾಡಬೇಕಾಗುತ್ತದೆ. ಆದ್ದರಿಂದ ನಂತರದ ದಿನಗಳಲ್ಲಿ ಮನುಷ್ಯ ನಾಮನಿರ್ದೇಶನ ಮಾಡುವುದನ್ನು ಕಂಡುಕೊಂಡಿದ್ದಾರೆ ಎಂದು ಊಹಿಸಬಹುದು.

**೩.೩. ಅನ್ವರ್ಥನಾಮಗಳ ಬಳಕೆ**

ಸಮಾಜದಲ್ಲಿ ಜನರ ಗುಂಪು ಜಾಸ್ತಿಯಗಿ ಒಬ್ಬರಿಂದ ಮತ್ತೊಬ್ಬರನ್ನು ಪ್ರತ್ಯೇಕಿಸಿ ಗುರುತಿಸಬೇಕಾದ

ಅನಿವಾರ್ಯತೆ ಉಂಟಾದಾಗ ವ್ಯಕ್ತಿಗಳಿಗೆ ನಾಮ ನಿರ್ದೇಶನ ಮಾಡುವ ಪ್ರಕ್ರಿಯೆ ಆರಂಭವಾಗಿರಬೇಕು. ಆದರೆ ಈ ಸಂದರ್ಭದಲ್ಲಿ ಯಾವ ರೀತಿಯ ಹೆಸರನ್ನು ಬಳಸಬೇಕು, ಯಾವ ಮೂಲದಿಂದ ಹೆಸರು ಪಡೆಯಬೇಕು ಎಂಬ ಪ್ರಶ್ನೆಗಳು ಅಂದಿನ ಜನರಿಗೆ ಬಂದಿರಬಹುದು. ಅಂತಹ ಸಂದರ್ಭದಲ್ಲಿ ಒಬ್ಬರಿಂದ ಮತ್ತೊಬ್ಬರನ್ನು ಗುರುತಿಸಲು ಸಾಮಾನ್ಯವಾಗಿ ಆ ವ್ಯಕ್ತಿಯ ಗುಣ ವಿಶೇಷಗಳು ಪ್ರಭಾವ ಬೀರಿರುವ ಸಾಧ್ಯತೆಯಿದೆ. ಆಗಾಗಿ ಅಂದಿನ ಸಂದರ್ಭದಲ್ಲಿ ವ್ಯಕ್ತಿನಾಮಗಳು ಅನ್ವರ್ಥಕನಾಮಗಳಾಗಿ ಬಳಕೆಯಾಗಿರುವ ಸಾಧ್ಯತೆಯಿದೆ. "ನಾಮಗಳು ವ್ಯಕ್ತಿಯ ರೂಪ–ಗುಣಗಳಿಗೆ ಅನುಗುಣವಾಗಿದ್ದಿರಬೇಕು. ಅಂದರೆ ಅನ್ವರ್ಥಕ ನಾಮಗಳಾಗಿರಬೇಕು. ಇವುಗಳಲ್ಲಿಯೇ ಮೊದಮೊದಲು ರೂಪವನ್ನು ಆ ಮೇಲೆ ಗುಣವನ್ನು ಗಮನಿಸಿ ಹೆಸರಿಡುವ ಪದ್ಧತಿ ಬೆಳೆದಿರಬೇಕು. ಈ ಕಾಲದಲ್ಲಿ ಹೆಣ್ಣು–ಗಂಡು ಬೇಧವಿಲ್ಲದೆ ರೂಪ–ಗುಣಗಳನ್ನವಲಂಭಿಸಿ ಎಲ್ಲರಿಗೂ ಏಕ ಪ್ರಕಾರದ ಹೆಸರಿಡುತ್ತಿರಬಹುದು. ಹೀಗಾಗಿ ಈ ಕಾಲಾವಧಿಯ ವ್ಯಕ್ತಿನಾಮಗಳೆಲ್ಲ ಅನ್ವರ್ಥಕ ನಾಮಗಳೇ ಆಗಿರಬಹುದು. ಆದುದರಿಂದ ನಾಮದ ಇತಿಹಾಸದಲ್ಲಿ ಅನ್ವರ್ಥಕ ನಾಮಗಳೇ ಪ್ರಥಮ ಮತ್ತು ಪ್ರಾಚೀನವೆಂದು ತೋರುತ್ತದೆ"(ಕಲಬುರ್ಗಿ ಎಂ.ಎಂ., ೨೦೧೨, ಕನ್ನಡ ನಾಮವಿಜ್ಞಾನ, ಪು.೧೧).

**ಉದಾ:–**

**ವ್ಯಕ್ತಿಯು ದಪ್ಪವಾಗಿದ್ದರೆ**

ಡುಮ್ಮ

ದುಬ್ಲಿ

ಡುಮ್ಮಿ

ದಡಿಯ

ದೊಡ್ಡ

**ವ್ಯಕ್ತಿಯು ಸಣ್ಣಗಿದ್ದರೆ**

ಸಣ್ಣ

ಸಣ್ಣಿ

ಚಿಕ್ಕ

ಚಿಕ್ಕಿ

**ವ್ಯಕ್ತಿಯ ಬಣ್ಣ ಕೆಂಪಗಿದ್ದರೆ**

ಕೆಂಪ

ಕೆಂಪಿ

ಕೆಂಚ

ಕೆಂಚಿ

**ವ್ಯಕ್ತಿಯು ಬಣ್ಣದಲ್ಲಿ ಕಪ್ಪಗಿದ್ದರೆ**

ಕರಿಯ

ಕರ್ರಿ

**ವ್ಯಕ್ತಿಯು ಕುಳ್ಳಗಿದ್ದರೆ**

ಕುಳ್ಳ

ಕುಳ್ಳಿ

ಗಿಡ್ಡ

ಗಿಡ್ಡಿ

**ವ್ಯಕ್ತಿಯು ಎತ್ತರವಾಗಿದ್ದರೆ**

ಲಂಬೂ

**ವ್ಯಕ್ತಿಯ ಸೊಂಟ ಊನವಾಗಿದ್ದರೆ**

ಹೆಳವ

ಹೆಳವಿ

**ವ್ಯಕ್ತಿಯ ಕೈ ಊನವಾಗಿದ್ದರೆ**

ಮೋದ

ಮೋದಿ

**ವ್ಯಕ್ತಿಯು ಎಡಗೈಯನ್ನು ಹೆಚ್ಚು ಬಳಸುತ್ತಿದ್ದರೆ**

ರೊಡ್ಡ>ಲೊಡ್ಡ

ರೊಡ್ಡಿ>ಲೊಡ್ಡಿ

**ವ್ಯಕ್ತಿಗೆ ಮಾತು ಬಾರದಿದ್ದರೆ**

ಮೂಗ

ಮೂಗಿ

**ವ್ಯಕ್ತಿಯು ದೃಷ್ಟಿಹೀನವಾಗಿದ್ದರೆ**

ಕುರುಡ

ಕುರುಡಿ

**ವ್ಯಕ್ತಿಗೆ ಕಿವಿ ಕೇಳಿಸದಿದ್ದರೆ**

ಕಿವುಡ

ಕಿವುಡಿ

ಕೆಪರ

ಕೆಪರಿ

ವ್ಯಕ್ತಿಯು ಬೆಳ್ಳಗಿದ್ದರೆ

ಬಿಳಿಯ

ವ್ಯಕ್ತಿಗೆ ಕಾಲು ಊನವಾಗಿದ್ದರೆ

ಕುಂಟ

ಕುಂಟಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿ ಹೇಳುವುದಾದರೆ ಆರಂಭದಲ್ಲಿ ಗುಣ ವಿಶೇಷಣಗಳಿಂದ ವ್ಯಕ್ತಿ, ವ್ಯಕ್ತಿಗಳನ್ನು ಗುರ್ತಿಸಿ ಸಂವಹನ ನಡೆಯುತ್ತಿತ್ತು ಮತ್ತು ಆ ಸಂದರ್ಭದಲ್ಲಿ ಗುಣವಿಶೇಷಣಗಳಿಗೆ ವಾರ್ಗಿಕಗಳು ಸೇರದೆ ನಿರ್ದಿಷ್ಟವಾಗಿ ಬಳಕೆಯಾಗಿರಬಹುದು. ಆದರೆ ಕಲಬುರ್ಗಿಯವರು ಕನ್ನಡ ನಾಮ ವಿಜ್ಞಾನ (೨೦೧೦, ಪು.೧೧) ಕೃತಿಯಲ್ಲಿ ಅನ್ವರ್ಥಕ ನಾಮಗಳ ಕುರಿತು ಹೇಳುವಾಗ ವಾರ್ಗಿಕಗಳನ್ನು ಸೇರಿಸಿ ಉದಾಹರಣೆಯಾಗಿ ಸಣ್ಣಗಿದ್ದರೆ ಸಣ್ಣಪ್ಪ, ವೀರನಿದ್ದರೆ ಕಲಿಯಪ್ಪ, ಕಪ್ಪಗಿದ್ದರೆ ಕರಿಯಪ್ಪ, ಕೆಂಪಗಿದ್ದರೆ ಕೆಂಚಪ್ಪ ಇವುಗಳನ್ನು ಕೊಟ್ಟಿದ್ದಾರೆ. ಗುಣವಾಚಕಗಳು ಆರಂಭವಾದ ಅವಧಿಯಲ್ಲಿಯೇ ಸಂಬಂಧವಾಚಕಗಳು ವಾರ್ಗಿಕಗಳಾಗಿ ಬಳಕೆಯಾಗಿವೆ ಎಂಬುದನ್ನು ನಂಬಲು ಸಾಧ್ಯವಾಗುವುದಿಲ್ಲ. ಈ ವಿಷಯ ಕುರಿತು ಅಧ್ಯಯನ ನಡೆಸಲು ಅವಕಾಶಗಳಿವೆ ಎಂದು ಹೇಳಬಹುದು.

**೩.೪. ಅಂಕಿತನಾಮಗಳ ಬಳಕೆ**

ವ್ಯಕ್ತಿಗಳಿಗೆ ಆರಂಭದಲ್ಲಿ ಅನ್ವರ್ಥಕ ನಾಮಗಳನ್ನು ಬಳಸಿ ಗುರುತಿಸುವ ಪ್ರಕ್ರಿಯೆ ದೀರ್ಘಕಾಲ ಮುಂದುವರೆದಿರಲಾರದು. ಏಕೆಂದರೆ ಸಮಾಜದಲ್ಲಿ ಜನರ ಪ್ರಮಾಣ ಅಧಿಕವಾಗುತ್ತಾ ಹೋದಂತೆಲ್ಲ ಒಬ್ಬರಿಂದ ಮತ್ತೊಬ್ಬರನ್ನು ಬೇರ್ಪಡಿಸಿ ಗುರುತಿಸಲು ಗುಣವಿಶೇಷಣಗಳಿಂದ ಕೂಡಿದ ಅನ್ವರ್ಥಕ ನಾಮ ಮಾತ್ರ ಸಾಕಾಗುವುದಿಲ್ಲ ಎಂದು ಹೇಳಬಹುದು. ಅನಿವಾರ್ಯವಾಗಿ ವ್ಯಕ್ತಿಯು ಇತರೆ ಹೆಸರುಗಳನ್ನು ಬಳಸಲು ಆರಂಭಿಸಿರುವ ಸಾಧ್ಯತೆಯಿದೆ. ಆದರೆ ಯಾವ ಮೂಲದಿಂದ ಹೆಸರನ್ನು ಪಡೆಯಬೇಕು ಎಂಬ ಗೊಂದಲಗಳಿಗೆ ಪರಿಹಾರವಾಗಿ ತನ್ನ ಸುತ್ತಲಿನ ಪರಿಸರದಲ್ಲಿ ಬಳಕೆಯಲ್ಲಿದ್ದ ಇತರ ವಸ್ತುಗಳ ಹೆಸರುಗಳನ್ನು ವ್ಯಕ್ತಿಗಳಿಗೆ ನಿರ್ದೇಶನ ಮಾಡಲು ಆರಂಭಿಸಿರಬೇಕು. ಅಂದರೆ ಆ ವಸ್ತುಗಳ ಹೆಸರುಗಳೇ ಅಂಕಿತನಾಮಗಳಾಗಿರುತ್ತವೆ. ಆದರೆ ಇಲ್ಲಿ ವ್ಯಕ್ತಿಯ ಗುಣವಿಶೇಷಣಗಳಿಗೂ ಅವರ ಹೆಸರಿಗೂ ಅರ್ಥವೇ ಇಲ್ಲದಂತಾಯಿತು.

ಸೂರ್ಯ, ಚಂದ್ರ, ಭೂಮಿ, ಮರ, ಗಿಡ, ನೀರು, ಹೂ, ಕಲ್ಲು, ಗಾಳಿ, ಮಳೆ ಮುಂತಾದವುಗಳಿಂದ ವ್ಯಕ್ತಿಯು ಪ್ರಭಾವಿತನಾಗಿ ಅವುಗಳಿಗೆ ಅಂದಿನ ಸಂದರ್ಭದಲ್ಲಿ ತಾನು ಅಂದುಕೊಂಡಿದ್ದಂತಹ ಹೆಸರುಗಳನ್ನು ಸಮುದಾಯದ ವ್ಯಕ್ತಿಗಳಿಗೆ ಬಳಸಿರುವ ಸಾಧ್ಯತೆಯಿದೆ. ಈ ಅವಧಿಯಲ್ಲಿ "ನಾಮತ್ವಕ್ಕೂ ವ್ಯಕ್ತಿತ್ವಕ್ಕೂ ಅರ್ಥಸಂಬಂಧವಿಲ್ಲ"(ಕಲಬುರ್ಗಿ ಎಂ.ಎಂ., ೨೦೧೦, ಕನ್ನಡ ನಾಮ ವಿಜ್ಞಾನ, ಪು.೧೨) ಎನ್ನಬಹುದು. ಇದನ್ನೇ ಗಮನಿಸಿದ ಕೇಶಿರಾಜ "ಅಂಕಿತನಾಮಂ

ಪೆಸರನಿಡುವನಿಷ್ಟದಿಂದೆಂತಾದೊಡ ಮಿರ್ಪುದು" ಎಂದು ಹೇಳಬೇಕಾಯಿತು(ನರಸಿಂಹಾಚಾರ್ ಡಿ.ಎಲ್., ೨೦೧೪, ಶಬ್ದಮಣಿದರ್ಪಣ, ಪು.೧೦೬, ಸೂತ್ರಸಂಖ್ಯೆ-೮೬).

### ೩.೫. ವಾರ್ಗಿಕಗಳ ಪ್ರವೇಶ

ಅಂಕಿತನಾಮಗಳ ಬಳಕೆಯ ನಂತರದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಮತ್ತು ಪುರುಷರನ್ನು ಬೇರ್ಪಡಿಸಲು, ಅವರನ್ನು ಗುರುತಿಸಲು ಹೆಸರನ್ನು ಬಳಸುತ್ತಿದ್ದಿರಬಹುದು. ಜೊತೆಗೆ ಅಂಕಿತನಾಮಗಳ ಬಳಕೆಯು ಹೆಚ್ಚಾದಂತೆ ವ್ಯಕ್ತಿತ್ವ ಮತ್ತು ನಾಮತ್ವಗಳ ಮಧ್ಯೆ ಅರ್ಥಸಂಬಂಧ ತಪ್ಪಿಹೋಗಿರಬಹುದು. ಏಕೆಂದರೆ ಪ್ರಾರಂಭದಲ್ಲಿ ವ್ಯಕ್ತಿಯ ಗುಣ ವಿಶೇಷಣಗಳ ಆಧಾರದ ಮೇಲೆ ಹೆಸರುಗಳು ಬಳಕೆಯಾಗುತ್ತಿದ್ದವು. ಅಂಕಿತನಾಮಗಳು ಪ್ರವೇಶ ಪಡೆದನಂತರ ಗುಣವಿಶೇಷಣಗಳಿಗೆ ಅಷ್ಟಾಗಿ ಮಹತ್ವ ಇಲ್ಲದಂತಾಗಿರಬಹುದು. ಈ ಸಂದರ್ಭದಲ್ಲಿ ಅಂಕಿತನಾಮಗಳು ನಿಜನಾಮಗಳಾಗಿದ್ದು ನಿರ್ದಿಷ್ಟದ ಸ್ಥಾನವನ್ನು ಪಡೆದುಕೊಂಡಿದ್ದವು ಎನ್ನಬಹುದು. ಏಕೆಂದರೆ ಇಲ್ಲಿ ಇನ್ನೂ ವಾರ್ಗಿಕಗಳು ಬಳಕೆಗೆ ಬಂದಿರಲಾರವು. ಹೀಗೆ ಆರಂಭದಲ್ಲಿ ನಿರ್ದಿಷ್ಟಗಳಾಗಿ ಬಳಕೆಗೊಳ್ಳುತ್ತಿದ್ದ ಹೆಸರುಗಳಿಗೆ ಯಾವುದೋ ಒಂದು ಕಾಲಘಟ್ಟದಲ್ಲಿ ವಾರ್ಗಿಕಗಳು ಪ್ರವೇಶ ಪಡೆದಿವೆ. ವಾರ್ಗಿಕಗಳು ಪ್ರವೇಶ ಪಡೆಯಲು ನಿಖರವಾದ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ, ಜನಪದೀಯ ನೆಲೆಯಲ್ಲಿ ಗುರುತಿಸುವ ಪ್ರಯತ್ನ ಮಾಡಬಹುದು. ಹೇಗೆಂದರೆ ಜನಪದ ಹಾಡುಗಳಲ್ಲಿ, ಮಹಾಕಾವ್ಯಗಳಲ್ಲಿ, ಲಾವಣಿಗಳಲ್ಲಿ ಹಾಗೂ ದಿನನಿತ್ಯ ಬಳಸುವ ಭಾಷೆಯಲ್ಲಿ ಹೆಸರುಗಳಿಗೆ ಬಂಧುವಾಚಿ, ಗೌರವವಾಚಿ, ದೈವವಾಚಿ ಹೆಸರುಗಳಿಂದ ಸಂಬೋಧಿಸುವುದನ್ನು ಕಾಣಬಹುದು. ಅಂದರೆ ಸಮುದಾಯದಲ್ಲಿ ಅಧಿಕಾರ, ಸ್ಥಾನಮಾನಗಳು, ಜಾತಿ, ವೃತ್ತಿಗಳೆಲ್ಲವು ರೂಢಿಗೆ ಬಂದ ಪರಿಣಾಮವಾಗಿ ಮತ್ತು ಜನಪದರು ವ್ಯಕ್ತಿಗಳಿಗೆ ಗೌರವಸೂಚಕವಾಗಿ ಬಂಧುಸೂಚಕಗಳನ್ನು ಬಳಸಿರುವುದರ ಪರಿಣಾಮವಾಗಿ ನಿರ್ದಿಷ್ಟ ಹೆಸರುಗಳಿಗೆ ವಾರ್ಗಿಕಗಳು ಬಂದು ಸೇರಿರುವ ಸಾಧ್ಯತೆ ಇರಬಹುದು. ಆದ್ದರಿಂದ ವಾರ್ಗಿಕಗಳು ಯಾವ ಯಾವ ಸ್ವರೂಪದಲ್ಲಿದ್ದವು ಹಾಗೂ ಪ್ರಸ್ತುತ ಹೇಗಿವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

#### ೩.೫.೧. ಬಂಧುವಾಚಿ ವಾರ್ಗಿಕಗಳು

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅಪ್ಪ | ಅಮ್ಮ |
| ಅಯ್ಯ | ಅಕ್ಕ |
| ಅಣ್ಣ | ಅವ್ವ |
| ತಮ್ಮ | ಅಜ್ಜಿ |
| ಅಜ್ಜ | ಬಾಯಿ |

| | |
|---|---|
| ಮುತ್ತ | ಅಬ್ಬೆ |
| | ತಂಗಿ |

೩.೫.೨. ವೃತ್ತಿವಾಚಿ ವಾರ್ಗಿಕಗಳು

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಜ | ಗೌಡಿ/ಗಾವುಂಡಿ/ಗೌಡ |
| ಅರಸ | ನಾಯಕ/ನಾಯಕಿ/ನಾಯಕಿತಿ |
| ಗೌಡ | ನಾಗತಿ |
| ನಾಯಕ | ರಾಣಿ |
| ದೊರೆ | ಆಚಾರಿ |
| ಶಾಸ್ತ್ರಿ | ಗೊಂಚಿಕಾರ |
| ಆಚಾರಿ | ಬಡಿಗೇರ |
| ಬಡಗಿ | ಪಾಟೀಲ |
| ತಳವಾರ | |
| ಕೋಲಕಾರ | |
| ಪಾಟೀಲ | |

೩.೫.೩. ಅನ್ವರ್ಥಕನಾಮಗಳು ವಾರ್ಗಿಕಗಳಾಗಿ ಬಳಕೆ

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ದೊಡ್ಡ | ದೊಡ್ಡ |
| ದಡಿಯ | ಚಿಕ್ಕ |
| ಸಣ್ಣ | ಸಣ್ಣಿ/ಸಣ್ಣ |
| ಚಿಕ್ಕ | ಚಿಕ್ಕಿ/ಸಣ್ಣಿ |
| ಕುರುಡ | ಕುರುಡಿ |
| ಮೂಗ | ಮೂಗಿ |
| ಕಿವುಡ | ಕಿವುಡಿ |
| ಕುಂಟ | ಕುಂಟಿ |
| ಎಳವ | ಎಳವಿ |
| ಮೋದ | ಮೋದಿ |

| | |
|---|---|
| ಕೆಂಪ | ಕೆಂಪಿ |
| ಕರಿಯ | – |
| ಕುಳ್ಳ | ಕುಳ್ಳಿ |
| ಗಿಡ್ಡ | ಗಿಡ್ಡಿ |

**೩.೫.೪. ಗೌರವವಾಚಿ ವಾರ್ಗಿಕಗಳು**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ದೇವ | ದೇವಿ |
| ಸ್ವಾಮಿ | ಗೊರವಿ |
| ಒಡೆಯ | ಕಂತಿ |
| ರಾಯ | |
| ರಾಸಿ | |
| ಜೀಯ | |
| ಭಟ್ಟ | |



ಈ ಮೇಲಿನ ಪಟ್ಟಿಯಲ್ಲಿರುವ ರಾಸಿ, ಜೀಯ, ಭಟ್ಟ, ಗೊರವಿ, ಕಂತಿ(೨೦೧೨, ಕನ್ನಡ ನಾಮ ವಿಜ್ಞಾನ, ಪು-೧೮)ಇವುಗಳನ್ನು ಕಲಬುರ್ಗಿಯವರು ಗುರ್ತಿಸಿದ್ದಾರೆ. ಆದರೆ ಪ್ರಸ್ತುತದಲ್ಲಿ ಈ ಪ್ರಕಾರದ ವಾರ್ಗಿಕಗಳು ಬಳಕೆಯಲ್ಲಿಲ್ಲ.

**೩.೫.೫. ಅಧಿಕಾರವಾಚಿ ವಾರ್ಗಿಕಗಳು**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗೌಡ | ಗೌಡ/ಗೌಡಿ |
| ನಾಯಕ | ನಾಯಕ/ನಾಯಕಿ |
| ರಾಜ | ರಾಣಿ |
| ದಳವಾಯಿ | ದಳವಾಯಿ |

**೩.೫.೬. ಜಾತಿವಾಚಿ ವಾರ್ಗಿಕಗಳು**

ಆಧುನಿಕ ಸಂದರ್ಭದಲ್ಲಿ ಜಾತಿವಾಚಿ ವಾರ್ಗಿಕಗಳ ಬಳಕೆ ತುಂಬಾ ಪ್ರಮಾಣದಲ್ಲಿರುವುದನ್ನು ಗುರುತಿಸಲಾಗಿದೆ. ಅಂದರೆ ಪ್ರಾಚೀನ ಕಾಲದಲ್ಲಿ ಜಾತಿವಾಗಿ ವಾರ್ಗಿಕಗಳಿಂದ ಸಂಬೋಧಿಸಲ್ಪಡುತ್ತಿದ್ದು ಕಾಲಾನಂತರದಲ್ಲಿ ಅವುಗಳ ಬಳಕೆ ನಿಂತು ಹೋಗಿದ್ದು, ಆಧುನಿಕ ಸಂದರ್ಭದಲ್ಲಿ ಪುನಃ ಜಾತಿವಾಚಿ ವಾರ್ಗಿಕಗಳು ಪ್ರವೇಶ ಪಡೆದಿರುವುದನ್ನು ಕಾಣಬಹುದು. ಈ ರೀತಿಯ ಬದಲಾವಣೆ ಆಗಲು

ಕಾರಣಗಳನ್ನು ಕುರಿತು ವ್ಯಕ್ತಿನಾಮಗಳ ಸಾಮಾಜಿಕ ನೆಲೆಗಳನ್ನು ಕುರಿತು ವಿವರಿಸುವಲ್ಲಿ ವಿವರವಾಗಿ ಹೇಳಲಾಗಿದೆ.

ಉದಾ:–

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗೌಡ | ಗೌಡ/ಗೌಡಿ/ಗಾವುಂಡಿ/ಗವುಡಿ |
| ಕುರುಬ | ಕುರುಬ |
| ರಾವ್ | – |
| ಗೊಲ್ಲ | ಗೊಲ್ಲ |
| ಹರಿಜನ | ಹರಿಜನ |
| ಮಾದಿಗ | ಮಾದಿಗ |
| ಚಲವಾದಿ | ಚಲವಾದಿ |
| ಕುಂಚಿಟಿಗ | ಕುಂಚಿಟಿಗ |
| ಲಂಬಾಣಿ | ಲಂಬಾಣಿ |
| ಅಯ್ಯಂಗಾರ್ | – |
| ಭೋವಿ | ಭೋವಿ |
| ಗಾಣಿಗ | ಗಾಣಿಗ |
| ಈಡಿಗ | ಈಡಿಗ |
| ನಾಯಕ | ನಾಯಕ |
| ನಾಯ್ಕ | ನಾಯ್ಕ |
| ತಿಗಳ | ತಿಗಳ |
| ಗೊರವ | ಗೊರವ |
| ಆರಾಧ್ಯ | ಆರಾಧ್ಯ |
| ಕುಂಬಾರ | ಕುಂಬಾರ |
| ಆಚಾರ್ಯ | ಆಚಾರ್ಯ |
| ತಳವಾರ | ತಳವಾರ |
| ಬಳೆಗಾರ | ಬಳೆಗಾರ |
| ಉಪ್ಪಾರ | ಉಪ್ಪಾರ |
| ಯಾದವ | ಯಾದವ |
| ರೆಡ್ಡಿ | ರೆಡ್ಡಿ |

| | |
|---|---|
| ಶೆಟ್ಟಿ | ಶೆಟ್ಟಿ |
| ಜಂಗಮ | ಜಂಗಮ |
| ಕಮ್ಮಾರ | ಕಮ್ಮಾರ |

ಈ ಮೇಲಿನ ಎಲ್ಲಾ ವಾರ್ಗಿಕಗಳನ್ನು ಉದಾಹರಣೆಯೊಂದಿಗೆ ಮುಂದೆ ವಿವರಿಸಲಾಗಿದೆ.

**೩.೬. ಲಿಖಿತ ಆಕರಗಳು**

ವ್ಯಕ್ತಿನಾಮಗಳ ಸ್ವರೂಪವನ್ನು ನಿಖರವಾಗಿ ತಿಳಿಯಲು ಆಧಾರಗಳು ಮುಖ್ಯ ಪಾತ್ರವಹಿಸುತ್ತದೆ. ನಿಖರವಾದ ಆಧಾರಗಳಿಲ್ಲದೆ ಯಾವುದೇ ನಿಯಮವನ್ನು ಕಟ್ಟಿಕೊಡಲು ಸಾಧ್ಯವಾಗುವುದಿಲ್ಲ. ಕೇವಲ ಊಹೆಯಿಂದಷ್ಟೆ ಹೇಳಬಹುದು. ಹಾಗಾಗಿ ವ್ಯಕ್ತಿನಾಮಗಳ ಸ್ವರೂಪ ತಿಳಿಯಲು ನಮಗೆ ಲಿಖಿತ ಆಕರಗಳು ಹೆಚ್ಚು ಸಹಾಯಕವಾಗುತ್ತವೆ. ಕ್ರಿ.ಶ.೪೫೦ರಲ್ಲಿ ದೊರೆತ ಹಲ್ಮಿಡಿ ಶಾಸನವು ಕನ್ನಡದ ಮೊದಲ ಲಿಖಿತ ದಾಖಲೆಯಾಗಿದೆ. ಈ ಅವಧಿಯಿಂದ ದೊರೆತ ಆಕರಗಳಲ್ಲಿನ ವ್ಯಕ್ತಿನಾಮಗಳನ್ನು ಆಧಾರವಾಗಿಟ್ಟುಕೊಂಡು ವ್ಯಕ್ತಿನಾಮಗಳು ಕಾಲದಿಂದ ಕಾಲಕ್ಕೆ ಹೇಗೆ ಬದಲಾವಣೆ ಆಗುತ್ತಾ ಬಂದಿವೆ ಎಂಬುದನ್ನು ಗುರುತಿಸಲಾಗಿದೆ.

ಲಿಖಿತ ಆಕರಗಳು ಆರಂಭದಲ್ಲಿ ಶಾಸನಗಳ ರೂಪದಲ್ಲಿ ದೊರೆತಿರುವುದನ್ನು ಕಾಣಬಹುದು. ನಂತರ ಸಾಹಿತ್ಯಿಕ ವಲಯಗಳಲ್ಲಿ ವ್ಯಕ್ತಿನಾಮಗಳನ್ನು ಗುರುತಿಸಬಹುದು. ಇವುಗಳಿಂದ ವ್ಯಕ್ತಿನಾಮಗಳನ್ನು ಗಮನಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ನಿರ್ದಿಷ್ಟಗಳೇ ಆಗಿರುವುದು ಕಂಡುಬರುತ್ತವೆ.

ಉದಾ:–

ವಿಜ

ಮೃಗೇಶ

ನಾಗೇಂದ್ರ

ಪಂಪ

ಪೊನ್ನ

ರನ್ನ

ಜನ್ನ

ನಾಗಚಂದ್ರ

ಶ್ರೀವಿಜಯ

ಗುಣನಂದಿ

ಅಸಗ

ಹರಿಹರ

ರಾಘವಾಂಕ

ದುರ್ಗಸಿಂಹ

ಬ್ರಹ್ಮಶಿವ

ನೇಮಿಚಂದ್ರ

ನಯಸೇನ

ನಾಗರಾಜ

ಷಡಕ್ಷರ

ಸುರಂಗ

ಚಂದ್ರಸಾಗರ

ಕಾಕುಸ್ಥ ವರ್ಮ ಮುಂತಾದವು.

### ೨.೭. ನಿರ್ದಿಷ್ಟ ಮತ್ತು ವಾರ್ಗಿಕಗಳು

ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ತಿಳಿದುಕೊಳ್ಳುವ ಮೊದಲು ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಂದರೆ ವ್ಯಕ್ತಿನಾಮದಲ್ಲಿ ಪುರುಷವಾಚಿ ಮತ್ತು ಸ್ತ್ರೀವಾಚಿ ಎಂದು ಎರಡು ಪ್ರಕಾರಗಳನ್ನು ಕಾಣುತ್ತೇವೆ. ಈ ಎರಡು ಪ್ರಕಾರಗಳನ್ನು ಭಾಷಿಕವಾಗಿ ಪೂರ್ವ ಮತ್ತು ಉತ್ತರ ಘಟಕಗಳೆಂದು ಕರೆಯಲಾಗುತ್ತದೆ. ಇಲ್ಲಿ ಪೂರ್ವಘಟಕವನ್ನು ವ್ಯಕ್ತಿಯ ನಿಜನಾಮವೆಂತಲೂ, ಉತ್ತರ ಘಟಕವನ್ನು ವಾರ್ಗಿಕ ಎಂದು ಕರೆಯುತ್ತಾರೆ(ಕಲಬುರ್ಗಿ ಎಂ.ಎಂ., ೨೦೧೦, ಕನ್ನಡ ನಾಮ ವಿಜ್ಞಾನ, ಪು.೧೫). ಈ ನಿರ್ದಿಷ್ಟ ಮತ್ತು ವಾರ್ಗಿಕಗಳ ಪೂರ್ಣಘಟಕವನ್ನು ವ್ಯಕ್ತಿನಾಮ ಎಂದು ಕರೆಯುತ್ತೇವೆ. ಇಂತಹ ಸ್ವರೂಪ ಹೊಂದಿರುವ ವ್ಯಕ್ತಿನಾಮಗಳ ಪೂರ್ಣಘಟಕಗಳಾಗಿರುವ ನಿರ್ದಿಷ್ಟ ಮತ್ತು ವಾರ್ಗಿಕಗಳನ್ನು ಮತ್ತು ಈ ಸ್ವರೂಪದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

### ೩.೭.೧. ನಿರ್ದಿಷ್ಟ

ಈಗಾಗಲೇ ತಿಳಿದಿರುವಂತೆ ನಿರ್ದಿಷ್ಟ ವ್ಯಕ್ತಿಯ ನಿಜನಾಮವಾಗಿರುತ್ತದೆ ಮತ್ತು ಸ್ವತಂತ್ರವಾದ ಸ್ಥಾನವನ್ನು ಪಡೆದಿರುತ್ತದೆ. ಅಂದರೆ ನಿರ್ದಿಷ್ಟ ಘಟಕವು ವಾರ್ಗಿಕದ ಅಗತ್ಯವಿಲ್ಲದೆ ಸ್ವತಂತ್ರವಾಗಿ ಬಳಕೆಯಾಗುವಂತಹದ್ದಾಗಿದೆ. ಕೆಲವು ಸಂದರ್ಭಗಳಲ್ಲಿ ನಿರ್ದಿಷ್ಟಗಳಿಗೆ ವಾರ್ಗಿಕಗಳು ಸೇರಿ ಎರಡು ಘಟಕಗಳಾಗಿ ಬಳಕೆಯಾಗುವುದುಂಟು. ಆದರೆ ನಿರ್ದಿಷ್ಟದಂತೆ ವಾರ್ಗಿಕ ಸ್ವತಂತ್ರವಾಗಿ ಬಳಕೆಯಾಗುವುದು ತುಂಬಾ ವಿರಳ. ನಿರ್ದಿಷ್ಟದೊಡನೆ ವಾರ್ಗಿಕ ಸೇರಲುಬಹುದು ಅಥವಾ ಸೇರದೆಯೂ ಇರಬಹುದು. ಅವುಗಳನ್ನು ಈ ಕೆಳಕಂಡಂತೆ ತಿಳಿಯಬಹುದಾಗಿದೆ.

**ನಿರ್ದಿಷ್ಟ ಘಟಕದ ವ್ಯಕ್ತಿನಾಮಗಳು**

ಉದಾ:-

| **‘ಅ’ಪಟ್ಟಿ** | **‘ಬ’ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಮ | ಸೀತೆ |
| ಚಂದ್ರ | ರಜನಿ |

| | |
|---|---|
| ಭರತ | ಸುಮ |
| ಲಕ್ಷ್ಮಣ | ಉಮಾ |
| ಭೀಮ | ಲಕ್ಷ್ಮೀ |
| ಅರ್ಜುನ | ರಮ್ಯ |
| ನಕುಲ | ಜ್ಯೋತಿ |
| ರವಿ | ರಮಾ |
| ಪಂಪ | ಸುಧಾ |
| ಪೊನ್ನ | ಶ್ವೇತ |
| ರನ್ನ | ಸ್ವಾತಿ |
| ಜನ್ನ | ಸುಷ್ಮಾ |
| ಅಸಗ | ಶೃತಿ |
| ಮಧು | ಉಷಾ |
| ಕೃಷ್ಣ | |
| ವಿಷ್ಣು | |

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಇಲ್ಲಿನ ಹೆಸರುಗಳೆಲ್ಲವೂ ಸ್ವತಂತ್ರವಾದ ಪೂರ್ಣ ಘಟಕಗಳಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಲಾಗಿದೆ. ಅಂದರೆ ಇವುಗಳೆಲ್ಲವು ಭಾಷಿಕವಾಗಿ ನಿರ್ದಿಷ್ಟಗಳಾಗಿದ್ದು ವಾರ್ಗಿಕಗಳ ಸಹಾಯವಿಲ್ಲದೆ ಬಳಕೆಯಾಗಿದೆ. ಆದ್ದರಿಂದ ನಿರ್ದಿಷ್ಟಗಳು ಸ್ವತಂತ್ರವಾದಂತಹುಗಳೆಂದು ಒಪ್ಪಿಕೊಳ್ಳಬೇಕು.

**೩.೭.೨. ನಿರ್ದಿಷ್ಟ+ನಿರ್ದಿಷ್ಟ/ನಾಮಪದ+ನಾಮಪದ=ವ್ಯಕ್ತಿನಾಮ**

ವ್ಯಕ್ತಿನಾಮಗಳ ರಚನೆಯಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ನಾಮಪದಗಳು ಸೇರಿ ಪೂರ್ಣ ಹೆಸರುಗಳಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಲಾಗಿದೆ. ಅಂದರೆ ಇಲ್ಲಿ ಎರಡು ನಿರ್ದಿಷ್ಟಗಳು ಸೇರಿ ಒಂದು ವ್ಯಕ್ತಿನಾಮಗಳಾಗಿರುವುದನ್ನು ಕಾಣಲಾಗಿದೆ.

ಉದಾ:-

| **'ಅ'ಪಟ್ಟಿ** | | | | | **'ಬ'ಪಟ್ಟಿ** | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| ರಾಮ | + | ಲಕ್ಷ್ಮಣ | = | ರಾಮಲಕ್ಷಣ | ಸೀತಾ | + | ಲಕ್ಷ್ಮಿ | = | ಸೀತಾಲಕ್ಷ್ಮಿ |
| ರಾಧ | + | ಕೃಷ್ಣ | = | ರಾಧಕೃಷ್ಣ | ನಾಗ | + | ಲಕ್ಷ್ಮಿ | = | ನಾಗಲಕ್ಷ್ಮಿ |
| ರಾಮ | + | ಚಂದ್ರ | = | ರಾಮಚಂದ್ರ | ಸುಬ್ಬ | + | ಲಕ್ಷ್ಮಿ | = | ಸುಬ್ಬಲಕ್ಷ್ಮಿ |
| ನಟ | + | ರಾಜ | = | ನಟರಾಜ | ಉಮಾ | + | ಗೌರಿ | = | ಉಮಾಗೌರಿ |

| | | | | |
|---|---|---|---|---|
| ಬಸವ | + | ರಾಜ | = | ಬಸವರಾಜ |
| ತಿಮ್ಮ | + | ರಾಜ | = | ತಿಮ್ಮರಾಜ |
| ಚಂದ್ರ | + | ಶೇಖರ | = | ಚಂದ್ರಶೇಖರ |
| ಲಕ್ಷ್ಮೀ | + | ನಾರಾಯಣ | = | ಲಕ್ಷ್ಮೀನಾರಾಯಣ |
| ಲಕ್ಷ್ಮೀ | + | ಕಾಂತ | = | ಲಕ್ಷ್ಮೀಕಾಂತ |
| ಉಮ | + | ಶಂಕರ | = | ಉಮಾಶಂಕರ |
| ಉಷಾ | + | ರಾಣಿ | = | ಉಷಾರಾಣಿ |
| ರಾಧ | + | ಲಕ್ಷ್ಮಿ | = | ರಾಧಲಕ್ಷ್ಮೀ |

**೩.೭.೩. ಸ್ತ್ರೀವಾಚಿ+ಪುರುಷವಾಚಿ ನಿರ್ದಿಷ್ಟಗಳು=ಪುರುಷವಾಚಿ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯಲ್ಲಿ ಪ್ರಮುಖವಾಗಿ ಸ್ತ್ರೀವಾಚಿ ಹೆಸರುಗಳೊಂದಿಗೆ ಪುರುಷವಾಚಿ ನಿರ್ದಿಷ್ಟಗಳು ಸೇರಿ ಪುರುಷವಾಚಿ ವ್ಯಕ್ತಿನಾಮಗಳಾಗುವುದನ್ನು ಗುರುತಿಸಲಾಗಿದೆ. ಅಂದರೆ ವ್ಯಕ್ತಿನಾಮಗಳ ರಚನೆಯಲ್ಲಿ ಸ್ತ್ರೀವಾಚಿ ಮತ್ತು ಪುರುಷವಾಚಿಗಳ ನಿರ್ದೇಶನದಲ್ಲಿ ಯಾವುದೇ ನಿರ್ಬಂಧಗಳಿಲ್ಲವೆಂದು ಈ ಉದಾಹರಣೆಗಳ ಮೂಲಕ ತಿಳಿಯಲಾಗಿದೆ.

ಉದಾ:–

| **ಸ್ತ್ರೀವಾಚಿ** | + | **ಪುರುಷವಾಚಿ** | = | **ವ್ಯಕ್ತಿನಾಮ** |
|---|---|---|---|---|
| ಸೀತಾ | + | ರಾಮ | = | ಸೀತಾರಾಮ |
| ಲಕ್ಷ್ಮೀ | + | ನಾರಾಯಣ | = | ಲಕ್ಷ್ಮೀನಾರಾಯಣ |
| ಉಮಾ | + | ಶಂಕರ | = | ಉಮಾಶಂಕರ |
| ರಾಧ | + | ಕೃಷ್ಣ | = | ರಾಧಾಕೃಷ್ಣ |

**೩.೭.೪. ಪುರುಷವಾಚಿ + ಸ್ತ್ರೀವಾಚಿ ನಿರ್ದಿಷ್ಟಗಳು = ಸ್ತ್ರೀವಾಚಿ ವ್ಯಕ್ತಿನಾಮ**

ವ್ಯಕ್ತಿನಾಮಗಳ ಭಾಷಿಕ ರಚನೆಯಲ್ಲಿ ಪುರುಷವಾಚಿ ನಿರ್ದಿಷ್ಟಗಳ ಜೊತೆ ಸ್ತ್ರೀವಾಚಿಯಾದ ನಿರ್ದಿಷ್ಟಗಳು ಸೇರಿ ಸ್ತ್ರೀವಾಚಿ ವ್ಯಕ್ತಿನಾಮಗಳಾಗುವುದನ್ನು ಕಾಣಬಹುದು. ಅಂದರೆ ವ್ಯಕ್ತಿನಾಮಗಳ ರಚನೆಯಲ್ಲಿ ಎರಡು ನಿರ್ದಿಷ್ಟಗಳು ಸೇರಿ ವ್ಯಕ್ತಿನಾಮಗಳಾಗುವಾಗ ಪೂರ್ವಘಟಕ ಪುರುಷವಾಷಕವೂ, ಉತ್ತರ ಘಟಕ ಸ್ತ್ರೀವಾಚಕವೂ ಸೇರಿ ಸ್ತ್ರೀವಾಚಿ ವ್ಯಕ್ತಿನಾಮದ ಪೂರ್ಣ ಘಟಕಗಳಾಗಿ ಬಳಕೆಯಲ್ಲಿವೆ.

**ಉದಾ:–**

| **ಪುರುಷವಾಚಕ** | + | **ಸ್ತ್ರೀವಾಚಕ** | = | **ಸ್ತ್ರೀವಾಚಿವ್ಯಕ್ತಿನಾಮ** |
|---|---|---|---|---|
| ನಾಗ | + | ಲಕ್ಷ್ಮಿ | = | ನಾಗಲಕ್ಷ್ಮಿ |
| ಸುಬ್ಬ | + | ಲಕ್ಷ್ಮಿ | = | ಸುಬ್ಬಲಕ್ಷ್ಮಿ |
| ಚಂದ್ರ | + | ಪ್ರಭಾ | = | ಚಂದ್ರಪ್ರಭಾ |
| ಚಂದ್ರ | + | ಕಾಂತಾ | = | ಚಂದ್ರಕಾಂತಾ |

ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಸಮಗ್ರವಾಗಿ ತಿಳಿಯುವುದಕ್ಕಿಂತ ಮೊದಲು ನಾಮವಿಜ್ಞಾನದಲ್ಲಿ ಇದುವರೆಗೂ ಅಧ್ಯಯನ ನಡೆಸಿದ ವಿದ್ವಾಂಸರು ವ್ಯಕ್ತಿನಾಮಗಳನ್ನು ಹಲವು ಪ್ರಕಾರಗಳಲ್ಲಿ ವರ್ಗೀಕರಿಸಿದ್ದಾರೆ. ಹಾಗಾಗಿ ಅವರುಗಳ ವರ್ಗೀಕರಣವನ್ನು ತಿಳಿದುಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ಸೂಕ್ತ ಎನಿಸುತ್ತದೆ.

೩.೮. ಕಲಬುರ್ಗಿ ಅವರು ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಆರು ಬಗೆಯ ವಿನ್ಯಾಸಗಳಲ್ಲಿ ತಿಳಿಸಿದ್ದಾರೆ(ಕನ್ನಡ ನಾಮ ವಿಜ್ಞಾನ, ಪು.೧೬). ಅವುಗಳನ್ನು ಪ್ರಸ್ತುತ ಈ ಅಧ್ಯಯನದ ವ್ಯಾಪ್ತಿಯಲ್ಲಿ ದೊರೆತ ವ್ಯಕ್ತಿನಾಮಗಳನ್ನು ಉದಾಹರಣೆಯಾಗಿ ಬಳಸಿಕೊಂಡು ಚರ್ಚಿಸಲಾಗಿದೆ.

**೩.೮.೧. ನಿರ್ದಿಷ್ಟವಾಚಿ ವ್ಯಕ್ತಿನಾಮ**

**ಉದಾ:–**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಮ | ಸೀತೆ |
| ಲಕ್ಷ್ಮಣ | ಲಕ್ಷ್ಮೀ |
| ಭರತ | ಗಂಗಾ |
| ಚಂದ್ರ | ತುಂಗಾ |
| ಸೂರ್ಯ | ರಾಧಾ |
| ಭೀಮ | ಉಷಾ |
| ಅರ್ಜುನ | ರಮಾ |
| ನಕುಲ | |
| ಕೃಷ್ಣ | |

**೩.೮.೨. ನಿರ್ದಿಷ್ಟ+ವಾರ್ಗಿಕವಾಚಿ ವ್ಯಕ್ತಿನಾಮ**

**ಉದಾ:–**

| **'ಅ'ಪಟ್ಟಿ** | | | | | | **'ಬ'ಪಟ್ಟಿ** | | | | |
|---|---|---|---|---|---|---|---|---|---|---|
| **ಪುರುಷವಾಚಿ** | | | | | | **ಸ್ತ್ರೀವಾಚಿ** | | | | |
| ಚಂದ್ರ | + | ಅಪ್ಪ | = | ಚಂದ್ರಪ್ಪ | | ಲಕ್ಷ್ಮೀ | + | ಅಮ್ಮ | = | ಲಕ್ಷ್ಮಮ್ಮ |
| ರಾಮ | + | ಅಪ್ಪ | = | ರಾಮಪ್ಪ | | ಗಂಗ | + | ಅಕ್ಕ | = | ಗಂಗಕ್ಕ |
| ರಂಗ | + | ಅಯ್ಯ | = | ರಂಗಯ್ಯ | | ಸೀತಾ | + | ಅವ್ವ | = | ಸೀತವ್ವ |
| ನಿಂಗ | + | ಅಣ್ಣ | = | ನಿಂಗಣ್ಣ | | ರಂಗ | + | ಅಮ್ಮ | = | ರಂಗಮ್ಮ |
| ಸಿದ್ದ | + | ಅಯ್ಯ | = | ಸಿದ್ದಯ್ಯ | | ನಿಂಗ | + | ಅಮ್ಮ | = | ನಿಂಗಮ್ಮ |
| ರಾಮ | + | ಅಣ್ಣ | = | ರಾಮಣ್ಣ | | ಸಿದ್ದ | + | ಅಮ್ಮ | = | ಸಿದ್ದಮ್ಮ |

### ೩.೮.೩. ವಿಸ್ತೃತ ನಿರ್ದಿಷ್ಟವಾಚಿ ವ್ಯಕ್ತಿನಾಮ

ಉದಾ:–

| 'ಅ' ಪಟ್ಟಿ<br>ಪುರುಷವಾಚಿ | 'ಬ' ಪಟ್ಟಿ<br>ಸ್ತ್ರೀವಾಚಿ |
|---|---|
| ಬಸವ + ರಾಜ = ಬಸವರಾಜ | ಸೀತಾ + ಲಕ್ಷ್ಮಿ = ಸೀತಾಲಕ್ಷ್ಮಿ |
| ಸೀತಾ + ರಾಮ = ಸೀತಾರಾಮ | ನಾಗ + ಲಕ್ಷ್ಮಿ = ನಾಗಲಕ್ಷ್ಮಿ |
| ಉಮಾ+ ಶಂಕರ = ಉಮಾಶಂಕರ | ಉಷಾ + ರಾಣಿ = ಉಷಾರಾಣಿ |
| ಲಕ್ಷ್ಮಿ + ಕಾಂತ = ಲಕ್ಷ್ಮೀಕಾಂತ | ಉಮಾ + ಗೌರಿ = ಉಮಾಗೌರಿ |
| | ಸುಬ್ಬ + ಲಕ್ಷ್ಮಿ = ಸುಬ್ಬಲಕ್ಷ್ಮಿ |

### ೩.೮.೪. ವಿಸ್ತೃತ ನಿರ್ದಿಷ್ಟ + ಅವಿಸ್ತೃತ ವಾರ್ಗಿಕ

ಉದಾ:–

| 'ಅ' ಪಟ್ಟಿ<br>ಪುರುಷವಾಚಿ | 'ಬ' ಪಟ್ಟಿ<br>ಸ್ತ್ರೀವಾಚಿ |
|---|---|
| ಪಾಂಡು + ರಂಗ + ಅಯ್ಯ = ಪಾಂಡುರಂಗಯ್ಯ | ನಾಗ + ಲಕ್ಷ್ಮಿ + ಅಮ್ಮ = ನಾಗಲಕ್ಷ್ಮಮ್ಮ |
| ಸೀತಾ + ರಾಮ + ಅಪ್ಪ = ಸೀತಾರಾಮಪ್ಪ | ಸುಬ್ಬ + ಲಕ್ಷ್ಮಿ + ಅಮ್ಮ = ಸುಬ್ಬಲಕ್ಷ್ಮಮ್ಮ |
| ರಾಮ + ಚಂದ್ರ + ಅಣ್ಣ = ರಾಮಚಂದ್ರಣ್ಣ | ಸಿದ್ದ + ರಾಮ + ಅಕ್ಕ = ಸಿದ್ದರಾಮಕ್ಕ |
| ರಾಧ + ಕೃಷ್ಣ + ಅಯ್ಯ = ರಾಧಕೃಷ್ಣಯ್ಯ | |
| ವಸಂತ + ಕುಮಾರ + ಅಯ್ಯ = ವಸಂತಕುಮಾರಯ್ಯ | |
| ಅಶ್ವಥ + ನಾರಾಯಣ + ಅಪ್ಪ = ಅಶ್ವಥನಾರಾಯಣಪ್ಪ | |
| ಲಕ್ಷ್ಮೀ + ನಾರಾಯಣ + ಅಪ್ಪ = ಲಕ್ಷ್ಮೀನಾರಾಯಣಪ್ಪ | |
| ಸಿದ್ದ + ರಾಮ + ಅಯ್ಯ = ಸಿದ್ದರಾಮಯ್ಯ | |

### ೩.೮.೫. ಅವಿಸ್ತೃತ ನಿರ್ದಿಷ್ಟ+ವಿಸ್ತೃತ ವಾರ್ಗಿಕ ವ್ಯಕಿನಾಮ

ಉದಾ:–

| 'ಅ' ಪಟ್ಟಿ<br>ಪುರುಷವಾಚಿ | 'ಬ' ಪಟ್ಟಿ<br>ಸ್ತ್ರೀವಾಚಿ |
|---|---|
| ರಾಮ + ಅಪ್ಪ + ಗೌಡ = ರಾಮಪ್ಪಗೌಡ | ಕರಿ + ಬಸವ + ಅಮ್ಮ = ಕರಿಬಸಮ್ಮ |
| ಕೃಷ್ಣ + ಅಯ್ಯ + ಗೌಡ = ಕೃಷ್ಣಯ್ಯಗೌಡ | ಸಣ್ಣ + ಬಸವ + ಅಮ್ಮ = ಸಣ್ಣಬಸಮ್ಮ |
| ರಂಗ + ಅಪ್ಪ + ನಾಯ್ಕ = ರಂಗಪ್ಪನಾಯ್ಕ | |
| ರಂಗ + ಸ್ವಾಮಿ + ಅಯ್ಯ = ರಂಗಸ್ವಾಮಯ್ಯ | |
| ಚಂದ್ರ + ಅಯ್ಯ + ಗೌಡ = ಚಂದ್ರಯ್ಯಗೌಡ | |

೩.೮.೬. ವಿಸ್ತೃತ ನಿರ್ದಿಷ್ಟ + ವಿಸ್ತೃತವಾರ್ಗಿಕ

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ಸೀತಾ+ರಾಮ+ಅಪ್ಪ+ಗೌಡ=ಸೀತಾರಾಮಪ್ಪಗೌಡ | ಸೀತಾ+ರಂಗ+ಅಮ್ಮ+ಗೌಡಿ=ಸೀತಾರಂಗಮ್ಮಗೌಡಿ |
| ರಾಮ+ಚಂದ್ರ+ಅಯ್ಯ+ಗೌಡ=ರಾಮಚಂದ್ರಯ್ಯಗೌಡ | ಲಕ್ಷ್ಮಿ+ನರಸ+ ಅಮ್ಮ+ಗೌಡಿ=ಲಕ್ಷ್ಮೀನರಸಮ್ಮಗೌಡಿ |
| ಲಕ್ಷ್ಮಿ+ನರಸಿಂಹ+ಸ್ವಾಮಿ+ನಾಯ್ಕ=ಲಕ್ಷ್ಮೀನರಸಿಂಹಸ್ವಾಮಿನಾಯ್ಕ | |

ಕಲಬುರ್ಗಿಯವರು ಹೇಳಿರುವ ಪ್ರಕಾರಗಳ ಜೊತೆಗೆ ಇದೇ ಮಾದರಿಯ ಇನ್ನು ಹಲವು ರೀತಿಯ ಸಾಧಿತ ರೂಪಗಳ ವರ್ಗೀಕರಣ ಮಾಡಿಕೊಳ್ಳಬಹುದಾಗಿದೆ.

೩.೮.೭. ವಿಸ್ತೃತ ವಾರ್ಗಿಕಗಳು

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ಅಪ್ಪ + ಅಣ್ಣ = ಅಪ್ಪಣ್ಣ | ಅಕ್ಕ + ಅಮ್ಮ = ಅಕ್ಕಮ್ಮ |
| ಅಪ್ಪ + ಅಯ್ಯ = ಅಪ್ಪಯ್ಯ | ಅಣ್ಣ + ಅಮ್ಮ = ಅಣ್ಣಮ್ಮ |
| ಅಯ್ಯ + ಅಪ್ಪ = ಅಯ್ಯಪ್ಪ | ಸಣ್ಣ + ಅಮ್ಮ = ಸಣ್ಣಮ್ಮ |
| ಅಣ್ಣ + ಅಪ್ಪ = ಅಣ್ಣಪ್ಪ | ದೊಡ್ಡ + ಅಮ್ಮ = ದೊಡ್ಡಮ್ಮ |
| ಅಣ್ಣ+ಅಪ್ಪ+ಸ್ವಾಮಿ = ಅಣ್ಣಪ್ಪಸ್ವಾಮಿ | ಚಿಕ್ಕ + ಅಮ್ಮ = ಚಿಕ್ಕಮ್ಮ |
| ಚಿಕ್ಕ + ಅಪ್ಪ = ಚಿಕ್ಕಪ್ಪ | ಸಣ್ಣ + ಅಕ್ಕ = ಸಣ್ಣಕ್ಕ |
| ಚಿಕ್ಕ + ಅಯ್ಯ = ಚಿಕ್ಕಯ್ಯ | ಸಣ್ಣ + ತಂಗಿ = ಸಣ್ಣತಂಗಿ |
| ಚಿಕ್ಕ + ಅಣ್ಣ = ಚಿಕ್ಕಣ್ಣ | |
| ಚಿಕ್ಕ + ಅಪ್ಪ + ಗೌಡ = ಚಿಕ್ಕಪ್ಪಗೌಡ | |
| ತಮ್ಮ + ಅಣ್ಣ = ತಮ್ಮಣ್ಣ | |
| ದೊಡ್ಡ + ಅಪ್ಪ = ದೊಡ್ಡಪ್ಪ | |
| ತಮ್ಮ + ಅಯ್ಯ = ತಮ್ಮಯ್ಯ | |

೩.೮.೮. ಅವಿಸ್ತೃತ ವಾರ್ಗಿಕ + ಅವಿಸ್ತೃತ ನಿರ್ದಿಷ್ಟ

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ದೊಡ್ಡ + ಬಸವ = ದೊಡ್ಡಬಸವ | ದೊಡ್ಡ + ಲಕ್ಷ್ಮಿ = ದೊಡ್ಡಲಕ್ಷ್ಮಿ |
| ಚಿಕ್ಕ + ರಂಗ = ಚಿಕ್ಕರಂಗ | ಸಣ್ಣ + ಲಕ್ಷ್ಮಿ = ಸಣ್ಣಲಕ್ಷ್ಮಿ |

ಸಣ್ಣ + ರಾಮ = ಸಣ್ಣರಾಮ          ಕೆಂಪ + ಲಕ್ಷ್ಮಿ = ಕೆಂಪಲಕ್ಷ್ಮಿ

ಸಣ್ಣ + ರಂಗ = ಸಣ್ಣರಂಗ

ಕೆಂಪ + ರಂಗ = ಕೆಂಪರಂಗ

ಕೆಂಪ + ರಾಜ = ಕೆಂಪರಾಜ

ಕೆಂಪ + ಮಂಜ = ಕೆಂಪಮಂಜ

**೩.೮.೯. ಅವಿಸ್ತೃತ ವಿಶೇಷಣ + ವಿಸ್ತೃತ ನಿರ್ದಿಷ್ಟ**

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ದೊಡ್ಡ + ರಾಮ+ ಕೃಷ್ಣ = ದೊಡ್ಡರಾಮಕೃಷ್ಣ | ಕರಿ + ಸುಬ್ಬ+ ಲಕ್ಷ್ಮಿ= ಕರಿಸುಬ್ಬಲಕ್ಷ್ಮಿ |
| ಚಿಕ್ಕ + ಬಸವ + ರಾಜ = ಚಿಕ್ಕಬಸವರಾಜ | ದೊಡ್ಡ+ ನಾಗ + ಲಕ್ಷ್ಮಿ= ದೊಡ್ಡನಾಗಲಕ್ಷ್ಮಿ |
| ದೊಡ್ಡ + ಶಿವ + ರಾಮ = ದೊಡ್ಡಶಿವರಾಮ | |
| ಕರಿ + ಬಸವ + ರಾಜ = ಕರಿಬಸವರಾಜ | |

ಈ ಮೇಲಿನ ಪಟ್ಟಿಯಲ್ಲಿರುವ ವ್ಯಕ್ತಿನಾಮಗಳಲ್ಲಿ ಪೂರ್ವಘಟಕದಲ್ಲಿ ವಿಶೇಷಣಗಳು ಬಂದಾಗ ಈ ನಿಯಮ ಅನ್ವಯವಾಗುತ್ತದೆ.

**೩.೮.೧೦. ಅವಿಸ್ತೃತ ವಾರ್ಗಿಕ + ಅವಿಸ್ತೃತ ನಿರ್ದಿಷ್ಟ + ಅವಿಸ್ತೃತ ವಾರ್ಗಿಕ**

**ಉದಾ:–**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಣ್ಣ + ರಂಗ + ಅಯ್ಯ = ಸಣ್ಣರಂಗಯ್ಯ | ಸಣ್ಣ + ರಂಗ + ಅಮ್ಮ= ಸಣ್ಣರಂಗಮ್ಮ |
| ಚಿಕ್ಕ + ತಿಮ್ಮ + ಅಣ್ಣ = ಚಿಕ್ಕತಿಮ್ಮಣ್ಣ | ದೊಡ್ಡ+ ಬಸವ+ ಅಮ್ಮ= ದೊಡ್ಡಬಸಮ್ಮ |
| ದೊಡ್ಡ + ನಿಂಗ + ಅಯ್ಯ = ದೊಡ್ಡನಿಂಗಯ್ಯ | ಕೆಂಪ+ ಲಕ್ಷ್ಮಿ + ಅಮ್ಮ= ಕೆಂಪಲಕ್ಷ್ಮಮ್ಮ |
| ಕರಿ + ಬಸವ + ಅಯ್ಯ = ಕರಿಬಸವಯ್ಯ | ಕರಿ + ಬಸವ+ ಅಮ್ಮ= ಕರಿಬಸಮ್ಮ |

**೩.೯.** ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ನಿರ್ದಿಷ್ಟ ಮತ್ತು ವಾರ್ಗಿಕಗಳ ಜೊತೆಗೆ ರಚನೆಯ ದೃಷ್ಟಿಯಿಂದ ಆಕೃತಿಮಾಗಳ ನೆಲೆಯಲ್ಲಿಯೂ ಕೂಡ ನೋಡಬಹುದಾಗಿದೆ. ಸಾಮನ್ಯವಾಗಿ "ಅರ್ಥವತ್ತಾದ ಶಬ್ದಗಳನ್ನು ನಿರ್ಮಿಸುವಲ್ಲಿ ವ್ಯವಸ್ಥಿತವಾಗಿ ಬಳಕೆಗೊಳ್ಳುವ ಆಕೃತಿಮಾಗಳ ಅಧ್ಯಯನವು, ಆಕೃತಿಮಾ ಶಾಸ್ತ್ರದಲ್ಲಿ ಒಳಗೊಳ್ಳುತ್ತದೆ. ಯಾವುದೇ ಮಹತ್ವ ಪೂರ್ಣ ಧ್ವನಿಘಟಕ ಅಥವಾ ಧ್ವನಿ ಘಟಕಗಳ ಸಮೂಹ, ಅರ್ಥವನ್ನು ನೀಡುತ್ತಿದ್ದರೆ ಅಂತಹ ಅರ್ಥಪೂರ್ಣ ಘಟಕಗಳನ್ನು ಆಕೃತಿಮಾ ಎನ್ನುತ್ತೇವೆ"(ಸಂಗಮೇಶ ಸವದತ್ತಿಮಠ, ೨೦೧೩, ಕನ್ನಡ ಭಾಷಾ ವ್ಯಾಸಂಗ, ಪು.೧೪೧). ಹಾಗಾಗಿ

ಈ ರೀತಿಯ ಅರ್ಥವನ್ನು ಹೊಂದಿರುವ ವ್ಯಕ್ತಿನಾಮಗಳ ಸ್ವರೂಪವನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

**೩.೯.೧. ಒಂದು ಆಕೃತಿಮಾ ವ್ಯಕ್ತಿನಾಮಗಳು**

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರವಿ | ಸೀತೆ |
| ತೇಜ | ಶ್ವೇತ |
| ಸೂರ್ಯ | ಸುಮ |
| ಚಂದ್ರ | ಲಕ್ಷ್ಮೀ |
| ಕೃಷ್ಣ | ಲತಾ |
| ರಾಮ | |

**೩.೯.೨. ಎರಡು ಆಕೃತಿಮಾದ ವ್ಯಕ್ತಿ ನಾಮಗಳು**

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶಿವ + ಶಂಕರ = ಶಿವಶಂಕರ | ರಾಧ + ಲಕ್ಷ್ಮಿ = ರಾಧಲಕ್ಷ್ಮಿ |
| ರಾಜ + ಕುಮಾರ = ರಾಜಕುಮಾರ | ಸೀತಾ + ಲಕ್ಷ್ಮಿ = ಸೀತಾಲಕ್ಷ್ಮಿ |
| ಗಂಗಾ + ಧರ = ಗಂಗಾಧರ | ಕರಿಯ + ಅಮ್ಮ = ಕರಿಯಮ್ಮ |
| ರಂಗ + ಅಯ್ಯ = ರಂಗಯ್ಯ | ತಾರಾ + ಮಣಿ = ತಾರಾಮಣಿ |
| ರಾಮ + ಚಂದ್ರ = ರಾಮಚಂದ್ರ | ಸುಧಾ + ರಾಣಿ = ಸುಧಾರಣಿ |
| ಚಂದ್ರ + ಶೇಖರ = ಚಂದ್ರಶೇಖರ | ರಮ್ಯ + ಕೃಷ್ಣ = ರಮ್ಯಕೃಷ್ಣ |

**೩.೯.೩. ಮೂರು ಆಕೃತಿಮಾದ ವ್ಯಕ್ತಿನಾಮಗಳು**

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶಿವ + ರಾಮ + ಅಯ್ಯ = ಶಿವರಾಮಯ್ಯ | ದೊಡ್ಡ+ ರಂಗ + ಅಮ್ಮ= ದೊಡ್ಡರಂಗಮ್ಮ |
| ಸಿದ್ದ + ರಾಮ + ಅಯ್ಯ = ಸಿದ್ದರಾಮಯ್ಯ | ಶಿವ + ರಾಮ+ ಅಕ್ಕ = ಶಿವರಾಮಕ್ಕ |
| ದೊಡ್ಡ + ರಾಮ + ಅಯ್ಯ = ದೊಡ್ಡರಾಮಯ್ಯ | ಸಿದ್ದ + ಗಂಗಾ+ ಅಮ್ಮ= ಸಿದ್ದಗಂಗಮ್ಮ |
| ಶಿವ + ರಾಜ + ಕುಮಾರ= ಶಿವರಾಜಕುಮಾರ | ಸಿದ್ದ + ಲಿಂಗ + ಅಮ್ಮ= ಸಿದ್ದಲಿಂಗಮ್ಮ |
| ರಾಮ + ಕೃಷ್ಣ + ಅಪ್ಪ = ರಾಮಕೃಷ್ಣಪ್ಪ | ಚಿಕ್ಕ + ಲಕ್ಷ್ಮೀ + ಅಮ್ಮ= ಚಿಕ್ಕಲಕ್ಷ್ಮಮ್ಮ |

೩.೯.೪. ನಾಲ್ಕು ಆಕೃತಿಮಾದ ವ್ಯಕ್ತಿನಾಮಗಳು

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ದೊಡ್ಡ +ತಿಮ್ಮ+ರಾಯ+ಅಪ್ಪ=ದೊಡ್ಡತಿಮ್ಮರಾಯಪ್ಪ | ಚಿಕ್ಕ+ನರಸ+ಅಮ್ಮ+ನಾಯಕಿತಿ=ಚಿಕ್ಕನರಸಮ್ಮನಾಯಕಿತಿ |
| ಚಿಕ್ಕ+ನರಸ+ಅಪ್ಪ+ನಾಯಕ=ಚಿಕ್ಕನರಸಪ್ಪನಾಯಕ | ಸಣ್ಣ+ತೊಳಸ+ಅಮ್ಮ+ಗೌಡಿ=ಸಣ್ಣತೊಳಸಮ್ಮಗೌಡಿ |
| ಚಿಕ್ಕ+ಮಲ್ಲ+ಅಪ್ಪ+ಗೌಡ=ಚಿಕ್ಕಮಲ್ಲಪ್ಪಗೌಡ | |

ಈ ಮೇಲಿನ ಉದಾಹರಣೆಗಳಲ್ಲಿನ ವ್ಯಕ್ತಿನಾಮ ಮಾದರಿಗಳು ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಬಳಕೆಯಾಗಿರುವ ಮಾದರಿಗಳಾಗಿವೆ. ಪ್ರಸ್ತುತ ಸಂದರ್ಭದ ಸ್ತ್ರೀವಾಚಕಗಳಲ್ಲಿ ಇಂತಹ ಮಾದರಿಗಳನ್ನು ಕಾಣಲಾಗುವುದಿಲ್ಲ. ಪುರುಷವಾಚಿಯಾಗಿ ಇಂದಿಗೂ ಇವುಗಳು ಬಳಕೆಯಾಗುತ್ತಿವೆ.

೩.೧೦. ರಾಮಕೃಷ್ಣ(೨೦೦೦) ಅವರು ಕನ್ನಡ ಮಾತನಾಡುವ ಹಿಂದೂಗಳಲ್ಲಿ ಏಕಾಕ್ಷರಗಳಿಲ್ಲ. ಎರಡರಿಂದ ಒಂಬತ್ತು ಅಕ್ಷರಗಳ ಅಕ್ಷರ ವಿನ್ಯಾಸವಿರುವ ಹೆಸರುಗಳುಂಟು(ಭಾಷಾ ವೀಕ್ಷಣ, ಪು.೫೫) ಎಂದಿದ್ದಾರೆ. ಆದರೆ ಇಂದು ಒಂದು ಅಕ್ಷರವಿರುವ ಹೆಸರುಗಳು ವ್ಯಕ್ತಿನಾಮಗಳಲ್ಲಿ ನಿರ್ದೇಶಿತವಾಗುತ್ತಿರುವುದನ್ನು ಗುರುತಿಸಲಾಗಿದೆ. ಆದ್ದರಿಂದ ಇವರು ಹೇಳಿರುವ ಮಾದರಿಗಳ ಜೊತೆಗೆ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಹೆಸರುಗಳನ್ನು ಮಾದರಿಗಳಾಗಿ ಬಳಸಿಕೊಂಡು ರಾಚನಿಕ ಸ್ವರೂಪ ತಿಳಿಯಬಹುದಾಗಿದೆ.

೩.೧೦.೧. ಒಂದು ಅಕ್ಷರದ ವ್ಯಕ್ತಿನಾಮಗಳು

ಉದಾ:-

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ಶ್ರೀ | ಹೂ |

ಈ ಮೇಲಿನ ಪುರುಷ ಮತ್ತು ಸ್ತ್ರೀವಾಚಿ ನಾಮಗಳಾದ 'ಶ್ರೀ' ಮತ್ತು 'ಹೂ' ಎಂಬ ಒಂದು ಅಕ್ಷರದ ಹೆಸರುಗಳು ಮಾತ್ರ ದೊರೆತಿದ್ದು ಇವುಗಳ ಹೊರತಾಗಿ ಬೇರಾವ ಹೆಸರುಗಳು ದೊರೆತಿಲ್ಲ.

೩.೧೦.೨. ಎರಡಕ್ಷರದ ವ್ಯಕ್ತಿನಾಮಗಳು

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ರವಿ | ಸಿರಿ |
| ರಾಮ | ಸುಮ |

| | |
|---|---|
| ಭೀಮ | ರಮಾ |
| ಸೋಮ | ಉಮಾ |
| ಚಂದ್ರ | ಭಾಮಾ |
| ತೇಜ | ಲತಾ |
| ರಕ್ಷ | ರಕ್ಷಾ |
| ಅಭಿ | ರುಮಾ |
| ಮೇಘ | ಮೀನಾ |
| | ವೀಣಾ |
| | ಆಶಾ |
| | ಶೀಲಾ |
| | ದೀಕ್ಷಾ |
| | ಸುಮ |

**೩.೧೦.೩. ಮೂರಕ್ಷರದ ವ್ಯಕ್ತಿನಾಮಗಳು**

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮಾರುತಿ | ಮೇಘನಾ |
| ಮಹೇಶ | ಮಯೂರಿ |
| ಸುರೇಶ | ಮಾನಿನಿ |
| ರಮೇಶ | ಮಾನಸ |
| ರಮಣ | ರಮಣ |
| ಕುಮಾರ | ವರುಣ |
| ಭವನ್ | ಭಾವನ |
| ಭರತ್ | ಭಾರತಿ |
| ಅಧಿತ್ | ಅಧಿತಿ |
| | ನಯನ |
| | ಮಮತಾ |
| | ಪವಿತ್ರ |

**೩.೧೦.೪. ನಾಲ್ಕಕ್ಷರದ ವ್ಯಕ್ತಿನಾಮಗಳು**

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬಿಳಿಗಿರಿ | ಸುಹಾಸಿನಿ |
| ನಟರಾಜ | ಸುಮಲತಾ |
| ಸೀತಾರಾಮ | ಚಾರುಲತಾ |
| ಲೋಕನಾಥ | ಚಂದ್ರಕಲಾ |
| ಮಂಜುನಾಥ | ಸಿದ್ದಗಂಗಾ |
| ಷಡಕ್ಷರಿ | ರಾಜಲಕ್ಷ್ಮೀ |
| ಜನಾರ್ಧನ | ವರಲಕ್ಷ್ಮೀ |
| ನಾಗರಾಜ | ಉಮಾದೇವಿ |
| ನರಸಿಂಹ | ಉಷಾರಾಣಿ |
| ರಂಗಧಾಮ | |

**೩.೧೦.೫. ಐದಕ್ಷರದ ವ್ಯಕ್ತಿನಾಮಗಳು**

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ವರದರಾಜ | ಸಣ್ಣತಾಯಮ್ಮ |
| ಬಸವರಾಜ | ಕರಿಬಸಮ್ಮ |
| ರಾಜಕುಮಾರ | ಸುವರ್ಣಗೌರಿ |
| ಶಿವಕುಮಾರ | ಮಮತಾರಾಣಿ |
| ರಾಜಶೇಖರ | ಮಂಗಳಗೌರಿ |
| ಚಂದ್ರಶೇಖರ | ಸುಬ್ಬಲಕ್ಷ್ಮಮ್ಮ |
| ರಂಗದಾಮಯ್ಯ | ಪುಟ್ಟಹಾಲಮ್ಮ |
| ರಂಗಶಾಮಯ್ಯ | |

೩.೧೦.೬. ಆರಕ್ಷರದ ವ್ಯಕ್ತಿನಾಮಗಳು

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಂಗನಾಥರಾಯ | ಪುಟ್ಟನರಸಮ್ಮ |
| ರಂಗನಾಥಸ್ವಾಮಿ | ಲಕ್ಷ್ಮೀನರಸಮ್ಮ |
| ಸೀತಾರಾಮಶೆಟ್ಟಿ | ವೆಂಕಟಲಕ್ಷ್ಮಮ್ಮ |
| ಲಕ್ಷ್ಮೀನಾರಾಯಣ | ಮಹಾದೇವಮ್ಮ |
| ವೆಂಕಟರಮಣ | ವೆಂಕಟರತ್ನಮ್ಮ |
| ಶಂಭುಲಿಂಗಸ್ವಾಮಿ | ಮಂಗಳಗೌರಮ್ಮ |
| ವೆಂಕಟರತ್ನಪ್ಪ | ಬಸವಲಿಂಗಮ್ಮ |

೩.೧೦.೭. ಏಳಕ್ಷರದ ವ್ಯಕ್ತಿನಾಮಗಳು

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬಾಲಶ್ರೀನಿವಾಸಯ್ಯ | ವೆಂಕಟರಮಣಮ್ಮ |
| ಲಕ್ಷ್ಮೀನಾರಾಯಣಪ್ಪ | ಲಕ್ಷ್ಮೀಮಹಾದೇವಮ್ಮ |
| ಸೂರ್ಯನಾರಾಯಣಪ್ಪ | |
| ಚಂದ್ರಶೇಖರ ಗೌಡ | |
| ಮಲ್ಲಿಕಾರ್ಜುನಗೌಡ | |

೩.೧೦.೮. ಎಂಟಕ್ಷರದ ವ್ಯಕ್ತಿನಾಮಗಳು

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ತುಳಸೀವಾಸುದೇವಯ್ಯ | (ದೊರೆತಿಲ್ಲ) |
| ಬಾಲಗಂಗಾಧರನಾಥ | |
| ವೀರನಾರಾಯಣ ಸ್ವಾಮಿ | |
| ಸೂರ್ಯನಾರಾಯಣಸ್ವಾಮಿ | |

**೩.೧೦.೯. ಒಂಬತ್ತಕ್ಷರದ ವ್ಯಕ್ತಿನಾಮಗಳು**

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕರಿವರದರಾಯಸ್ವಾಮಿ | (ದೊರೆತಿಲ್ಲ) |
| ಲಕ್ಷ್ಮೀನರಸಿಂಹಸ್ವಾಮಯ್ಯ | |
| ಕದ್ರಿನರಸಿಂಹನಾಯಕ | |
| ಸೀಬಿನರಸಿಂಹ ನಾಯಕ | |

**೩.೧೦.೧೦. ಹತ್ತು ಅಕ್ಷರದ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯಲ್ಲಿ ಹತ್ತು ಅಕ್ಷರಗಳಿಂದ ಕೂಡಿದ ವ್ಯಕ್ತಿನಾಮಗಳು ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿವೆ. ಅವುಗಳು ವಾರ್ಗಿಕಗಳನ್ನು ಒಳಗೊಂಡು ರಚನೆಯಾದವುಗಳಾಗಿವೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸೂರ್ಯನಾರಾಯಣಸ್ವಾಮಿಗೌಡ | |
| ಲಕ್ಷ್ಮೀನಾರಾಯಣಪ್ಪ ನಾಯಕ | |
| ದಂಡಿನಾರಾಯಣಪ್ಪ ನಾಯಕ | |
| ಸೀಬಿ ನರಸಿಂಹಪ್ಪನಾಯಕ | |

ಈ ಮೇಲಿನ ಮಾದರಿಗಳು ಶಾಸನಗಳಲ್ಲಿ ಬಳಕೆಯಾದವುಗಳಾಗಿವೆ. ಆದರೆ ಈ ಮಾದರಿಗಳು ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಕಂಡುಬಂದಿಲ್ಲ.

**೩.೧೧. ನಿರ್ದಿಷ್ಟ 'ಅ' ಕಾರಾಂತ್ಯವು ವಾರ್ಗಿಕ ಸೇರ್ಪಡೆಯಿಂದ ದೀರ್ಘತ್ವವನ್ನು ಪಡೆಯುತ್ತದೆ.** ಅಂದರೆ ವ್ಯಕ್ತಿನಾಮದ ಪೂರ್ವಘಟಕದ ಅಂತ್ಯದಲ್ಲಿ 'ಅ'ಕಾರವಿದ್ದು, ಉತ್ತರ ಘಟಕದಲ್ಲಿ ವಾರ್ಗಿಕಗಳು ಬಂದಾಗ ಪೂರ್ವ ಘಟಕದಲ್ಲಿನ ಹ್ರಸ್ವ 'ಅ' ಕಾರವು ದೀರ್ಘಾಕ್ಷರ(ಆ)ವಾಗುತ್ತದೆ. ಆದರೆ ಈ ನಿಯಮವು ಎಲ್ಲಾ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲ ಬದಲಾಗಿ ಬಳಕೆಯ ನೆಲೆಯಲ್ಲಿ ಹೆಚ್ಚು ಕಂಡುಬರುವಂತಹದ್ದಾಗಿದೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಮ + ನಾಯ್ಕ = ರಾಮಾನಾಯ್ಕ | ಸೀತ + ದೇವಿ = ಸೀತಾದೇವಿ |
| ಮಾದವ+ ರಾವ್ = ಮಾದವಾರಾವ್ | ಮಂಗಳ+ ದೇವಿ = ಮಂಗಳಾದೇವಿ |

| | | | | | | | | | |
|---|---|---|---|---|---|---|---|---|---|
| ತಿಮ್ಮ | + | ನಾಯಕ | = | ತಿಮ್ಮಾನಾಯಕ | ಉಮ | + | ದೇವಿ | = | ಉಮಾದೇವಿ |
| ಕೃಷ್ಣ | + | ನಾಯ್ಕ | = | ಕೃಷ್ಣಾನಾಯ್ಕ | ರಂಗ | + | ನಾಯಕಿ | = | ರಂಗಾನಾಯಕಿ |
| ರಾಮ | + | ಶಾಸ್ತ್ರೀ | = | ರಾಮಾಶಾಸ್ತ್ರೀ | ಲಕ್ಷ್ಮಿ | + | ದೇವಿ | = | ಲಕ್ಷ್ಮೀದೇವಿ |
| | | | | | ನೇತ್ರ | + | ವತಿ | = | ನೇತ್ರಾವತಿ |
| | | | | | ವೇದ | + | ವತಿ | = | ವೇದಾವತಿ |

೩.೧೨. ಸ್ತ್ರೀವಾಚಿ ನಿರ್ದಿಷ್ಟ ವ್ಯಕ್ತಿನಾಮದ ಅಂತ್ಯದಲ್ಲಿ 'ಇ' ಕಾರವಿದ್ದು, ವಾರ್ಗಿಕಗಳಲ್ಲಿ ಸಂಬಂಧ ವಾಚಕಗಳು ಬಂದರೆ 'ಇ' ಕಾರ ಲೋಪವಾಗುತ್ತದೆ. ಅಂದರೆ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಹೆಚ್ಚಾಗಿ ಈ ಬದಲಾವಣೆ ಕಂಡುಬರುತ್ತಿದ್ದು, ಕೆಲವು ಸಂದರ್ಭದಲ್ಲಿ ಪುರುಷವಾಚಿ ವ್ಯಕ್ತಿನಾಮಗಳಲ್ಲಿಯೂ ಬಳಕೆಯಾಗುತ್ತದೆ. ಪೂರ್ವಘಟಕದ ಅಂತ್ಯದಲ್ಲಿ 'ಇ' ಕಾರವಿದ್ದು ಉತ್ತರ ಘಟಕದಲ್ಲಿ ಸಂಬಂಧವಾಚಿ ವಾರ್ಗಿಕಗಳು ಬಂದಾಗ ಪೂರ್ವ ಘಟಕದ ಅಂತ್ಯದ 'ಇ' ಕಾರ ಬಿಟ್ಟುಹೋಗುತ್ತದೆ.

ಉದಾ:

**ಸ್ತ್ರೀವಾಚಕ ವ್ಯಕ್ತಿನಾಮಗಳು**

| **ನಿರ್ದಿಷ್ಟ** | + | **ವಾರ್ಗಿಕ** | = | **ವ್ಯಕ್ತಿನಾಮ (ಪೂರ್ಣಘಟಕ)** |
|---|---|---|---|---|
| ಲಕ್ಷ್ಮಿ | + | ಅಮ್ಮ | = | ಲಕ್ಷ್ಮಮ್ಮ |
| ಗೌರಿ | + | ಅಕ್ಕ | = | ಗೌರಕ್ಕ |
| ರುಕ್ಮಿಣಿ | + | ಅಮ್ಮ | = | ರುಕ್ಮಿಣಮ್ಮ |
| ಪಾರ್ವತಿ | + | ಅಮ್ಮ | = | ಪಾರ್ವತಮ್ಮ |
| ಸಾವಿತ್ರಿ | + | ಅಮ್ಮ | = | ಸಾವಿತ್ರಮ್ಮ |

**ಪುರುಷವಾಚಿ ವ್ಯಕ್ತಿನಾಮಗಳು**

| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
|---|---|---|---|---|
| ಲಕ್ಷ್ಮಿ | + | ಅಯ್ಯ | = | ಲಕ್ಷ್ಮಯ್ಯ |

೩.೧೩. ವ್ಯಕ್ತಿನಾಮಗಳ ಪೂರ್ವ ಘಟಕದ ಅಂತ್ಯದಲ್ಲಿ 'ವ' ಕಾರವಿದ್ದು ಯಾವುದೇ ಬಂಧುವಾಚಕ ವಾರ್ಗಿಕಗಳು ಸೇರಿದರೆ ಅಲ್ಲಿ 'ವ' ಕಾರ ಲೋಪವಾಗುತ್ತದೆ. ಈ ರೀತಿಯ ವ್ಯತ್ಯಾಸ ಕೇವಲ 'ಬಸವ' ಎಂಬ ನಿರ್ದಿಷ್ಟ ಘಟಕದಲ್ಲಿ ಮಾತ್ರ ಬದಲಾವಣೆ ಆಗುವಂತಹದ್ದು (ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಂಗಳು, ಪು.೨೨). ಬೇರೆ ಸಂದರ್ಭಗಳಲ್ಲಿ ಈ ವ್ಯತ್ಯಾಸ ಕಾಣಲಾಗದು.

ಉದಾ:

| **'ಅ'ಪಟ್ಟಿ** | | | | | **'ಬ'ಪಟ್ಟಿ** | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| ಬಸವ | + | ಅಪ್ಪ | = | ಬಸವಪ್ಪ>ಬಸಪ್ಪ | ಬಸವ | + | ಅಮ್ಮ | = | ಬಸಮ್ಮ |
| ಬಸವ | + | ಅಯ್ಯ | = | ಬಸವಯ್ಯ>ಬಸಯ್ಯ | ಬಸವ | + | ಅಕ್ಕ | = | ಬಸಕ್ಕ |

ಬಸವ + ಅಣ್ಣ = ಬಸವಣ್ಣ>ಬಸಣ್ಣ    ಬಸವ + ಅವ್ವ = ಬಸವ್ವ

ಬಸವ + ಅಪ್ಪ+ಶಾಸ್ತ್ರಿ = ಬಸವಪ್ಪಶಾಸ್ತ್ರಿ>ಬಸಪ್ಪಶಾಸ್ತ್ರಿ

**೩.೧೪. ವಾರ್ಗಿಕ**

ಈಗಾಗಲೇ ತಿಳಿದಿರುವಂತೆ ವ್ಯಕ್ತಿನಾಮದ ಉತ್ತರ ಘಟಕವನ್ನು ನಾಮವಿಜ್ಞಾನದ ಪರಿಭಾಷೆಯಲ್ಲಿ ವಾರ್ಗಿಕ(ಜೆನೆರಿಕ್) ಎಂದು ಕರೆಯಲಾಗುತ್ತದೆ. ಜೆನೆರಿಕ್ ಎಂಬುದಕ್ಕೆ ನಿಘಂಟಿನಲ್ಲಿ ಜಾತಿ ವಿಶೇಷ್ಯ ಎಂಬ ಅರ್ಥವಿದೆ. ನಾಮಧ್ಯಯನದಲ್ಲಿ ಜಾತಿವಾಚಿ, ವೃತ್ತಿವಾಚಿ, ಬಂಧುವಾಚಿ, ಅಧಿಕಾರವಾಚಿ, ಗೌರವವಾಚಿಗಳಲ್ಲಿ ಹೇಗೆ ಬಳಸಿದ್ದೇವೆಯೋ ಹಾಗೆಯೇ ಗುಣವಿಶೇಷಣಗಳನ್ನು ವಾರ್ಗಿಕವಾಗಿ ಬಳಕೆ ಮಾಡಲಾಗಿದೆ. ವಾರ್ಗಿಕಗಳು ಸ್ವತಂತ್ರವಾದ ಘಟಕಗಳಾಗಿ ಆರಂಭದ ಕಾಲದಲ್ಲಿ ಬಂದಿರಲಾರವು. ನಿರ್ದಿಷ್ಟದೊಡನೆ ಸೇರಿ ಪೂರ್ಣಘಟಕಗಳಾಗಿರುವ ಸಾಧ್ಯತೆ ಇದೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಹಲವು ವಾರ್ಗಿಕಗಳು ಸೇರಿ ವ್ಯಕ್ತಿ ನಾಮಗಳಾಗಿರುವುದನ್ನು ನೋಡಲಾಗಿದೆ. ಈ ಎಲ್ಲಾ ಅಂಶಗಳನ್ನು ಕುರಿತಂತೆ ವಾರ್ಗಿಕಗಳು ಯಾವ ಯಾವ ಸಂದರ್ಭದಲ್ಲಿ ಯಾವ ಸ್ವರೂಪದಲ್ಲಿರುತ್ತವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳು ಹಲವಾರು ಪ್ರಕಾರಗಳಲ್ಲಿ ಬಳಕೆಯಾಗುತ್ತಿವೆ. ಅವುಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿಕೊಂಡು ಇಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

**೩.೧೪.೧. ಸಂಬಂಧ ವಾಚಕ ವಾರ್ಗಿಕಗಳು ನಿರ್ದಿಷ್ಟದ ಜೊತೆಗೆ ಬಳಕೆಯಾಗುವಂತಹದ್ದು**

ಆರಂಭದಲ್ಲಿ ವ್ಯಕ್ತಿನಾಮಗಳು ಕೇವಲ ಅನ್ವರ್ಥ ನಾಮಗಳಾಗಿ ಅಥವಾ ಅಂಕಿತ ನಾಮಗಳಾಗಿ ಬಳಕೆಯಾಗುತ್ತಿದ್ದವು. ಕಾಲಾನಂತರದಲ್ಲಿ ಅವುಗಳಿಗೆ ಸಂಬಂಧ ಸೂಚಕಗಳು ಸೇರಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ. ನಿರ್ದಿಷ್ಟ ವ್ಯಕ್ತಿನಾಮಗಳಿಗೆ ಯಾವ ಯಾವ ಸಂಬಂಧವಾಚಿ ವಾರ್ಗಿಕಗಳು ಸೇರಿ ಪೂರ್ಣ ವ್ಯಕ್ತಿನಾಮಗಳಾಗುತ್ತದೆ ಎಂಬುದನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಅಪ್ಪ:–**

| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
|---|---|---|---|---|
| ರಂಗ | + | ಅಪ್ಪ | = | ರಂಗಪ್ಪ |
| ನಾಗ | + | ಅಪ್ಪ | = | ನಾಗಪ್ಪ |
| ಶಂಕರ | + | ಅಪ್ಪ | = | ಶಂಕರಪ್ಪ |
| ಸೂರ | + | ಅಪ್ಪ | = | ಸೂರಪ್ಪ |
| ಶಿವ | + | ಅಪ್ಪ | = | ಶಿವಪ್ಪ |
| ಸಿದ್ದ | + | ಅಪ್ಪ | = | ಸಿದ್ದಪ್ಪ |
| ನಿಂಗ | + | ಅಪ್ಪ | = | ನಿಂಗಪ್ಪ |
| ಮಲ್ಲ | + | ಅಪ್ಪ | = | ಮಲ್ಲಪ್ಪ |

| | | | | |
|---|---|---|---|---|
| ಅಶ್ವಥ | + | ಅಪ್ಪ | = | ಅಶ್ವಥಪ್ಪ |
| ಚಂದ್ರ | + | ಅಪ್ಪ | = | ಚಂದ್ರಪ್ಪ |
| ರಾಮ | + | ಅಪ್ಪ | = | ರಾಮಪ್ಪ |
| ಅರ್ಜುನ | + | ಅಪ್ಪ | = | ಅರ್ಜುನಪ್ಪ |

**ಅಣ್ಣ:–**

| | | | | |
|---|---|---|---|---|
| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
| ನಾಗ | + | ಅಣ್ಣ | = | ನಾಗಣ್ಣ |
| ಬೋರ | + | ಅಣ್ಣ | = | ಬೋರಣ್ಣ |
| ಬಸವ | + | ಅಣ್ಣ | = | ಬಸವಣ್ಣ |
| ನರಸಿಂಹ | + | ಅಣ್ಣ | = | ನರಸಿಂಹಣ್ಣ |
| ಸಿದ್ದಲಿಂಗ | + | ಅಣ್ಣ | = | ಸಿದ್ದಲಿಂಗಣ್ಣ |
| ಕೃಷ್ಣ | + | ಅಣ್ಣ | = | ಕೃಷ್ಣಣ್ಣ |
| ರಾಜ | + | ಅಣ್ಣ | = | ರಾಜಣ್ಣ |
| ಕದ್ರ | + | ಅಣ್ಣ | = | ಕದ್ರಣ್ಣ |
| ತಿಮ್ಮ | + | ಅಣ್ಣ | = | ತಿಮ್ಮಣ್ಣ |
| ಭೀಮ | + | ಅಣ್ಣ | = | ಭೀಮಣ್ಣ |
| ರುದ್ರ | + | ಅಣ್ಣ | = | ರುದ್ರಣ್ಣ |
| ಗಂಗ | + | ಅಣ್ಣ | = | ಗಂಗಣ್ಣ |

**ಅಯ್ಯ:–**

| | | | | |
|---|---|---|---|---|
| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
| ರಾಮ | + | ಅಯ್ಯ | = | ರಾಮಯ್ಯ |
| ರಂಗ | + | ಅಯ್ಯ | = | ರಂಗಯ್ಯ |
| ರಂಗನಾಥ | + | ಅಯ್ಯ | = | ರಂಗನಾಥಯ್ಯ |
| ನಾಗ | + | ಅಯ್ಯ | = | ನಾಗಯ್ಯ |
| ವೆಂಕಟ | + | ಅಯ್ಯ | = | ವೆಂಕಟಯ್ಯ |
| ನರಸ | + | ಅಯ್ಯ | = | ನರಸಯ್ಯ |
| ಸಿದ್ದಲಿಂಗ | + | ಅಯ್ಯ | = | ಸಿದ್ದಲಿಂಗಯ್ಯ |
| ನಿಂಗ | + | ಅಯ್ಯ | = | ನಿಂಗಯ್ಯ |
| ಚಿದಾನಂದ | + | ಅಯ್ಯ | = | ಚಿದಾನಂದಯ್ಯ |

| | | | | |
|---|---|---|---|---|
| ಚಂದ್ರ | + | ಅಯ್ಯ | = | ಚಂದ್ರಯ್ಯ |
| ಹನುಮ | + | ಅಯ್ಯ | = | ಹನುಮಯ್ಯ |
| ಗಂಗ | + | ಅಯ್ಯ | = | ಗಂಗಯ್ಯ |
| ಮಲ್ಲ | + | ಅಯ್ಯ | = | ಮಲ್ಲಯ್ಯ |

**ತಮ್ಮ:–**

'ತಮ್ಮ' ಬಂಧುವಾಚಿ ವಾರ್ಗಿಕಗಳ ಬಳಕೆ ಪ್ರಸ್ತುತ ಸಂದರ್ಭದಲ್ಲಿ ಬಳಕೆಯಲ್ಲಿ ಇರುವುದು ಕಂಡುಬಂದಿಲ್ಲ. ಆದರೆ ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿತ್ತು ಎಂಬುದನ್ನು ಚಿದಾನಂದಮೂರ್ತಿ ಎಂ., ಅವರು ಹೇಳಿದ್ದಾರೆ. "ಹಿಂದೆ ಕರ್ನಾಟಕದಲ್ಲಿ 'ತಮ್ಮ' ಕೊನೆಯಲ್ಲಿರುವ ಹೆಸರುಗಳು ಪ್ರಚಲಿತದಲ್ಲಿದ್ದವು. ಬೈರಿತಮ್ಮ, ಮಾರತಮ್ಮ, ಗೌಡಿತಮ್ಮ, ಮಲ್ಲಿತಮ್ಮ, ಮಸಣಿತಮ್ಮ(ಇನ್ನೂ ಮುಂತಾದ ಹೆಸರುಗಳು ಶಾಸನಗಳಲ್ಲಿ ದೊರಕುತ್ತವೆ) ಎಂಬ ಪ್ರಸಿದ್ದ ಹೊಯ್ಸಳ ಶಿಲ್ಪಿಗಳಿದ್ದರು. ಇಂತಹ ಹೆಸರುಗಳೆಲ್ಲವನ್ನು ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ತಾವು ಕೆತ್ತಿದ ಅನೇಕ ವಿಗ್ರಹಗಳ ಮೇಲೆ ಕೊರೆದು ಕೊಂಡಿದ್ದಾರೆ. 'ತಮ್ಮ' ಕೊನೆಯಲ್ಲಿರುವ ಹೆಸರುಗಳು ಈಗ ಬಹುತೇಕ ಲುಪ್ತವಾಗಿದ್ದರೂ ಹಾಸನ ತಾಲ್ಲೂಕು, ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ಹರಿಜನರಲ್ಲಿ ಈಗಲೂ ಪುಟ್ಟತಮ್ಮ, ಬುಕ್ಕತಮ್ಮ ಮುಂತಾದ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ"(ಚಿದಾನಂದ ಮೂರ್ತಿ ಎಂ., ೨೦೦೨, ವಾಗರ್ಥ ಸಂಪು.೨, ಪು.೩೬, ೩೭ ಮತ್ತು ಪು.೬೭, ೬೮, ೬೯). ಇವರು ನೀಡಿರುವ ಉದಾಹರಣೆಗಳನ್ನು ಈ ಕೆಳಕಂಡಂತೆ ನೋಡಬಹುದು.

| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
|---|---|---|---|---|
| ಮಲ್ಲಿ | + | ತಮ್ಮ | = | ಮಲ್ಲಿತಮ್ಮ |
| ಮಸಣಿ | + | ತಮ್ಮ | = | ಮಸಣಿತಮ್ಮ |
| ಚಿಕ್ಕ | + | ತಮ್ಮ | = | ಚಿಕ್ಕತಮ್ಮ |
| ಬೈರಿ | + | ತಮ್ಮ | = | ಬೈರಿತಮ್ಮ |
| ಮಾರ | + | ತಮ್ಮ | = | ಮಾರತಮ್ಮ |
| ಗೌಡಿ | + | ತಮ್ಮ | = | ಗೌಡಿತಮ್ಮ |
| ಸಣ್ಣ | + | ತಮ್ಮ | = | ಸಣ್ಣತಮ್ಮ |
| ದೊಡ್ಡ | + | ತಮ್ಮ | = | ದೊಡ್ಡತಮ್ಮ |
| ಕರಿ | + | ತಮ್ಮ | = | ಕರಿತಮ್ಮ |
| ಪುಟ್ಟ | + | ತಮ್ಮ | = | ಪುಟ್ಟತಮ್ಮ |
| ಮಾಯ | + | ತಮ್ಮ | = | ಮಾಯತಮ್ಮ |
| ಬುಕ್ಕ | + | ತಮ್ಮ | = | ಬುಕ್ಕತಮ್ಮ |

ಆದರೆ ಪ್ರಸ್ತುತ ತುಮಕೂರು ಪರಿಸರದಲ್ಲಿ ಬಂಧುವಾಚಿ ವಾರ್ಗಿಕು ನಿರ್ದಿಷ್ಟವಾಚಿ ವ್ಯಕ್ತಿನಾಮಗಳಿಗೆ ಬಳಕೆಯಾಗುತ್ತಿಲ್ಲ. ಬದಲಾಗಿ ಎರಡು ಬಂಧುವಾಚಿ ವಾರ್ಗಿಕಗಳು ಸೇರಿ ವ್ಯಕ್ತಿನಾಮಗಳಾಗಿ ಬಳಕೆಯಗಿರುವುದನ್ನು ಗುರುತಿಸಲಾಗಿದೆ.

**ಉದಾ:** ತಮ್ಮ + ಅಯ್ಯ = ತಮ್ಮಯ್ಯ, ತಮ್ಮ + ಅಣ್ಣ = ತಮ್ಮಣ್ಣ

**ಅಜ್ಜ:–**

ವ್ಯಕ್ತಿನಾಮಗಳಲ್ಲಿ 'ಅಜ್ಜ' ಎಂಬ ವಾರ್ಗಿಕವು ವ್ಯಕ್ತಿಗೆ ನಾಮನಿರ್ದೇಶನ ಮಾಡುವ ಅವಧಿಯಲ್ಲಿಯೇ ಬರುತ್ತದೆ ಎಂದು ಹೇಳಲಾಗದು. ಕಾಲಾನಂತರದಲ್ಲಿ ವ್ಯಕ್ತಿಯು ವಯಸ್ಕನಾಗುತ್ತಾ ನಂತರ 'ಅಜ್ಜ' ಬಂಧುವಾಚಕ ಸೇರುವ ಸಾಧ್ಯತೆಯಿದೆ ಮತ್ತು ಈ ಬಗೆಯ ಹೆಸರುಗಳು ತುಮಕೂರು ಪರಿಸರದಲ್ಲಿ ಹೆಚ್ಚಾಗಿ ಬಳಕೆಯ ನೆಲೆಯಲ್ಲಿ ಕಂಡುಬರುತ್ತವೆ. ಆದರೆ ಎರಡು ಬಂಧುವಾಚಕಗಳು ಸೇರಿ ವ್ಯಕ್ತಿನಾಮ ಆಗುವ ಸಂದರ್ಭದಲ್ಲಿ ಅಜ್ಜ ವಾರ್ಗಿಕ ನಿರ್ದಿಷ್ಟದಲ್ಲಿ ಬಳಕೆಯಾಗುತ್ತದೆ.

| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ವ್ಯಕ್ತಿನಾಮ** |
|---|---|---|---|---|
| ರಾಮ | + | ಅಜ್ಜ | = | ರಾಮಜ್ಜ |
| ಗಿರಿ | + | ಅಜ್ಜ | = | ಗಿರಿಯಜ್ಜ |
| ಮಲ್ಲ | + | ಅಜ್ಜ | = | ಮಲ್ಲಜ್ಜ |
| ರಂಗಶಾಮ | + | ಅಜ್ಜ | = | ರಂಗಶಾಮಜ್ಜ |
| ಗುಜ್ಜಾರ | + | ಅಜ್ಜ | = | ಗುಜ್ಜಾರಜ್ಜ |
| ನಿಂಗ | + | ಅಜ್ಜ | = | ನಿಂಗಜ್ಜ |
| ಅಜ್ಜ(ವಾರ್ಗಿಕ) | + | ಅಯ್ಯ | = | ಅಜ್ಜಯ್ಯ |

**ಅಮ್ಮ:–**

ಪೂರ್ವದ ಹಳಗನ್ನಡದಲ್ಲಿ 'ಅಮ್ಮ' ಎಂಬುದು ತಂದೆ/ಅಪ್ಪ ಎಂಬ ಅರ್ಥವನ್ನು ಕೊಡುತ್ತಿದ್ದು ಅಂದಿನ ಪುರುಷವಾಚಿ ವ್ಯಕ್ತಿನಾಮಗಳಲ್ಲಿ 'ಅಮ್ಮ' ಎಂಬ ವಾರ್ಗಿಕ ಬಳಕೆಯಾಗುತ್ತಿತ್ತು ಎಂಬುದನ್ನು ಶಾಸನಗಳಲ್ಲಿ ಕಾಣಬಹುದು. ಈ ವಿಷಯ ಕುರಿತು ಚಿದಾನಂದ ಮೂರ್ತಿಯವರು ಚರ್ಚಿಸುತ್ತಾ ಅಮ್ಮ, ಅಮ್ಮನ್ ಎಂಬ ಬಂಧುವಾಚಕ ಉಳ್ಳ ವ್ಯಕ್ತಿನಾಮಗಳನ್ನು ನೀಡುತ್ತಾರೆ.

**ಪೂರ್ವದ ಹಳಗನ್ನಡದ ಪುರುಷವಾಚಿ ವಾರ್ಗಿಕ 'ಅಮ್ಮ'**

**ಉದಾ:–**

| **ನಿರ್ದಿಷ್ಟವಾಚಿ** | + | **ಬಂಧುವಾಚಿಕ** | = | **ಪುರುಷವಾಚಿ ವ್ಯಕ್ತಿನಾಮ** |
|---|---|---|---|---|
| ಗಣರ | + | ಅಮ್ಮನ್ | = | ಗಣರಮ್ಮನ್ |
| ಪೊಲೆಯ | + | ಅಮ್ಮ | = | ಪೊಲೆಯಮ್ಮನ್ |
| ಪೆದ್ದ | + | ಅಮ | = | ಪೆದ್ದಮ |

| | | |
|---|---|---|
| ಕಲ್ಲ | + ಅಮ | = ಕಲ್ಲಮ |
| ಅಲ್ಲ | + ಅಮ | = ಅಲ್ಲಮ/ಅಲ್ಲಮನ್ |
| ಎರಿಯ | + ಅಮ್ಮನ್ | = ಎರಿಯಮ್ಮನ್(ಜಿನವಲ್ಲಭನ ಶಾಸನದ ಶಿಲ್ಪಿ) |

(ಚಿದಾನಂದಮೂರ್ತಿ ಎಂ., ೨೦೦೨, ವಾಗರ್ಥ, ಸಂ.೨, ಪು.೩೫–೩೬)

ಈ ಮೇಲಿನ ಅಮ್ಮನ್, ಅಮ್ಮ, ಅಮ, ಮ ಬಂಧುವಾಚಕಗಳು 'ಅಮ್ಮ' ಎಂಬುದಾಗಿರುತ್ತವೆ ಎಂದಿದ್ದಾರೆ. ಆದರೆ ಈ ರೀತಿಯ ವಾರ್ಗಿಕಗಳು ಪ್ರಸ್ತುತ ಪುರುಷವಾಚಕ ವ್ಯಕ್ತಿನಾಮಗಳಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಇಂದು 'ಅಮ್ಮ' ಎಂಬುದು 'ತಾಯಿ' ಎಂಬ ಅರ್ಥವನ್ನು ಪಡೆದುಕೊಂಡಿದೆ.

**ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಬಂಧುವಾಚಕಗಳ ಬಳಕೆ**

ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಅನೇಕ ಬಂಧುವಾಚಕ ಪದಗಳು ಬಳಕೆಯಾಗುತ್ತವೆ. ಅವುಗಳಲ್ಲಿ ಅಮ್ಮ, ಅವ್ವ, ಅಕ್ಕ, ತಂಗಿ ಹಾಗೂ ಇತರ ವಾರ್ಗಿಕ ಬಾಯಿ, ಅಬ್ಬೆ ಎಂಬಹು ಬಳಕೆಯಾಗುತ್ತವೆ. ಬಂಧುವಾಚಕ ಪದಗಳು ಪರಸ್ಪರ ಸಂಬಂಧವನ್ನು ಸೂಚಿಸಲು ಬಳಕೆಯಾಗುತ್ತವೆ. ಆದರೆ ಇವೇ ಪದಗಳು ವ್ಯಕ್ತಿನಾಮಗಳಲ್ಲಿ ಬಳಕೆಯಾದರೂ ಅವು ಸಂಬಂಧವನ್ನೇನು ಸೂಚಿಸದೆ ಗೌರವ ಸೂಚಕ ಪದವಾಗಿ ಬಳಕೆಯಾಗುತ್ತವೆ.

**'ಅಮ್ಮ':**

ಪೂರ್ವದ ಹಳಗನ್ನಡದಲ್ಲಿ 'ಅಮ್ಮ' ಎಂಬುದು ತಂದೆ ಎಂಬ ಅರ್ಥವನ್ನು ಕೊಡುತ್ತಿದ್ದು, ಪುರುಷವಾಚಕ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿದ್ದರೆ, ಹೊಸಗನ್ನಡದ ಕಾಲದಲ್ಲಿ 'ತಾಯಿ'ಯನ್ನು ಸಂಬೋಧಿಸಲು ಬಳಕೆಯಾಗುತ್ತಿದೆ. ಅಲ್ಲದೇ ಇದೇ ಸಂಬಂಧವಾಚಕವು ಸ್ತ್ರೀಯರ ವ್ಯಕ್ತಿನಾಮಗಳಲ್ಲಿಯೂ ವಾರ್ಗಿಕವಾಗಿ ಬಳಕೆಯಾಗುತ್ತದೆ.

**ಉದಾ:**

| **ನಿರ್ದಿಷ್ಟವಾಚಿ** | **+ ಬಂಧುವಾಚಿ** | **= ಸ್ತ್ರೀವಾಚಿ ವ್ಯಕ್ತಿನಾಮ** |
|---|---|---|
| ರಂಗ | + ಅಮ್ಮ | = ರಂಗಮ್ಮ |
| ಮಲ್ಲ | + ಅಮ್ಮ | = ಮಲ್ಲಮ್ಮ |
| ಸಿದ್ದ | + ಅಮ್ಮ | = ಸಿದ್ದಮ್ಮ |
| ಸಾವಿತ್ರಿ | + ಅಮ್ಮ | = ಸಾವಿತ್ರಮ್ಮ |
| ಮಂಜ | + ಅಮ್ಮ | = ಮಂಜಮ್ಮ |
| ಬೈರ | + ಅಮ್ಮ | = ಬೈರಮ್ಮ |
| ನಿಂಗ | + ಅಮ್ಮ | = ನಿಂಗಮ್ಮ |
| ಪಾರ್ವತಿ | + ಅಮ್ಮ | = ಪಾರ್ವತಮ್ಮ |
| ಜಯ | + ಅಮ್ಮ | = ಜಯಮ್ಮ |

| | | | |
|---|---|---|---|
| ಲೋಕ | + ಅಮ್ಮ | = | ಲೋಕಮ್ಮ |
| ಕಮಲ | + ಅಮ್ಮ | = | ಕಮಲಮ್ಮ |
| ಪದ್ದ | + ಅಮ್ಮ | = | ಪದ್ದಮ್ಮ |
| ಪದ್ಮ | +ಅಮ್ಮ | = | ಪದ್ಮಮ್ಮ |

**ಅಕ್ಕ:**

**ಉದಾ:**

| **ನಿರ್ದಿಷ್ಟವಾಚಿ** | **+ ಬಂಧುವಾಚಿ** | = | **ಸ್ತ್ರೀವಾಚಿ ವ್ಯಕ್ತಿನಾಮ** |
|---|---|---|---|
| ಶಿವ | + ಅಕ್ಕ | = | ಶಿವಕ್ಕ |
| ಭಾಗ್ಯ | + ಅಕ್ಕ | = | ಭಾಗ್ಯಕ್ಕ |
| ಸೀತ | + ಅಕ್ಕ | = | ಸೀತಕ್ಕ |
| ಮಂಜ | + ಅಕ್ಕ | = | ಮಂಜಕ್ಕ |
| ರತ್ನ | + ಅಕ್ಕ | = | ರತ್ನಕ್ಕ |
| ಜಯ | + ಅಕ್ಕ | = | ಜಯಕ್ಕ |
| ಚಂದ್ರ | + ಅಕ್ಕ | = | ಚಂದ್ರಕ್ಕ |
| ಶೀಲ | + ಅಕ್ಕ | = | ಶೀಲಕ್ಕ |
| ಸಿದ್ದ | + ಅಕ್ಕ | = | ಸಿದ್ದಕ್ಕ |
| ಮಣ್ಣೆ | + ಅಕ್ಕ | = | ಮಣ್ಣಕ್ಕ |
| ರಂಗ | + ಅಕ್ಕ | = | ರಂಗಕ್ಕ |
| ತಿಮ್ಮ | + ಅಕ್ಕ | = | ತಿಮ್ಮಕ್ಕ |

**ಅವ್ವ:**

**ಉದಾ:**

| **ನಿರ್ದಿಷ್ಟವಾಚಿ** | **+ ಬಂಧುವಾಚಿ** | = | **ಸ್ತ್ರೀವಾಚಿ ವ್ಯಕ್ತಿನಾಮ** |
|---|---|---|---|
| ಹನುಮ | + ಅವ್ವ | = | ಹನುಮವ್ವ |
| ಮಾರ | + ಅವ್ವ | = | ಮಾರವ್ವ |
| ನಿಂಗ | + ಅವ್ವ | = | ನಿಂಗವ್ವ |
| ರಂಗ | + ಅವ್ವ | = | ರಂಗವ್ವ |
| ಸೂರ | + ಅವ್ವ | = | ಸೂರವ್ವ |
| ಬೋರ | + ಅವ್ವ | = | ಬೋರವ್ವ |
| ವೆಂಕಟ | + ಅವ್ವ | = | ವೆಂಕಟವ್ವ |
| ನರಸ | + ಅವ್ವ | = | ನರಸವ್ವ |

| | | |
|---|---|---|
| ಬಿಲ್ಲ | + ಅವ್ವ | = ಬಿಲ್ಲವ್ವ |
| ಭೀಮ | + ಅವ್ವ | = ಭೀಮವ್ವ |
| ರಾಮ | + ಅವ್ವ | = ರಾಮವ್ವ |
| ಲಕ್ಷ್ಮಿ | + ಅವ್ವ | = ಲಕ್ಷ್ಮವ್ವ |

ಈ ಮೇಲಿನ ಬಂಧುವಾಚಕಗಳಾದ ಅಪ್ಪ, ಅಯ್ಯ, ಅಣ್ಣ, ಅಮ್ಮ, ಅಕ್ಕ, ಅವ್ವ, ಅಜ್ಜ ಇವುಗಳು ನಿರ್ದಿಷ್ಟವಾಚಿಗಳೊಂದಿಗೆ ಸೇರುವಾಗ ಅಕಾರಾಂತ್ಯ ಪೂರ್ವ ಘಟಕದ ಅಂತ್ಯಸ್ವರ ಲೋಪವಾಗುವುದನ್ನು ಕಾಣುತ್ತೇವೆ.

**ತಂಗಿ:**

'ತಂಗಿ' ಆಕೃತಿಮಾವನ್ನು ವಾರ್ಗಿಕವಾಗಿ ಹೊಂದಿರುವ ಹೆಸರುಗಳು ಕರ್ನಾಟಕದಲ್ಲಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ಉಳಿದ ದ್ರಾವಿಡ ಭಾಷೆಗಳಲ್ಲೂ ಇಲ್ಲ. ಆದರೆ 'ತಂಗಿ'ಯನ್ನು ನಿರ್ದಿಷ್ಟದ ಭಾಗದಲ್ಲಿ ಹೊಂದಿರುವ ಹೆಸರುಗಳಿವೆ, ಉದಾಹರಣೆಗೆ:– ತಂಗ್ಯವ್ವಕ್ಕ ಎಂದು ಚಿದಾನಂದ ಮೂರ್ತಿ ಎಂ., ಅವರು ಹೇಳಿದ್ದಾರೆ(ಚಿದಾನಂದಮೂರ್ತಿ ಎಂ., ೨೦೦೨, ವಾಗರ್ಥ ಸಂ.೨, ಪು.೩೭). ಇಂದು ಈ ರೀತಿಯ ವಾರ್ಗಿಕ ಹೊಂದಿರುವ ಹೆಸರುಗಳು ತುಮಕೂರು ಪರಿಸರದಲ್ಲಿ ಕಂಡುಬಂದಿವೆ. ಆದರೆ ಪೂರ್ವ ಮತ್ತು ಉತ್ತರ ಘಟಕಗಳೆರಡೂ ವಾರ್ಗಿಕಗಳಾಗಿದ್ದು, ಪೂರ್ವ ಘಟಕದಲ್ಲಿ ವಿಶೇಷಣಗಳು ಸೇರಿ ವ್ಯಕ್ತಿನಾಮಗಳಾಗಿವೆ.

**ಉದಾ:**

| **ನಿರ್ದಿಷ್ಟವಾರ್ಗಿಕ** | **+ ಬಂಧುವಾಚಿಕ** | **= ಸ್ತ್ರೀವಾಚಿ ವ್ಯಕ್ತಿನಾಮ** |
|---|---|---|
| ಸಣ್ಣ | + ತಂಗಿ | = ಸಣ್ಣತಂಗಿ |
| ದೊಡ್ಡ | + ತಂಗಿ | = ದೊಡ್ಡತಂಗಿ |
| ಚಿಕ್ಕ | + ತಂಗಿ | = ಚಿಕ್ಕತಂಗಿ |

**ಬಾಯಿ:**

"ಇಂದು ಗ್ರಾಮೀಣ ಜನತೆಯಲ್ಲಿ 'ಅವ್ವ', 'ಅಮ್ಮ', 'ಬಾಯಿ', ಕೊನೆಯಾಗುವ ಪಾರ್ವತವ್ವ ಸಾಮಾನ್ಯವರ್ಗದ, ಪಾರ್ವತಮ್ಮ ಮಧ್ಯಮ ವರ್ಗದ, ಪಾರ್ವತೀಬಾಯಿ ಪ್ರತಿಷ್ಠಿತ ವರ್ಗದ ಹೆಸರುಗಳಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ತುಂಬಾ ಕುತೂಹಲ ಹುಟ್ಟಿಸುವ ಆಕೃತಿಮಾ 'ಬಾಯಿ'. ಶಾಸನಗಳಲ್ಲಿ ಹೀರುಬಾಯಿ, ಚಿಕ್ಕರಸಿಂಗಬಾಯಿ, ಜಸಮಬಾಯಿ, ಸಾವಿಬಾಯಿ, ಅರಸುಬಾಯಿ, ಮಲ್ಲುಬಾಯಿ, ಎಕ್ಕಲಬಾಯಿ ಎಂಬ ಹೆಸರುಗಳು ೧೨ನೇ ಶತಮಾನದಿಂದಲೂ ಸಿಗುತ್ತವೆ" ಎಂದು ಕಲಬುರ್ಗಿ ಎಂ.ಎಂ., ಅವರು ಹೇಳಿದ್ದಾರೆ(೨೦೧೦, ಮಾರ್ಗ ಸಂ–೪, ಪು.ಸಂ.೪೭೪).

ಈ ಮೇಲಿನ ಉದಾಹರಣೆಗಳಲ್ಲಿ 'ಬಾಯಿ' ಸ್ತ್ರೀವಾಚಿ ಬಂಧುವಾಚಕವಾಗಿ ಬಳಕೆಯಾಗಿ ರುವುದನ್ನು ಗುರುತಿಸಬಹುದು. ಆದರೆ ೧೨ನೇ ಶತಮಾನದಲ್ಲಿ ವರ್ಗವಾರು ರೀತಿಯಲ್ಲಿ ಬಳಕೆಯಾಗುತ್ತಿದ್ದ 'ಬಾಯಿ' ಇಂದು ಬಂಧುವಾಚಕವಾಗಿ ಬಳಕೆಯಾಗುತ್ತಿಲ್ಲ. ಆದರೆ ತುಮಕೂರು

ಪರಿಸರದಲ್ಲಿ ಕಂಡುಬಂದ ಲಂಬಾಣಿ ಮತ್ತು ಮರಾಠಿ ಸಮುದಾಯದ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಹೆಚ್ಚಾಗಿ ಕಂಡುಬಂದಿರುವುದನ್ನು ಗುರುತಿಸಲಾಗಿದೆ. ಈ ರೀತಿಯ ಮಾದರಿಗಳು ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳಲ್ಲಿಯೂ ಇವೆ ಎಂಬುದನ್ನು ಗುರುತಿಸುತ್ತಾರೆ (ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೨೧). ಈ ರೀತಿಯ ಹೆಸರುಗಳು ತುಮಕೂರು ಪರಿಸರದಲ್ಲಿಯೂ ಕಾಣಬಹುದು.

| | | | | |
|---|---|---|---|---|
| **'ಅ'ಪಟ್ಟಿ** | | **'ಬ'ಪಟ್ಟಿ** | | **'ಕ'ಪಟ್ಟಿ** |
| **ನಿರ್ದಿಷ್ಟವಾಚಿ** | + | **ಬಂಧುವಾಚಿ** | = | **ಸ್ತ್ರೀವಾಚಿ ವ್ಯಕ್ತಿನಾಮ** |
| ಶಾಮಲ | + | ಬಾಯಿ | = | ಶಾಮಲಬಾಯಿ |
| ರುಕ್ಕು | + | ಬಾಯಿ | = | ರುಕ್ಕುಬಾಯಿ |
| ಸಾವಿತ್ರಿ | + | ಬಾಯಿ | = | ಸಾವಿತ್ರಿಬಾಯಿ |
| ಗೀತಾ | + | ಬಾಯಿ | = | ಗೀತಾಬಾಯಿ |
| ಮಂಜುಳ | + | ಬಾಯಿ | = | ಮಂಜುಳಬಾಯಿ |
| ಲಕ್ಷ್ಮೀ | + | ಬಾಯಿ | = | ಲಕ್ಷ್ಮೀಬಾಯಿ |

**ಅಬ್ಬೆ:**

"ಅಬ್ಬೆ ಎಂಬ ಪದಕ್ಕೆ ತಾಯಿ ಎಂಬರ್ಥವಿದ್ದಿತು. ನಿನಗಾದಿಯೊಳಬ್ಬೆಕೊಂತಿ ಎಂಬ ಪಂಪಭಾರತದ ವಾಕ್ಯದಲ್ಲಿ 'ಅಬ್ಬೆ' ಪದ ದೊರಕುತ್ತದೆ.

ಗವಗಣಬ್ಬೆ

ಚಲಬ್ಬೆ

ಅತ್ತಿಮಬ್ಬೆ

ಗೊಂಬಬ್ಬೆ

ದೇಕಬ್ಬೆ

ಇವು ಹಿಂದಿನ ಶಾಸನಗಳಲ್ಲಿ ದೊರಕುವ ಕೆಲವು ವ್ಯಕ್ತಿನಾಮಗಳು, ಅವ್ವೆ ಎಂಬುದು 'ಅಬ್ಬೆ'ಯ ಇನ್ನೊಂದು ರೂಪವಿರಬಹುದು. 'ಅಬ್ಬೆ'ಯ ಸವೆದ ರೂಪ ಈಗಿನ ಹೆಂಗಸರ ಹೆಸರುಗಳಲ್ಲಿ ಉಳಿದು ಬಂದಿರುವಂತೆ ಕಾಣದು. ಆದರೆ ಉತ್ತರ ಕರ್ನಾಟಕದ ಸ್ತ್ರೀಯರನ್ನು ಸಂಬೋಧಿಸುವ 'ಬೇ' ಎಂಬಲ್ಲಿ (ಏನಬೇ) ಹಿಂದಿನ ಅಬ್ಬೆಯ ಅವಶೇಷವಿದೆ" ಎಂದು ಹೇಳಿದರೂ ಹೆಸರಿನಲ್ಲಿ ಬಳಕೆಯಲ್ಲಿಲ್ಲ(ಚಿದಾನಂದ ಮೂರ್ತಿ ಎಂ., ೨೦೦೨, ವಾಗರ್ಥ ಸಂಪು–೨, ಪು.೩೫, ೩೬). ಆದರೆ ತುಮಕೂರು ಪರಿಸರದಲ್ಲಿ ಈ ರೀತಿಯ ಬಂಧುವಾಚಿ ವಾರ್ಗಿಕಗಳು ವ್ಯಕ್ತಿನಾಮಗಳಲ್ಲಿ ಇರುವುದು ಕಂಡುಬಂದಿಲ್ಲ. ಚಿತ್ರದುರ್ಗ ಪರಿಸರದಲ್ಲಿ ಹಾಗೂ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಸಂಬೋಧನೆಯಲ್ಲಿ ಈಗಲೂ 'ಅಬ್ಬೆ' ಬಂಧುವಾಚಕವಾಗಿ ಬಳಕೆ ಮಾಡಲಾಗುತ್ತಿದೆ. ಉದಾ:–ಏನಬೇ

–ಯಾಕಬೇ

–ಯಾರಬೇ

–ಅಬೇ

ಇವುಗಳ ಜೊತೆಗೆ ಶಿಶುನಾಳ ಷರೀಫರ **'ಬಿದ್ದೀಯಬ್ಬೇ ಮುದುಕಿ'** ಕವನವನ್ನು ಉದಾಹರಣೆಯಾಗಿ ಇಲ್ಲಿ ಸ್ಮರಿಸಿಕೊಳ್ಳಬಹುದು.

ಬಿದ್ದೀಯಬ್ಬೇ ಮುದುಕಿ
ಬಿದ್ದೀಯಬ್ಬೆ
ನೀ ದಿನ ಹೋದಾಕಿ
ಇರುಬಾಳ ಜೋಕಿ
ಬಿದ್ದೀಯಬ್ಬೇ ಮುದುಕಿ ಬಿದ್ದೀಯಬ್ಬೇ
ಸದ್ಯಕಿದು ಹುಲುಗೂರ ಸಂತಿ
ಗದ್ದಲದೊಳಗ್ಯಾಕ ನಿಂತಿ
ಬಿದ್ದು ಇಲ್ಲಿ ಒದ್ದಾಡಿದರ
ಎದ್ದು ಹ್ಯಾಂಗ ಹಿಂದಕ ಬರತಿ?
ಬುದ್ದಿಗೇಡಿ ಮುದುಕಿ ನೀನು ಬಿದ್ದೀಯಬೇ
ಬುಟ್ಟಿಯಲ್ಲಿ ಪತ್ತಲ ಇಟ್ಟಿ
ಅದನು ಉಟ್ಟ ಹೊತ್ತೊಳ ಜೋಕಿ
ಉಟ್ಟುದನ್ನೇ ಕದ್ದಾರ ಜೋಕಿ!
ಬುದ್ದಿಗೇಡಿ ಮುದುಕಿ ನೀನು ಬಿದ್ದೀಯಬೇ
ಶಿಶುನಾಳಾಧೀಶನ ಮುಂದೆ ಕೊಸರಿ ಕೊಸರಿ ಹೋಗಬೇಡ
ಹಸನವಿಲ್ಲ ಹರಯ ಸಂದ
ಪಿಸುರು ಪಿಚ್ಚುಗಣ್ಣಿನ ಮುದುಕಿ
ಬುದ್ದಿಗೇಡಿ ಮುದುಕಿ ನೀನು ಬಿದ್ದಿಯಬೇ

(ಸಂಗ್ರಹ: ಶಿಶುನಾಳ ಷರೀಫರ ಗೀತೆಗಳು, ಕವನ ಸಂಗ್ರಹ, sites, google.com, https://sites.google.com/site/kavanasangraha/home/sharipha/shriph)

ಈ ಮೇಲಿನ ಎಲ್ಲಾ ರೀತಿಯ ಬಂಧುವಾಚಕಗಳು ನಿರ್ದಿಷ್ಟ ಘಟಕದೊಡನೆ ಸೇರಿ ಪೂರ್ಣ ಘಟಕದ ವ್ಯಕ್ತಿನಾಮಗಳಾಗಿರುವ ವಿಧಾನಗಳಲ್ಲದೆ ಇನ್ನು ಹಲವು ಪ್ರಕಾರಗಳಲ್ಲಿ ಬಳಕೆಯಾಗುವುದನ್ನು ಕಾಣಬಹುದು.

೩.೧೪.೨. ಬಂಧುವಾಚಿ+ಬಂಧುವಾಚಿ=ವ್ಯಕ್ತಿನಾಮಗಳು

ಪೂರ್ವ ಘಟಕ ಮತ್ತು ಉತ್ತರ ಘಟಕಗಳೆರಡರಲ್ಲೂ ಬಂಧುವಾಚಕಗಳೇ ಸೇರಿ ವ್ಯಕ್ತಿನಾಮಗಳಾಗುವುದನ್ನು ಗುರುತಿಸಲಾಗಿದೆ. ಇಲ್ಲಿ ನಿರ್ದಿಷ್ಟದ ಸ್ಥಾನದಲ್ಲಿ ಬಂಧುವಾಚಿ ವಾರ್ಗಿಕಗಳೇ ಸೇರಿಕೊಂಡಿರುವುದನ್ನು ಗುರುತಿಸಲಾಗಿದೆ.

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ಬಂಧುವಾಚಿ+ಬಂಧುವಾಚಿ= ವ್ಯಕ್ತಿನಾಮ | ಬಂಧುವಾಚಿ+ ಬಂಧುವಾಚಿ = ವ್ಯಕ್ತಿನಾಮ |
| ಅಪ್ಪ + ಅಣ್ಣ = ಅಪ್ಪಣ್ಣ | ಅಣ್ಣ + ಅಮ್ಮ = ಅಣ್ಣಮ್ಮ |
| ಅಪ್ಪ + ಅಯ್ಯ = ಅಪ್ಪಯ್ಯ | ಅಕ್ಕ + ಅಮ್ಮ = ಅಕ್ಕಮ್ಮ |
| ಅಪ್ಪ + ಅಜ್ಜ = ಅಪ್ಪಜ್ಜ | ಅಮ್ಮ + ಅಣ್ಣಿ = ಅಮ್ಮಣ್ಣಿ |
| | (ಇದು ಮೈಸೂರು ಜಿಲ್ಲೆಯ ಶಾಸನಗಳಲ್ಲಿ ಸಿಕ್ಕಿದೆ) |
| ಅಣ್ಣ + ಅಯ್ಯ = ಅಣ್ಣಯ್ಯ | ಅಮ್ಮ + ಅಕ್ಕ = ಅಮ್ಮಕ್ಕ |
| ಅಣ್ಣ + ಅಪ್ಪ = ಅಣ್ಣಪ್ಪ | ಅಣ್ಣ + ಅವ್ವ = ಅಣ್ಣವ್ವ |
| ಅಯ್ಯ + ಅಪ್ಪ = ಅಯ್ಯಪ್ಪ | ಅಬ್ಬ + ಅಕ್ಕ = ಅಬ್ಬಕ್ಕ |
| ಅಜ್ಜ + ಅಯ್ಯ = ಅಜ್ಜಯ್ಯ | ಅಕ್ಕ + ಅವ್ವ = ಅಕ್ಕವ್ವ |
| ಅಜ್ಜ + ಅಪ್ಪ = ಅಜ್ಜಪ್ಪ | |
| ಅಜ್ಜ + ಅಣ್ಣ = ಅಜ್ಜಣ್ಣ | |
| ಅಯ್ಯ + ಅಣ್ಣ = ಅಯ್ಯಣ್ಣ | |

೩.೧೪.೩. ಬಂಧುವಾಚಿ + ಬಂಧುವಾಚಿ + ಜಾತಿವಾಚಿ

ಮೂರುವಾರ್ಗಿಕಗಳು ಸೇರಿ ವ್ಯಕ್ತಿನಾಮ ರಚನೆಯಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಅಂದರೆ ಮೊದಲೆರಡು ವಾರ್ಗಿಕಗಳು ಬಂಧುವಾಚಿಯಾಗಿದ್ದು ಅದರ ಜೊತೆಗೆ ಜಾತಿವಾಚಿಯಾದ ಮತ್ತೊಂದು ವಾರ್ಗಿಕ ಸೇರಿ ವ್ಯಕ್ತಿನಾಮಗಳಾಗಿರುವುದನ್ನು ಕಾಣಲಾಗಿದೆ.

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ಪುರುಷವಾಚಿ | ಸ್ತ್ರೀವಾಚಿ |
| ಬಂಧುವಾಚಿ+ಬಂಧುವಾಚಿ+ಜಾತಿವಾಚಿ=ವ್ಯಕ್ತಿನಾಮ | ಬಂಧುವಾಚಿ+ಬಂಧುವಾಚಿ+ಜಾತಿವಾಚಿ= ವ್ಯಕ್ತಿನಾಮ |
| ಅಪ್ಪ + ಅಣ್ಣ + ಗೌಡ = ಅಪ್ಪಣ್ಣಗೌಡ | ಅಣ್ಣ + ಅಮ್ಮ + ಗೌಡ = ಅಣ್ಣಮ್ಮಗೌಡ |
| ಅಪ್ಪ + ಅಯ್ಯ + ಶಾಸ್ತ್ರಿ = ಅಪ್ಪಯ್ಯಶಾಸ್ತ್ರಿ | ಅಕ್ಕ + ಅಮ್ಮ + ನಾಯ್ಕ= ಅಕ್ಕಮ್ಮನಾಯ್ಕ |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಅಪ್ಪ | + ಅಜ್ಜ | + | ನಾಯಕ= | ಅಪ್ಪಜ್ಜನಾಯಕ | | ಅಣ್ಣ + | ಅವ್ವ | + | ಶೆಟ್ಟಿ | = | ಅಣ್ಣವ್ವಶೆಟ್ಟಿ |
| ಅಣ್ಣ | + ಅಯ್ಯ | + | ಶಾಸ್ತ್ರಿ = | ಅಣ್ಣಯ್ಯಶಾಸ್ತ್ರಿ | | ಅಬ್ಬ + | ಅಕ್ಕ | + | ಶೆಟ್ಟಿ | = | ಅಬ್ಬಕ್ಕಶೆಟ್ಟಿ |
| ಅಣ್ಣ | + ಅಪ್ಪ | + | ನಾಯ್ಕ= | ಅಣ್ಣಪ್ಪನಾಯ್ಕ | | | | | | | |
| ಅಣ್ಣ | + ಅಜ್ಜ | + | ನಾಯಕ= | ಅಣ್ಣಜ್ಜನಾಯಕ | | | | | | | |
| ಅಜ್ಜ | + ಅಯ್ಯ | + | ರಾವ್ = | ಅಜ್ಜಯ್ಯರಾವ್ | | | | | | | |
| ಅಜ್ಜ | + ಅಪ್ಪ | + | ಗೌಡ = | ಅಜ್ಜಪ್ಪಗೌಡ | | | | | | | |
| ಅಜ್ಜ | + ಅಣ್ಣ | + | ಶೆಟ್ಟಿ = | ಅಜ್ಜಣ್ಣ ಶೆಟ್ಟಿ | | | | | | | |
| ಅಯ್ಯ | + ಅಣ್ಣ | + | ಶೆಟ್ಟಿ = | ಅಯ್ಯಣ್ಣ ಶೆಟ್ಟಿ | | | | | | | |
| ಅಯ್ಯ | + ಅಪ್ಪ | + | ನಾಯಕ= | ಅಯ್ಯಪ್ಪನಾಯಕ | | | | | | | |

ಈ ಮೇಲಿನ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಜಾತಿವಾಚಿ ವಾರ್ಗಿಕಗಳು ಇತ್ತೀಚೆಗೆ ಬಳಕೆಯ ನೆಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು, ದಾಖಲೆಗಳಲ್ಲಿ ಈ ರೀತಿಯ ಹೆಸರುಗಳಿಲ್ಲ. ಆದರೆ ಶಾಸನಗಳಲ್ಲಿ ಗೌಡಿ, ಗಾವುಂಡಿ ಮತ್ತು ನಾಯಕತಿ ಎಂಬ ಜಾತಿವಾಚಿ ವಾರ್ಗಿಕಗಳು ಸ್ತ್ರೀನಾಮಗಳಲ್ಲಿ ಕಂಡುಬಂದಿವೆ ಎಂದು ಹೇಳಲಾಗಿದೆ. "ಸ್ತ್ರೀಯರ ಹೆಸರುಗಳಿಗೆ ಯಾವುದೇ ಜಾತಿವಾಚಿಗಳು ಸೇರುವುದಿಲ್ಲ. ಆದರೆ ಹಿಂದೆ ಕರ್ನಾಟಕದಲ್ಲಿ ಗೌಡಿ, ನಾಯಕತಿ ಎಂಬ ವಾರ್ಗಿಕಗಳುಳ್ಳ ಹೆಸರುಗಳಿದ್ದವೆಂಬುದಕ್ಕೆ ಆಧಾರಗಳಿವೆ"(ಚಿದಾನಂದ ಮೂರ್ತಿ ಎಂ., ೨೦೦೨, ವಾಗರ್ಥ, ಸಂ–೨, ಪು.೩೯).

**ಉದಾ:–**

ಮಾಚಗಾವುಡಿ (ಎ.ಕ. ಹಾಸನ, ಪು.೨೦೨)

ದುಗ್ಗಗವುಡಿ (ಎ.ಕ. ತರೀಕೆರೆ, ಪು.೬೫, ಸು.೧೧೪೧)

ಸೋರಿಗಾವುಡಿ (ಎ.ಕ. ಪು.೨೪, ೧೧೪೮)

ಸೋವೆನಾಯಕಿತಿ (ಎಂ.ಎ.ಆರ್., ೧೯೩೭, ಪು.೧೭೬, ೧೧೪೦)

ಮಾಚವೆ ನಾಯಕಿತಿ (ಎಂ.ಎ.ಆರ್., ೧೯೩೭, ಪು.೧೭೬, ೧೧೪೦)

ಆಧುನಿಕ ಸಂದರ್ಭದ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಜಾತಿವಾಚಿ ವಾರ್ಗಿಕಗಳು ಬಳಕೆಯಾಗುತ್ತಿರುವುದನ್ನು ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ.

**೩.೧೪.೪. ಬಂಧುವಾಚಿ 'ಅಯ್ಯ' ಲೋಪವಾಗಿ 'ಏ' ಕಾರ ಆಗುತ್ತದೆ.**

ವ್ಯಕ್ತಿನಾಮಗಳ ರಚನೆಯಲ್ಲಿ ಪೂರ್ವಘಟಕದಲ್ಲಿ ನಿರ್ದಿಷ್ಟವಾಚಿ ನಾಮವಿದ್ದು ಉತ್ತರ ಘಟಕದಲ್ಲಿ 'ಅಯ್ಯ' ಬಂಧುವಾಚಿ ವಾರ್ಗಿಕ ಇದ್ದು, ಅದರ ಮುಂದೆ 'ಗೌಡ' ಜಾತಿವಾಚಿ ವಾರ್ಗಿಕ ಬಂದರೆ ಅಲ್ಲಿ ಅಯ್ಯ ಬಂಧುವಾಚಕ ಲೋಪವಾಗಿ ಆ ಜಾಗದಲ್ಲಿ 'ಏ' ಕಾರ ಆಗಮವಾಗುತ್ತದೆ. ಇದನ್ನು ಪರಿಹಾರ ದೀರ್ಘೀಕರಣ ಎನ್ನಬಹುದು. ಈ ನಿಯಮವು 'ಗೌಡ' ವೃತ್ತಿ/ಜಾತಿವಾಚಿಯಾಗಿ ಬರುವ ಸಂದರ್ಭದಲ್ಲಿ ಮಾತ್ರ ಅನ್ವಯವಾಗುವಂತಹದ್ದು, ಬೇರೆ ಸಂದರ್ಭಗಳಲ್ಲಿ ಈ ನಿಯಮ

ಅನ್ವಯವಾಗುವುದಿಲ್ಲ ಮತ್ತು ಈ ನಿಯಮವು ಕೇವಲ ಪುರುಷವಾಚಿ ವ್ಯಕ್ತಿನಾಮಗಳಿಗೆ ಮಾತ್ರ ಅನ್ವಯಿಸುತ್ತದೆ.

ಉದಾ:–

| ನಿರ್ದಿಷ್ಟವಾಚಿ | | ಬಂಧುವಾಚಿ | | ಜಾತಿವಾಚಿ | | ವ್ಯಕ್ತಿನಾಮ |
|---|---|---|---|---|---|---|
| ರಂಗ | + | ಅಯ್ಯ | + | ಗೌಡ | = | ರಂಗೇಗೌಡ |
| ಮಲ್ಲ | + | ಅಯ್ಯ | + | ಗೌಡ | = | ಮಲ್ಲೇಗೌಡ |
| ರಾಮ | + | ಅಯ್ಯ | + | ಗೌಡ | = | ನಿಂಗೇಗೌಡ |
| ಶಂಕರ | + | ಅಯ್ಯ | + | ಗೌಡ | = | ಶಂಕ್ರೇಗೌಡ |
| ಭೀಮ | + | ಅಯ್ಯ | + | ಗೌಡ | = | ಭೀಮೇಗೌಡ |
| ಬೋರ | + | ಅಯ್ಯ | + | ಗೌಡ | = | ಬೋರೇಗೌಡ |
| ಚಂದ್ರ | + | ಅಯ್ಯ | + | ಗೌಡ | = | ಚಂದ್ರೇಗೌಡ |
| ಹಾಲ | + | ಅಯ್ಯ | + | ಗೌಡ | = | ಹಾಲೇಗೌಡ |
| ಸಿದ್ದ | + | ಅಯ್ಯ | + | ಗೌಡ | = | ಸಿದ್ದೇಗೌಡ |
| ತಿಮ್ಮ | + | ಅಯ್ಯ | + | ಗೌಡ | = | ತಿಮ್ಮೇಗೌಡ |
| ಲಕ್ಕ | + | ಅಯ್ಯ | + | ಗೌಡ | = | ಲಕ್ಕೇಗೌಡ |
| ಬೊಮ್ಮ | + | ಅಯ್ಯ | + | ಗೌಡ | = | ಬೊಮ್ಮೇಗೌಡ |
| ಬೈರ | + | ಅಯ್ಯ | + | ಗೌಡ | = | ಬೈರೇಗೌಡ |
| ಜುಂಜ | + | ಅಯ್ಯ | + | ಗೌಡ | = | ಜುಂಜೇಗೌಡ |
| ಬಸವ | + | ಅಯ್ಯ | + | ಗೌಡ | = | ಬಸವೇಗೌಡ |

ಈ ಬದಲಾವಣೆ ಕೇವಲ 'ಗೌಡ' ಜಾತಿ/ವೃತ್ತಿವಾಚಕ ಮಾತ್ರವೇ ಹೊರತು ಉಳಿದ ಯಾವುದೇ ಜಾತಿ/ವೃತ್ತಿವಾಚಿ ವಾರ್ಗಿಕಗಳು ಸೇರಿದರೂ 'ಅಯ್ಯ' ಬಂಧುವಾಚಕ ಲೋಪವಾಗುವುದಿಲ್ಲ.

ಉದಾ:

| | | | | | | |
|---|---|---|---|---|---|---|
| ಬಸವ | + | ಅಯ್ಯ | + | ನಾಯಕ | = | ಬಸವಯ್ಯನಾಯಕ |
| ತಿಮ್ಮ | + | ಅಯ್ಯ | + | ನಾಯ್ಕ | = | ತಿಮ್ಮಯ್ಯ ನಾಯ್ಕ |

೩.೧೪.೫. ವ್ಯಕ್ತಿನಾಮಗಳ ಪೂರ್ವಘಟಕದಲ್ಲಿ ಅಂದರೆ ನಿರ್ದಿಷ್ಟವಾಚಿಯಾಗಿ 'ಬಸವ' ನಾಮಪದವಿದ್ದು ಅದರೊಂದಿಗೆ ಉತ್ತರ ಘಟಕದಲ್ಲಿ ಯಾವುದೇ ಬಂಧುವಾಚಕಗಳು ಸೇರಿದರೂ ಪೂರ್ವಪದದ ಅಂದರೆ 'ಬಸವ' ನಾಮಪದದ ಅಂತ್ಯಾಕ್ಷರವಾದ 'ವ' ಕಾರ ಲೋಪವಾಗುತ್ತದೆ. ಆದರೆ 'ಬಸವ' ನಾಮಪದ ಬಿಟ್ಟು ಉಳಿದ ಸಂದರ್ಭಗಳಲ್ಲಿ ಈ ವ್ಯತ್ಯಾಸವನ್ನು ಕಾಣಲಾಗುವುದಿಲ್ಲ.

ಉದಾ:–

| 'ಅ' ಪಟ್ಟಿ | | | | | 'ಬ' ಪಟ್ಟಿ | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| **ನಿರ್ದಿಷ್ಟ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** | **ನಿರ್ದಿಷ್ಟ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** |
| ಬಸವ | + | ಅಯ್ಯ | = | ಬಸಯ್ಯ | ಬಸವ | + | ಅಮ್ಮ | = | ಬಸಮ್ಮ |
| ಬಸವ | + | ಅಪ್ಪ | = | ಬಸಪ್ಪ | ಬಸವ | + | ಅಕ್ಕ | = | ಬಸಕ್ಕ |
| ಬಸವ | + | ಅಣ್ಣ | = | ಬಸಣ್ಣ | ಬಸವ | + | ಅಜ್ಜಿ | = | ಬಸಜ್ಜಿ |
| ಬಸವ | + | ಅಜ್ಜ | = | ಬಸಜ್ಜ | ಬಸವ | + | ಅವ್ವ | = | ಬಸವ್ವ |

**೩.೧೪.೬. ವಿಶೇಷಣ + ನಿರ್ದಿಷ್ಟ = ವ್ಯಕ್ತಿನಾಮ**

| 'ಅ'ಪಟ್ಟಿ | | | | | 'ಬ'ಪಟ್ಟಿ | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| **ವಿಶೇಷಣ** | **+** | **ನಿರ್ದಿಷ್ಟ** | **=** | **ವ್ಯಕ್ತಿನಾಮ** | **ವಿಶೇಷಣ** | **+** | **ನಿರ್ದಿಷ್ಟ** | **=** | **ವ್ಯಕ್ತಿನಾಮ** |
| ದೊಡ್ಡ | + | ಬಸವ | = | ದೊಡ್ಡಬಸವ | ದೊಡ್ಡ | + | ಮಲ್ಲಿ | = | ದೊಡ್ಡಮಲ್ಲಿ |
| ಚಿಕ್ಕ | + | ರಂಗ | = | ಚಿಕ್ಕರಂಗ | ಚಿಕ್ಕ | + | ಬಸವಿ | = | ಚಿಕ್ಕಬಸವಿ |
| ಸಣ್ಣ | + | ಮಲ್ಲ | = | ಸಣ್ಣಮಲ್ಲ | ಸಣ್ಣ | + | ರತ್ನ | = | ಸಣ್ಣರತ್ನ |
| ಕರಿ | + | ಬಸವ | = | ಕರಿಬಸವ | ಕೆಂಪ | + | ರತ್ನ | = | ಕೆಂಪರತ್ನ |
| ಕೆಂಪ | + | ಮಂಜ | = | ಕೆಂಪಮಂಜ | | | | | |

ಈ ಮೇಲಿನ ಉದಾಹರಣೆಗಳಲ್ಲಿರುವ ಸ್ತ್ರೀವಾಚಿ ಸ್ವರೂಪದ ವ್ಯಕ್ತಿನಾಮಗಳು ಆಧುನಿಕ ಸಂದರ್ಭದಲ್ಲಿ ವಿರಳವಾಗಿವೆ.

**೩.೧೪.೭. ವಿಶೇಷಣ + ಬಂಧುವಾಚಿ = ವ್ಯಕ್ತಿನಾಮ**

| 'ಅ' ಪಟ್ಟಿ | | | | | 'ಬ' ಪಟ್ಟಿ | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| **ವಿಶೇಷಣ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** | **ವಿಶೇಷಣ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** |
| ಸಣ್ಣ | + | ತಮ್ಮ | = | ಸಣ್ಣತಮ್ಮ | ಸಣ್ಣ | + | ಅಮ್ಮ | = | ಸಣ್ಣಮ್ಮ |
| ದೊಡ್ಡ | + | ಅಯ್ಯ | = | ದೊಡ್ಡಯ್ಯ | ದೊಡ್ಡ | + | ಅಮ್ಮ | = | ದೊಡ್ಡಮ್ಮ |
| ದೊಡ್ಡ | + | ಅಪ್ಪ | = | ದೊಡ್ಡಪ್ಪ | ಕರಿ | + | ಅಮ್ಮ | = | ಕರಿಯಮ್ಮ |
| ಕೆಂಪ | + | ಅಯ್ಯ | = | ಕೆಂಪಯ್ಯ | ಕೆಂಪ | + | ಅಕ್ಕ | = | ಕೆಂಪಕ್ಕ |
| ಕರಿ | + | ಅಪ್ಪ | = | ಕರಿಯಪ್ಪ | ಕೆಂಪ | + | ಅಮ್ಮ | = | ಕೆಂಪಮ್ಮ |
| ಕರಿ | + | ಅಣ್ಣ | = | ಕರಿಯಣ್ಣ | ಚಿಕ್ಕ | + | ಅಮ್ಮ | = | ಚಿಕ್ಕಮ್ಮ |

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಪೂರ್ವಘಟಕವು ವಿಶೇಷಣದಿಂದ ಕೂಡಿದ್ದು ಉತ್ತರಘಟಕದಲ್ಲಿ ಬಂಧುವಾಚಕಗಳು ಸೇರಿ ವ್ಯಕ್ತಿನಾಮಗಳಾಗಿವೆ.

**೩.೧೪.೮. ವಿಶೇಷಣ + ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ**

ಕೆಲವು ವ್ಯಕ್ತಿನಾಮಗಳ ರಚನೆಯಲ್ಲಿ ಆರಂಭದಲ್ಲಿ ವಿಶೇಷಣಗಳಿಂದ ಕೂಡಿ ನಂತರ ನಿರ್ದಿಷ್ಟ ವಾಚಕಗಳು ಬಂದು ಅದರ ಜೊತೆಗೆ ಯಾವುದಾದರೂ ಬಂಧುವಾಚಕ ಅಥವಾ ಜಾತಿವಾಚಕ ವಾರ್ಗಿಕಗಳು ಸೇರಿ ಪೂರ್ಣ ಘಟಕದ ವ್ಯಕ್ತಿನಾಮಗಳಾಗುತ್ತವೆ.

**ಉದಾ:**

| **ವಿಶೇಷಣ+ನಿರ್ದಿಷ್ಟ+ಬಂಧು/ಜಾತಿವಾಚಿ=ವ್ಯಕ್ತಿನಾಮ** | **ವಿಶೇಷಣ+ನಿರ್ದಿಷ್ಟ+ಬಂಧು/ಜಾತಿವಾಚಿ=ವ್ಯಕ್ತಿನಾಮ** |
|---|---|
| ಕರಿ + ಬಸವ + ಅಯ್ಯ = ಕರಿಬಸಯ್ಯ | ಕರಿ + ಬಸವ + ಅಮ್ಮ = ಕರಿಬಸಮ್ಮ |
| ದೊಡ್ಡ + ನರಸ + ಅಪ್ಪ = ದೊಡ್ಡನರಸಪ್ಪ | ದೊಡ್ಡ + ತಿಮ್ಮ + ಅಕ್ಕ = ದೊಡ್ಡತಿಮ್ಮಕ್ಕ |
| ಚಿಕ್ಕ + ತಿಮ್ಮ + ಅಯ್ಯ = ಚಿಕ್ಕತಿಮ್ಮಯ್ಯ | ಚಿಕ್ಕ + ನರಸ + ಅಮ್ಮ = ಚಿಕ್ಕನರಸಮ್ಮ |
| ದೊಡ್ಡ + ರಂಗ + ಗೌಡ = ದೊಡ್ಡರಂಗೇಗೌಡ | ದೊಡ್ಡ + ರಂಗ + ಅಮ್ಮ = ದೊಡ್ಡರಂಗಮ್ಮ |
| ಸಣ್ಣ + ರಾಮ + ಅಯ್ಯ = ಸಣ್ಣರಾಮಯ್ಯ | ಸಣ್ಣ + ರಾಮ + ಅಕ್ಕ = ಸಣ್ಣರಾಮಕ್ಕ |
| ಸಣ್ಣ + ರಂಗ + ಅಯ್ಯ = ಸಣ್ಣರಂಗಯ್ಯ | ಕರಿ + ರಂಗ + ಅಮ್ಮ = ಕರ್ರಂಗಮ್ಮ |
| ದೊಡ್ಡ + ರಾಮ + ಗೌಡ = ದೊಡ್ಡರಾಮೇಗೌಡ | ಸಣ್ಣ + ಲಕ್ಷ್ಮಿ + ಅಮ್ಮ = ಸಣ್ಣಲಕ್ಷ್ಮಮ್ಮ |

**೩.೧೪.೯. ವೃತ್ತಿ/ಜಾತಿವಾಚಿ + ಬಂಧುವಾಚಿ = ವ್ಯಕ್ತಿನಾಮ**

ವ್ಯಕ್ತಿನಾಮಗಳ ರಚನೆಯಲ್ಲಿ ವೃತ್ತಿವಾಚಿ ಅಥವಾ ಜಾತಿವಾಚಿ ವಾರ್ಗಿಕಗಳು ಪೂರ್ವ ಘಟಕದಲ್ಲಿದ್ದು, ಉತ್ತರ ಘಟಕದಲ್ಲಿ ಬಂಧುವಾಚಕಗಳು ಸೇರಿ ವ್ಯಕ್ತಿನಾಮಗಳಾಗುವಮಾದರಿಗಳು ಉತ್ತರ ಕರ್ನಾಟಕದ ಪರಿಸರದಲ್ಲಿ ಹೆಚ್ಚು ಕಂಡುಬರುತ್ತವೆ. ಈ ಮಾದರಿ ಚಿತ್ರದುರ್ಗ ಪರಿಸರದಲ್ಲಿಯೂ ಇರುವುದಾಗಿ ಸಣ್ಣಪಾಪಯ್ಯ(೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೨೭) ತಿಳಿಸುತ್ತಾರೆ. ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಈ ರೀತಿಯ ವ್ಯಕ್ತಿನಾಮಗಳು ಬಳಕೆಯಲ್ಲಿದ್ದು ತುಮಕೂರು ಪರಿಸರದಲ್ಲಿ ಆಧುನಿಕ ಸಂದರ್ಭದಲ್ಲಿ ಬಳಕೆಯಲ್ಲಿರುವುದನಗನು ಗುರುತಿಸಲಾಗಿದೆ.

ಗೊಲ್ಲರ ಸಿಯಣ್ಣ

ಗೊರವರ ಭರಮಪ್ಪ

ಹರಿಜನ ಹನುಮಂತಪ್ಪ

ಮಾದಿಗರ ಪರಮೇಶಿ

ವಡ್ಡರ ತಿಮ್ಮಪ್ಪ

ಈಡಿಗರ ನಾಗರಾಜ

**೩.೧೪.೧೦. ಜಾತಿ/ವೃತ್ತಿ/ಅಧಿಕಾರವಾಚಿ 'ಗೌಡ' ವಾರ್ಗಿಕಕ್ಕೆ ಬಂಧುವಾಚಿ ವಾರ್ಗಿಕಗಳು ಸೇರಿ ವ್ಯಕ್ತಿನಾಮಗಳಾಗುವುದನ್ನು ಈ ಪರಿಸರದಲ್ಲಿ ಗುರುತಿಸಲಾಗಿದೆ.**

ಸಾಮಾನ್ಯವಾಗಿ ಜಾತಿವಾಚಿ ಮತ್ತು ಅಧಿಕಾರವಾಚಿಯಾಗಿ ಬಳಕೆಯಲ್ಲಿರುವ 'ಗೌಡ' ಎಂಬ ವಾರ್ಗಿಕಕ್ಕೆ ಮಾತ್ರ ಬಂಧುವಾಚಿಗಳು ಸೇರಿ ತುಮಕೂರು ಪರಿಸರದಲ್ಲಿ ವ್ಯಕ್ತಿನಾಮಗಳಾಗುವುದನ್ನು ಕಾಣಬಹುದು.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ಜಾತಿ/ವೃತ್ತಿವಾಚಿ+ಬಂಧುವಾಚಿ=ವ್ಯಕ್ತಿನಾಮ** | **ಜಾತಿ/ವೃತ್ತಿವಾಚಿ+ಬಂಧುವಾಚಿ= ವ್ಯಕ್ತಿನಾಮ** |
| ಗೌಡ + ಅಪ್ಪ = ಗೌಡಪ್ಪ | ಗೌಡ + ಅಮ್ಮ = ಗೌಡಮ್ಮ |
| ಗೌಡ + ಅಯ್ಯ = ಗೌಡಯ್ಯ | |
| ಗೌಡ + ಅಣ್ಣ = ಗೌಡಣ್ಣ | |

**೩.೧೪.೧೧. ನಿರ್ದಿಷ್ಟ + ಬಂಧುವಾಚಿ + ಜಾತಿ/ವೃತ್ತಿ = ವ್ಯಕ್ತಿನಾಮ**

ವ್ಯಕ್ತಿನಾಮಗಳ ರಚನೆಯ ಆರಂಭದಲ್ಲಿ ನಿರ್ದಿಷ್ಟವಾಚಿಗಳಿದ್ದು ಅವುಗಳಿಗೆ ಬಂಧುವಾಚಿ ಮತ್ತು ಜಾತಿ ಅಥವಾ ವೃತ್ತಿ ವಾಚಿ ವಾರ್ಗಿಕಗಳು ಸೇರಿ ಪೂರ್ಣ ವ್ಯಕ್ತಿನಾಮಗಳಾಗುತ್ತವೆ.

**ಉದಾ:-**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ನಿರ್ದಿಷ್ಟ+ಬಂಧುವಾಚಿ+ಜಾತಿವಾಚಿ=ವ್ಯಕ್ತಿನಾಮ** | **ನಿರ್ದಿಷ್ಟ+ಬಂಧುವಾಚಿ+ಜಾತಿವಾಚಿ=ವ್ಯಕ್ತಿನಾಮ** |
| ನಾಗ + ಅಯ್ಯ + ಶಾಸ್ತ್ರಿ = ನಾಗಯ್ಯಶಾಸ್ತ್ರಿ | ಅಬ್ಬ + ಅಕ್ಕ + ಶೆಟ್ಟಿ = ಅಬ್ಬಕ್ಕಶೆಟ್ಟಿ |
| ತಿಮ್ಮ + ಅಣ್ಣ + ನಾಯ್ಕ = ತಿಮ್ಮಣ್ಣನಾಯ್ಕ | ಕಮಲ + ಅಮ್ಮ + ನಾಯ್ಕ= ಕಮಲಮ್ಮನಾಯ್ಕ |
| ನರಸ + ಅಪ್ಪ + ನಾಯಕ= ನರಸಪ್ಪನಯಕ | ನಂಜ + ಅಮ್ಮ + ಗೌಡ = ನಂಜಮ್ಮಗೌಡ |
| ತಿಮ್ಮ + ಅಪ್ಪ + ನಾಯಕ= ತಿಮ್ಮಪ್ಪನಾಯಕ | |
| ಹನುಮ+ ಅಣ್ಣ + ನಾಯಕ= ಹನುಮಣ್ಣನಾಯಕ | |

**೩.೧೪.೧೨. ವೃತ್ತಿವಾಚಿ ವಾರ್ಗಿಕಗಳು**

ಪ್ರಾಚೀನ ಕಾಲದಲ್ಲಿ ಮನುಷ್ಯ ತಾನು ಮಾಡುವ ಕೆಲಸದಿಂದ ಗುರುತಿಸಲ್ಪಡುತ್ತಿದ್ದನು. ಅಂದರೆ ತನ್ನ ವೃತ್ತಿಯಿಂದ ಸಮುದಾಯದಲ್ಲಿ ಚಿರಪರಿಚಿತನಾದಂತಹ ವ್ಯಕ್ತಿಯ ಹೆಸರಿನೊಂದಿಗೆ ಅವರು ಮಾಡುವ ವೃತ್ತಿಯು ಸೇರಿಕೊಳ್ಳುತ್ತಿತ್ತು. ಹಾಗಾಗಿ ಅವರ ವೃತ್ತಿಗಳು ವ್ಯಕ್ತಿನಾಮಗಳ ರಚನೆಯಲ್ಲಿ ವಾರ್ಗಿಕಗಳಾಗಿ ಬಳಕೆಯಾಗಿವೆ. ವೃತ್ತಿವಾಚಿ ವಾರ್ಗಿಕಗಳು ಸ್ವತಂತ್ರ ಘಟಕಗಳಾಗಿ ಬಳಕೆಯಾಗುವುದಿಲ್ಲ.

ಬದಲಾಗಿ ಬೇರೊಂದು ನಿರ್ದಿಷ್ಟದಿಂದಲೋ ಅಥವಾ ಮತ್ತೊಂದು ವಾರ್ಗಿಕದೊಂದಿಗೊ ಸೇರಿ ವ್ಯಕ್ತಿನಾಮಗಳಾಗಿ ಬಳಕೆಯಾಗುತ್ತಿವೆ. "ಈ ಹಿಂದೆ ಬಳಕೆಯಾಗುತ್ತಿದ್ದ ವೃತ್ತಿವಾಚಿ ವಾರ್ಗಿಕಕ್ಕೂ ಇಂದಿನ ಹೆಸರಿನೊಂದಿಗೆ ಬಳಕೆಯಾಗುತ್ತಿರುವ ವೃತ್ತಿವಾಚಿ ವಾರ್ಗಿಕಕ್ಕೂ ಯಾವುದೇ ನೇರ ಸಂಬಂಧ ಇಲ್ಲದಿರಬಹುದು. ಆದರೆ ಅವು ಪರಸ್ಪರ ವೃತ್ತಿ ಮತ್ತು ವ್ಯಕ್ತಿಗೆ ಅವಿನಾಭಾವ ಸಂಬಂಧವನ್ನು ಬೆಸಿದಿವೆ ಎನ್ನಬಹುದು"(ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೧೭, ೧೮). ಪ್ರಾಚೀನ ಕಾಲದಲ್ಲಿ ವೃತ್ತಿವಾಚಕಗಳು ಸಾಮಾನ್ಯವಾಗಿ ಪುರುಷ ಪ್ರಧಾನವಾಗಿ ಬಳಕೆಯಾಗುತ್ತಿದ್ದು, ವಿರಳವಾಗಿ ಸ್ತ್ರೀವಾಚಿ ವ್ಯಕ್ತಿ ನಾಮಗಳಲ್ಲಿ ಕಂಡುಬಂದಿವೆ. ಆದರೆ ಆಧುನಿಕ ಸಂದರ್ಭದಲ್ಲಿ ಪುರುಷ ಮತ್ತು ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ವೃತ್ತಿವಾಚಕ ವಾರ್ಗಿಕಗಳು ಬಳಕೆಯಾಗುತ್ತಿದ್ದರೂ ಸಹ ಅವರ ವೃತ್ತಿಗೂ ಮತ್ತು ವ್ಯಕ್ತಿಯ ಹೆಸರಿಗೂ ಯಾವುದೇ ಸಂಬಂಧವಿರುವುದಿಲ್ಲ. ಏಕೆಂದರೆ ಅವರ ಮನೆತನದವರು ಯಾವುದೋ ಕಾಲದಲ್ಲಿ ನಡೆಸುತ್ತಿದ್ದ ವೃತ್ತಿಯನ್ನೇ ಇಂದಿಗೂ ಹೆಸರುಗಳಲ್ಲಿ ಬಳಸುತ್ತಿರುವುದು ಕಂಡುಬರುತ್ತದೆ. ತುಮಕೂರು ಪರಿಸರದಲ್ಲಿ ಬಳಕೆಯಲ್ಲಿರುವ ವೃತ್ತಿವಾಚಿ ವಾರ್ಗಿಕಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

**ನಿರ್ದಿಷ್ಟ + ವೃತ್ತಿವಾಚಿವಾರ್ಗಿಕ = ವ್ಯಕ್ತಿನಾಮ**

ಉದಾ:-

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ನಿರ್ದಿಷ್ಟ+ವೃತ್ತಿವಾಚಿ= ವ್ಯಕ್ತಿನಾಮ** | **ನಿರ್ದಿಷ್ಟ+ ವೃತ್ತಿವಾಚಿ = ವ್ಯಕ್ತಿನಾಮ** |
| ದೊಡ್ಡ + ಬಸವ = ದೊಡ್ಡಬಸವ | ದೊಡ್ಡ + ಮಲ್ಲಿ = ದೊಡ್ಡಮಲ್ಲಿ |
| ನಾರಾಯಣ + ಆಚಾರಿ = ನಾರಾಯಣಾಚಾರಿ | ಮಂಜುಳ+ಆಚಾರಿ = ಮಂಜುಳಾಚಾರಿ |
| ಗೌತಮ + ಅರಸ = ಗೌತಮ್ ಅರಸ | ಐಶ್ವರ್ಯ+ಗೌಡ = ಐಶ್ವರ್ಯಗೌಡ |
| ರಂಗನಾಥ + ಗೌಡ = ರಂಗನಾಥಗೌಡ | ಲಲಿತಾ + ನಾಯಕ = ಲಲಿತನಾಯಕ್ |
| ಮಲ್ಲ + ನಾಯಕ= ಮಲ್ಲನಾಯಕ | ಸುಧಾ + ರಾಣಿ = ಸುಧಾರಾಣಿ |
| ರಾಮ + ನಾಯ್ಕ = ರಾಮಾನಾಯ್ಕ | ಚನ್ನ + ನಾಗತಿ = ಚನ್ನನಾಗತಿ |
| ನಿಖಿಲ್ + ಗೌಡ = ನಿಖಿಲ್‌ಗೌಡ | ಶಿವು + ಗಾವುಂಡಿ = ಶಿವುಗಾವುಂಡಿ |
| ರಂಜಿತ್ + ಗೌಡ = ರಂಜಿತ್‌ಗೌಡ | ಮಾಚ + ನಾಯಕಿತಿ = ಮಾಚನಾಯಕಿತಿ |
| ಅನಂತ್ + ಪಾಟೀಲ= ಅನಂತ್‌ಪಾಟೀಲ | ಸೋರಿ + ಗಾವುಂಡಿ = ಸೋರಿಗಾವುಂಡಿ |
| ನಿಂಗ + ಗೌಡ = ನಿಂಗನಗೌಡ | ಗೀತಾ + ಬಡಿಗೇರ = ಗೀತಾಬಡಿಗೇರ |
| | ದುಗ್ಗ + ಗಾವುಡಿ = ದುಗ್ಗಗವುಡಿ |
| | ಮಾಚ + ಗಾವುಂಡಿ = ಮಾಚಗಾವುಂಡಿ |
| | ತೇಜಸ್ವಿನಿ + ಗೌಡ = ತೇಜಸ್ವಿನಿಗೌಡ |
| | ಶ್ವೇತಾ + ನಾಗತಿ = ಶ್ವೇತನಾಗತಿ |

ಈ ಮೇಲಿನ ಉದಾಹರಣೆಗಳಲ್ಲಿ ಕೆಲವು ಸ್ತ್ರೀವಾಚಿ ಹೆಸರುಗಳು ಪ್ರಾಚೀನಕಾಲದಲ್ಲಿ ಬಳಕೆಯಲ್ಲಿದ್ದು ಪ್ರಸ್ತುತ ಸಂದರ್ಭದಲ್ಲಿ ಕಂಡುಬರುವುದಿಲ್ಲ.

**ವೃತ್ತಿವಾಚಿ + ನಿರ್ದಿಷ್ಟ = ವ್ಯಕ್ತಿನಾಮ**

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ವೃತ್ತಿವಾಚಿ+ನಿರ್ದಿಷ್ಟ= ವ್ಯಕ್ತಿನಾಮ** | **ವೃತ್ತಿವಾಚಿ +ನಿರ್ದಿಷ್ಟ= ವ್ಯಕ್ತಿನಾಮ** |
| ಪಟೇಲ್ + ರಂಗನಾಥ= ಪಟೇಲ್‌ರಂಗನಾಥ | ರಾಣಿ + ಅಬ್ಬಕ್ಕ = ರಾಣಿ ಅಬ್ಬಕ್ಕ |
| ರಾಜ + ನರಸಿಂಹ= ರಾಜನರಸಿಂಹ | ಗೊಂಚಿಕಾರ+ ಬಸಮ್ಮ = ಗೊಂಚಿಕಾರಬಸಮ್ಮ |
| ಗೌಡರ + ಬಸವ = ಗೌಡರ ಬಸವ | ಗೌಡರ + ಪಾಪಮ್ಮ = ಗೌಡರಪಾಪಮ್ಮ |
| ಗೊರವರ + ಭೀಮ = ಗೊರವರ ಭೀಮ | |
| ಈಡಿಗರ + ಸುರೇಶ = ಈಡಿಗರ ಸುರೇಶ | |
| ಪಟೇಲ್ + ಚಂದ್ರಶೇಖರ= ಪಟೇಲ್ ಚಂದ್ರಶೇಖರ | |
| ಕುಂಬಾರ + ಕೇಶವ = ಕುಂಬಾರ ಕೇಶವ | |
| ಹರಿಜನ + ರಾಮ = ಹರಿಜನ ರಾಮ ಇತ್ಯಾದಿ, | |

ಈ ಮೇಲಿನ ಉದಾಹಾರಣೆಗಳಲ್ಲಿನ ಹೆಸರುಗಳು ತುಮಕೂರು ಪರಿಸರದಲ್ಲಿ ಬಳಕೆಯ ನೆಲೆಯಲ್ಲಿ ಕಾಣಬಹುದು. ಆದರೆ ಉತ್ತರ ಕರ್ನಾಟಕದ ಪರಿಸರದಲ್ಲಿ ಈ ರೀತಿಯ ವ್ಯಕ್ತಿನಾಮಗಳು ಆ ವ್ಯಕ್ತಿಯ ನಿಜನಾಮಗಳಾಗಿ ಕಂಡುಬಂದಿವೆ. ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಈ ರೀತಿಯ ವ್ಯಕ್ತಿನಾಮಗಳು ತುಮಕೂರು ಪರಿಸರದಲ್ಲಿ ಕಂಡುಬರುವುದು ಕಡಿಮೆ.

**೩.೧೪.೧೩. ಜಾತಿವಾಚಿ ವಾರ್ಗಿಕಗಳು**

ಮಾನವರು ಆರಂಭದಲ್ಲಿ ಅಲೆಮಾರಿ ಜೀವನ ನಡೆಸಿ ನಂತರ ಒಂದು ಕಡೆ ನೆಲೆ ನಿಂತು ಸಂಘಜೀವಿಯಾಗಿ ಬದುಕಲು ಆರಂಭಿಸಿದ ನಂತರದಲ್ಲಿ ಜೀವನೋಪಾಯಕ್ಕಾಗಿ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ವೃತ್ತಿಯನ್ನು ಆರಂಭಿಸಿದರು. ನಂತರ ಆ ವೃತ್ತಿಯೇ ಆತನ ಜಾತಿಯಾಗಿ ಬದಲಾವಣೆ ಪಡೆದುಕೊಂಡಿತು. ಹಾಗಾಗಿ ಸಮುದಾಯದಲ್ಲಿನ ವ್ಯಕ್ತಿಗಳ ಜಾತಿಯು ಆ ಸಮುದಾಯದ ಜನರ ಹೆಸರುಗಳಲ್ಲಿ ಸೇರಿಕೊಂಡು ಬಳಕೆಗೆ ಬಂದಿರುವುದನ್ನು ಗುರುತಿಸಬಹುದು. ಆದರೆ ಜಾತಿವಾಚಿಗಳು ಸ್ವತಂತ್ರ ಘಟಕಗಳಾಗಿ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿಲ್ಲ. ಬದಲಾಗಿ ಯಾವುದಾದರೊಂದು ನಿರ್ದಿಷ್ಟದೊಡನೆಯೋ ಅಥವಾ ಮತ್ತೊಂದು ವಾರ್ಗಿಕದೊಡನೆಯೋ ಸೇರಿ ಪೂರ್ಣ ಘಟಕದ ವ್ಯಕ್ತಿನಾಮವಾಗಿ ಬಳಕೆಯಾಗುತ್ತಿದೆ. ತುಮಕೂರು ಪರಿಸರದಲ್ಲಿ ಜಾತಿವಾಚಿ ವಾರ್ಗಿಕಗಳು ಯಾವ ಯಾವ ಸ್ವರೂಪದಲ್ಲಿ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

**ನಿರ್ದಿಷ್ಟ + ಜಾತಿವಾಚಿ ವಾರ್ಗಿಕ = ವ್ಯಕ್ತಿನಾಮ**

**ಉದಾ:**

| **'ಅ' ಪಟ್ಟಿ** | | | | | **'ಬ' ಪಟ್ಟಿ** | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| ರಂಜಿತ್ | + | ಗೌಡ | = | ರಂಜಿತ್‌ಗೌಡ | ಐಶ್ವರ್ಯ | + | ಗೌಡ | = | ಐಶ್ವರ್ಯಗೌಡ |
| ಲೋಕೇಶ್ | + | ಆಚಾರಿ | = | ಲೋಕೇಶಾಚಾರಿ | ಮಂಜುಳ | + | ಆಚಾರಿ | = | ಮಂಜುಳ ಆಚಾರಿ |
| ವಿಠಲ್ | + | ತಳವಾರ | = | ವಿಠಲ್‌ತಳವಾರ | ರಕ್ಷಿತಾ | + | ಶೆಟ್ಟಿ | = | ರಕ್ಷಿತಾಶೆಟ್ಟಿ |
| ರಂಗನಾಥ | + | ಯಾದವ | = | ರಂಗನಾಥಯಾದವ | ಸುಮಾ | + | ಶೆಟ್ಟಿ | = | ಸುಮಾಶೆಟ್ಟಿ |
| ಚಂದ್ರ | + | ನಾಯ್ಕ | = | ಚಂದ್ರನಾಯ್ಕ | ಆಶಾ | + | ರೆಡ್ಡಿ | = | ಆಶಾರೆಡ್ಡಿ |
| ಕೃಷ್ಣ | + | ನಾಯಕ | = | ಕೃಷ್ಣನಾಯಕ | ಕಲ್ಪನಾ | + | ಶೆಟ್ಟಿ | = | ಕಲ್ಪನಾಶೆಟ್ಟಿ |
| ಸೋಮಶೇಖರ | + | ಉಪ್ಪಾರ | = | ಸೋಮಶೇಖರಉಪ್ಪಾರ | ಪ್ರೇಮ | + | ನಾಯಕ | = | ಪ್ರೇಮನಾಯಕ |
| ಮಲ್ಲ | + | ರೆಡ್ಡಿ | = | ಮಲ್ಲಾರೆಡ್ಡಿ | ಪಾರ್ವತಿ | + | ನಾಯಕ | = | ಪಾರ್ವತಿ ನಾಯಕ |
| ಗೋಪಾಲ | + | ಶೆಟ್ಟಿ | = | ಗೋಪಾಲಶೆಟ್ಟಿ | ಲಲಿತ | + | ನಾಯ್ಕ | = | ಲಲಿತನಾಯ್ಕ |
| ಯೋಗೀಶ | + | ಲಂಬಾಣಿ | = | ಯೋಗೀಶಲಂಬಾಣಿ | ಕವಿತ | + | ಶೆಟ್ಟಿ | = | ಕವಿತಶೆಟ್ಟಿ |

ಈ ಮೇಲಿನ ಪಟ್ಟಿಯಲ್ಲಿರುವ ಉದಾಹರಣೆಗಳಲ್ಲಿನ ಮಾದರಿಗಳು ಪ್ರಸ್ತುತ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ. ಆದರೆ ಈ ರೂಪಗಳು ನಿಜನಾಮ ನಿರ್ದೇಶನದ ಸಂದರ್ಭದಲ್ಲಿಯೇ ಬಂದಿವೆ ಎಂದು ಹೇಳಲಾಗುವುದಿಲ್ಲ. ಬದಲಾಗಿ ವ್ಯಕ್ತಿಯು ಸಮಾಜದೊಂದಿಗೆ ಬೆರೆತು ತನ್ನ ಅಸ್ಮಿತೆಯನ್ನು ಗುರ್ತಿಸಿಕೊಳ್ಳುವುದಕ್ಕಾಗಿ ಈ ರೀತಿಯ ಬದಲಾವಣೆಗಳಾಗಿರುವ ಸಾಧ್ಯತೆಯಿದೆ. ಆರಂಭದಲ್ಲಿ ಜಾತಿವಾಚಿ ವಾರ್ಗಿಕಗಳು ಎಲ್ಲಾ ಜಾತಿಗಳಲ್ಲಿನ ವ್ಯಕ್ತಿನಾಮಗಳಲ್ಲಿ ಕಂಡುಬರುವುದಿಲ್ಲ. ಬ್ರಾಹ್ಮಣ ಸಮುದಾಯ ಮತ್ತು ಗೌಡ ಸಮುದಾಯದಲ್ಲಿ ಮಾತ್ರ ಈ ರೀತಿಯ ವ್ಯಕ್ತಿನಾಮಗಳು ಹೆಚ್ಚಾಗಿ ಬಳಕೆಯಲ್ಲಿದ್ದವು ಎಂಬುದನ್ನು ಶಾಸನಗಳಲ್ಲಿ ದೊರೆತ ಆಧಾರದ ಮೇಲೆ ಹೇಳಲಾಗಿದೆ.

**ಜಾತಿವಾಚಿ ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮಗಳು**

**ಉದಾ:**

| **'ಅ' ಪಟ್ಟಿ** | | | | | **'ಬ' ಪಟ್ಟಿ** | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| **ಜಾತಿವಾಚಿ** | **+** | **ನಿರ್ದಿಷ್ಟ** | **=** | **ವ್ಯಕ್ತಿನಾಮ** | **ಜಾತಿವಾಚಿ** | **+** | **ನಿರ್ದಿಷ್ಟ** | **=** | **ವ್ಯಕ್ತಿನಾಮ** |
| ಉಪ್ಪಾರ | + | ರಮೇಶ್ | = | ಉಪ್ಪಾರ ರಮೇಶ್ | ಉಪ್ಪಾರ | + | ಕವಿತಾ | = | ಉಪ್ಪಾರ ಕವಿತ |
| ಉಪ್ಪಾರ | + | ಸತೀಶ್ | = | ಉಪ್ಪಾರ ಸತೀಶ್ | ಕುಂಬಾರ | + | ಮಂಜುಳ | = | ಕುಂಬಾರ ಮಂಜುಳ |
| ಕುಂಬಾರ | + | ಶೇಖರ | = | ಕುಂಬಾರ ಶೇಖರ | ಹರಿಜನ | + | ಶ್ವೇತ | = | ಹರಿಜನಶ್ವೇತ |

| | | | | | | | | | | |
|---|---|---|---|---|---|---|---|---|---|---|
| ಕುಂಬಾರ | + | ದ್ರುವ | = | ಕುಂಬಾರದ್ರುವ | ಶೆಟ್ಟರ | + | ಕಲ್ಪನ | = | ಶೆಟ್ಟರ ಕಲ್ಪನ |
| ಮಾದಿಗರ | + | ಬಸವರಾಜ | = | ಮಾದಿಗರಬಸವರಾಜ | ಗೌಡರ | + | ಅನಿತಾ | = | ಗೌಡರ ಅನಿತಾ |
| ಶೆಟ್ಟರ | + | ಗೋಪಾಲ | = | ಶೆಟ್ಟರ ಗೋಪಾಲ | ನಾಯಕರ | + | ಪಾರ್ವತಿ | = | ನಾಯಕರ ಪಾರ್ವತಿ |
| ಗೌಡರ | + | ರಂಗಧಾಮ | = | ಗೌಡರ ರಂಗಧಾಮ | | | | | |
| ನಾಯಕರ | + | ಲಿಂಗರಾಜ | = | ನಾಯಕರ ಲಿಂಗರಾಜ | | | | | |

ಈ ಮೇಲಿನ ಪಟ್ಟಿಯ ವ್ಯಕ್ತಿನಾಮಗಳು ಇಂದು ತುಮಕೂರು ಪರಿಸರದಲ್ಲಿ ಬಳಕೆಯಾಗುತ್ತಿರುವುದನ್ನು ಗುರುತಿಸಲಾಗಿದೆ. ಈ ರೀತಿಯ ವ್ಯಕ್ತಿನಾಮಗಳು ಆಧುನಿಕ ಸಂದರ್ಭದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿವೆ ಮತ್ತು ಈ ರೀತಿಯ ವ್ಯಕ್ತಿನಾಮಗಳು ವ್ಯಕ್ತಿಯ ನಿಜನಾಮ ನಿರ್ದೇಶನದ ಸಂದರ್ಭದಲ್ಲಿಯೇ ಬಂದಿರುವ ಸಾಧ್ಯತೆ ಕಡಿಮೆ. ಕಾಲಾನಂತರದಲ್ಲಿ ಆ ವ್ಯಕ್ತಿಯೇ ತನ್ನ ಹೆಸರಿನ ಮುಂದೆ ಅಥವಾ ಹಿಂದೆ ತನ್ನ ಜಾತಿಯನ್ನು ಪ್ರತಿನಿಧಿಸುವಂತೆ ಬಳಕೆ ಮಾಡಿರಬಹುದು.

**ಜಾತಿವಾಚಿ + ಬಂಧುವಾಚಿ = ವ್ಯಕ್ತಿನಾಮ**

ಉದಾ:

| **'ಅ' ಪಟ್ಟಿ** | | | | | **'ಬ' ಪಟ್ಟಿ** | | | | |
|---|---|---|---|---|---|---|---|---|---|
| **ಪುರುಷವಾಚಿ** | | | | | **ಸ್ತ್ರೀವಾಚಿ** | | | | |
| **ಜಾತಿವಾಚಿ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** | **ಜಾತಿವಾಚಿ** | **+** | **ಬಂಧುವಾಚಿ** | **=** | **ವ್ಯಕ್ತಿನಾಮ** |
| ಗೊಲ್ಲ | + | ಅಪ್ಪ | = | ಗೊಲ್ಲಪ್ಪ | ಗೊಲ್ಲ | + | ಅಮ್ಮ | = | ಗೊಲ್ಲಮ್ಮ |
| ಗೌಡ | + | ಅಯ್ಯ | = | ಗೌಡಯ್ಯ | ಗೌಡ | + | ಅಕ್ಕ | = | ಗೌಡಕ್ಕ |
| ಶೆಟ್ಟಿ | + | ಅಯ್ಯ | = | ಶೆಟ್ಟಯ್ಯ | ಗೌಡ | + | ಅಮ್ಮ | = | ಗೌಡಮ್ಮ |
| ರೆಡ್ಡಿ | + | ಅಪ್ಪ | = | ರೆಡ್ಡಪ್ಪ | ರೆಡ್ಡಿ | + | ಅಮ್ಮ | = | ರೆಡ್ಡಿಯಮ್ಮ |
| ನಾಯಕ | + | ಅಪ್ಪ | = | ನಾಯಕಪ್ಪ | ನಾಯಕ | + | ಅಮ್ಮ | = | ನಾಯಕಮ್ಮ |
| ಗೌಡ | + | ಅಪ್ಪ | = | ಗೌಡಪ್ಪ | | | | | |
| ಗೌಡ | + | ಅಣ್ಣ | = | ಗೌಡಣ್ಣ | | | | | |

ಈ ಮೇಲಿನ ಪಟ್ಟಿಯಲ್ಲಿ ಸ್ತ್ರೀವಾಚಿ ವ್ಯಕ್ತಿನಾಮಗಳು ಭಾಷಿಕವಾಗಿ ಸಾಧಿತ ರೂಪಗಳಾಗಿದ್ದು ಬಳಕೆಯೆ ನೆಲೆಯಲ್ಲಿ ಮಾತ್ರ ಕಂಡುಬಂದಿವೆ.

**ಜಾತಿವಾಚಿ + ನಿರ್ದಿಷ್ಟ + ಬಂಧುವಾಚಿ = ವ್ಯಕ್ತಿನಾಮ**

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ಜಾತಿವಾಚಿ+ನಿರ್ದಿಷ್ಟ+ಬಂಧುವಾಚಿ=ವ್ಯಕ್ತಿನಾಮ** | **ಜಾತಿವಾಚಿ+ನಿರ್ದಿಷ್ಟ+ಬಂಧುವಾಚಿ=ವ್ಯಕ್ತಿನಾಮ** |
| ಕುಂಚಿಟಿಗರ + ರಂಗ + ಅಪ್ಪ = ಕುಂಚಟಿಗರ ರಂಗಪ್ಪ | ಗೌಡರ + ರಂಗ + ಅಮ್ಮ = ಗೌಡರರಂಗಮ್ಮ |
| ಕುರುಬರ + ಬೀರ + ಅಪ್ಪ = ಕುರುಬರಬೀರಪ್ಪ | ನಾಯಕರ + ಮಂಜ + ಅಮ್ಮ = ನಾಯಕರಮಂಜಮ್ಮ |

ಗೊಲ್ಲರ + ಜುಂಜ + ಅಣ್ಣ = ಗೊಲ್ಲರಜುಂಜಣ್ಣ  ಕುರುಬರ + ಬೀರ + ಅಮ್ಮ = ಕುರುಬರಬೀರಮ್ಮ

ಹರಿಜನ + ಮಾದ + ಅಯ್ಯ = ಹರಿಜನಮಾದಯ್ಯ ಕುಂಚಿಟಗರ + ಜಯ + ಅಮ್ಮ = ಕುಂಚಿಟಿಗರಜಯಮ್ಮ

ವಡ್ಡರ + ಸೋಮ + ಅಪ್ಪ = ವಡ್ಡರ ಸೋಮಪ್ಪ

ಈಡಿಗರ + ಕೇಶವ + ಅಣ್ಣ = ಈಡಿಗರ ಕೇಶವಣ್ಣ

ಗೌಡರ + ನಿಂಗ + ಅಪ್ಪ = ಗೌಡರನಿಂಗಪ್ಪ

ಈ ಮೇಲಿನ ಪಟ್ಟಿಯ ವ್ಯಕ್ತಿನಾಮಗಳಲ್ಲಿ ಸಾಮಾನ್ಯವಾಗಿ ನಿರ್ದಿಷ್ಟ ಮತ್ತು ಬಂಧುವಾಚಿ ವಾರ್ಗಿಕಗಳೆರಡು ವ್ಯಕ್ತಿಯ ನಿಜನಾಮಗಳಾಗಿ ಕಂಡುಬರುತ್ತವೆ. ಬಳಕೆಯ ನೆಲೆಯಲ್ಲಿ ಮಾತ್ರ ಜಾತಿವಾಚಿ ವಾರ್ಗಿಕಗಳು ಸೇರುತ್ತವೆ ಎಂಬುದನ್ನು ಗುರುತಿಸಲಾಗಿದೆ. ಅಂದರೆ ನಿಜನಾಮವಾಗಿಯಾಗಲಿ ಅಥವಾ ದಾಖಲೆಗಳಲ್ಲಿ ನಮೂದಾಗಿರುವುದಾಗಲಿ ಈ ಮಾದರಿಯಲ್ಲಿ ವ್ಯಕ್ತಿನಾಮಗಳು ಈ ಪರಿಸರದಲ್ಲಿ ಕಂಡುಬಂದಿಲ್ಲ. ಆದರೆ ಉತ್ತರ ಕರ್ನಾಟಕದ ಭಾಗದಲ್ಲಿ ಈ ರೀತಿಯ ಸಾಧ್ಯತೆಗಳು ದಾಖಲೆಗಳಲ್ಲಿ ಕಂಡುಬರುತ್ತವೆ.

**೩.೧೫. ವ್ಯಕ್ತಿನಾಮಗಳಿಗೆ ಆದ್ಯಕ್ಷರದ ಬಳಕೆ**

ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿನ ವ್ಯಕ್ತಿನಾಮಗಳ ರಚನೆಯನ್ನು ಗಮನಿಸಿದರೆ ನಿಜನಾಮಗಳ ಜೊತೆಗೆ ಜನ್ಮಸ್ಥಳದ ಹೆಸರು ಹಾಗೂ ತಂದೆಯ ಹೆಸರುಗಳನ್ನು ಆದ್ಯಕ್ಷರಗಳ ರೂಪದಲ್ಲಿ ಬಳಸುತ್ತಾರೆ. ಅಂದರೆ ಇಲ್ಲಿ ನಿಜನಾಮ ಪ್ರಧಾನವಾಗಿದ್ದು ಊರಿನ ಮತ್ತು ತಂದೆಯ ಹೆಸರನ್ನು ಸಂಕ್ಷಿಪ್ತಗೊಳಿಸಲಾಗುತ್ತದೆ. ಆದರೆ ಉತ್ತರ ಕರ್ನಾಟಕ ಭಾಗಗಳಲ್ಲಿ ಆದ್ಯಕ್ಷರದ ಬದಲಾಗಿ ಪೂರ್ಣ ಹೆಸರುಗಳನ್ನ ಪ್ರಧಾನವಾಗಿ ಬಳಸಲಾಗುತ್ತದೆ. ಕೆಲವು ವ್ಯಕ್ತಿನಾಮಗಳಲ್ಲಿ ಸ್ಥಳನಾಮವನ್ನು ಕೈಬಿಟ್ಟು ತಂದೆಯ ಹೆಸರನ್ನು ಮಾತ್ರ ಆದ್ಯಕ್ಷರವಾಗಿ ಬಳಸುತ್ತಾರೆ. ತುಮಕೂರು ಪರಿಸರದಲ್ಲಿ ನಿಜನಾಮಗಳಿಗೆ ಸ್ಥಳನಾಮ ಮತ್ತು ತಂದೆಯ ಹೆಸರುಗಳನ್ನು ಹಲವು ಪ್ರಕಾರಗಳಲ್ಲಿ ಬಳಕೆ ಮಾಡುವುದನ್ನು ಗುರುತಿಸಲಾಗಿದೆ.

**ಆರಂಭದಲ್ಲಿ ಸ್ಥಳನಾಮ + ತಂದೆಯ ಹೆಸರು + ನಿಜನಾಮ = ವ್ಯಕ್ತಿನಾಮ**

**ಉದಾ:–**

| **‘ಅ’ ಪಟ್ಟಿ** | **‘ಬ’ ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೆ.ವಿ.ಗೋವಿಂದರಾಜು | ಜಿ.ಪಿ.ಅನ್ನಪೂರ್ಣ |
| ಜೆ.ಆರ್.ಮಹೇಶ್ | ಕೆ.ಎಸ್.ವನಜಾಕ್ಷಿ |
| ಪಿ.ಎನ್.ಮಂಜುನಾಥ | ಎಲ್.ಎಂ.ನಾಗರತ್ನ |
| ಕೆ.ಆರ್.ಗೋಪಾಲಯ್ಯ | ಬಿ.ಕೆ.ಸುಮಿತ್ರ |
| ಎಚ್.ಎನ್.ಮಾರುತಿ | ಎಸ್.ಕೆ.ಭಾರತಿ |
| ಜಿ.ಪಿ.ನರಸಪ್ಪ | ಎಚ್.ವಿ.ವಿಶಾಲಾಕ್ಷಿ |
| ಎಚ್.ಎನ್.ಚಿದಾನಂದ | ಬಿ.ಎಸ್.ಮಂಜುಳ |

| | |
|---|---|
| ಆರ್.ಕೆ.ಲೋಕೇಶ್ | ಬಿ.ಜಿ.ಮಮತ |
| ಎಲ್.ಎಂ.ನಾಗರಾಜ | ಎನ್.ಎಲ್.ನಾಗಮಣಿ ಮುಂತಾದವು. |

**೩.೧೫.೧. ಆರಂಭದಲ್ಲಿ ತಂದೆಯ ಆದ್ಯಕ್ಷರ + ನಿಜನಾಮ = ವ್ಯಕ್ತಿನಾಮ**

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೆ.ಅಶ್ವಥ | ಎನ್.ಪವಿತ್ರ |
| ಎಸ್.ನಿಂಗರಾಜು | ಎಲ್.ನಾಗರತ್ನ |
| ಎ.ಬಸವರಾಜ | ಇ.ಬಸಮ್ಮ |
| ಬಿ.ನಿಶಾಂತ್ | ಪಿ.ವಸಂತ |
| ಎಸ್.ರಂಗಯ್ಯ | ಎಂ.ವನಜ |
| ಜಿ.ಮಲ್ಲಯ್ಯ | ಕೆ.ಸುಧಾ |
| ಡಿ.ದೀಪಕ್ | ಎಸ್.ಮಮತಾ |
| ಎನ್.ನಟರಾಜು | ಎ.ಇಂದಿರಾ |
| ವಿ.ಸೋಮಣ್ಣ | ಡಿ.ವಸುಧಾ ಮುಂತಾದವು. |

**೩.೧೫.೨. ನಿಜನಾಮದ ಅಂತ್ಯದಲ್ಲಿ ಸ್ಥಳನಾಮ ಮತ್ತು ತಂದೆಯ ಆದ್ಯಕ್ಷರ ಬಳಕೆ**

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನಟರಾಜು ಜೆ.ಆರ್ | ಧನಲಕ್ಷ್ಮಿ ಜೆ.ಎಂ |
| ರಮೇಶ್ ಜೆ.ಆರ್ | ಭಾರತಿ ಎಸ್.ಎಲ್ |
| ರಂಜಿತ್ ಜೆ.ಆರ್ | ಮಂಜುಳ ಬಿ.ಆರ್ |
| ಬಸವರಾಜು ಜೆ.ಆರ್ | ರೇಣುಕಾ ಬಿ.ಎಸ್ |
| ಚಂದ್ರಶೇಖರ ಕೆ.ಸಿ | ಸೌಮ್ಯ ಕೆ.ವಿ |
| ಜಗದೀಶ್ ಪಿ.ಕೆ | ನೇತ್ರಾವತಿ ಎನ್.ಎಸ್ |
| ವಸಂತಕುಮಾರ್ ಸಿ.ಟಿ | ಮಮತಾ ಎಸ್.ಎಲ್ |
| ಉಮೇಶ ಕೆ.ಆರ್ | ರಾಧಾ ಸಿ.ಟಿ |
| ಸಿದ್ದರಾಜು ಕೆ.ಆರ್ | ಭವ್ಯ ಕೆ.ಆರ್ |
| ಅಶೋಕ ಎಸ್.ಎಲ್ | ಭಾಗ್ಯ ಜೆ.ಎಸ್ ಮುಂತಾದವು |

**೩.೧೫.೩. ನಿಜನಾಮದ ಅಂತ್ಯದಲ್ಲಿ ತಂದೆಯ ಆಧ್ಯಕ್ಷರ ಬಳಕೆ**

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅಶ್ವಥ ಕೆ | ಶೈಲಾ ಪಿ |
| ಮುರಳಿ ಎಸ್ | ಮಮತಾ ಜಿ |
| ರಂಗಪ್ಪ ಜಿ | ಸುಮಾ ಕೆ |
| ನಿಂಗರಾಜು ಆರ್ | ಗೀತಾ ಎಲ್ |
| ಪ್ರೀತಮ್ ಬಿ | ಪೂರ್ಣಿಮ ಬಿ ಮುಂತಾದವು |

ಈ ಮೇಲಿನ ಆಧ್ಯಕ್ಷರಗಳ ಕುರಿತು ಚರ್ಚಿಸಿರುವ ವ್ಯಕ್ತಿನಾಮಗಳೆಲ್ಲವು ಶಾಲಾ ದಾಖಲೆಗಳಲ್ಲಿ ದೊರೆತ ಮಾಹಿತಿಗಳಾಗಿರುತ್ತವೆ. ಅಂದರೆ ಸಮಾಜದಲ್ಲಿ ಶಿಕ್ಷಣ ಪಡೆದು ಶಿಕ್ಷಿತರೆನಿಸಿಕೊಂಡ ಸಮುದಾಯಗಳಲ್ಲಿ ಮಾತ್ರ ಈ ರೀತಿಯ ಆಧ್ಯಕ್ಷರಗಳು ಬಳಕೆಯಗುತ್ತಿವೆ. ಆದರೆ ಸಮಾಜದಲ್ಲಿ ಶಿಕ್ಷಣದಿಂದ ವಂಚಿತರಾದವರ ಹೆಸರುಗಳಲ್ಲಿ ಆಧ್ಯಕ್ಷರಗಳ ಬಳಕೆ ತುಂಬಾ ಕಡಿಮೆ. ಈ ಸ್ವರೂಪದ ವ್ಯಕ್ತಿನಾಮಗಳು ಆಧುನಿಕ ಸಂದರ್ಭದಲ್ಲಿ ಹೆಚ್ಚಾಗಿ ಗೋಚರಿಸಿವೆ. ಏಕೆಂದರೆ ಎಲ್ಲಾ ವರ್ಗದ ಜನರು ವಿದ್ಯಾವಂತರಾಗುತ್ತಿದ್ದಾರೆ. ಮತ್ತೊಂದು ವಿಶೇಷವೆಂದರೆ ನಿಜನಾಮಗಳಿಗೆ ಆದ್ಯಕ್ಷರಗಳು ದಾಖಲೆಗಳಲ್ಲಿ ಮಾತ್ರ ಬಳಕೆಯಲ್ಲಿದ್ದು ಆ ದಾಖಲೆಗಳಿರುವ ಇಲಾಖೆಗಳಲ್ಲಿ ಮಾತ್ರ ಆ ವ್ಯಕ್ತಿಯನ್ನು ಗುರುತಿಸಲು ಬಳಸಲ್ಪಡುತ್ತದೆ. ಇತರೆ ಬಳಕೆಯ ವಲಯದಲ್ಲಿ ಆದ್ಯಕ್ಷರಗಳು ಬಳಕೆಯಾಗುವುದಿಲ್ಲ.

**೩.೧೬. ಸ್ತ್ರೀವಾಚಿ ವ್ಯಕ್ತಿನಾಮಗಳ ಜೊತೆಗೆ ಗಂಡನ ಹೆಸರು ಬಳಕೆ**

ಶೈಲಾ ನಾಗರಾಜ

ಮಮತಾ ಅಶೋಕ

ರಾಧಾಕೃಷ್ಣ

ಸುಧಾ ರಮೇಶ

ಶೋಭಾ ರಂಗನಾಥ

ಮಂಜುಳಾ ಬಸವರಾಜ

ಪ್ರೀತಿ ಶುಭಚಂದ್ರ

ಪ್ರೀತಿ ನಾಗರಾಜು

ಈ ಮೇಲಿನ ಪಟ್ಟಿಯಲ್ಲಿ ಸ್ತ್ರೀನಾಮಗಳೊಂದಿಗೆ ತನ್ನ ಗಂಡನ ಹೆಸರನ್ನು ಸೇರಿಸಿಕೊಳ್ಳಲಾಗಿದೆ. ಮದುವೆಗೆ ಪೂರ್ವದಲ್ಲಿ ತಂದೆಯ ಹೆಸರು ಬಳಸುವುದೂ ಇದೆ.

**೩.೧೭. ನಿಜನಾಮಗಳಿಗೆ ಸ್ಥಳನಾಮಗಳ ಸೇರ್ಪಡೆ**

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕರೀಗೌಡ ಬೀಚನಹಳ್ಳಿ | ಸುಧಾ ಬರಗೂರು |
| ಶಿವಣ್ಣ ತಿಮ್ಮಲಾಪುರ | ಕವಿತಾ ಬಿಳಿಗೆರೆ |
| ಶಿವಣ್ಣ ಮೀರಸವಳ್ಳಿ | ಶೃತಿ ಬೆಳ್ಳಾವಿ |
| ಪ್ರೀತಮ್ ಗುಬ್ಬಿ | |
| ಸೋಮಣ್ಣ ಮತ್ತಿಕೆರೆ | |
| ಕರಿಯಣ್ಣ ಹೊನಗನಹಳ್ಳಿ | |
| ಕೃಷ್ಣಮೂರ್ತಿ ಬಿಳಿಗೆರೆ | |
| ರವಿ ಹೊಸಕೆರೆ | |
| ಬಸವರಾಜು ಮಾಗಡಿ | |

ಈ ಮೇಲಿನ ಪಟ್ಟಿಯಲ್ಲಿರುವ ವ್ಯಕ್ತಿನಾಮಗಳ ಮಾದರಿಗಳು ಕಂಡುಬಂದರೂ ಇವು ನಾಮಕರಣದ ಸಂದರ್ಭದಲ್ಲಿ ಬಂದಂತಹವುಗಳಲ್ಲ. ಬದಲಾಗಿ ನಂತರದ ದಿನಗಳಲ್ಲಿ ಸೇರಿಸಿ ಕೊಂಡಂತಹದು. ಮುಂದೆ ಇದೇ ವ್ಯಕ್ತಿನಾಮವಾಗಿ ಬಳಕೆಯಾಗುತ್ತಲೂ ಹೋಗುತ್ತದೆ.

**೩.೧೮. ಗೌರವವಾಚಿ ವ್ಯಕ್ತಿನಾಮಗಳು**

ಪ್ರಾಚೀನ ಕಾಲದಿಂದಲೂ ಮನುಷ್ಯರು ತಮ್ಮ ವ್ಯಕ್ತಿತ್ವದಿಂದ ಗೌರವಾಧರಗಳಿಗೆ ಭಾಜನವಾಗುತ್ತಾ ಬಂದಿದ್ದಾರೆ. ಸಮಾಜದಲ್ಲಿ ತಾನು ಗಳಿಸಿರುವ ಸ್ಥಾನ ಮಾನಗಳಿಗೆ ಅನುಗುಣವಾಗಿ ಸಮುದಾಯದ ಇತರೆ ವ್ಯಕ್ತಿಗಳಿಂದ ಗೌರವಿಸಲ್ಪಡುತ್ತಾರೆ. ಹೀಗೆ ಗೌರವಗಳನ್ನು ಅವರ ಹೆಸರುಗಳೊಂದಿಗೆ ಸೇರಿಸಿ ಸಂಬೋಧನೆ ಮಾಡಲಾಗುತ್ತದೆ. ಹಾಗಾಗಿ "ಸಮಾಜದಲ್ಲಿ ವ್ಯಕ್ತಿಗೆ ನೀಡುವ ಗೌರವದ ಪ್ರತೀಕವಾಗಿ ವ್ಯಕ್ತಿನಾಮಗಳಲ್ಲಿ ಗೌರವವಾಚಿ ವಾರ್ಗಿಕಗಳು ಬಳಕೆಯಲ್ಲಿವೆ. ಗೌರವವಾಚಿ ವಾರ್ಗಿಕಗಳು ಆಯಾ ವ್ಯಕ್ತಿಯ ಸ್ಥಾನಮಾನವನ್ನು ನಿರ್ದೇಶಿಸುತ್ತಿರುತ್ತವೆ"(ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೨೦). ಗೌರವವಾಚಿ ವಾರ್ಗಿಕಗಳು ಸ್ವತಂತ್ರವಾಗಿ ಕೆಲವು ವೇಳೆಯೂ ಬಳಕೆಯಾಗುತ್ತವೆ.

ಸ್ವಾಮಿ:

ಉದಾ:

| **ನಿರ್ದಿಷ್ಟ** | **+ ಗೌರವವಾಚಿ ವಾರ್ಗಿಕ** | **= ವ್ಯಕ್ತಿನಾಮ** |
|---|---|---|
| ರಂಗ | + ಸ್ವಾಮಿ | = ರಂಗಸ್ವಾಮಿ |
| ತಿಪ್ಪ | + ಸ್ವಾಮಿ | = ತಿಪ್ಪೆಸ್ವಾಮಿ |

ಗುರು + ಸ್ವಾಮಿ = ಗುರುಸ್ವಾಮಿ

ನಾರಾಯಣ + ಸ್ವಾಮಿ = ನಾರಾಯಣಸ್ವಾಮಿ

ರಾಮ + ಸ್ವಾಮಿ = ರಾಮಸ್ವಾಮಿ

ಕುಮಾರ + ಸ್ವಾಮಿ = ಕುಮಾರಸ್ವಾಮಿ

ಮಹಾಲಿಂಗ + ಸ್ವಾಮಿ = ಮಹಾಲಿಂಗಸ್ವಾಮಿ

ಅನಂತ + ಸ್ವಾಮಿ = ಅನಂತಸ್ವಾಮಿ ಮುಂತಾದವು

**ದೇವ:**

**ಉದಾ:**

**ನಿರ್ದಿಷ್ಟ + ಗೌರವವಾಚಿ ವಾರ್ಗಿಕ= ವ್ಯಕ್ತಿನಾಮ**

ಮಹಾ + ದೇವ = ಮಹಾದೇವ

ಗುರು + ದೇವ = ಗುರುದೇವ

**ರಾಯ:**

**ಉದಾ:**

**ನಿರ್ದಿಷ್ಟ +ಗೌರವವಾಚಿ ವಾರ್ಗಿಕ = ವ್ಯಕ್ತಿನಾಮ**

ಚೆಲುವ +ರಾಯ = ಚೆಲುವರಾಯ

ಚನ್ನಪ್ಪ +ರಾಯ = ಚನ್ನಪ್ಪರಾಯ

ತಿಮ್ಮ +ರಾಯ = ತಿಮ್ಮರಾಯ

ರಂಗ +ರಾಯ = ರಂಗರಾಯ

**ದೇವಿ:**

**ಉದಾ:**

**ನಿರ್ದಿಷ್ಟ +ಗೌರವವಾಚಿ ವಾರ್ಗಿಕ = ವ್ಯಕ್ತಿನಾಮ**

ಮಹಾ +ದೇವಿ = ಮಹಾದೇವಿ

ಉಮಾ +ದೇವಿ = ಉಮಾದೇವಿ

ಉಷಾ +ದೇವಿ = ಉಷಾದೇವಿ

ಮಂಗಳ +ದೇವಿ = ಮಂಗಳದೇವಿ

ಮಂಜುಳ +ದೇವಿ = ಮಂಜುಳದೇವಿ

ಶ್ರೀ +ದೇವಿ = ಶ್ರೀದೇವಿ

ಭೂ +ದೇವಿ = ಭೂದೇವಿ

ಈ ಮೇಲಿನ ಗೌರವವಾಚಿ ವ್ಯಕ್ತಿನಾಮಗಳಲ್ಲಿ ಸ್ವಾಮಿ, ದೇವ, ರಾಯ, ದೇವಿ ಈ ವಾರ್ಗಿಕಗಳು ಆರಂಭವಾದ ಕಾಲಘಟ್ಟದಲ್ಲಿ ವ್ಯಕ್ತಿಯ ಸ್ಥಾನಮಾನಗಳಿಗೆ ಅನುಗುಣವಾಗಿ ಬಳಕೆಯಗುತ್ತಿದ್ದವು.

ಆದರೆ ಪ್ರಸ್ತುತ ಸಂದರ್ಭದಲ್ಲಿ ಈ ಗೌರವವಾಚಿಗಳಾದ ಸ್ವಾಮಿ, ದೇವ, ರಾಯ, ದೇವಿ ವಾರ್ಗಿಕಗಳು ಆ ವ್ಯಕ್ತಿಯ ಯಾವುದೇ ಸ್ಥಾನಮಾನಗಳನ್ನು ನಿರ್ದೇಶಿಸದೆ ಕೇವಲ ಆ ವ್ಯಕ್ತಿಯನ್ನು ಗುರುತಿಸುವುದಕ್ಕಾಗಿ ಮಾತ್ರ ಬಳಕೆಯಲ್ಲಿರುವಂತಹದ್ದಾಗಿದೆ.

**೩.೧೯. ಅಧಿಕಾರವಾಚಿ ವ್ಯಕ್ತಿನಾಮಗಳು**

ಪ್ರಾಚೀನ ಕಾಲದಲ್ಲಿ ತಾನು ಹೊಂದಿದ ಅಧಿಕಾರಗಳಿಂದ ವ್ಯಕ್ತಿಯನ್ನು ಗುರುತಿಸಲಾಗುತ್ತಿತ್ತು. ಅಂದರೆ ಅವರ ಹೆಸರುಗಳಿಗೆ ಆ ವ್ಯಕ್ತಿಯ ಅಧಿಕಾರವಾಚಿ ವಾರ್ಗಿಕಗಳು ಸೇರುತ್ತಿದ್ದವು ಎಂಬುದನ್ನು ಶಾಸನಗಳಲ್ಲಿ ಗುರುತಿಸಬಹುದು. ಆಧುನಿಕ ಸಂದರ್ಭದಲ್ಲಿ ಇವುಗಳು ವ್ಯಾಪಕವಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಬಹುದು. ಆದರೆ ಇಂದು ವ್ಯಕ್ತಿಗೆ ಈ ರೀತಿಯ ವಾರ್ಗಿಕಗಳು ಅಧಿಕಾರದಿಂದ ಬಂದತಹವುಗಳಲ್ಲ.

**ಗೌಡ/ಗೌಡ್ತಿ:**

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| **ನಿರ್ದಿಷ್ಟ+ಅಧಿಕಾರವಾಚಿ = ವ್ಯಕ್ತಿನಾಮಗಳು** | **ನಿರ್ದಿಷ್ಟ+ ಅಧಿಕಾರವಾಚಿ= ವ್ಯಕ್ತಿನಾಮಗಳು** |
| ನಾಗನ+ಗೌಡ= ನಾಗನ ಗೌಡ | ಮಾಚ + ಗೌಡಿ = ಮಾಚಗೌಡಿ |
| ರಾಮನ+ಗೌಡ= ರಾಮನಗೌಡ | ಸೋರಿ + ಗೌಡಿ = ಸೋರಿಗೌಡಿ |
| ನಿಂಗನ+ಗೌಡ= ನಿಂಗನಗೌಡ | ಐಶ್ವರ್ಯ + ಗೌಡ = ಐಶ್ವರ್ಯಗೌಡ |
| ರಂಗಪ್ಪ+ಗೌಡ= ರಂಗಪ್ಪಗೌಡ | ನಿಶ್ಚಿತ + ಗೌಡ = ನಿಶ್ಚಿತ ಗೌಡ |
| ನಿಖಿಲ್+ಗೌಡ= ನಿಖಿಲ್‌ಗೌಡ | |
| ರಂಜಿತ್+ಗೌಡ= ರಂಜಿತಗೌಡ | |
| ನಟರಾಜ+ಗೌಡ= ನಟರಾಜಗೌಡ | |
| ತಿಪ್ಪ +ಗೌಡ= ತಿಪ್ಪಗೌಡ | |
| ಸದಾನಂದ+ಗೌಡ= ಸದಾನಂದಗೌಡ | |

ಈ ಮೇಲಿನ ಪಟ್ಟಿಯಲ್ಲಿರುವ ಹೆಸರುಗಳು ತುಮಕೂರು ಜಿಲ್ಲೆಯ ಶಾಸನ ಸಂಪುಟದಲ್ಲಿ ಹಾಗೂ ಆಧುನಿಕ ಸಂದರ್ಭದ ತುಮಕೂರು ಪರಿಸರದಲ್ಲಿ ಕಂಡುಬರುತ್ತವೆ. ಹಾಗೆಯೆ ಈ ಪಟ್ಟಿಯಲ್ಲಿರುವ ಹೆಂಗಸರ ಹೆಸರುಗಳಲ್ಲಿ ಈ ಬಗೆಯ ವಾರ್ಗಿಕ ಬಂದರೂ ಅವು ಗಂಡನ ಹೆಸರಿನ ಭಾಗವೇ ಆಗಿರುತ್ತದೆ.

**ನಾಯಕ/ನಾಯಕಿ:**

**ಉದಾ:**

| **'ಅ'ಪಟ್ಟಿ ಪುರುಷವಾಚಿ** | | | **'ಬ'ಪಟ್ಟಿ ಸ್ತ್ರೀವಾಚಿ** | | |
|---|---|---|---|---|---|
| **ನಿರ್ದಿಷ್ಟ** | **+ ಅಧಿಕಾರವಾಚಿ** | **= ವ್ಯಕ್ತಿನಾಮಗಳು** | **ನಿರ್ದಿಷ್ಟ** | **+ ಅಧಿಕಾರವಾಚಿ** | **= ವ್ಯಕ್ತಿನಾಮಗಳು** |
| ಕುಮಾರ | + ನಾಯಕ | = ಕುಮಾರನಾಯಕ | ಸೋವೆ | + ನಾಯಕಿತಿ | = ಸೋವೆನಾಯಕತಿ |
| ರಾಮ | + ನಾಯಕ | = ರಾಮನಾಯಕ | ಮಾಚವೆ | + ನಯಕಿತಿ | = ಮಾಚವೆನಾಯಕತಿ |
| ರಂಗ | + ನಾಯಕ | = ರಂಗನಾಯಕ | ಮಮತಾ | + ನಾಯಕ | = ಮಮತಾನಾಯಕ |
| ಸೂರಪ್ಪ | + ನಾಯಕ | = ಸೂರಪ್ಪನಾಯಕ | | | |
| ನರಸ | + ನಾಯಕ | = ನರಸನಾಯಕ | | | |

ಈ ಮೇಲಿನ ಕೆಲವು ಸ್ತ್ರೀವಾಚಿ ಹೆಸರುಗಳು ಶಾಸನಗಳಲ್ಲಿ ಮಾತ್ರ ಕಂಡುಬಂದಿದ್ದು ಪ್ರಸ್ತುತ ಬಳಕೆಯಲ್ಲಿಲ್ಲ.

**ರಾಜ/ರಾಣಿ:**

**ಉದಾ:**

| **'ಅ'ಪಟ್ಟಿ ಪುರುಷವಾಚಿ** | | | **'ಬ'ಪಟ್ಟಿ ಸ್ತ್ರೀವಾಚಿ** | | |
|---|---|---|---|---|---|
| **ನಿರ್ದಿಷ್ಟ** | **+ಅಧಿಕಾರವಾಚಿ** | **=ವ್ಯಕ್ತಿನಾಮಗಳು** | **ನಿರ್ದಿಷ್ಟ** | **+ಅಧಿಕಾರವಾಚಿ** | **= ವ್ಯಕ್ತಿನಾಮಗಳು** |
| ಸಂಪನ್ನ | + ರಾಜ | = ಸಂಪನ್ನರಾಜ | ಮಹಾ | + ರಾಣಿ | = ಮಹಾರಾಣಿ |
| ಕನಕ | + ರಾಜ | = ಕನಕರಾಜ | ಸುಧಾ | + ರಾಣಿ | = ಸುಧಾರಾಣಿ |
| ಗುರು | + ರಾಜ | = ಗುರುರಾಜ | ಉಷಾ | + ರಾಣಿ | = ಉಷಾರಾಣಿ |
| ಬಸವ | + ರಾಜ | = ಬಸವರಾಜ | ಗೀತಾ | + ರಾಣಿ | = ಗೀತಾರಾಣಿ |

ಈ ಮೇಲೆ ತಿಳಿಸಲಾಗಿರುವ ಗೌಡ–ಗೌಡಿ, ನಾಯಕ–ನಾಯಕಿ, ರಾಜ–ರಾಣಿ ಮೊದಲಾದ ಅಧಿಕಾರವಾಚಿ ವಾರ್ಗಿಕಗಳು ಪ್ರಾಚೀನ ಕಾಲದಲ್ಲಿ ಅವರ ಅಧಿಕಾರವನ್ನು ನಿರ್ಧರಿಸುತ್ತಿದ್ದವು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಆಧುನಿಕ ಸಂದರ್ಭದಲ್ಲಿ ಈ ಅಧಿಕಾರವಾಚಿ ವಾರ್ಗಿಕಗಳು ಆ ವ್ಯಕ್ತಿಯ ಅಧಿಕಾರವನ್ನು ನಿರ್ಧರಿಸುವಂತಹವುಗಳಲ್ಲ. ಕೇವಲ ವ್ಯಕ್ತಿಯನ್ನು ಗುರುತಿಸುವುದಕ್ಕಾಗಿ ಮಾತ್ರ ಬಳಕೆಯಾಗುತ್ತಿವೆ ಎಂಬುದನ್ನು ಗಮನಿಸಬೇಕು.

**೩.೨೦. 'ಶ್ರೀ' ಬಳಕೆಯ ವ್ಯಕ್ತಿನಾಮಗಳು**

'ಶ್ರೀ' ಎಂಬುದು ಪ್ರಾಚೀನ ಕಾಲದಿಂದಲೂ ಗೌರವಸೂಚಕವಾಗಿ ವ್ಯಕ್ತಿಗಳಿಗೆ ಮತ್ತು ದೈವಗಳಿಗೆ ಸಂಬೋಧಿಸಲಾಗುತ್ತಿದ್ದಂತಹ ರೂಪವಾಗಿದೆ. ಆದರೆ 'ಶ್ರೀ' ಅಕ್ಷರವನ್ನು ಬಳಸಿಕೊಂಡು ಹಲವಾರು

ವ್ಯಕ್ತಿನಾಮಗಳು ರೂಪಗೊಂಡಿರುವುದನ್ನು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ನೋಡಬಹುದು. 'ಶ್ರೀ' ಅಕ್ಷರವನ್ನು ಎರಡು ಪ್ರಕಾರಗಳಲ್ಲಿ ಬಳಕೆ ಮಾಡಿ ವ್ಯಕ್ತಿನಾಮಗಳು ರಚನೆಯಾಗಿವೆ. ಅವುಗಳೆಂದರೆ ಹೆಸರಿನ ಆರಂಭದಲ್ಲಿ 'ಶ್ರೀ' ಬಳಕೆ ಮತ್ತು ಹೆಸರಿನ ಅಂತ್ಯದಲ್ಲಿ 'ಶ್ರೀ' ಬಳಕೆ. ಈ ವಿಧಾನವು ಸ್ತ್ರೀವಾಚಿ ಹೆಸರಿನ ಆರಂಭ ಮತ್ತು ಅಂತ್ಯದಲ್ಲಿಯೂ ಮತ್ತು ಪುರುಷವಾಚಿ ಹೆಸರಗಳ ಆರಂಭದಲ್ಲಿ ಮಾತ್ರ ಬಳಕೆಯಾಗಿದೆ. ಆದರೆ ಪುರುಷವಾಚಿ ಹೆಸರುಗಳ ಅಂತ್ಯದಲ್ಲಿ 'ಶ್ರೀ' ಇಲ್ಲ.

**೩.೨೦.೧. ಹೆಸರಿನ ಆರಂಭದಲ್ಲಿ 'ಶ್ರೀ' ಬಳಕೆಯ ವ್ಯಕ್ತಿನಾಮಗಳು**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶ್ರೀವಿಜಯ | ಶ್ರೀದೇವಿ |
| ಶ್ರೀಪುರುಷ | ಶ್ರೀಲಕ್ಷ್ಮಿ |
| ಶ್ರೀಧರ | ಶ್ರೀವೇಣಿ |
| ಶ್ರೀಕಾಂತ | ಶ್ರೀಮತಿ |
| ಶ್ರೀರಾಮ | |
| ಶ್ರೀಕೃಷ್ಣ | |
| ಶ್ರೀಪತಿ | |
| ಶ್ರೀಕಂಠ | |
| ಶ್ರೀಪಾದ | |

**೩.೨೦.೨. ಹೆಸರಿನ ಅಂತ್ಯದಲ್ಲಿ 'ಶ್ರೀ' ಬಳಕೆಯ ವ್ಯಕ್ತಿನಾಮಗಳು**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| (ಹೆಸರಿನ ಅಂತ್ಯದಲ್ಲಿ 'ಶ್ರೀ' ಬಳಕೆಯ ಪುರುಷವಾಚಿ ವ್ಯಕ್ತಿನಾಮಗಳು ಕಂಡುಬಂದಿಲ್ಲ) | ಉಮಾಶ್ರೀ |
| | ವಿದ್ಯಾಶ್ರೀ |
| | ವೀಣಾಶ್ರೀ |
| | ರಮಣಶ್ರೀ |
| | ಮಂಜುಶ್ರೀ |
| | ವಿಜಯಶ್ರೀ |
| | ರೂಪಶ್ರೀ |
| | ಪದ್ಮಶ್ರೀ |
| | ತಾಯಶ್ರೀ |

### ೩.೨೧. ಕುಲನಾಮಗಳು

"ಸಮೂಹದಿಂದ ಒಬ್ಬ ವ್ಯಕ್ತಿಯನ್ನು ಸರಿಯಾಗಿ ಪ್ರತ್ಯೇಕಿಸಿಕೊಡಲು ಅವರ ಹೆಸರು ಅಸಮರ್ಥವಾದಲ್ಲಿ ಜೊತೆಗೆ ತಂದೆಯ ಹೆಸರನ್ನು, ಅದೂ ಅಸಮರ್ಥವಾದಲ್ಲಿ ಹೆಚ್ಚಿನದಾಗಿ ಇನ್ನೊಂದು ಹೆಸರನ್ನು ಸೇರಿಸುವುದು ಚಲಾವಣೆಯಲ್ಲಿ ಬಂದಿರಬೇಕು. ಆದುದರಿಂದ ಒಬ್ಬನನ್ನು ಗುರುತಿಸುವಲ್ಲಿ ಬಳಸುವ ವ್ಯಕ್ತಿನಾಮ, ಪಿತೃನಾಮಗಳಲ್ಲದ ಮೂರನೆಯ ನಾಮವೇ ಕುಟುಂಬನಾಮ ಅಥವಾ ಅಡ್ಡಹೆಸರು ಅಥವಾ ಕುಲನಾಮ–ಎಂದು ವ್ಯಾಖ್ಯಾನಿಸಬಹುದು. ಸಮೂಹದಿಂದ ವ್ಯಕ್ತಿಯನ್ನು ಪ್ರತ್ಯೇಕಿಸಿ ಕೊಡುವುದೇ ಈ ಮೂರನೆಯ ಹೆಸರಿನ ಮುಖ್ಯ ಉದ್ದೇಶವಾಗಿದ್ದರೂ ಅದು ಆ ವ್ಯಕ್ತಿಯ ಇಲ್ಲವೇ ಆತನ ಪೂರ್ವಜರ ನೆಲೆ, ವೃತ್ತಿ ಇಲ್ಲವೆ ಚಿತ್ತವೃತ್ತಿಗಳನ್ನು ಪ್ರತಿನಿಧಿಸುತ್ತದೆ"(ಕಲಬುರ್ಗಿ ಎಂ.ಎಂ., ೨೦೧೨, ಕನ್ನಡ ನಾಮ ವಿಜ್ಞಾನ, ಪು.೩೭). ಈ ಮಾದರಿಯ ಕುಟುಂಬನಾಮ ಅಥವಾ ಕುಲನಾಮಗಳಾಗಲಿ ತುಮಕೂರು ಪರಿಸರದಲ್ಲಿ ವ್ಯಕ್ತಿನಾಮಗಳಾಗಿ ಬಳಕೆಯಾಗಿರುವುದು ಕಡಿಮೆ. ಒಂದು ವೇಳೆ ಬಳಕೆಯಾಗಿರುವ ಸಾಧ್ಯತೆಗಳಿದ್ದರೆ ಆ ವ್ಯಕ್ತಿಗಳು ಬೇರೆ ಪ್ರದೇಶಗಳಿಂದ ವಲಸೆ ಬಂದಿರಬಹುದು, ಇಲ್ಲವೆ ವೈವಾಹಿಕ ಸಂಬಂಧಗಳು ಏರ್ಪಟ್ಟಿರಬಹುದು. ಆದರೆ ಉತ್ತರ ಕರ್ನಾಟಕ ಭಾಗಗಳಲ್ಲಿ ಬಳಕೆಯಲ್ಲಿರುವಂತಹ ವಿ.ಎಸ್.ಬಡಿಗೇರ–ವೀರೇಶ ಶಂಕ್ರಪ್ಪ ಬಡಿಗೇರ, ಜೆ.ಎಚ್.ಪಟೇಲ–ಜಯದೇವಪ್ಪ ಹಾಲಪ್ಪ ಪಟೇಲ, ಎಸ್.ಎಸ್.ಅಂಗಡಿ–ಸುರೇಶ ಶಂಕ್ರಪ್ಪ ಅಂಗಡಿ ಈ ರೀತಿಯ ಕುಲನಾಮ ಪ್ರಧಾನವಾಗಿರುವ, ಜಿ.ಆರ್.ಕುಮಾರಸ್ವಾಮಿ– ಗಾರೆಮನೆ ರಾಜಶೇಖರಪ್ಪ ಕುಮಾರಸ್ವಾಮಿ, ಎಂ.ಎಚ್.ನರಸಿಂಹಮೂರ್ತಿ– ಮಲೆಯರ ಹನುಮಂತಪ್ಪ ನರಸಿಂಹಮೂರ್ತಿ, ಬಿ.ಬಿ.ನಾಗರಾಜ–ಬಳೆಗಾರ ಬಸಪ್ಪ ನಾಗರಾಜ ಈ ರೀತಿಯ ಕುಲನಾಮ ಆದ್ಯಕ್ಷರದಲ್ಲಿ ಇರುವಂತೆ ಬಳಸಿರುವ ಹೆಸರುಗಳು ತುಮಕೂರು ಪರಿಸರದಲ್ಲಿ ಕಂಡುಬಂದಿಲ್ಲ. ಬದಲಾಗಿ ತುಮಕೂರು ಪರಿಸರದ ವ್ಯಕ್ತಿನಾಮಗಳಲ್ಲಿ ಕಂಡುಬರುವ ಆದ್ಯಕ್ಷರಗಳೆಲ್ಲವೂ ಸ್ಥಳನಾಮ ಮತ್ತು ತಂದೆಯ ಹೆಸರನ್ನು ಸೂಚಿಸುತ್ತಿರುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಕುಲನಾಮಗಳನ್ನು ಕುರಿತು ಹೆಚ್ಚು ಚರ್ಚೆ ಮಾಡಲು ಸಾಧ್ಯವಾಗಿಲ್ಲ.

### ೩.೨೨. ಗುಣವಾಚಿ ತದ್ವಿರುದ್ದ ವ್ಯಕ್ತಿನಾಮಗಳು

ಪ್ರಾಚೀನ ಕಾಲದಲ್ಲಿ ವ್ಯಕ್ತಿನಾಮಗಳಲ್ಲಿ ನಾಮತ್ವಕ್ಕೂ ಮತ್ತು ವ್ಯಕ್ತಿಯ ವಿಶೇಷಣಗಳಿಗೂ ಸಾಮ್ಯತೆ ಕಂಡುಬರುತ್ತಿತ್ತು. ಅಂದರೆ ವ್ಯಕ್ತಿಯ ಗುಣ ವಿಶೇಷಣಗಳಿಗೆ ತಕ್ಕಂತೆ ಆ ವ್ಯಕ್ತಿಗೆ ನಾಮ ನಿರ್ದೇಶನ ಮಾಡಲಾಗುತ್ತಿತ್ತು. ಆದರೆ ಕಾಲಾನಂತರದಲ್ಲಿ ವ್ಯಕ್ತಿಯ ಗುಣ, ಸ್ವಭಾವ, ವಿಶೇಷತೆಗಳಿಗೂ ಮತ್ತು ಆ ವ್ಯಕ್ತಿಯ ಹೆಸರಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂಬುದನ್ನು ಇಂದಿನ ವ್ಯಕ್ತಿನಾಮಗಳ ರಚನೆಗಳನ್ನು ನೋಡಿದಾಗ ಗೊತ್ತಾಗುತ್ತದೆ. ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

ಉದಾ:

| | | 'ಅ' ಪಟ್ಟಿ | 'ಬ' ಪಟ್ಟಿ |
|---|---|---|---|
| | | **ಪುರುಷವಾಚಿ** | **ಸ್ತ್ರೀವಾಚಿ** |
| ವ್ಯಕ್ತಿಯ ಬಣ್ಣ ಕಪ್ಪು, ಹೆಸರು ಮಾತ್ರ | – | ಕೆಂಚಪ್ಪ, ಕೆಂಪಯ್ಯ | ಕೆಂಚಮ್ಮ, ಕೆಂಪಕ್ಕ |
| ವ್ಯಕ್ತಿಯ ಗಾತ್ರ ದೊಡ್ಡದು, ಹೆಸರು ಮಾತ್ರ | – | ಚಿಕ್ಕಪ್ಪ | ಚಿಕ್ಕಮ್ಮ |
| ವ್ಯಕ್ತಿಯ ವೃತ್ತಿ ತಿರುಪೆಬೇಡುವುದು, ಹೆಸರು ಮಾತ್ರ | – | ಕುಬೇರ | ಕುಬೇರಮ್ಮ |
| ವ್ಯಕ್ತಿಯು ಆರ್ಥಿಕವಾಗಿ ಶ್ರೀಮಂತ, ಹೆಸರು ಮಾತ್ರ | – | ತಿರುಕಪ್ಪ | ತಿರುಕಮ್ಮ |
| ವ್ಯಕ್ತಿಯಗಾತ್ರ ಚಿಕ್ಕದು, ಹೆಸರು ಮಾತ್ರ | – | ದೊಡ್ಡಣ್ಣ | ದೊಡ್ಡಕ್ಕ |
| ವ್ಯಕ್ತಿಯ ಬಣ್ಣ ಬಿಳಿ/ಕೆಂಪು, ಹೆಸರು ಮಾತ್ರ | – | ಕರಿಯಪ್ಪ | ಕರಿಯಮ್ಮ |
| ವ್ಯಕ್ತಿಯು ಕುರೂಪಿ, ಹೆಸರು ಮಾತ್ರ | – | ಮನ್ಮಥ | ಸೌಂದರ್ಯ |
| ವ್ಯಕ್ತಿಯು ಆರ್ಥಿಕವಾಗಿ ಬಡವ, ಹೆಸರು ಮಾತ್ರ | – | ಸಂಪತ್ತು | ಐಶ್ವರ್ಯ |
| ವ್ಯಕ್ತಿಯು ಬಳಿ ಬಂಗಾರವೇ ಇಲ್ಲ, ಹೆಸರು ಮಾತ್ರ | – | ಬಂಗಾರಪ್ಪ | ಬಂಗಾರಮ್ಮ |

ಮುಂತಾದವು.

**೩.೨೩. ಕನ್ನಡ ಮೂಲದ ವ್ಯಕ್ತಿನಾಮಗಳು**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬಸವಣ್ಣ | ಬಸಮ್ಮ |
| ಕಲ್ಲಯ್ಯ | ಕರಿಯಮ್ಮ |
| ಪೊನ್ನ | ಕೆಂಚಮ್ಮ |
| ರನ್ನ | ಚಿಕ್ಕಮ್ಮ |
| ಜನ್ನ | |
| ಅಸಗಣ್ಣ | |

**೩.೨೪. ಸಂಸ್ಕೃತ ಮೂಲದ ವ್ಯಕ್ತಿನಾಮಗಳು**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ತ್ರಿನೇತ್ರ | ಶ್ರುತಿ |
| ಪೃಥ್ವಿರಾಜ್ | ರಶ್ಮಿ |
| ಅಶ್ವಥ್ | ಸಾಕ್ಷಿ |
| ಕಿರಣ್ | ಪೃಥ್ವಿ |

| | |
|---|---|
| ಯೋಗೇಂದ್ರ | ಸುಖನ್ಯ |
| ಶ್ರೀಕಂಠ | ಪ್ರಭಾ ಮುಂತಾದವು. |

ಈ ಮೇಲಿನ ವ್ಯಕ್ತಿನಾಮಗಳನ್ನು ಗಮನಿಸಿದರೆ ಇವುಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಹೆಸರುಗಳು ಯಾವುವು ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಆಧುನಿಕ ಸಂದರ್ಭದಲ್ಲಿ ಸಂಸ್ಕೃತದ ಹೆಸರುಗಳು ಅತ್ಯಧಿಕವಾಗಿ ಬಳಕೆಯಾಗುತ್ತಿರುವುದು ಕಂಡುಬಂದಿದೆ.

**೩.೨೫. ಲಿಂಗ ಸೂಚಕ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯ ಆರಂಭ ಕಾಲದಲ್ಲಿ ವ್ಯಕ್ತಿನಾಮಗಳನ್ನು ಕೇಳಿದ ತಕ್ಷಣ ಆ ವ್ಯಕ್ತಿ ಪುರುಷನೋ ಅಥವಾ ಸ್ತ್ರೀಯೋ ಎಂಬುದು ಗೊತ್ತಾಗುತ್ತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ಈ ರೀತಿಯ ಬಳಕೆಗಳು ಕಡಿಮೆಯಾಗುತ್ತಿವೆ. ಹಾಗಾಗಿ ಹೆಸರುಗಳಿಂದ ವ್ಯಕ್ತಿಯ ಲಿಂಗ ನಿರ್ಧರಿಸುವ ಹೆಸರುಗಳನ್ನು ಇಲ್ಲಿ ಗುರುತಿಸಲಾಗಿದೆ.

**ಉದಾ:–**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗಣೇಶ | ಪ್ರಕೃತಿ |
| ಬಸವ | ಮಂಜುಳ |
| ರಮೇಶ | ಧನಲಕ್ಷ್ಮಿ |
| ನಿಂಗರಾಜ | ಪ್ರಿಯ |
| ನಟರಾಜ | ಮಮತಾ |
| ಅಶ್ವಥ | ಶೀಲಾ |
| ಶಿವಕುಮಾರ | ಸೌಭಾಗ್ಯ |
| ಪ್ರಾಣೇಶ್ | ಅನ್ನಪೂರ್ಣ |
| ಶಿವಪ್ಪ | ಶಾರದ |
| ಮಂಜುನಾಥ | ಸರಸ್ವತಿ |

**೩.೨೬. ಲಿಂಗ ಸೂಚಕವಲ್ಲದ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯಲ್ಲಿ ಪ್ರಮುಖವಾಗಿ ಪುರುಷವಾಚಿ ಮತ್ತು ಸ್ತ್ರೀವಾಚಿ ವ್ಯಕ್ತಿನಾಮಗಳೆಂದು ಪ್ರಾಚೀನ ಕಾಲದಿಂದಲೂ ವರ್ಗೀಕರಣ ಮಾಡಿಕೊಂಡು ಬಳಕೆಯಾಗುತ್ತಿದ್ದುದನ್ನು ನೋಡಿದ್ದೇವೆ. ಆದರೆ ಆಧುನಿಕ ಸಂದರ್ಭದಲ್ಲಿ ಪುರುಷವಾಚಿ ಮತ್ತು ಸ್ತ್ರೀವಾಚಿ ವ್ಯಕ್ತಿನಾಮಗಳೆಂದು ಗುರುತಿಸಲು ಸಾಧ್ಯವಿಲ್ಲದ ಹಾಗೆ ವ್ಯಕ್ತಿನಾಮಗಳು ಬಳಕೆಯಾಗುತ್ತಿವೆ. ಅಂದು ಹೆಸರು ಕೇಳಿದ ತಕ್ಷಣ ವ್ಯಕ್ತಿಯು ಸ್ತ್ರೀಲಿಂಗವೊ ಪುಲ್ಲಿಂಗವೊ ಎಂಬುದು ಗೊತ್ತಾಗುತ್ತಿತ್ತು. ಆದರೆ ಇಂದು ಆ ರೀತಿ ಗುರುತಿಸಲು

ಸಾಧ್ಯವಾಗುತ್ತಿಲ್ಲ. ಮುಂದುವರೆದು ಆಧುನಿಕ ಸಂದರ್ಭದಲ್ಲಿ ತೃತೀಯ ಲಿಂಗಿಗಳಿಗೆ ನಿರ್ದಿಷ್ಟವಾಗಿ ಯಾವ ಹೆಸರನ್ನು ಬಳಸಬೇಕೆಂಬುದು ನಿರ್ಧಾರವಾಗಿಲ್ಲ.

**ಉದಾ:–**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೀರ್ತಿ | ಕೀರ್ತಿ |
| ಕಿರಣ | ಕಿರಣ |
| ವಿನೋದ | ವಿನೋದ |
| ನವೀನ | ನವೀನ |
| ಮೋನಿಶ | ಮೋನಿಶ |
| ಮನು | ಮನು |
| ಪೃಥ್ವಿ | ಪೃಥ್ವಿ |
| ರಕ್ಷಿತ | ರಕ್ಷಿತ |
| ಅರುಣ | ಅರುಣ |
| ಭುವನ | ಭುವನ |
| ಚಂದನ | ಚಂದನ |
| ಕನಕ | ಕನಕ |
| ಮಲ್ಲಿಕಾ | ಮಲ್ಲಿಕಾ |

ಈ ಮೇಲಿನ ವ್ಯಕ್ತಿನಾಮಗಳ ಪಟ್ಟಿಯನ್ನು ಗಮನಿಸಿದರೆ ಪುರುಷ ಮತ್ತು ಸ್ತ್ರೀವಾಚಿ ಎರಡು ಒಂದೇ ರೀತಿಯಲ್ಲಿ ಬಳಕೆಯಾಗುತ್ತಿದ್ದು ಲಿಂಗಸೂಚಕವಾಗಿ ಬಳಕೆಯಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಪುರುಷವಾಚಿ ವ್ಯಕ್ತಿನಾಮಗಳು ವ್ಯಂಜನಾಂತ್ಯದಿಂದ ಬಳಕೆಯಾಗುತ್ತವೆ. ಆದರೆ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ವ್ಯಂಜನಾಂತ್ಯವಾಗುವಂತಹ ವ್ಯಕ್ತಿನಾಮಗಳಿಲ್ಲ.

**೩.೨೭. ಪುಷ್ಪವಾಚಿ ವ್ಯಕ್ತಿನಾಮಗಳು**

ಹೂಗಳಿಗೆ ಸಂಬಂಧಿಸಿದ ಹಲವಾರು ಹೆಸರುಗಳು ಸ್ತ್ರೀವಾಚಿಯಾಗಿ ಮತ್ತು ಪುರುಷವಾಚಿಯಾಗಿ ಬಳಕೆಯಲ್ಲಿವೆ.

**ಉದಾ:–**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| | ಜಲಜ |
| | ಗುಲಾಬಿ |
| | ಕಮಲ |

ಪದ್ಮ

ಮಲ್ಲಿಕಾ

ಸರೋಜ

ರೋಜ

ಸಂಪಿಗೆ

ಸೇವಂತಿ

ಚಂಪಕ

ಸುಮ

ಕುಸುಮ

ಪುಷ್ಪ

**೩.೨೮. ಬಣ್ಣಗಳಿಗೆ ಸಂಬಂಧಿಸಿದ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳು ಇಂತಹ ಸ್ವರೂಪದಿಂದಲೇ ಬಳಕೆಯಾಗಬೇಕೆಂಬ ಯಾವುದೇ ನಿರ್ಬಂಧಗಳಿಲ್ಲ. ಹಾಗಾಗಿ ಹಲವಾರು ಸ್ವರೂಪಗಳಲ್ಲಿ ವ್ಯಕ್ತಿನಾಮಗಳು ರಚನೆಯಾಗಿವೆ. ಅವುಗಳಲ್ಲಿ ಬಣ್ಣಗಳಿಗೆ ಸಂಬಂಧಿಸಿದ ಹಲವು ವ್ಯಕ್ತಿನಾಮಗಳನ್ನು ಕಾಣಬಹುದು.

**ಉದಾ:–**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನೀಲಪ್ಪ | ನೀಲಮ್ಮ |
| ನೀಲಯ್ಯ | ನೀಲಕ್ಕ |
| ನೀಲ | ನೀಲಾ |
| ಬಿಳಿಯಪ್ಪ | ಬಿಳಿಯಮ್ಮ |
| ಕರಿಯಪ್ಪ | ಕರಿಯಮ್ಮ |
| ಕೆಂಚಪ್ಪ | ಕೆಂಚಮ್ಮ |
| ಕೆಂಪಯ್ಯ | ಕೆಂಪಮ್ಮ |

ಹೀಗಿದ್ದರೂ ಸಹ ಈ ವ್ಯಕ್ತಿನಾಮಗಳಿಗೆ ದೈವದ ಹಿನ್ನೆಲೆ ಇದೆ ಎಂದು ಭಾವಿಸಲಾಗಿದೆ. ಉದಾ:ಕರಿಯ–ಕೃಷ್ಣ, ಕೆಂಪ–ಸೂರ್ಯ ಇತ್ಯಾದಿ.

**೩.೨೯. ಪ್ರಕೃತಿವಾಚಿ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳು ಪ್ರಕೃತಿಯ ಮಡಿಲಲ್ಲಿ ಕಾಣುವ ಹಲವು ವಸ್ತುಗಳಿಂದ ರಚನೆಯಾಗಿರುತ್ತವೆ. ಅಂದರೆ ಪ್ರಕೃತಿಯಲ್ಲಿನ ಅನೇಕ ವಸ್ತು ವಿಶೇಷಗಳಿಗೆ ಸಂಬಂಧಿಸಿದ ವ್ಯಕ್ತಿನಾಮಗಳು ಬಳಕೆಯಲ್ಲಿವೆ (ರಾಮಕೃಷ್ಣ ಆರ್, ೨೦೦೦, ಭಾಷಾ ವೀಕ್ಷಣ ಪು.೫೭).

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕಿರಣ | ಕಿರಣ |
| ಬೆಟ್ಟಪ್ಪ | ಗಿರಿಯಮ್ಮ |
| ಗಿರಿಯಪ್ಪ | ಗಿರಿಯಕ್ಕ |
| ತೋಟಪ್ಪ | ತೋಟದಮ್ಮ |
| ಮೇಘರಾಜ | ಮೇಘನ |
| ಆಕಾಶ | |

**೩.೩೦. ನಕ್ಷತ್ರವಾಚಿ ವ್ಯಕ್ತಿನಾಮಗಳು**

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| | ಅನುರಾಧ |
| | ಅಶ್ವಿನಿ |
| | ರೋಹಿಣಿ |
| | ರೇವತಿ |
| | ಸ್ವಾತಿ |
| | ಉತ್ತರಾ |
| | ಕೃತ್ತಿಕಾ |
| | ಭರಣಿ |

**೩.೩೧. ಋತು/ಮಾಸಗಳಿಗೆ ಸಂಬಂಧಿಸಿದ ವ್ಯಕ್ತಿನಾಮಗಳು**

ಹಿಂದೂ ಪಂಚಾಗದ ಪ್ರಕಾರ ಒಂದು ವರ್ಷದಲ್ಲಿ ಹಲವು ಋತುಗಳಿವೆ. ಅಂತಹ ಋತುಗಳ ಹೆಸರನ್ನು ಮಕ್ಕಳಿಗೆ ನಿರ್ದೇಶನ ಮಾಡುವ ಪ್ರಕ್ರಿಯೆ ಇಂದಿಗೂ ಚಾಲ್ತಿಯಲ್ಲಿದೆ.

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ವಸಂತ್ | ವರ್ಷ |
| ಶರತ್ | ಶಿಶಿರ |
| ಹೇಮಂತ್ | ಗ್ರೀಷ್ಮ |
| ಕಾರ್ತಿಕ್ | ವಸಂತ |

ಈ ಮೇಲಿನ ಉದಾಹಣೆಗಳಲ್ಲಿ ಗ್ರೀಷ್ಮ ಋತು ವ್ಯಕ್ತಿನಾಮವಾಗಿ ಬಳಕೆಯಲ್ಲಿಲ್ಲ ಎಂದು ರಾಮಕೃಷ್ಣ ಆರ್., ಅವರು (೨೦೦೦, ಭಾಷಾ ವೀಕ್ಷಣಾ, ಪು.೫೭) ಹೇಳುತ್ತಾರೆ. ಆದರೆ ಇಂದು ಇದು ಕೂಡ ಬಳಕೆಯಲ್ಲಿದೆ.

**೩.೩.೨. ದಿಕ್ಕುಗಳಿಗೆ ಸಂಬಂಧಿಸಿದ ವ್ಯಕ್ತಿನಾಮಗಳು**

ಭೌಗೋಳಿಕವಾಗಿ ದಿಕ್ಕುಗಳನ್ನು ಸೂಚಿಸುವುದಕ್ಕಾಗಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ನೈರುತ್ಯ, ವಾಯುವ್ಯ, ಆಗ್ನೇಯ, ಈಶಾನ್ಯ ಎಂಬ ದಿಕ್ಸೂಚಕ ಹೆಸರುಗಳನ್ನು ಬಳಸಲಾಗುತ್ತಿದೆ. ಇಂತಹ ದಿಕ್ಕುಗಳನ್ನು ಸೂಚಿಸುವಂತಹ ಹೆಸರುಗಳು ಇಂದಿನ ವ್ಯಕ್ತಿನಾಮಗಳ ರಚನೆಯಲ್ಲಿಯೂ ಕಂಡುಬಂದಿರುವುದನ್ನು ಗುರುತಿಸಲಾಗಿದೆ. ಆದರೆ ಈ ದಿಕ್ಕುಗಳನ್ನು ಸೂಚಿಸುವ ಹೆಸರುಗಳು ನಿಜವಾಗಿಯೂ ದಿಕ್ಕುಗಳನ್ನು ಸೂಚಿಸಲು ಬಳಕೆಯಾದಂತಹವುಗಳಲ್ಲ. ಇವುಗಳೆಲ್ಲವೂ ದೈವವಾಚಿಯಾಗಿ ಬಳಕೆ ಆಗುತ್ತಿರುವಂತಹವುಗಳೇ ಆಗಿವೆ. ಏಕೆಂದರೆ ಅಷ್ಟದಿಕ್ಪಾಲಕರನ್ನ ದಿಕ್ವಾಚಕಗಳಾಗಿ ಬಳಸುತ್ತಿದ್ದು ದೈವಗಳೇ ಆಗಿವೆ. ಆದ್ದರಿಂದ ಇಲ್ಲಿ ವ್ಯಕ್ತಿನಾಮಗಳೆಲ್ಲವೂ ಸಹ ದೈವನಾಮಗಳಾಗಿ ಬಳಕೆಯಾಗಿವೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಉತ್ತರಪ್ಪ | ಉತ್ತರಮ್ಮ |
| ಉತ್ತರಯ್ಯ | ದಕ್ಷಿಣಮ್ಮ |
| ಈಶಾನ್ಯ ಮೂರ್ತಿ | ಉತ್ತರದೇವಿ |
| ದಕ್ಷಿಣ ಮೂರ್ತಿ | ಈಶಾನ್ಯ |
| ಈಶಾನಪ್ಪ | ಪೂರ್ವಿ |

**೩.೩.೩. ನದಿಗಳಿಗೆ ಸಂಬಂಧಿಸಿದ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಿದರೆ ಆಧುನಿಕ ಸಂದರ್ಭದಲ್ಲಿ ನದಿವಾಚಿ ವ್ಯಕ್ತಿನಾಮಗಳು ಹೆಚ್ಚು ಬಳಕೆಯಲ್ಲಿವೆ. ಅದರಲ್ಲೂ ಪ್ರಮುಖವಾಗಿ ನದಿವಾಚಿ ವ್ಯಕ್ತಿನಾಮಗಳು ಹೆಚ್ಚು ಸ್ತ್ರೀನಾಮಗಳಲ್ಲಿ ಬಳಕೆಯಲ್ಲಿರುವುದನ್ನು ಗುರುತಿಸಲಾಗಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೃಷ್ಣಾ | ಕಾವೇರಿ |
| ಭದ್ರ | ಗಂಗಾ |
| ಕಾವೇರಪ್ಪ | ತುಂಗಾ |

| | |
|---|---|
| ಗಂಗಪ್ಪ | ತ್ರಿವೇಣಿ |
| | ಕೃಷ್ಣೆ |
| | ಗಂಗಾ |
| | ಸರಸ್ವತಿ |
| | ಯಮುನಾ |
| | ನರ್ಮದ |
| | ಸಿಂಧು |
| | ಶರಾವತಿ |
| | ಹೇಮಾವತಿ |
| | ವೇದಾವತಿ |
| | ಶಿಂಷಾ ಮುಂತಾದವು |

**೩.೩೪. ರತ್ನವಾಚಿ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯಲ್ಲಿ ಜನರು ಬಳಸುವ ರತ್ನಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳಿಗೆ ನಾಮ ನಿರ್ದೇಶನ ಮಾಡಲಾಗುತ್ತದೆ. ಅಂದರೆ ನಾಮ ನಿರ್ದೇಶನ ಮಾಡುವವರ ಮನೋಧೋರಣೆಗೆ ತಕ್ಕಂತೆ ಈ ಲೋಹಗಳ ಗುಣಕ್ಕೆ ತಕ್ಕಂತೆ ಮಗುವಿನ ವ್ಯಕ್ತಿತ್ವ ರೂಪಗೊಳ್ಳಲಿ ಎಂಬ ಆಶಯದಿಂದಲೋ ಅಥವಾ ಹೆಸರು ಸುಂದರವಾಗಿರಲಿ ಎಂಬ ಕಾರಣದಿಂದಲೋ ಇಂತಹ ಹೆಸರುಗಳನ್ನು ಬಳಸಲಾಗುತ್ತಿದೆ. ಇವು ಹೆಚ್ಚಾಗಿ ಹೋಲಿಕೆಗಾಗಿ ಬಳಸಲಾಗುತ್ತಿದ್ದು ಕೆಲವು ಸಂದರ್ಭಗಳಲ್ಲಿ ನಿಜನಾಮಗಳಾಗಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಚಿನ್ನಪ್ಪ | ಚಿನ್ನಮ್ಮ |
| ಕನಕ | ಕನಕ |
| ರತ್ನ | ರತ್ನ |
| ಬೆಳ್ಳಿಯಪ್ಪ | ಬೆಳ್ಳಿ |
| ಮಣಿ | ಬಂಗಾರಿ |
| ಬಂಗಾರಪ್ಪ | ಮಣಿ |
| ಚಿನ್ನಸ್ವಾಮಿ | ಸ್ವರ್ಣ |
| ವಜ್ರಪ್ಪ | ಸ್ವರ್ಣಗೌರಿ |
| ಹೊನ್ನಪ್ಪ | ಹೊನ್ನು |

| | |
|---|---|
| ಚಿನ್ನೇಗೌಡ | ಹೊನ್ನಮ್ಮ |
| ಹೇಮಂತ | ಹೇಮ |

**೩.೩೫. ಸ್ಥಳವಾಚಿ ವ್ಯಕ್ತಿನಾಮಗಳು**

ಪ್ರಾಚೀನ ಕಾಲದಿಂದಲೂ ವ್ಯಕ್ತಿನಾಮಗಳಲ್ಲಿ ಸ್ಥಳನಾಮವನ್ನು ನಿರ್ದೇಶಿಸುವಂತಹ ಹೆಸರುಗಳನ್ನು ಕಾಣಬಹುದು. ತುಮಕೂರು ಪರಿಸರದಲ್ಲಿಯೂ ಸಹ ಇಂತಹ ಹೆಸರುಗಳು ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುತ್ತಿವೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಯಡಿಯೂರಪ್ಪ | ಯಡಿಯೂರಮ್ಮ |
| ತಿರುಪತಿ | ಗುಬ್ಬಿಯಮ್ಮ |
| ಗುಬ್ಬಿಯಪ್ಪ | ಸಿದ್ದಗಂಗಮ್ಮ |
| ಸಿದ್ದಗಂಗಪ್ಪ | ಶಿವಗಂಗಮ್ಮ |
| ಶಿವಗಂಗಯ್ಯ | |

ಈ ಮೇಲಿನ ಸ್ಥಳವಾಚಿ ವ್ಯಕ್ತಿನಾಮಗಳು ತುಮಕೂರು ಪರಿಸರದಲ್ಲಿವೆ. ಭಾಷಿಕವಾಗಿ ಇನ್ನು ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳನ್ನು ಗಮನಿಸುವುದಾದರೆ,

| | |
|---|---|
| ಚಳ್ಳೇರಪ್ಪ | ಚಳ್ಳೇರಮ್ಮ |
| ಮುಷ್ಟೂರಪ್ಪ | ಮುಷ್ಟೂರಮ್ಮ |
| ಕೊಟ್ರಪ್ಪ (ಕೊಟ್ಟೂರಪ್ಪ) | ಕೊಟ್ರಮ್ಮ (ಕೊಟ್ಟೂರಮ್ಮ) |
| ಹೊನ್ನೂರಪ್ಪ | ಹೊನ್ನೂರಮ್ಮ |
| ಯಮನೂರಪ್ಪ | ಯಮನೂರಮ್ಮ |
| ಕುರುಗೋಡಪ್ಪ | ಬಂಡ್ರಮ್ಮ |
| ಸೊಂಡೂರಪ್ಪ | ಸೊಂಡೂರಮ್ಮ |
| ಬಂಡ್ರೆಪ್ಪ | |

ಈ ಮೇಲಿನ ವ್ಯಕ್ತಿನಾಮಗಳ ಪಟ್ಟಿಯನ್ನು ಸಣ್ಣಪಾಪಯ್ಯ ಅವರ ಕೃತಿಯಿಂದ ಪಡೆದುಕೊಳ್ಳಲಾಗಿದೆ (೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೨೫, ೨೬).

**೩.೩೬.ಪ್ರಾಣಿ ಮತ್ತು ಪಕ್ಷಿವಾಚಿ ವ್ಯಕ್ತಿನಾಮಗಳು**

ಮನುಷ್ಯರು ಅಲೆಮಾರಿ ಜೀವನ ನಡೆಸುತ್ತಿದ್ದ ಕಾಲದಿಂದಲೂ ಪ್ರಕೃತಿಯೊಡನೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಪ್ರಕೃತಿಯಲ್ಲಿನ ಪ್ರಾಣಿ, ಪಕ್ಷಿಗಳೊಂದಿಗೂ, ನಿಕಟ ಸಂಬಂಧ ಹೊಂದಿದ್ದು

ಅದರಲ್ಲಿ ಕೆಲವನ್ನು ಸಾಕುಪ್ರಾಣಿಗಳೆಂದು ಮತ್ತು ಕೆಲವನ್ನು ಕ್ರೂರ ಪ್ರಾಣಿಗಳೆಂದು ವರ್ಗೀಕರಣ ಮಾಡಿಕೊಂಡಿದ್ದಾರೆ. ಹಾಗಾಗಿ ಅಂತಹ ಪ್ರಾಣಿ ಮತ್ತು ಪಕ್ಷಿಗಳಿಗೆ ಇಟ್ಟಂತಹ ಹೆಸರುಗಳನ್ನು ತನ್ನ ಇಷ್ಟಕ್ಕನುಗುಣವಾಗಿ ವ್ಯಕ್ತಿಗಳಿಗೆ ನಿರ್ದೇಶನ ಮಾಡಿರುವುದನ್ನು ಇಂದಿಗೂ ಗುರುತಿಸಬಹುದಾಗಿದೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನಾಗರಾಜ | ಮಯೂರಿ |
| ಬಸವರಾಜ | ಕೋಕಿಲ |
| ನರಸಿಂಹ | ನಾಗಮ್ಮ |
| ಹುಲಿಯಪ್ಪ | ನಾಗವೇಣಿ |
| ನಾಗಪ್ಪ | ಬಸಮ್ಮ |
| ನಂದೀಶ | |

**೩.೩.೭. ಸಾಧು ಸಂತರ ವ್ಯಕ್ತಿನಾಮಗಳು**

ವ್ಯಕ್ತಿನಾಮಗಳ ರಚನೆಯಲ್ಲಿ ಯಾವುದೇ ಒಂದು ಪರಿಸರದಲ್ಲಿ ಸಾಮಾಜಿಕವಾಗಿ ಆದರ್ಶರೆನಿಸಿಕೊಂಡು ಹಲವು ಸಾಮಾಜಿಕ ಕೈಂಕರ್ಯಗಳಲ್ಲಿ ತೊಡಗಿರುವ ಸಾಧು ಸಂತರ ಹೆಸರುಗಳನ್ನು ಭಕ್ತಿಯಿಂದಲೊ ಅಥವಾ ಆದರ್ಶದಿಂದಲೊ ವ್ಯಕ್ತಿನಾಮಗಳಾಗಿ ಬಳಸಿರುವುದನ್ನು ಕಾಣಲಾಗಿದೆ. ಇವು ಬಹುತೇಕ ಆಯಾ ಪ್ರದೇಶಗಳಿಗೆ ಅವಲಂಬಿತವಾಗಿವೆ. ಸಾಧುಸಂತರು ಬಹುತೇಕ ಪುರುಷರೇ ಆಗಿರುವುದರಿಂದ ಅವುಗಳಿಗೆ ವಾರ್ಗಿಕಗಳನ್ನು ಬಳಸಿ ಸ್ತ್ರೀವಾಚಿಗಳಾಗಿ ಬಳಸಿರುವುದನ್ನು ಗುರುತಿಸಲಾಗಿದೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶಿವಕುಮಾರ ಸ್ವಾಮಿ | ಸಿದ್ದಲಿಂಗಮ್ಮ |
| ಸಿದ್ದಲಿಂಗಸ್ವಾಮಿ | ನಿರ್ಮಲಾ ಶೆಟ್ಟಿ |
| ನಿರ್ಮಲಾನಂದ ಸ್ವಾಮಿ | |
| ನಿತ್ಯಾನಂದ ಶೆಟ್ಟಿ | |
| ಶಿವಮೂರ್ತಿ ಶರಣ | |
| ಸಂಗನಬಸವಸ್ವಾಮಿ | |

### ೩.೩೮. ದೈವವಾಚಿ ವ್ಯಕ್ತಿನಾಮಗಳು

ಪ್ರಾಚೀನ ಕಾಲದಿಂದಲೂ ವ್ಯಕ್ತಿನಾಮಗಳ ನಿರ್ದೇಶನದಲ್ಲಿ ದೈವಗಳ ಹೆಸರು ಪ್ರಭಾವ ಬೀರಿರುವುದನ್ನು ಗುರುತಿಸಲಾಗಿದೆ. ಸಮಾಜದ ಪ್ರತಿಯೊಂದು ಸಮುದಾಯದಲ್ಲಿಯೂ ವರ್ಗ, ಜಾತಿ, ಉಪಜಾತಿ, ಬೆಡಗು, ಕುಲ, ಇತ್ಯಾದಿ ಪ್ರಕಾರಗಳಿದ್ದು ಆ ಎಲ್ಲಾ ಪ್ರಕಾರಗಳಲ್ಲಿಯೂ ತಮ್ಮದೇ ಆದ ದೇವರನ್ನು ಸೃಷ್ಟಿಸಿಕೊಂಡು ಆರಾಧಿಸುತ್ತಾ ಬಂದಿದ್ದಾರೆ. ಕೆಲವರಿಗೆ ಕುಲದೈವವಾಗಿದ್ದಾರೆ ಇನ್ನು ಕೆಲವರಿಗೆ ಇಷ್ಟದೈವಗಳಾಗಿ ಪ್ರಭಾವ ಬೀರಿವೆ. ಈ ಎಲ್ಲಾ ದೇವರ ಹೆಸರುಗಳು ಸಮುದಾಯದ ಜನರ ಹೆಸರುಗಳಲ್ಲಿ ಹಾಸುಹೊಕ್ಕಾಗಿವೆ. ಆದ್ದರಿಂದ ಪ್ರಾಚೀನ ಕಾಲದಿಂದ ಆಧುನಿಕ ಸಂದರ್ಭದವರೆಗೂ ದೈವವಾಚಿ ವ್ಯಕ್ತಿನಾಮಗಳು ನಾಮಾಧ್ಯಯನದಲ್ಲಿ ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿವೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ತಿಮ್ಮಪ್ಪ | ರಂಗಮ್ಮ |
| ಹನುಮಪ್ಪ | ತಿಪ್ಪಮ್ಮ |
| ನಾರಾಯಣ | ಹನುಮಕ್ಕ |
| ಆದಿಕೇಶವ | ವೆಂಕಟಮ್ಮ |
| ಗುಜ್ಜಾರಯ್ಯ | ಬಸಮ್ಮ |
| ರಂಗಪ್ಪ | ಜುಂಜಮ್ಮ |
| ರಂಗಧಾಮ | ಲಕ್ಷ್ಮಿ |
| ಕರಿಯಪ್ಪ | ಕೆಂಪಮ್ಮ |
| ಮಣ್ಣಪ್ಪ | ಕರಿಯಮ್ಮ |
| ಕೆಂಪಣ್ಣ | ಮಣ್ಣಮ್ಮ |
| ನಾಗಪ್ಪ | ನಂಜುಂಡಮ್ಮ |
| ಜಲ್ದಪ್ಪ | ನಾಗಮ್ಮ |
| ಮಂಜುನಾಥ | ಹುಲಿಗೆಮ್ಮ |
| ಈಶ್ವರ | ಗಾಳಮ್ಮ |
| ಶಿವಣ್ಣ | ಮಾರಮ್ಮ |
| ಬ್ರಹ್ಮಪ್ಪ | ಮಲ್ಲಮ್ಮ |
| ಬ್ರಹ್ಮಾನಂದ | ಕೊಟ್ರಮ್ಮ |
| ಮಲ್ಲಿಕಾರ್ಜುನ | ಸಿದ್ದಲಿಂಗಮ್ಮ ಮುಂತಾದವು... |

## ೩.೩೯. ಭಾವನಾಮ ಸಂಬಂಧಿ ವ್ಯಕ್ತಿನಾಮಗಳು

ವ್ಯಕ್ತಿನಾಮಗಳ ಇತಿಹಾಸವನ್ನು ಗಮನಿಸಿದರೆ ಆರಂಭದ ಕಾಲದಲ್ಲಿದ್ದಂತಹ ಹೆಸರುಗಳು ರಾಚನಿಕವಾಗಿ ಹಲವಾರು ಬದಲಾವಣೆ ಮಾಡಿಕೊಂಡು ಬಂದಿರುವುದನ್ನು ಗುರುತಿಸಬಹುದು. ಅಂದರೆ ಆರಂಭದಲ್ಲಿ ವ್ಯಕ್ತಿನಾಮಗಳು ಅನ್ವರ್ಥನಾಮಗಳಾಗಿ ನಂತರ ಅಂಕಿತ ನಾಮಗಳಾಗಿ ಬದಲಾವಣೆ ಹೊಂದುತ್ತಾ ಬಂದವು. ಅಂಕಿತನಾಮಗಳಿಗೆ ಪುನಃ ವಾರ್ಗಿಕಗಳು ಸೇರ್ಪಡೆಗೊಂಡು ಹಲವು ಘಟಕಗಳಿಂದ ಕೂಡಿ ವ್ಯಕ್ತಿನಾಮಗಳು ಬಳಕೆಗೆಬಂದವು. ಆಧುನಿಕ ಸಂದರ್ಭದಲ್ಲಿ ವಾರ್ಗಿಕಗಳು ಮತ್ತು ಗುಣ ವಿಶೇಷಣಗಳ ಮರೆಯಾಗಿ ಆ ಜಾಗದಲ್ಲಿ ಭಾವನಾಮಗಳು ಸ್ಥಾನಪಡೆದುಕೊಂಡಿವೆ ಎಂಬುದನ್ನು ಗುರುತಿಸಲಾಗಿದೆ. ಈ ಹಿಂದೆ ಬಳಕೆಯಾಗುತ್ತಿದ್ದಂತಹ ಹೆಸರಿನ ಸ್ವರೂಪ ಬದಲಾಗಿ "ವ್ಯಕ್ತಿಯ ಹೆಸರಿಗೆ ಯಾವುದೇ ಚರಿತ್ರೆಯಾಗಲಿ, ದೇವರಾಗಲಿ, ವಸ್ತುವಾಗಲಿ ಆಕರವಾಗಿರದೆ ಅದು ಕೇವಲ ಭಾವನೆಗಳ ಪ್ರತಿನಿಧಿಯಾಗಿರುವುದನ್ನು ತಿಳಿಯಬಹುದು"(ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೩೧೧).

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಆನಂದ್ | ಅನಿತ |
| ಭವನ್ | ಭಾವನ |
| ವಂದನ್ | ವಂದನಾ |
| ವರ್ಣಿತ್ | ಮಾನಸ |
| ಸಂತೋಷ್ | ಕೌಶಲ |
| ಸಂಗೀತ್ | ತೃಪ್ತಿ |
| ಆಕರ್ಷಕ್ | ಪ್ರೀತಿ |
| ಪ್ರವೀಣ್ | ಪ್ರೇಮ |
| ತೇಜಸ್ | ನವೀನ |
| ವಿನೋದ | ವಿನೋದ |
| ನವೀನ್ | ರಕ್ಷಿತ್ |
| ರಕ್ಷಿತ | ಉಲ್ಲಾಸ |
| ಉಲ್ಲಾಸ | ಚಂದನ |
| ಚಂದನ | ತೇಜಸ್ವಿ |
| ಪ್ರೀತಮ್ | ರಂಜಿತ |
| ರಂಜಿತ್ | ಹರ್ಷಿತ |

ಈ ರೀತಿಯಾಗಿ ವ್ಯಕ್ತಿನಾಮಗಳ ರಾಚನಿಕ ಸ್ವರೂಪ ಕುರಿತಂತೆ ಈ ಅಧ್ಯಾಯದಲ್ಲಿ ಹಲವು ವರ್ಗೀಕರಣಗಳನ್ನು ಮಾಡಿಕೊಂಡು ಅಧ್ಯಯನದ ಭೌಗೋಳಿಕ ವ್ಯಾಪ್ತಿ ಮತ್ತು ಕಾಲಮಿತಿಯಲ್ಲಿ ವಿವರಣಾತ್ಮಕವಾಗಿ ಚರ್ಚಿಸಲಾಗಿದೆ. ಒಟ್ಟಾರೆ ವ್ಯಕ್ತಿನಾಮಗಳ ರಾಚನಿಕತೆಯನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿನ ಹೆಸರುಗಳಿಗೂ ಮತ್ತು ಆಧುನಿಕ ಕಾಲದಲ್ಲಿನ ಹೆಸರುಗಳಿಗೂ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ. ಆರಂಭದಲ್ಲಿ ಬಂಧುವಾಚಿ ವಾರ್ಗಿಕಗಳು ಬಳಕೆಯಲ್ಲಿ ಇರಲಿಲ್ಲ. ಕೆಲವು ವ್ಯಕ್ತಿನಾಮಗಳಲ್ಲಿ ಜಾತಿವಾಚಿ ವಾರ್ಗಿಕಗಳು ಇಂದು ಪುನಃ ಬಳಕೆಯಾಗುತ್ತಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ವ್ಯಕ್ತಿನಾಮಗಳ ರಾಚನಿಕ ಸ್ವರೂಪ ಕುರಿತು ಇದುವರೆಗಿನ ಪ್ರಸ್ತುತ ಅಧ್ಯಯನವು ಸ್ಥೂಲವಾದುದಾಗಿದ್ದು, ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ವಿಶ್ಲೇಷಣೆ ಮಾಡಿದರೆ ಇನ್ನೂ ಹಲವು ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳಬಹುದಾಗಿದೆ. ಹಾಗೆಯೇ ಈ ಅಧ್ಯಾಯವನ್ನು ತುಮಕೂರು ಪರಿಸರದ ವ್ಯಕ್ತಿನಾಮಗಳನ್ನು ಹೆಚ್ಚು ಮಾದರಿಯಾಗಿಟ್ಟುಕೊಂಡು ರಾಚನಿಕವಾಗಿ ಕಟ್ಟಿಕೊಡಲಾಗಿದೆ. ಆದ್ದರಿಂದ ಅಖಂಡ ಕರ್ನಾಟಕದ ವ್ಯಕ್ತಿನಾಮಗಳು ಪ್ರಾದೇಶಿಕವಾಗಿ ಭಿನ್ನವಾಗಿರುವುದರಿಂದ ಅವುಗಳ ಕುರಿತು ಸಮಗ್ರ ಅಧ್ಯಯನ ನಡೆಸುವ ಅವಕಾಶಗಳಿವೆ.

* * *

# ಅಧ್ಯಾಯ ನಾಲ್ಕು

# ವ್ಯಕ್ತಿನಾಮಗಳ ಚಾರಿತ್ರಿಕ ಸ್ವರೂಪ ಮತ್ತು ವಿಶ್ಲೇಷಣೆ

## ಅಧ್ಯಾಯ ನಾಲ್ಕು

# ವ್ಯಕ್ತಿನಾಮಗಳ ಚಾರಿತ್ರಿಕ ಸ್ವರೂಪ ಮತ್ತು ವಿಶ್ಲೇಷಣೆ

### ೪.೧. ಚಾರಿತ್ರಿಕ ನೆಲೆಗಳು

ನಾಮಗಳಿಲ್ಲದ ವ್ಯಕ್ತಿಗಳಿಲ್ಲ, ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟ. ಹೆಸರಿಲ್ಲದ ಯಾವ ವಸ್ತು, ವ್ಯಕ್ತಿಯನ್ನು ಜಗತ್ತಿನಲ್ಲಿ ಕಾಣಲಾಗದು. ಮನುಷ್ಯನಿಗೆ ಸಂವಹನ ಮಾಧ್ಯಮವಾಗಿ ಭಾಷೆ ಎಷ್ಟು ಮುಖ್ಯವೋ ಸಂವಹನ ಮಾಧ್ಯಮದಲ್ಲಿ ವ್ಯಕ್ತಿನಾಮಗಳು ಅಷ್ಟೇ ಪ್ರಧಾನ ಪಾತ್ರವಹಿಸುತ್ತವೆ. ಆದ್ದರಿಂದ ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳನ್ನು ಗುರುತಿಸಲು ಮತ್ತು ಅವನೊಂದಿಗೆ ಸಂವಹನ ಮಾಡಲು ಸಾಧ್ಯವೇ ಇಲ್ಲ ಎನ್ನಬಹುದು. ಹಾಗಾಗಿ ಇಂತಹ ಮಹತ್ವದ ಸಂವಹನ ಸಾಧನವಾಗಿರುವ ವ್ಯಕ್ತಿನಾಮಗಳ ಚರಿತ್ರೆಯನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಮನುಷ್ಯ ಆರಂಭ ಕಾಲದಿಂದ ತನ್ನ ಜೀವನ ವಿಧಾನದಲ್ಲಿ ಹಲವು ಬದಲಾವಣೆ ಮಾಡಿಕೊಂಡು ನಾಗರೀಕತೆಯ ಕಡೆಗೆ ಸಾಗುತ್ತಾ ಹೊಸ ಹೊಸ ಆಲೋಚನೆಗಳ ದಿಕ್ಕಿಗೆ ತನ್ನ ಚಿತ್ತವನ್ನು ಕೇಂದ್ರೀಕರಿಸಿಕೊಂಡು ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ ಹೆಸರುಗಳ ಸ್ವರೂಪದಲ್ಲಿಯು ಹಲವಾರು ಬದಲಾವಣೆಯಾಗಿರುವುದನ್ನು ಗುರುತಿಸಬಹುದಾಗಿದೆ. ವ್ಯಕ್ತಿನಾಮಗಳ ಚರಿತ್ರೆಯನ್ನು ಗಮನಿಸಿದರೆ ಇವು ಮನುಷ್ಯನ ಅವಿಭಾಜ್ಯ ಅಂಗಗಳಾಗಿರುವುದು ಕಂಡುಬರುತ್ತದೆ. ಈ ವ್ಯಕ್ತಿನಾಮಗಳು ಸಮುದಾಯದ ಜನರ ಸಂಸ್ಕೃತಿಯ ಚರಿತ್ರೆಯನ್ನು ಕಟ್ಟಿಕೊಡಬಲ್ಲ ಸಾಮರ್ಥ್ಯ ಪಡೆದುಕೊಂಡಿವೆ ಎನ್ನಬಹುದು.

ಆಧುನಿಕತೆಯ ಪ್ರಭಾವದಿಂದಾಗಿ ಪ್ರಾಚೀನ ಹೆಸರುಗಳು ಸ್ಥಿತ್ಯಂತರ ಪಡೆದುಕೊಂಡಿವೆ ಹಾಗೂ ಈ ಕಾಲಮಾನದ ಜನಸಮುದಾಯದಿಂದ ಬೇರಾಗುತ್ತಿವೆ ಎಂಬುದು ಗಮನಿಸಬೇಕಾದ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳು ಆರಂಭಕಾಲದಿಂದ ಇಂದಿನವರೆಗೂ ಯಾವ ರೀತಿಯ ಸ್ಥಿತ್ಯಂತರ ಹೊಂದಿವೆ ಎಂಬುದನ್ನು ಗಮನಿಸುವ, ದಾಖಲಿಸುವ, ವಿಶ್ಲೇಷಿಸುವ ಮತ್ತು ಸಾಂಸ್ಕೃತಿಕ ಚರಿತ್ರೆಯ ಮೇಲೆ ಇವುಗಳ ಪ್ರಭಾವಗಳಾಗಿರುವುದನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ

ಮಾಡಲಾಗಿದೆ. ಈ ದಿಸೆಯಲ್ಲಿ ವಿವಿಧ ವಿಭಾಗಗಳಾಗಿ ವರ್ಗೀಕರಿಸಿಕೊಂಡು ವ್ಯಕ್ತಿ ನಾಮಗಳ ಚಾರಿತ್ರಿಕ ಸ್ವರೂಪವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ವ್ಯಕ್ತಿನಾಮಗಳ ಕುರಿತ ಚಾರಿತ್ರಿಕ ಅಧ್ಯಯನಕ್ಕೆ ಆಕರಗಳು ಪ್ರಮುಖ ಪಾತ್ರವಹಿಸುತ್ತವೆ. ಪ್ರಸ್ತುತ ಅಧ್ಯಯನಕ್ಕೆ ಆಕರ ಸಾಧನಗಳಾಗಿ ಶಾಸನ, ಕಾವ್ಯ, ಪುರಾಣ ಕತೆಗಳು, ಜಾನಪದ, ಲಾವಣಿ, ವಚನ, ವೀರಶೈವ ಪುರಾಣ, ಅಷ್ಟೋತ್ತರ ಪುರಾಣ, ಸಹಸ್ರನಾಮ, ಚರಿತ್ರೆ, ಕೈಫಿಯತ್ತು, ಪಾಶ್ಚಾತ್ಯ ಪ್ರವಾಸಿಗರ ಬರಹ, ಪಟ್ಟಾವಳಿ, ವೃತ್ತಪತ್ರಿಕೆ, ಪಟೇಲರ ದಾಖಲೆ, ಕಂದಾಯ ಇಲಾಖೆಯಲ್ಲಿನ ದಾಖಲೆಗಳು, ಶಾಲಾ ದಾಖಲಾತಿ ವಹಿ, ಚುನಾವಣಾ ಮತದಾರರ ಪಟ್ಟಿ, ಸಾಮಾಜಿಕ ಜಾಲತಾಣ, ಇತರೆ ಸಾಹಿತ್ಯ ಕೃತಿಗಳನ್ನು ಬಳಸಿಕೊಳ್ಳಲಾಗಿದೆ. ಈ ಎಲ್ಲಾ ಆಕರಗಳನ್ನಿಟ್ಟುಕೊಂಡು ಚಾರಿತ್ರಿಕ ವಿಧಾನದಲ್ಲಿ ವಿಶ್ಲೇಷಣೆ ಮಾಡಲಾಗಿದ್ದು, ವಿವಿಧ ಕಾಲಘಟ್ಟಗಳಾಗಿ ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಆ ವಿಭಾಗಗಳನ್ನು ಈ ಕೆಳಕಂಡಂತೆ ವಿಶ್ಲೇಷಣೆ ಮಾಡಲಾಗಿದೆ.

**೪.೧.೧. ಆರಂಭಿಕ ಹಂತ ಅಥವಾ ಸಂಕೇತಗಳ ಬಳಕೆ ಅಥವಾ ಹೆಸರುಗಳಿಲ್ಲದ ಅವಧಿ:–** ಮನುಷ್ಯ ಭೂಮಿಯ ಮೇಲೆ ಅಸ್ಮಿತೆಯನ್ನು ಕಂಡುಕೊಂಡ ಆರಂಭದಲ್ಲಿ ವ್ಯಕ್ತಿಗಳಿಗೆ ಹೆಸರಿಡುವ ಸಂಪ್ರದಾಯ ಇರಲಿಲ್ಲ ಎನ್ನಬಹುದು. ಜೊತೆಗೆ ಇಂದಿನಂತೆ ಅಂದು ವ್ಯಕ್ತಿಗಳ ಸಂಖ್ಯೆಯೂ ಕೂಡ ಕಡಿಮೆ. ಆಹಾರ ಸಂಗ್ರಹಕ್ಕಾಗಿ ಅಲೆಮಾರಿ ಜೀವನ ನಡೆಸುತ್ತಿದ್ದವರು ಸಣ್ಣ ಸಣ್ಣ ಗುಂಪುಗಳಾಗಿ ಜೀವನ ನಿರ್ವಹಣೆ ಮಾಡಿಕೊಂಡಿದ್ದರು. ಆದ್ದರಿಂದ ತಮ್ಮ ಸಣ್ಣ ಗುಂಪಿನಲ್ಲಿನ ವ್ಯಕ್ತಿಗಳನ್ನು ಗುರುತಿಸುವುದು ಅವರಿಗೆ ಸಮಸ್ಯೆ ಎನಿಸಿರಲಿಕ್ಕಿಲ್ಲ. ಈ ಕಾರಣದಿಂದಾಗಿ ಆರಂಭದ ಅವಧಿಯಲ್ಲಿ ವ್ಯಕ್ತಿಗೆ ಹೆಸರಿಡುವ ಸಂಪ್ರದಾಯ ಪ್ರಾರಂಭವಾಗಲು ಸಾಧ್ಯವಾಗಿರಲಿಕ್ಕಿಲ್ಲ, ಬದಲಾಗಿ ವ್ಯಕ್ತಿಗಳನ್ನು ಗುರುತಿಸಲು ಕೆಲವು ಅಶಾಬ್ಧಿಕ ಸಂಕೇತಗಳನ್ನು ಬಳಸಿರುವ ಸಾಧ್ಯತೆಯಿರಬಹುದು. ಈ ಸಂಕೇತಗಳನ್ನು ವ್ಯಕ್ತಿ ವ್ಯಕ್ತಿಗಳ ನಡುವೆ ಸಂಬೋಧನೆ ಮಾಡುವ ಸನ್ನಿವೇಶಗಳಲ್ಲಿ ಬಳಸಿರುವ ಸಾಧ್ಯತೆ ಹೆಚ್ಚು. ಈ ರೀತಿಯ ಸಂಕೇತಗಳು ಚಪ್ಪಾಳೆ, ಸಿಳ್ಳೆ, ಕೇಕೆ ಹಾಕುವುದು, ಕೈ ತಟ್ಟುವುದು ಇನ್ನು ಕೆಲವು ಆಂಗಿಕ ಚಲನೆಗಳ ಮೂಲಕ ನಡೆದಿರುವ ಸಾಧ್ಯತೆ ಇದೆ.

**೪.೧.೨. ಅನ್ವರ್ಥ ನಾಮಗಳ ಬಳಕೆ**

ಮನುಷ್ಯರ ಆರಂಭದ ಕಾಲದ ಪ್ರಮುಖ ಬೇಡಿಕೆ ಆಹಾರ. ಈ ಆಹಾರ ಸಂಗ್ರಹಿಸುವುದೇ ಇವರ ಕಾರ್ಯವಾಗಿತ್ತು. ಆಹಾರ ಸಂಗ್ರಹಣೆಗಾಗಿ ಬೇಟೆಯಾಡುವುದನ್ನು ಕಲಿತರು. ಈ ಕಾರ್ಯದಿಂದ ಮನುಷ್ಯರ ಆಹಾರದ ಬೇಡಿಕೆ ಹೆಚ್ಚುತ್ತಲೇ ಹೋದಾಗ, ಕೆಲವು ಸಸ್ಯ ಮೂಲ ವಸ್ತುಗಳನ್ನು ಆಹಾರವಾಗಿ ಉಪಯೋಗಿಸಲು ಪ್ರಾರಂಭಿಸಿದರು. ಅನಂತರ ಮನುಷ್ಯರ ಸಂಖ್ಯೆ ಹೆಚ್ಚುತ್ತಾ ಹೋದಂತೆಲ್ಲ ಹಲವು ಗುಂಪುಗಳಾಗಿ ವಿಭಜನೆ ಹೊಂದಿ ಸ್ವತಂತ್ರವಾಗಿ ಜೀವನ ಸಾಗಿಸುತ್ತಾ ಮುಂದೆ ಕೃಷಿಯನ್ನು ತನ್ನ ಪ್ರಧಾನ ಕಸುಬಾಗಿಸಿಕೊಂಡು ಜೀವಿಸುವ ಸಂದರ್ಭದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸಂವಹನ ಅನಿವಾರ್ಯವಾಗಿರಬೇಕು. ಹೀಗೆ ಅನಿವಾರ್ಯವಾಗಿ ಸಂವಹನಕ್ಕಾಗಿ ಭಾಷೆಯನ್ನು ಕಲಿತಂತಹ ಮನುಷ್ಯ

ಕೇವಲ ಭಾಷೆಯಿಂದ ಒಬ್ಬರಿಂದ ಮತ್ತೊಬ್ಬರನ್ನು ಬೇರ್ಪಡಿಸಿ ಗುರುತಿಸಲು ಸಾಧ್ಯವಾಗಲಾರದು ಎಂಬುವುದನ್ನು ಅರಿತನು. ಇಂತಹ ಸಂದರ್ಭದಲ್ಲಿ ಒಬ್ಬರಿಂದ ಮತ್ತೊಬ್ಬರನ್ನು ಬೇರ್ಪಡಿಸಿ ಗುರುತಿಸಲು ಹೆಸರು ಅನಿವಾರ್ಯವಾಗಿರಬೇಕು. ಇಂತಹ ಅನಿವಾರ್ಯ ಸಂದರ್ಭದಲ್ಲಿ ಹೆಸರಿಡುವ ಪ್ರಕ್ರಿಯೆ ಆರಂಭವಾಗಿರಬಹುದು. ಆದರೆ ಈ ಹೆಸರುಗಳನ್ನು ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿಯೋ, ಯಾವುದೋ ಪ್ರಭಾವದಿಂದಲೋ ಬಳಸಿರುವುದು ತೀರಾ ವಿರಳ ಎನ್ನಬಹುದು. ಏಕೆಂದರೆ ಆರಂಭದಲ್ಲಿ ವ್ಯಕ್ತಿಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವುದೇ ಅವರ ಗುಣವಿಶೇಷಣಗಳಿಂದ. ಆರಂಭದ ಕಾಲದಲ್ಲಿ ವ್ಯಕ್ತಿಯ ಗುಣ ವಿಶೇಷಣಗಳಿಂದ ಗುರುತಿಸುವುದು ರೂಢಿಗೆ ಬಂದಿರಬಹುದು. ಹಾಗಾಗಿ ಈ ಅವಧಿಯಲ್ಲಿ ಅನ್ವರ್ಥ ನಾಮಗಳು ಬಳಕೆಗೆ ಬಂದಿರುವ ಸಾಧ್ಯತೆಯಿದೆ.

**ಉದಾ:–**

| | | |
|---|---|---|
| ದಪ್ಪವಾಗಿದ್ದರೆ | – | ದಡಿಯ, ದೊಡ್ಡ |
| ಸಣ್ಣಗಿದ್ದರೆ | – | ಸಣ್ಣ, ಸಣ್ಣಿ, ಚಿಕ್ಕ, ಚಿಕ್ಕಿ |
| ಕಣ್ಣುಕಾಣದವರನ್ನು | – | ಕುರುಡ, ಕುರುಡಿ |
| ಮಾತುಬಾರದವರನ್ನು | – | ಮೂಗ, ಮೂಗಿ |
| ಕಿವಿ ಕೇಳದಿದ್ದವರನ್ನು | – | ಕಿವುಡ, ಕಿವುಡಿ |
| ಕಾಲು ಊನವಾಗಿದ್ದರೆ | – | ಕುಂಟ, ಕುಂಟಿ |
| ಸೊಂಟ ಊನವಾಗಿದ್ದರೆ | – | ಎಳವ, ಎಳವಿ |
| ಕೈ ಊನವಾಗಿದ್ದರೆ | – | ಮೋದ, ಮೋದಿ |
| ಕೆಂಪಗಿದ್ದರೆ | – | ಕೆಂಪ, ಕೆಂಪಿ, ಕೆಂಚ, ಕೆಂಚಿ |
| ಕಪ್ಪಗಿದ್ದರೆ | – | ಕರಿಯ |
| ಉದ್ದವಾಗಿದ್ದರೆ | – | ಲಂಬೂ |
| ಕುಳ್ಳಗಿದ್ದರೆ | – | ಕುಳ್ಳ, ಕುಳ್ಳಿ, ಗಿಡ್ಡ, ಗಿಡ್ಡಿ |

ಹೀಗೆ ಇನ್ನೂ ಹಲವು ವಿಶೇಷತೆಗಳಿಂದ ವ್ಯಕ್ತಿಗಳನ್ನು ಗುರುತಿಸುವ ಸಂಭವನೀಯತೆ ಇದ್ದಿರಬಹುದು.

ಆದರೆ ಕಲಬುರ್ಗಿ ಎಂ.ಎಂ., ಅವರು ಆರಂಭದ ಕಾಲದಲ್ಲಿಯೇ ಅನ್ವರ್ಥ ನಾಮಗಳಿಗೆ ವಾರ್ಗಿಕಗಳು ಸೇರಿವೆ ಎಂದು ಹೇಳಿರುವುದನ್ನು ಕುರಿತಂತೆ ಮತ್ತೊಮ್ಮೆ ಚರ್ಚಿಸಿ ತೀರ್ಮಾನಕ್ಕೆ ಬರುವ ಅಗತ್ಯವಿದೆ. ಏಕೆಂದರೆ ಇವರು ಗುಣವಾಚಕ/ಅನ್ವರ್ಥನಾಮಗಳಿಗೆ ಸಂಬಂಧವಾಚಕಗಳಾದ ಅಪ್ಪ, ಅಯ್ಯ, ಅಣ್ಣ, ಅಕ್ಕ, ಅಮ್ಮ ಮುಂತಾದ ವಾರ್ಗಿಕಗಳನ್ನು ಸೇರಿಸಿ ಹೇಳಿರುವುದನ್ನು (ಉದಾ:– ದೊಡ್ಡಪ್ಪ, ಸಣ್ಣಪ್ಪ, ಕೆಂಚಪ್ಪ, ಕರಿಯಪ್ಪ, ಕಲಿಯಪ್ಪ) (೨೦೧೦, ಕನ್ನಡ ನಾಮ ವಿಜ್ಞಾನ, ಪು– ೧೧)ಕಾಣುತ್ತೇವೆ. ಈ ವಾರ್ಗಿಕಗಳು ಆರಂಭದ ಕಾಲದಲ್ಲಿ ವ್ಯಕ್ತಿನಾಮಗಳಿಗೆ ಅಂಟಿರಲು ಸಾಧ್ಯವಿಲ್ಲ ಎನಿಸುತ್ತದೆ. ಆರಂಭದ ಕಾಲಘಟ್ಟದಲ್ಲಿ ವ್ಯಕ್ತಿನಾಮಗಳೆಲ್ಲವೂ ಅನ್ವರ್ಥ ನಾಮಗಳೇ ಆಗಿರಬಹುದು

ಮತ್ತು ಈ ಅನ್ವರ್ಥ ನಾಮಗಳೇ ಪ್ರಥಮ ಹಾಗೂ ಪುರಾತನವಾದವುಗಳೆಂದು ಗ್ರಹಿಸಲಾಗಿದೆ.

**೪.೧.೩. ಅಂಕಿತ ನಾಮಗಳ ಬಳಕೆಯ ಅವಧಿ :-**

ಆರಂಭದ ಕಾಲದಲ್ಲಿ ಮನುಷ್ಯರ ಸಂಖ್ಯೆ ಕಡಿಮೆ ಇದ್ದ ಕಾರಣ ಒಬ್ಬರಿಂದ ಮತ್ತೊಬ್ಬರನ್ನು ಬೇರ್ಪಡಿಸಿ ಗುರುತಿಸಲು ಅನ್ವರ್ಥ ನಾಮಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಆದರೆ ಈ ಸಂಖ್ಯೆ ಕಾಲಕ್ರಮೇಣ ಹೆಚ್ಚಳವಾದಾಗ ಅನ್ವರ್ಥಕ ನಾಮಗಳಿಂದಲೇ ಎಲ್ಲರನ್ನು ಗುರುತಿಸಲು ಸಾಧ್ಯವಾಗದೇ ಹೋಗಿರಬಹುದು. ಇಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲು ಪ್ರಾರಂಭಿಸಿರುವ ಸಾಧ್ಯತೆ ಇದೆ. ಆದರೆ ಈ ಸಂದರ್ಭದಲ್ಲಿ ಹೆಸರುಗಳು ಸಾಮಾನ್ಯವಾಗಿ ತಾವುಗಳು ರೂಪಿಸಿಕೊಂಡ ದೇವರುಗಳೋ, ದಿನನಿತ್ಯ ಬಳಸುವ ಪರಿಕರಗಳೋ, ತಮ್ಮ ಪರಿಸರದ ವಸ್ತುಗಳಿಗೆ ಕಟ್ಟಿಕೊಂಡ ಹೆಸರುಗಳೋ ಬಳಕೆಯಾಗಿರಬಹುದು. ಈ ರೀತಿ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳಾಗಿ ಬಳಕೆಯಾಗಿರಬಹುದು.

ಉದಾಹರಣೆಗೆ ಮನುಷ್ಯ ತನ್ನ ಪರಿಸರದಲ್ಲಿ ನಡೆಯುತ್ತಿದ್ದಂತಹ ಘಟನೆಗಳನ್ನು ವಿಸ್ಮಯಗಳು, ವಿಶಿಷ್ಟ ಶಕ್ತಿಯುಳ್ಳವು, ನಮಗಿಂತಲೂ ಶ್ರೇಷ್ಠವೆಂದು ಭಾವಿಸಿದ್ದನು. ಇಂತಹ ಘಟನೆಗಳಿಗೆಲ್ಲ ದೈವೀರೂಪವನ್ನು ಕೊಟ್ಟಿರುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಬೆಳಕು ಕತ್ತಲಾಗುವ, ಕತ್ತಲು ಬೆಳಕಾಗುವಲ್ಲಿ ಸೂರ್ಯ, ಚಂದ್ರರನ್ನು ದೇವರೆಂದು ಕರೆದಿರಬಹುದು ಹಾಗೂ ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ನೀರು, ಗಾಳಿ, ಭೂಮಿ, ಬೆಂಕಿ, ಮರ, ಗಿಡ, ಕಲ್ಲು ಮುಂತಾದ ನೈಸರ್ಗಿಕ ವಸ್ತುಗಳನ್ನು ದೈವದ ಕಲ್ಪನೆಯಲ್ಲಿ ಆರಾಧಿಸಿರುವ ಸಾಧ್ಯತೆಯುಂಟು. ಜೊತೆಗೆ ಇವುಗಳಿಗೆ ತನ್ನದೇ ಆದ ಹೆಸರನ್ನು ಇಟ್ಟು ಸಂಬೋಧಿಸುವ ಪ್ರಕ್ರಿಯೆ ಆರಂಭವಾಗಿರಬೇಕು. ಇಂತಹ ಹೆಸರುಗಳನ್ನು ತಮ್ಮ ಸಮುದಾಯದ ವ್ಯಕ್ತಿಗಳಿಗೆ ಆಕರಗಳಾಗಿ ಬಳಸಿಕೊಂಡಿರಬಹುದು.

ಒಟ್ಟಾರೆಯಾಗಿ ಈ ಅವಧಿಯಲ್ಲಿ ತಾನು ರೂಢಿಸಿಕೊಂಡ ದೇವರ ಹೆಸರುಗಳನ್ನು ಮತ್ತು ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ನೈಸರ್ಗಿಕ ಸಕಲ ವಸ್ತುಗಳ ಹೆಸರುಗಳನ್ನು ವ್ಯಕ್ತಿನಾಮಗಳಾಗಿ ಬಳಸಿರುವ ಸಾಧ್ಯತೆಯಿದೆ. ಆದರೆ ಕಲ್ಬುರ್ಗಿಯವರು(೨೦೧೦) ಈ ಅವಧಿಯಲ್ಲಿ ಸತ್ತು ಹೋದ ಪಿತೃಗಳ ಹೆಸರನ್ನು ಇಡುತ್ತಿದ್ದಿರಬಹುದು ಎಂದಿದ್ದಾರೆ. ಆದರೆ ಆಗಿನ್ನು ಅಂಕಿತ ನಾಮಗಳು ಪ್ರವೇಶ ಪಡೆದಿರುವ ಸಾಧ್ಯತೆ ಇರುವುದರಿಂದ ಪಿತೃಗಳ ಹೆಸರನ್ನು ಇಡುತ್ತಿದ್ದರು ಎಂಬುದನ್ನು ಕುರಿತು ಮತ್ತೊಮ್ಮೆ ಪರಿಶೀಲಿಸುವ ಅಗತ್ಯವಿದೆ.

**೪.೧.೪. ವಾರ್ಗಿಕಗಳ ಪ್ರವೇಶ**

ಅಂಕಿತ ನಾಮಗಳ ಬಳಕೆಯ ವ್ಯಾಪಕತೆ ಹೆಚ್ಚಾದಂತೆ ಸಾಮಾನ್ಯವಾಗಿ ಸ್ತ್ರೀಯರು ಮತ್ತು ಪುರುಷರನ್ನು ಬೇರ್ಪಡಿಸಿ ಗುರುತಿಸಲು ಹೆಸರನ್ನು ಬಳಸುತ್ತಿದ್ದಿರಬಹುದು. ಜೊತೆಗೆ ಈ ಸಂದರ್ಭದಲ್ಲಿ ವ್ಯಕ್ತಿತ್ವ ಮತ್ತು ಹೆಸರುಗಳ ಮಧ್ಯೆ ಅರ್ಥ ಸಂಬಂಧ ತಪ್ಪಿ ಹೋಗಿರಬೇಕು. ಏಕೆಂದರೆ ಪ್ರಾರಂಭದ ಅವಧಿಯಲ್ಲಿ ವ್ಯಕ್ತಿಯ ಗುಣವಿಶೇಷಣಗಳ ಆಧಾರದ ಮೇಲೆ ಹೆಸರುಗಳು ಬಳಕೆಯಾಗುತ್ತಿದ್ದವು.

ಅಂಕಿತನಾಮಗಳು ಪ್ರವೇಶ ಪಡೆದ ನಂತರ ಗುಣ ವಿಶೇಷಣಗಳಿಗೆ ಅಷ್ಟಾಗಿ ಮಹತ್ವವಿಲ್ಲದಂತಾಗಿರ ಬಹುದು. ಚಿದಾನಂದಮೂರ್ತಿ ಹಾಗೂ ಕಲಬುರ್ಗಿಯವರು ನೀಡುವ ಉದಾಹರಣೆಗಳನ್ನು ನೋಡುವುದಾದರೆ

"ಹೆಸರು ಹಾಲಪ್ಪ, ಮನೆಯಲ್ಲಿ ಮಜ್ಜಿಗೆಯು ಇಲ್ಲ"

"ಹೆಸರು ಕುಬೇರ ವೃತ್ತಿಯಲ್ಲಿ ತಿರುಕ"

"ಹೆಸರು ಕೆಂಚ ಇರುವುದು ಕಪ್ಪಗೆ"

ಹೀಗೆ ಇನ್ನು ಮುಂತಾದ ಉದಾಹರಣೆಗಳನ್ನು ನೋಡಿದಾಗ ವ್ಯಕ್ತಿತ್ವ ಮತ್ತು ಹೆಸರುಗಳ ಮಧ್ಯೆ ಅರ್ಥ ಸಂಬಂಧ ಕಡಿಮೆಯಾಗಿರಬಹುದೆಂದು ಗ್ರಹಿಸಬಹುದಾಗಿದೆ.

ಹೀಗೆ ಅಂಕಿತನಾಮಗಳೇ ಪ್ರಧಾನವಾಗಿ ಬಳಕೆಯಾಗುತ್ತಿದ್ದ ಸಂದರ್ಭದಲ್ಲಿ ಈ ಅಂಕಿತನಾಮಗಳೆಲ್ಲವೂ ನಿಜ ನಾಮಗಳಾಗಿ ನಿರ್ದಿಷ್ಟದ ಸ್ಥಾನವನ್ನು ಪಡೆದುಕೊಂಡಿದ್ದವು. ಏಕೆಂದರೆ ಇಲ್ಲಿ ಇನ್ನೂ ವಾರ್ಗಿಕಗಳ ಪ್ರವೇಶ ಪಡೆದಿರಲಿಲ್ಲವೆಂದು ಹೇಳಬಹುದು. ಕುತೂಹಲಕ್ಕಾಗಿ ಗಮನಿಸುವುದಾದರೆ ರಾಮಾಯಣ, ಮಹಾಭಾರತ ಹಾಗೂ ಇತರೆ ಪುರಾಣ ಕಾವ್ಯಗಳಲ್ಲಿನ ವ್ಯಕ್ತಿನಾಮಗಳನ್ನು ಗಮನಿಸಿದರೆ ಅದರಲ್ಲಿ ಬರುವ ಬಹುತೇಕ ಹೆಸರುಗಳೆಲ್ಲ ನಿರ್ದಿಷ್ಟ ರೂಪದಲ್ಲಿ ಇರುವುದನ್ನು ಗಮನಿಸಬಹುದು. ಜೊತೆಗೆ ಪುರಾಣ ನಾಮ ಚೂಡಾಮಣಿ ಕೃತಿಯಲ್ಲಿಯೂ ಬಹುತೇಕ ನಿರ್ದಿಷ್ಟವಾಚಿ ಹೆಸರುಗಳನ್ನೆ ಕಾಣಬಹುದು. ಹೀಗೆ ಆರಂಭದಲ್ಲಿ ನಿರ್ದಿಷ್ಟಗಳಾಗಿ ಬಳಕೆಗೊಳ್ಳುತ್ತಿದ್ದ ಹೆಸರುಗಳಿಗೆ ಯಾವುದೋ ಒಂದು ಕಾಲಘಟ್ಟದಲ್ಲಿ ವಾರ್ಗಿಕಗಳು ಪ್ರವೇಶ ಪಡೆದಿವೆ. ವಾರ್ಗಿಕಗಳು ಪ್ರವೇಶ ಪಡೆಯಲು ನಿಖರವಾದ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಜನಪದೀಯ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನ ಮಾಡಬಹುದು. ಹೇಗೆಂದರೆ ಜನಪದ ಹಾಡುಗಳಲ್ಲಿ, ಮಹಾಕಾವ್ಯಗಳಲ್ಲಿ, ಲಾವಣಿಗಳಲ್ಲಿ ಬಳಸಿರುವ ಹೆಸರುಗಳಿಗೆ ಜನಪದರು ಬಂಧುವಾಚಿ, ಗೌರವವಾಚಿ, ದೈವವಾಚಿ ವಾರ್ಗಿಕಗಳನ್ನು ಸೇರಿಸಿರುವುದನ್ನು ಕಾಣಬಹುದು. ಅಂದರೆ ಸಮಾಜದಲ್ಲಿ ಅಧಿಕಾರ, ಸ್ಥಾನಮಾನಗಳು, ಜಾತಿ, ವೃತ್ತಿಗಳೆಲ್ಲವೂ ನೆಲೆಕಂಡುಕೊಂಡುದರ ಪರಿಣಾಮವಾಗಿ ಹಾಗೂ ಜನಪದರು ವ್ಯಕ್ತಿಗಳಿಗೆ ಗೌರವ ಸೂಚಕವಾಗಿ ಬಂಧುವಾಚಕಗಳನ್ನು ಬಳಸಿರುವುದರ ಪರಿಣಾಮವಾಗಿ ನಿರ್ದಿಷ್ಟ ಹೆಸರುಗಳಿಗೆ ವಾರ್ಗಿಕಗಳು ಬಂದು ಸೇರಿರುವ ಸಾಧ್ಯತೆ ಇರಬಹುದು. ಅನ್ವರ್ಥನಾಮಗಳಾದ ಕೆಂಪ, ಕರಿಯ, ಬಿಳಿಯ, ದೊಡ್ಡ, ಚಿಕ್ಕ, ಕುಂಟ, ಕುರುಡ, ಕಿವುಡ ಅಂಕಿತನಾಮಗಳಾದ ಸೂರ್ಯ, ಚಂದ್ರ, ಇಂದ್ರ, ರಾಮಕೃಷ್ಣ, ಭೀಮ, ಅರ್ಜುನ ಮುಂತಾದ ನಿರ್ದಿಷ್ಟ ಹೆಸರುಗಳಿಗೆ ಬಂಧುವಾಚಕಗಳಾದ ಅಯ್ಯ, ಅಪ್ಪ, ಅಣ್ಣ, ಅಕ್ಕ, ಅಮ್ಮ, ಅವ್ವ ವೃತ್ತಿವಾಚಕಗಳಾದ ತಳವಾರ, ದಳವಾಯಿ, ಗೌಡ, ಗೊಂಚಕಾರ, ಪಟೇಲ, ಶಾನುಬೋಗ, ಬಡಗಿ, ಕುಂಬಾರ, ಚಮ್ಮಾರ, ಗೌರವವಾಚಿಗಳಾದ ಸ್ವಾಮಿ, ಒಡೆಯ, ದೇವ, ರಾಯ ಅಧಿಕಾರವಾಚಿಯಾದ ಗೌಡ, ನಾಯಕ, ರಾಜ ಜಾತಿವಾಚಿಗಳಾದ ಲಂಬಾಣಿ, ಕುರುಬ, ಗೊರವ, ಗೊಲ್ಲ, ಹರಿಜನ, ಮಾದಿಗ, ಕುಂಚಿಟಿಗ, ಬೋವಿ, ಈಡಿಗ, ಛಲವಾದಿ, ನಾಯಕ, ನಾಯ್ಕ ಮುಂತಾದ ವಾರ್ಗಿಕಗಳು ಸೇರಿ ಪೂರ್ಣ ವ್ಯಕ್ತಿನಾಮಗಳಾಗಿ

ಬಳಕೆಯಾಗಿರುವುದನ್ನು ಗಮನಿಸಬಹುದು. ಒಟ್ಟಾರೆಯಾಗಿ ವಾರ್ಗಿಕಗಳ ಪ್ರವೇಶದಿಂದ ಹೆಸರುಗಳಲ್ಲಿ ಸಂಕುಚಿತತೆ ಸೃಷ್ಟಿಯಾಯಿತೆಂದು ಒಪ್ಪಿಕೊಳ್ಳಬೇಕು. ಏಕೆಂದರೆ ಅಂಕಿತನಾಮಗಳಿದ್ದ ಸಂದರ್ಭದಲ್ಲಿ ಯಾರು ಯಾವ ಹೆಸರನ್ನು ಬೇಕಾದರು ಬಳಸಬಹುದಿತ್ತು. ಆದರೆ ಈ ವಾರ್ಗಿಕಗಳ ಪ್ರವೇಶದಿಂದ ಬದಲಾವಣೆಗಳಾದದ್ದನ್ನು ಗುರುತಿಸಬಹುದು.

**೪.೧.೫. ಲಿಖಿತ ಆಕರಗಳ ಅವಧಿ**

ಕ್ರಿ.ಶ.೪೫೦ರಲ್ಲಿ ದೊರೆತ ಹಲ್ಮಿಡಿ ಶಾಸನವು ಕನ್ನಡದ ಮಟ್ಟಿಗೆ ಮೊಟ್ಟಮೊದಲ ಲಿಖಿತದಾಖಲೆ ಎಂದು ನಂಬಲಾಗಿದೆ. ಈ ಅವಧಿಯಿಂದ ದೊರೆತ ಆಕರಗಳಲ್ಲಿನ ವ್ಯಕ್ತಿನಾಮಗಳನ್ನು ಆಧಾರವಾಗಿಟ್ಟುಕೊಂಡು ವ್ಯಕ್ತಿನಾಮಗಳಲ್ಲಿ ಚಾರಿತ್ರಿಕವಾಗಿ ಹೇಗೆ ಬದಲಾವಣೆಯಾಗುತ್ತಾ ಬಂದಿದೆ ಎಂಬುದನ್ನು ಗುರುತಿಸಬಹುದು. ಈ ಕಾಲಕ್ಕಾಗಲೆ ವಾರ್ಗಿಕಗಳ ಪ್ರವೇಶ ಆಗಿತ್ತು ಎಂಬುದಕ್ಕೆ ಉದಾಹರಣೆಗಳು ಸಿಗುತ್ತವೆ.

**೪.೧.೫.೧. ನಿರ್ದಿಷ್ಟಗಳ ಬಳಕೆ ಹೆಚ್ಚು**

ಲಿಖಿತ ಆಕರಗಳನ್ನು ಗಮನಿಸಿದರೆ ಶಾಸನ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುವ ಬಹುತೇಕ ಹೆಸರುಗಳು ನಿರ್ದಿಷ್ಟಗಳಾಗಿಯೇ ಬಳಕೆಯಾಗಿರುವುದು ತಿಳಿಯುತ್ತದೆ.

**ಉದಾ:-**

ವಿಜ
ಮೃಗೇಶ
ನಾಗೇಂದ್ರ
ಪಂಪ
ರಾಘವಾಂಕ
ಪೊನ್ನ
ರನ್ನ
ಜನ್ನ
ದುರ್ಗಸಿಂಹ
ಬ್ರಹ್ಮಶಿವ
ನಾಗಚಂದ್ರ
ಶ್ರೀವಿಜಯ
ಗುಣನಂದಿ
ನಯಸೇನ
ನೇಮಿಚಂದ್ರ
ಅಸಗ

ಅಗ್ಗಳ

ಚಂದ್ರಸಾಗರ

ಷಡಕ್ಷರ

ನಾಗರಾಜ

ಸೋಮರಾಜ

ಸುರಗ

ಹರಿಹರ

ಕಾಕುಸ್ಥ ವರ್ಮ

ಈ ಎಲ್ಲಾ ಹೆಸರುಗಳನ್ನು ಗಮನಿಸಿದರೆ ಇಲ್ಲಿ ನಿರ್ದಿಷ್ಟಗಳು ಹೆಚ್ಚು ಬಳಕೆಯಾಗಿರುವುದು ಕಂಡುಬರುತ್ತದೆ. ನಂತರದ ಅವಧಿಯಲ್ಲಿ ಈ ರೀತಿಯ ಹೆಸರುಗಳು ಕಣ್ಮರೆಯಾದವು ಎಂದು ಹೇಳಬಹುದು. ಇದಕ್ಕೆ ನಿರ್ದಿಷ್ಟ ಕಾರಣಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ.

**೪.೧.೫.೨. ವಾರ್ಗಿಕಗಳು ಅಧಿಕಾರವಾಚಿಗಳಾಗಿ ಬಳಕೆ**

ಆರಂಭದಲ್ಲಿ ನಿರ್ದಿಷ್ಟವಾಚಿ ನಾಮಗಳಿಗೆ ಹಲವು ವಾರ್ಗಿಕ ಸೇರುತ್ತಿದ್ದವು ಎಂಬುದನ್ನು ತಿಳಿಯಲಾಗಿದ್ದು, ಕೆಲವು ವಾರ್ಗಿಕಗಳು ಆ ವ್ಯಕ್ತಿಯು ನಿರ್ವಯಿಸುತ್ತಿದ್ದ ಆಡಳಿತ ಹಾಗೂ ಅಧಿಕಾರಗಳಿಂದ ಬಂದತಹವುಗಳಾಗಿದ್ದವು. ಅಂದರೆ ಕೆಲವು ವಾರ್ಗಿಕಗಳು ಆರಂಭದ ಕಾಲದಲ್ಲಿ ಅಧಿಕಾರವಾಚಿಗಳಾಗಿ ಬಂದಿರುವುದನ್ನು ಕಾಣಬಹುದು.

**ಉದಾ:–**

ಓಬಳೇ ಗೌಡ

ಹಿರಿ ಗೌಡ

ತಮ್ಮ ನಾಯಕ

ವೀರಬಾಳೆ ಗೌಡ

ತಿರುಮಲ ಗೌಡ

ದಂಡಾಯ್ಕ ಒಡೆಯ

ದಾಮೋದರ ನಾಯಕ

**೪.೧.೫.೩. ಅಧಿಕಾರವಾಚಿಗಳು ವೃತ್ತಿವಾಚಿಗಳಾಗಿ ಬಳಕೆ**

ವ್ಯಕ್ತಿನಾಮಗಳಲ್ಲಿ ಅಧಿಕಾರ ವಾಚಿಗಳು ವಾರ್ಗಿಕವಾಗಿ ಬಳಕೆಗೊಂಡ ಕಾಲಾನಂತರ ಆ ವ್ಯಕ್ತಿಯ ಅಧಿಕಾರವೆ ಅವರ ವೃತ್ತಿಯಾಗಿ ಮಾರ್ಪಾಡು ಆಗಿರಬಹುದು. ಹಾಗಾಗಿ ವ್ಯಕ್ತಿಯು ತಮ್ಮ ಅಧಿಕಾರವನ್ನು ಹಲವಾರು ವರ್ಷಗಳ ಕಾಲ ಮುಂದುವರೆಸಿಕೊಂಡು ಬಂದ ಪರಿಣಾಮವಾಗಿ ಅವರ ಅಧಿಕಾರಗಳು ಮುಂದೆ ಅವರ ವೃತ್ತಿಗಳಾಗಿರುವ ಸಾಧ್ಯತೆಯಿದೆ.

**ಉದಾ:**

ಅಂಕಗೌಡ

ಅಗಸ್ತ್ಯಗೌಡ

ಕಾಡೇಗೌಡ

ಉದ್ದಂಡಗೌಡ

ಕಾಳಗೌಡ

**೪.೧.೫.೪. ವೃತ್ತಿವಾಚಿಗಳು ಜಾತಿವಾಚಿಗಳಾಗಿ ಬಳಕೆ**

ಒಂದು ಕಾಲಘಟ್ಟದಲ್ಲಿ ಅಧಿಕಾರ ವಾಚಿಗಳು ವೃತ್ತಿವಾಚಿಗಳಾಗಿ ಬದಲಾವಣೆ ಹೊಂದಿದ ತರುವಾಯ ಅವರ ವೃತ್ತಿಗಳು ಕಾಲಾನಂತರದಲ್ಲಿ ಜಾತಿಗಳಾಗಿ ಬದಲಾಗಿರುವ ಸಾಧ್ಯತೆ ಇದೆ. ಹಾಗಾಗಿ ಅವರ ವ್ಯಕ್ತಿ ನಾಮಗಳಲ್ಲಿಯು ಬದಲಾವಣೆ ಆಗಿರುವುದನ್ನು ಗಮನಿಸಬಹುದು. ಅಂದರೆ ಅವರ ವ್ಯಕ್ತಿನಾಮಗಳಲ್ಲಿ ವೃತ್ತಿವಾಚಿಗಳು ಜಾತಿವಾಚಿಗಳಾಗಿ ಬದಲಾವಣೆಯಾಗಿವೆ ಎಂದು ಗಮನಿಸಬಹುದು.

**ಉದಾ:–**

ದಾಮೋದರ ನಾಯಕ

ನರಸಣ್ಣ ನಾಯಕ

ನಾಚಗೌಡ

ಪಾದಿಗೌಡ

ಪರಶುಗೌಡ

ಪುಟ್ಟಗೌಡ

**೪.೧.೫.೫. ಜಾತಿವಾಚಿ ವಾರ್ಗಿಕಗಳು ಕಾಲಾನಂತರದಲ್ಲಿ ಕಣ್ಮರೆ**

ಒಂದು ಸಮುದಾಯದ ವ್ಯಕ್ತಿಗಳನ್ನು ಅವರ ಹೆಸರುಗಳ ಹಿನ್ನಲೆಯಲ್ಲಿ ಅವರ ಜಾತಿಗಳನ್ನು ಗುರುತಿಸಬಹುದಾಗಿತ್ತು. ಏಕೆಂದರೆ ಒಂದು ಕಾಲಘಟ್ಟದಲ್ಲಿ ಯಾವುದೇ ಒಂದು ಸಮುದಾಯದವರು ಇಂತಹದ್ದೇ ಹೆಸರನ್ನು ಇಟ್ಟುಕೊಳ್ಳಬೇಕೆಂಬ ಸಂಪ್ರದಾಯವಿತ್ತು ಎಂದು ನಂಬಲಾಗಿದೆ. ಹಾಗೆಯೇ ಅವರ ಹೆಸರುಗಳ ಮುಂದೆ ವಾರ್ಗಿಕಗಳಾಗಿ ಅವರ ಜಾತಿಗಳನ್ನು ಬಳಸುತ್ತಿದ್ದುದನ್ನು ಹಲವು ಆಕರಗಳಿಂದ ತಿಳಿಯಬಹುದು. ಆದರೆ ಕಾಲಾನಂತರದಲ್ಲಿ ಈ ರೀತಿಯ ಜಾತಿವಾಚಿ ವಾರ್ಗಿಕಗಳು ಕಣ್ಮರೆಯಾಗಿ ಆ ಸ್ಥಾನದಲ್ಲಿ ನಿರ್ದಿಷ್ಟಗಳು ಮಾತ್ರ ಸ್ಥಾನ ಉಳಿಸಿಕೊಂಡವು ಎಂಬುದನ್ನು ಗ್ರಹಿಸಲಾಗಿದೆ. ಈ ರೀತಿಯ ಬದಲಾವಣೆಗೆ ಸಮಾಜದಲ್ಲಿನ ಜಾತ್ಯಾತೀತತೆ ಹಾಗೂ ಸಮಾನತೆಯನ್ನು ಕಾಣಬೇಕೆಂಬ ಹಂಬಲ ಪ್ರಮುಖ ಕಾರಣವಿರಬಹುದು.

ಉದಾ:

| | | |
|---|---|---|
| ನರಸಪ್ಪ ನಾಯಕ | – | ನರಸಪ್ಪ |
| ಪರಶು ಗೌಡ | – | ಪರಶುರಾಮ |
| ಪುಟ್ಟಗೌಡ | – | ಪುಟ್ಟಪ್ಪ |
| ನಾಗರಾಜರಾವ್ | – | ನಾಗರಾಜ |
| ಶ್ರೀನಿವಾಸ ಶಾಸ್ತ್ರಿ | – | ಶ್ರೀನಿವಾಸ್ |
| ವೆಂಕಟ ನಾಯ್ಕ | – | ವೆಂಕಟ್ |
| ಪುಟ್ಟಣ್ಣ ಭಟ್ಟ | – | ಪುಟ್ಟಣ್ಣ |
| ಕೃಷ್ಣಾ ನಾಯ್ಕ | – | ಕೃಷ್ಣ ಮೂರ್ತಿ |
| ರಂಗೇಗೌಡ | – | ರಂಗಯ್ಯ |
| ರಾಘವಾಚಾರ್ | – | ರಾಘವ |
| ತೋಂಟಾರಾಧ್ಯ | – | ತೋಂಟೇಶ್ |
| ರೇಣುಕಾರಾಧ್ಯ | – | ರೇಣುಕುಮಾರ್/ರೇಣುಕಾ ಪ್ರಸಾದ್ |
| ರೇಣುಕಾಚಾರ್ಯ | – | ರೇಣುಕಪ್ಪ ಮುಂತಾದವು. |

**೪.೧.೫.೬. ಕಣ್ಮರೆಯಾದ ಜಾತಿವಾಚಿಗಳು ಪುನಃ ಬಳಕೆ**

ಒಂದು ಕಾಲಘಟ್ಟದಲ್ಲಿ ಹೆಸರುಗಳಿಂದಲೇ ಅವರ ಜಾತಿಯನ್ನು ಗುರುತಿಸಬಹುದಾಗಿದ್ದಂತಹ ಪರಿಸ್ಥಿತಿ ಕಾಲಾನಂತರದಲ್ಲಿ ಬದಲಾಗಿ ಹೆಸರುಗಳಲ್ಲಿ ಜಾತಿವಾಚಿ ವಾರ್ಗಿಕಗಳನ್ನು ಕೈಬಿಡಲಾಗಿತ್ತು. ಇದನ್ನು ನಾವು ಪ್ರಸ್ತುತ ಎರಡನೇ ತಲೆಮಾರಿನ ಜನಸಮುದಾಯದಲ್ಲಿ ಕಾಣಬಹುದಾಗಿದೆ. ಆದರೆ ಪ್ರಸ್ತುತ ಕಣ್ಮರೆಯಾದ ಜಾತಿವಾಚಿ ವಾರ್ಗಿಕಗಳು ಇಂದು ಮರುಬಳಕೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಆರಂಭದ ಕಾಲದಲ್ಲಿ ನಿರ್ದಿಷ್ಟಗಳಿಗೆ ಜಾತಿವಾಚಿ ವಾರ್ಗಿಕಗಳು ಕೇವಲ ಮೇಲ್ವರ್ಗಗಳಿಗೆ ಮಾತ್ರ ಬಳಕೆಯಾಗುತ್ತಿತ್ತು (ಉನ್ನತ ಜಾತಿ ಎಂದು ನಿರ್ಧಾರಿತವಾದಂತಹವುಗಳಿಗೆ ಮಾತ್ರ). ಆದರೆ ಈ ಬದಲಾವಣೆ ಇಂದು ಕೇವಲ ಕೆಲವೇ ಜಾತಿಗಳಿಗೆ ಸೀಮಿತವಾಗದೆ ಸಮಾಜದಲ್ಲಿರುವ ಎಲ್ಲಾ ಜಾತಿಗಳಲ್ಲಿಯೂ ನಿರ್ದಿಷ್ಟ ಹೆಸರುಗಳಿಗೆ ಜಾತಿವಾಚಿ ವಾರ್ಗಿಕಗಳು ಬಳಕೆಯಾಗುತ್ತಿರುವುದನ್ನು ಕಾಣಬಹುದು.

ಉದಾ:–

| **‘ಅ’ ಪಟ್ಟಿ** | **‘ಬ’ ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ತಿಮ್ಮಣ್ಣ ನಾಯಕ | ಪ್ರೀತಿ ನಾಯ್ಕ |
| ರಮೇಶ ವಾಲ್ಮೀಕಿ | ಕಲ್ಪನಾ ರೆಡ್ಡಿ |
| ಕೃಷ್ಣಯ್ಯ ಈಡಿಗ | ಐಶ್ವರ್ಯ ಗೌಡ |

ಹನುಮೇಶ ಮಾದಿಗ
ವಡ್ಡರ ತಿಮ್ಮಪ್ಪ
ತಿಪ್ಪಕ್ಕ ಹರಿಜನ
ಕುರುಬರ ಜಡೆಪ್ಪ
ಶ್ರೀನಿವಾಸಾಚಾರಿ
ಪಟೇಲ್ ಚಂದ್ರಪ್ಪ
ತಿಪ್ಪೇಸ್ವಾಮಿಗೌಡ
ರಾಮಾನಾಯ್ಕ
ಚಂದ್ರಪ್ಪ ಹೊಲೆಯಾರ್
ರಂಜಿತ ಗೌಡ
ಕೃಷ್ಣಪ್ಪ ಯಾದವ್
ಮನುಗೌಡ
ಲಕ್ಷ್ಮಣ್ ಉಪ್ಪಾರ
ಗೊಂಚಿಕಾರ ಪಾಲಯ್ಯ
ವಿಠಲ ತಳವಾರ
ಜಗದೀಶ್ ಬಳೆಗಾರ
ಕುಂಬಾರ ಗಂಗಪ್ಪ
ತಳವಾರ ಹೊನ್ನೂರಪ್ಪ
ಗಣೇಶ ರಾವ್
ಶ್ರೀನಿವಾಸಯ್ಯಂಗಾರ್
ಮಾದವ ರಾವ್
ಸುಬ್ಬಾಶಾಸ್ತ್ರಿ
ತಿಮ್ಮಾರೆಡ್ಡಿ
ಪಾರಿಜಾಕ್ತಿ ಶೆಟ್ಟಿ
ತೇಜಸ್ವಿನಿ ಗೌಡ
ರಾಧಾನಾಯಕ
ರಾಧಿಕಾ ಶೆಟ್ಟಿ
ಲಕ್ಷ್ಮೀರೆಡ್ಡಿ

ಈ ಮೇಲಿನ ಹೆಸರುಗಳ ಪಟ್ಟಿಯನ್ನು ಗಮನಿಸಿದರೆ ಈ ಹೆಸರುಗಳಿಂದಲೇ ಆ ವ್ಯಕ್ತಿಯ ಜಾತಿಗಳನ್ನು, ವೃತ್ತಿ ಹಾಗೂ ಅಧಿಕಾರಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಈ ರೀತಿಯ ಬದಲಾವಣೆಗಳು ಯಾವುದೇ ಮೀಸಲಾತಿ ಹಾಗೂ ಸವಲತ್ತುಗಳಿಗಾಗಿ ಅದಂತಹವುಗಳಲ್ಲ. ಬದಲಾಗಿ ತಮ್ಮ ಜಾತಿಯ ಅಸ್ಮಿತೆಯ ದೃಷ್ಟಿಯಿಂದ ಹಾಗೂ ತನ್ನನ್ನು ಇತರರಿಂದ ಭಿನ್ನವಾಗಿ ಗುರ್ತಿಸಿಕೊಳ್ಳುವ ಉದ್ದೇಶದಿಂದ ಜಾತಿವಾಚಿಗಳು ವಾರ್ಗಿಕಗಳಾಗಿ ಪ್ರವೇಶ ಪಡೆದಿರಬಹುದು ಎಂದು ಊಹಿಸಬಹುದಾಗಿದೆ. ಆದರೆ ಇದಕ್ಕೂ ಮೊದಲು ಅವರ ಹೆಸರುಗಳಲ್ಲಿ ಯಾವುದೇ ವಾರ್ಗಿಕಗಳಿಲ್ಲದೆ ಇದ್ದುದರಿಂದ ಅವರ ಹೆಸರುಗಳಿಂದ ಜಾತಿ, ವೃತ್ತಿಗಳನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಇದರ ಜೊತೆಗೆ

ಪ್ರಸ್ತುತ ಜಾತಿವಾಚಿ ವಾರ್ಗಿಕಗಳನ್ನು ಹೊರತುಪಡಿಸಿ ಉಳಿದ ನಿರ್ದಿಷ್ಟ ಹೆಸರುಗಳಿಂದ ಇಂದಿನ ಜಾತಿ, ವೃತ್ತಿ, ಅಧಿಕಾರಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಮೊದಲು ನಿರ್ದಿಷ್ಟ ಜಾತಿಯವರು ನಿರ್ದಿಷ್ಟ ಹೆಸರುಗಳನ್ನೇ ಇಟ್ಟುಕೊಳ್ಳುತ್ತಿದ್ದರು. "ಸಮಾಜದಲ್ಲಿ ವರ್ಣ, ವರ್ಗಗಳು ಶ್ರೇಣಿಯನ್ನು ಕಲ್ಪಿಸುತ್ತವೆ. ಇಲ್ಲಿ ಮೇಲು ವರ್ಣ-ಮೇಲು ವರ್ಗ, ಕೀಳು ವರ್ಣ-ಕೀಳು ವರ್ಗಗಳ ನಾಮನಿರ್ದೇಶನ ಪದ್ಧತಿ ನಿರ್ದಿಷ್ಟ ಮತ್ತು ವಾರ್ಗಿಕಗಳಿಂದಲೂ ಭಿನ್ನವಾಗಿರುತ್ತದೆ"(ಕಲಬುರ್ಗಿ.ಎಂ.ಎಂ., ೨೦೧೦, ಕನ್ನಡ ನಾಮ ವಿಜ್ಞಾನ, ಪು.೨೦). ಆದರೆ ಈ ಕ್ರಮ ಬದಲಾಗಿ ಯಾವೂದೇ ಜಾತಿಯವರು ಯಾವುದೇ ಹೆಸರನ್ನಿಟ್ಟುಕೊಳ್ಳುವ ಸ್ಥಿತಿ ಇಂದು ಇರುವುದರಿಂದ ಕೇವಲ ಹೆಸರುಗಳಿಂದಲೇ ಜಾತಿಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.

ಈ ಮೇಲಿನ ಎಲ್ಲಾ ರೀತಿಯ ವರ್ಗೀಕರಣಗಳಿಂದ ವ್ಯಕ್ತಿನಾಮಗಳು ವಿವಿಧ ಕಾಲಘಟ್ಟಗಳಲ್ಲಿ ಹೇಗೆಲ್ಲ ಬದಲಾವಣೆಯನ್ನು ಮಾಡಿಕೊಂಡಿವೆ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಯಲಾಗಿದೆ. ಮುಂದುವರೆದು ಈ ರೀತಿಯ ಬದಲಾವಣೆಯಾಗಲು ಹಲವಾರು ಪ್ರಭಾವ ಮತ್ತು ಪ್ರೇರಣೆಗಳಾಗಿವೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಹಾಗಾಗಿ ತುಮಕೂರು ಪರಿಸರದ ವ್ಯಕ್ತಿನಾಮಗಳ ಬದಲಾವಣೆಗೆ ಯಾವ ಯಾವ ಅಂಶಗಳು ಪ್ರಭಾವ ಬೀರಿವೆ ಎಂಬುದನ್ನು ತಿಳಿಯುವುದು ಅಧ್ಯಯನದ ಪ್ರಮುಖ ಉದ್ದೇಶವೂ ಆಗಿರುವುದರಿಂದ ಈ ಕೆಳಕಂಡಂತೆ ಅವುಗಳನ್ನು ಗಮನಿಸಬಹುದಾಗಿದೆ.

**೪.೧.೬. ಕುಲದೈವಗಳ ಪ್ರಭಾವ ಮತ್ತು ಆರಾಧ್ಯ ದೈವಗಳ ಪ್ರಭಾವ**

ಪ್ರಾಚೀನ ಕಾಲದಿಂದಲೂ ವ್ಯಕ್ತಿನಾಮಗಳ ಮೇಲೆ ದೇವರ ಹೆಸರುಗಳು ಪರಿಣಾಮಕಾರಿಯಾದ ಪ್ರಭಾವ ಬೀರಿವೆ ಎಂದು ಹೇಳಬಹುದು. ಪ್ರತಿಯೊಂದು ಜಾತಿಯಲ್ಲಿಯೂ ಹಲವಾರು ಉಪಜಾತಿಗಳಿದ್ದು ಆ ಉಪಜಾತಿಗಳಲ್ಲಿ ಹಲವಾರು ಬೆಡಗುಗಳಿದ್ದು ಆ ಬೆಡಗುಗಳನ್ನು ಕುಲಗಳೆಂದು ಕರೆಯಲಾಗುತ್ತಿದೆ. ಇಂತಹ ಪ್ರತಿಯೊಂದು ಕುಲಗಳು ತಮ್ಮದೇ ಆದ ದೇವರನ್ನು ಸೃಷ್ಟಿಸಿಕೊಂಡಿರುತ್ತವೆ. ಇವುಗಳನ್ನು ಕುಲದೈವಗಳೆಂದು ಕರೆಯಲಾಗಿದೆ. ಹಾಗಾಗಿ ಈ ಕುಲದೈವದ ಹೆಸರು ಆ ಕುಲದಲ್ಲಿರುವ ಜನ ಸಮುದಾಯದ ಹೆಸರುಗಳ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಈ ರೀತಿಯ ಹೆಸರಿಟ್ಟುಕೊಳ್ಳುವುದರಿಂದ ಕುಲದೈವ ನಮ್ಮನ್ನು ಅಪಾಯಗಳಿಂದ ರಕ್ಷಿಸುತ್ತದೆ, ಆ ದೇವರ ಆಶೀರ್ವಾದ ಸದಾ ಆ ವ್ಯಕ್ತಿಯ ಮೇಲಿರುತ್ತದೆ ಎಂಬ ನಂಬಿಕೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಸಮುದಾಯದಲ್ಲಿ ಇರುವುದನ್ನು ಕಾಣಬಹುದಾಗಿದೆ. ಹಾಗೆಯೇ ತುಮಕೂರು ಪರಿಸರದಲ್ಲಿ ಕುಲದೈವದ ಜೊತೆಗೆ ಆರಾಧ್ಯ ದೈವದ ಹೆಸರುಗಳನ್ನು ವ್ಯಕ್ತಿನಾಮಗಳಾಗಿ ಬಳಸುತ್ತಿರುವುದನ್ನು ಈ ಕೆಳಕಂಡಂತೆ ಕಾಣಬಹುದು.

ಉದಾ:

| ‘ಅ’ ಪಟ್ಟಿ | ‘ಬ’ ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಂಗನಾಥ | ರಂಗಮ್ಮ |
| ಮಂಜುನಾಥ | ಮಂಜಮ್ಮ/ಳ |
| ತಿಮ್ಮಪ್ಪ | ತಿಮ್ಮಕ್ಕ |
| ವೆಂಕಟಪ್ಪ | ವೆಂಕಟಮ್ಮ |
| ಹನುಮಂತ | ಹನುಮಕ್ಕ |
| ಸಿದ್ಧರಾಮೇಶ | ಸಿದ್ಧಮ್ಮ |
| ಜಲ್ದಪ್ಪ | ಜಲ್ದಮ್ಮ |
| ಹುಲಿಗೆಪ್ಪ | ಹುಲಿಗೆಮ್ಮ, ಗಾಳಮ್ಮ |
| ಕೊಟ್ರಪ್ಪ | ಕೊಟ್ರಮ್ಮ |
| ಬಸವಣ್ಣ | ಬಸಮ್ಮ |
| ನಾಗಭೂಷಣ | ನಾಗಮಣಿ, ನಾಗಮ್ಮ, ನಾಗಕ್ಕ |
| ಲಕ್ಷ್ಮೀನಾರಾಯಣ | ಲಕ್ಷ್ಮಮ್ಮ, ಲಕ್ಷ್ಮಿ |
| ಆದಿಕೇಶವ | – |
| ಕೆಂಪಯ್ಯ | ಕೆಂಪಮ್ಮ |
| ಕರಿಯಪ್ಪ | ಕರಿಯಮ್ಮ |
| ಗುಜ್ಜಾರಯ್ಯ | ಗುಜ್ಜಾರಮ್ಮ |
| ಮಲ್ಲಪ್ಪ | ಮಲ್ಲಮ್ಮ |
| ರಾಮಯ್ಯ | ರಾಮಕ್ಕ |
| ಮಾಳಯ್ಯ | ಮಾಳಮ್ಮ |
| ಚಿಕ್ಕಣ | ಚಿಕ್ಕಮ್ಮ |
| ವೀರಪ್ಪ | ವೀರಮ್ಮ |
| ಬಂಡಿರಂಗಯ್ಯ | ಬಂಡಿರಂಗಮ್ಮ |
| ಮರಡಿರಂಗಯ್ಯ | ಮರಡಿರಂಗಮ್ಮ |
| ಜಲದಿಬೊಪ್ಪರಾಯ | ಜಲದಮ್ಮ |
| ನಂಜುಂಡಪ್ಪ | ನಂಜುಂಡಮ್ಮ |
| ಗುಜ್ಜಾರಿ ಹನುಮಂತಯ್ಯ | ಗುಜ್ಜಾರಿ ಹನುಮಂತಮ್ಮ |

| | |
|---|---|
| ಬೈರಪ್ಪ | ಬೈರಮ್ಮ |
| ಸಿದ್ದಪ್ಪ | ಸಿದ್ದಮ್ಮ |
| ಕಣಿಮಯ್ಯ | ಕಣಿಮಮ್ಮ |
| ಮಾರಯ್ಯ | ಮಾರಮ್ಮ |
| ದ್ಯಾಮಯ್ಯ | ದ್ಯಾಮಮ್ಮ |
| ಬೊವಯ್ಯ | ಬೊವಮ್ಮ |
| ಹಾಲಪ್ಪ | ಹಾಲಮ್ಮ |
| ವೀರನಾಗರಾಜ | ವೀರನಾಗಮ್ಮ |
| ರಂಗದಾಮಯ್ಯ | ರಂಗದಾಮಕ್ಕ |

**೪.೧.೭. ಸಾಂಸ್ಕೃತಿಕ ವೀರರ ಪ್ರಭಾವ**

ಪ್ರತಿಯೊಂದು ಜನಾಂಗವು ತನ್ನದೇ ಆದ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಇದಕ್ಕೆ ಪ್ರಮುಖ ಕಾರಣ ಆ ಸಮುದಾಯದ ಒಳಿತಿಗಾಗಿ ಹಲವರ ಶ್ರಮ ಬಲಿದಾನಗಳಾಗಿರುವುದನ್ನು ಕಾಣಬಹುದು. ಆ ಸಮುದಾಯದ ಕೆಲವರು ಶ್ರೇಷ್ಠ ವ್ಯಕ್ತಿಗಳೆನಿಸಿಕೊಂಡು ಸಮಾಜಕ್ಕೆ ಉತ್ತಮ ಕೊಡುಗೆ ನೀಡಿರುತ್ತಾರೆ. ಇಂತಹ ಶ್ರೇಷ್ಠ ವ್ಯಕ್ತಿಗಳನ್ನು ಆದರ್ಶಗಳಾಗಿ ಈ ಸಮುದಾಯ ಪರಿಭಾವಿಸುತ್ತದೆ. ಹಾಗೆಯೇ ಜನಾಂಗದಲ್ಲಿ ಹಲವು ವ್ಯಕ್ತಿಗಳು ದೈವೀ ಸ್ವರೂಪವನ್ನು ಪಡೆದುಕೊಂಡು ಆ ಜನಾಂಗದ ರಕ್ಷಣೆಗಾಗಿಯೇ ಇದ್ದಾರೆ ಎಂಬ ನಂಬಿಕೆ ಸಮುದಾಯದಲ್ಲಿದೆ. ಹಾಗಾಗಿ ಇಂತಹ ಆದರ್ಶ ವ್ಯಕ್ತಿಗಳು, ದೈವಸ್ವರೂಪ ಹೊಂದಿದ ವ್ಯಕ್ತಿಗಳು ಆ ಜನಾಂಗದ ನಾಯಕರಾಗುತ್ತಾರೆ. ಅಂತಹ ನಾಯಕರ ಗುಣಮೌಲ್ಯಗಳನ್ನು ಆಚರಣೆ ಮೂಲಕ ಸಮಾಜಕ್ಕೆ ಭಿತ್ತರಿಸುವುದನ್ನು ಕಾಣಬಹುದು. ಹಾಗಾಗಿ ಇಂತಹ ವ್ಯಕ್ತಿಗಳು ಆ ಜನಾಂಗದ ಸಾಂಸ್ಕೃತಿಕ ವೀರರಾಗಿರುತ್ತಾರೆ. ಈ ಸಂಪ್ರದಾಯ ನಾಡಿನ ಸಮಸ್ತ ಜಾತಿ, ಸಮುದಾಯದಲ್ಲಿಯೂ ಕಾಣಬಹುದು, ಇಂತಹ ಸಾಂಸ್ಕೃತಿಕ ವೀರರ ಹೆಸರುಗಳನ್ನು ವ್ಯಕ್ತಿನಾಮಗಳಾಗಿ ಬಳಸುವುದನ್ನು ಕಾಣಬಹುದು. ತುಮಕೂರು ಪರಿಸರದಲ್ಲಿ ಬಳಕೆಯಲ್ಲಿರುವ ಸಾಂಸ್ಕೃತಿಕ ವೀರರ ವ್ಯಕ್ತಿನಾಮಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಿದ್ದರಾಮ | ಸಿದ್ದಮ್ಮ |
| ಜುಂಜಪ್ಪ | ಜುಂಜಮ್ಮ |
| ಕ್ಯಾತಪ್ಪ | ಕ್ಯಾತಜ್ಜಿ |
| ವೀರಕ್ಯಾತಪ್ಪ | ವೀರಕ್ಯಾತಮ್ಮ |

| | |
|---|---|
| ವೀರನಾಗಯ್ಯ | ವೀರನಾಗಮ್ಮ |
| ಜಲ್ದಪ್ಪ | ಜಲ್ದಮ್ಮ |
| ಹಾಲಪ್ಪ | ಹಾಲಮ್ಮ |
| ಮಲ್ಲಪ್ಪ | ಮಲ್ಲಮ್ಮ |
| ಸಿದ್ದಪ್ಪ | ಸಿದ್ದಮ್ಮ |
| ಬೈರಪ್ಪ | ಬೈರಮ್ಮ |
| ಮಲೆಮಾದೇಶ | ಮಾದಮ್ಮ |
| ರಾಯಣ್ಣ | ರಾಯಮ್ಮ |
| ಬೂವಯ್ಯ | ಭೂವಮ್ಮ |
| ಮುದ್ದಪ್ಪ | ಮುದ್ದಮ್ಮ |
| ವೀರಬೊಮ್ಮಯ | ವೀರಬೊಮ್ಮಕ್ಕ |
| ಹೆಂಜಾರಪ್ಪ | ಹೆಂಜಾರಮ್ಮ |
| ಅಮ್ಮಾಜಯ್ಯ | ಅಮ್ಮಾಜಮ್ಮ |
| ಚಿಕ್ಕಣ್ಣ | ಚಿಕ್ಕಮ್ಮ |

**೪.೧.೮.ಚರಿತ್ರೆಗೆ ಸಂಬಂಧಿಸಿದ ಹೆಸರುಗಳ ಪ್ರಭಾವ**

ತುಮಕೂರು ಪರಿಸರದಲ್ಲಿರುವ ವಿವಿದ ಸಮುದಾಯದ ವ್ಯಕ್ತಿನಾಮಗಳ ಬಳಕೆಯಲ್ಲಿ ದೈವಸಂಬಂಧಿ ಹಾಗೂ ಸಾಂಸ್ಕೃತಿಕ ವೀರರು ಹೇಗೆ ಪ್ರಭಾವ ಬೀರಿರುವರೋ ಹಾಗೆಯೇ ಚರಿತ್ರೆಯಲ್ಲಿ ಗುರುತಿಸಲ್ಪಟ್ಟ ವ್ಯಕ್ತಿಗಳು ಸಹ ಪ್ರಭಾವ ಬೀರಿದ್ದಾರೆ. ಸಮಾಜದಲ್ಲಿ ಪ್ರಾಚೀನ ಕಾಲದಿಂದಲು ಆಡಳಿತ ನಡೆಸಿಕೊಂಡು ಬಂದಂತಹ ರಾಜಮಹಾರಾಜರು, ಸಮಾಜದ ಏಳ್ಗೆಗಾಗಿ ಶ್ರಮಿಸಿದ ಆದರ್ಶ ವ್ಯಕ್ತಿಗಳು ಹೀಗೆ ಹಲವು ಚರಿತ್ರಾರ್ಹ ವ್ಯಕ್ತಿಗಳ ಹೆಸರುಗಳು ವ್ಯಕ್ತಿನಾಮಗಳ ಆಯ್ಕೆಯ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಇವುಗಳಲ್ಲಿ ಕೆಲವು ಹೆಸರುಗಳು ಆಧುನಿಕ ಸಂದರ್ಭದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವುದನ್ನು ಕಾಣಬಹುದು.

ಉದಾ:–

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅಶೋಕ | ಚಿಂತಾಮಣಿ |
| ಮಯೂರ | ಓಬವ್ವ |
| ದ್ರುವ | ಚೆನ್ನಮ್ಮ |
| ಚಾಮರಾಜ | ಮಲ್ಲಮ್ಮ |

ಕೃಷ್ಣರಾಜ

ನರಸಪ್ಪ

ಅಮೋಘವರ್ಷ

ಶ್ರೀವಿಜಯ

ಓಬಳಪ್ಪ

ಓಬಯ್ಯ

ರಾಯಣ್ಣ

ರಾಜೇಂದ್ರ

ವಿಷ್ಣುವರ್ಧನ

ನಂಜರಾಜ

ದೇವರಾಜ

ರಾಹುಲ್

ಗೌತಮ

ರವಿವರ್ಮ

ಜಯಸಿಂಹ

**೪.೧೯. ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳ ಪ್ರಭಾವ**

ಹೆಸರುಗಳ ಆಯ್ಕೆಯಲ್ಲಿ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ ಎಂಬುದನ್ನು ನಂಬಲೇಬೇಕು. ಅಂತಹ ಹಲವಾರು ಅಂಶಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದಂತಹವರು ತುಂಬಾ ಪ್ರಸಿದ್ಧರಾಗಿ ಜನಸಮುದಾಯಕ್ಕೆ ಕಾಣಿಸಿಕೊಳ್ಳುತ್ತಾರೆ. ಈ ರೀತಿ ಪ್ರಸಿದ್ಧರೆನಿಸಿಕೊಂಡಂತಹ ವ್ಯಕ್ತಿಗಳು ತಮ್ಮ ಸಾಧನೆಗಳಿಂದ ಶ್ರೇಷ್ಠರೆನಿಸಿಕೊಂಡಿದ್ದರೂ ಅವರ ಅಸ್ಮಿತೆ ಜಗತ್ತಿಗೆ ಗೊತ್ತಾಗುವುದು ಅವರ ಹೆಸರಿನಿಂದ ಮಾತ್ರ. ಹಾಗಾಗಿ ಇಂತಹ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳ ಹೆಸರುಗಳ ಪ್ರಭಾವ ನಾಡಿನ ವ್ಯಕ್ತಿಗಳ ಹೆಸರಿನ ಮೇಲಾಗಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅಲ್ಲಮಪ್ರಭು | ಅಕ್ಕಮಹಾದೇವಿ |
| ಕನಕ | |
| ಚೆನ್ನಬಸವಯ್ಯ | |
| ಬಸವಣ್ಣ | |

ಪಂಪ

ಷಡಕ್ಷರಿ

ಶ್ರೀವಿಜಯ

ಲಕ್ಷ್ಮೀಶ

**೪.೧.೧೦. ಸ್ವಾತಂತ್ರ್ಯ ಹೋರಾಟಗಾರರ ಪ್ರಭಾವ**

ಸಮಾಜದಲ್ಲಿನ ವ್ಯಕ್ತಿನಾಮಗಳ ಆಯ್ಕೆಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದಂತಹ ದೇಶ ಪ್ರೇಮಿಗಳು ತುಂಬಾ ಪ್ರಭಾವ ಬೀರಿರುತ್ತಾರೆ. ಅಂತಹವರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡುವುದರ ಮೂಲಕ ದೇಶ ಪ್ರೇಮವನ್ನು ವ್ಯಕ್ತಪಡಿಸುವ ಹಲವಾರು ಉದಾಹರಣೆಗಳನ್ನು ಕಾಣಬಹುದಾಗಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮೋಹನ್ ದಾಸ್ | ಚೆನ್ನಮ್ಮ |
| ರಾಯಣ್ಣ | ಸರೋಜಿನಿ |
| ಸುಭಾಷ್ ಚಂದ್ರ | ಮಹಾದೇವಿ |
| ಭಗತ್ | ಕಸ್ತೂರಿ |
| ಚಂದ್ರಶೇಖರ್ | |
| ರವೀಂದ್ರನಾಥ | |
| ಅರವಿಂದ | |
| ಈಶ್ವರಚಂದ್ರ | |
| ಜಯಪ್ರಕಾಶ್ | |
| ಚಿತ್ತರಂಜನ್ | |
| ಮದನ್ ಮೋಹನ್ | |
| ಬಾಬುರಾಜೇಂದ್ರ ಪ್ರಸಾದ್ | |
| ರಾಜಗೋಪಾಲಾಚಾರಿ | |

**೪.೧.೧೧. ಪುರಾಣ ಸಂಬಂಧಿ ವ್ಯಕ್ತಿನಾಮಗಳ ಪ್ರಭಾವ**

ವ್ಯಕ್ತಿನಾಮಗಳನ್ನು ಇಡುವ ಸಂದರ್ಭದಲ್ಲಿ ಹೆಸರುಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪುರಾಣ ಕಾವ್ಯಗಳಾದ ರಾಮಾಯಣ, ಮಹಾಭಾರತದ ಕುರಿತ ಪಾತ್ರಗಳನ್ನು ಹಾಗೂ ಇತರೆ ಪುರಾಣ ಕಥೆಗಳಿಗೆ ಸಂಬಂಧಿಸಿದ ಹೆಸರುಗಳನ್ನು ಆಕರವಾಗಿ ಇಟ್ಟುಕೊಳ್ಳಲಾಗುತ್ತದೆ. ಹಾಗಾಗಿ ವ್ಯಕ್ತಿನಾಮಗಳ ಬಳಕೆಯಲ್ಲಿ ಪುರಾಣಕ್ಕೆ ಸಂಬಂಧಿಸಿದ ಹೆಸರುಗಳು ಪ್ರಭಾವ ಬೀರಿವೆ.

ಉದಾ:

| ‘ಅ’ ಪಟ್ಟಿ | ‘ಬ’ ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅದಿತಿ | ಅದಿತಿ |
| ಅನಿರುದ್ಧ | ಅನುರಾಧ |
| ಚಂದ್ರಹಾಸ | |
| ದಕ್ಷ | ಕಮಲಾಕ್ಷಿ |
| ಭೀಮ | ಕೃತ್ತಿಕಾ |
| ಅರ್ಜುನ | ಚಂಪಕಾ |
| ಕರ್ಣ | ಚಿತ್ರಲೇಖಾ |
| ಧರ್ಮರಾಯ | ಛಾಯಾ |
| ನಕುಲ | ದಾಕ್ಷಾಯಿಣಿ |
| ಸಹದೇವ | ಕೌಸಲ್ಯ |
| ರಾಮ | ಸುಮಿತ್ರ |
| ಲಕ್ಷ್ಮಣ | ಜಾನಕಿ |
| ಭರತ | ತಾರಾ |
| ಭೀಮರಾಯ | ನೀಲಾ |
| ಕೃಷ್ಣ | ಹಂಸ |
| ಹನುಮಂತ | ಊರ್ಮಿಳಾ |
| ಸುಬಾಹು | ಅಹಲ್ಯ |
| ಇಂದ್ರಜಿತ್ | |
| ಲವಕುಮಾರ | |
| ಶ್ರವಣಕುಮಾರ | |
| ಕುಶ | |

**೪.೧.೧೨. ಹಿರಿಯರ/ಪೂರ್ವಿಕರ ಹೆಸರುಗಳ ಪ್ರಭಾವ**

ಸಾಮಾನ್ಯವಾಗಿ ಪ್ರಾಚೀನ ಕಾಲದಿಂದ ಇಂದಿನವರೆಗೂ ಜನಸಮುದಾಯದಲ್ಲಿ ನಂಬಿಕೆ, ಆಚರಣೆಗಳು ಅಸ್ಥಿತ್ವದಲ್ಲಿವೆ. ಈ ನಂಬಿಕೆಗಳೇ ವ್ಯಕ್ತಿಗಳಿಗೆ ಹೆಸರಿಡುವಲ್ಲಿಯೂ ಪ್ರಭಾವಬೀರಿವೆ. ಏಕೆಂದರೆ ತಮ್ಮ ಮಕ್ಕಳಿಗೆ ಹೆಸರಿಡುವ ಸಂದರ್ಭದಲ್ಲಿ ತಮ್ಮ ಹಿರಿಯರಾದ ತಂದೆ, ತಾಯಿ, ಅಜ್ಜಿ, ತಾತ, ತಮ್ಮ ಕುಲದ ಮೂಲ ವ್ಯಕ್ತಿಗಳ ಹೆಸರನ್ನು ಆಯ್ಕೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಈ

ಹೆಸರುಗಳ ಮೂಲಕ ನಮ್ಮ ಪೂರ್ವಿಕರು ನಮ್ಮ ಜೊತೆಯಲ್ಲಿರುತ್ತಾರೆ ಎಂಬ ನಂಬಿಕೆ ಇಂದಿಗೂ ಇದೆ. ಜೊತೆಗೆ ಪೂರ್ವಿಕರ ಸಾಧನೆಗಳು, ಆದರ್ಶ ಮೌಲ್ಯಗಳೂ ಕೂಡ ಇಲ್ಲಿ ಪ್ರಭಾವ ಬೀರಿರಬಹುದು. ಪ್ರಾತಿನಿಧಿಕ ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮಲ್ಲಯ್ಯ | ಮಲ್ಲಮ್ಮ |
| ರಂಗಪ್ಪ | ಪುಟ್ಟಮ್ಮ |
| ಚಿಕ್ಕರಾಯಪ್ಪ | ತಾಯಮ್ಮ |
| ಗುಡ್ಡಯ್ಯ | ಸಣ್ಣರಂಗಮ್ಮ |
| ರಾಮಯ್ಯ | ಗುಡ್ಡಮ್ಮ |

**೪.೧.೧೩. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳ ಪ್ರಭಾವ**

ವ್ಯಕ್ತಿನಾಮಗಳ ಆಯ್ಕೆಯಲ್ಲಿ ಆಧುನಿಕ ಸಂದರ್ಭದಲ್ಲಿ ಸಿನಿಮಾ ಕ್ಷೇತ್ರದ ನಟ ನಟಿಯರ ಹೆಸರು, ಅವರ ನಟನೆಯ ಸಿನಿಮಾದಲ್ಲಿ ಇಟ್ಟುಕೊಳ್ಳುವಂತಹ ಹೆಸರುಗಳು ತುಂಬಾ ಪ್ರಭಾವ ಬೀರುತ್ತಿರುವುದನ್ನು ಕಾಣುತ್ತೇವೆ. ತಮ್ಮ ಪ್ರೀತಿಯ ನಟ ನಟಿಯರ ಹೆಸರನ್ನು ಅಭಿಮಾನದ ಸಂಕೇತವಾಗಿ ಮತ್ತು ಅವರು ಸಿನಿಮಾಗಳಲ್ಲಿ ಹೇಳುವ ಸಂಭಾಷಣೆಗೆ ಅಥವಾ ಅವರ ಪಾತ್ರದಲ್ಲಿರುವ ಮೌಲ್ಯಗಳಿಗೆ ಅಭಿಮಾನಿಗಳಾಗಿ ಅವರ ಹೆಸರುಗಳನ್ನು ಮಕ್ಕಳಿಗೆ ಇಡುವುದನ್ನು ಕಾಣುತ್ತೇವೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕಲ್ಯಾಣ್ ಕುಮಾರ್ | ಕಲ್ಪನ |
| ಮುತ್ತುರಾಜ್ | ಭಾರತಿ |
| ರಾಜಕುಮಾರ್ | ಲೀಲಾವತಿ |
| ವಿಷ್ಣುವರ್ಧನ | ಜಯಂತಿ |
| ರವಿಚಂದ್ರನ್ | ತಾರಾ |
| ಅಂಬರೀಷ್ | ಉಮಾಶ್ರೀ |
| ಶಿವರಾಜ್ | ಶೃತಿ |
| ಪುನೀತ್ | ಪ್ರೇಮ |
| ರಾಘವೇಂದ್ರ | ರಕ್ಷಿತಾ |
| ಸುದೀಪ್ | ಸರಿತಾ |

| | |
|---|---|
| ಪ್ರಜ್ವಲ್ | ಪ್ರಿಯ |
| ಪ್ರೀತಮ್ | ರುಚಿತಾ |
| ಚೇತನ್ | ಚೇತನಾ |
| ಯಶಸ್ | ಯಶಸ್ವಿ |
| ಶಂಕರ್ | ಮಂಜುಳ |
| ಅನಂತ್ | |
| ದರ್ಶನ್ | |

**೪.೧.೧೪. ರಾಜಕೀಯ ವ್ಯಕ್ತಿಗಳ ಪ್ರಭಾವ**

ಸ್ವಾತಂತ್ರ್ಯ ಚಳುವಳಿ ಕಾಲದಿಂದ ಇಂದಿನವರೆಗೂ ಹಲವಾರು ರಾಜಕೀಯ ಧುರೀಣರನ್ನು ಕಾಣುತ್ತೇವೆ. ಅಂತಹ ಮಹಾನ್ ರಾಜಕೀಯ ಚಿಂತಕರು ನಾಡಿನಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಹುಟ್ಟುಹಾಕಿದ್ದಾರೆ. ಆ ಅನುಯಾಯಿಗಳು ತಮ್ಮ ರಾಜಕೀಯ ನಾಯಕರು ಎನಿಸಿಕೊಂಡಂತಹವರ ಹೆಸರುಗಳನ್ನು ಅಭಿಮಾನದ ಸಂಕೇತವಾಗಿ ತಮ್ಮ ಮಕ್ಕಳಿಗೆ ಇಡುತ್ತಿರುವುದನ್ನು ನೋಡಬಹುದು. ಉದಾ:–

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ದೇವೇಗೌಡ | ಇಂದಿರಾ |
| ಜಯಚಂದ್ರ | ಜಯಲಲಿತ |
| ಕುಮಾರಸ್ವಾಮಿ | ತೇಜಸ್ವಿನಿ |
| ರೇವಣ್ಣ | |
| ಶಿವಕುಮಾರ | |
| ಕೃಷ್ಣ | |
| ದಿನೇಶ್ | |
| ಯಡಿಯೂರಪ್ಪ | |
| ಬಾಲಕೃಷ್ಣ | |
| ದೇವರಾಜ ಅರಸ್ | |
| ಕರುಣಾಕರ | |
| ಮುನಿಯಪ್ಪ | |
| ವೀರಪ್ಪ | |
| ಬಂಗಾರಪ್ಪ | |

ಪ್ರಕಾಶ್

ರಾಮಕೃಷ್ಣಹೆಗ್ಡೆ

ಗುಂಡುರಾವ್

ಸಿದ್ದರಾಮಯ್ಯ

**೪.೧.೧೫. ಕ್ರೀಡಾಪಟುಗಳ ಪ್ರಭಾವ**

ಆಧುನಿಕತೆಯ ಸಂದರ್ಭದಲ್ಲಿ ಕ್ರೀಡೆ ಎಂಬುದು ಸಮಾಜದ ಎಲ್ಲಾ ವರ್ಗದವರನ್ನು ಒಂದು ಮಾಡುವ ಅಸ್ತ್ರವಾಗಿ ಕೆಲಸಮಾಡುತ್ತಿದೆ. ಇಂತಹ ಕ್ರೀಡೆಗಳಲ್ಲಿ ಸ್ಪರ್ಧಿಸುವ ಸ್ಪರ್ಧಾಳುಗಳು ತಮ್ಮ ಕ್ರೀಡಾ ನಡತೆಯಿಂದ ಸಾಕಷ್ಟು ಅನುಯಾಯಿಗಳನ್ನು ಗಳಿಸಿಕೊಂಡಿದ್ದಾರೆ. ಇಂತಹ ಅನುಯಾಯಿಗಳು ತಮ್ಮ ಕ್ರೀಡಾ ಸ್ಫೂರ್ತಿದಾಯಕವಾದ ವ್ಯಕ್ತಿಗಳನ್ನು ಹಲವು ರೀತಿಯಲ್ಲಿ ಬೆಂಬಲಿಸುತ್ತಾರೆ. ಅದರಲ್ಲಿ ಅವರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಅಥವಾ ತಮಗೆ ಇಟ್ಟುಕೊಳ್ಳುವುದನ್ನು ನೋಡಬಹುದು. ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಯುವರಾಜ್ | ಅಶ್ವಿನಿ |
| ಸಚಿನ್ | ಸಿಂಧು |
| ರಾಹುಲ್ | ಸೈನಾ |
| ಅನಿಲ್ | ಉಷಾ |
| ರವಿಶಾಸ್ತ್ರಿ | ಪೂವಮ್ಮ |
| ವಿರಾಟ್ | ದೀಪಾ |
| ವೀರೇಂದ್ರ | ಸಾಕ್ಷಿ |
| ಗಂಗೂಲಿ | |
| ಸುನಿಲ್ | |
| ಮನೀಷ್ | |
| ವಿನಯ್ | |
| ಭುವನೇಶ್ವರ್ | |
| ರೋಹನ್ | |
| ವಿಜೇಂದರ್ | |

**೪.೧.೧೬. ಸಕಾರಾತ್ಮಕ ಗುಣಗಳ ವ್ಯಕ್ತಿನಾಮಗಳು**

ಜಗತ್ತಿನಲ್ಲಿ ಎರಡು ರೀತಿಯ ಗುಣಗಳುಳ್ಳ ವ್ಯಕ್ತಿಗಳನ್ನು ಪ್ರಾಚೀನ ಕಾಲದಿಂದಲೂ ಕಾಣುತ್ತಾ ಬಂದಿದ್ದೇವೆ. ಅದರಲ್ಲಿ ಒಂದು ವರ್ಗ ಒಳ್ಳೆಯ ಗುಣಗಳಿಂದ ಗುರುತಿಸಲ್ಪಟ್ಟಿದ್ದರೆ ಮತ್ತೊಂದು

ವರ್ಗ ಅವರ ದುರ್ನಡತೆಯಿಂದ ಗುರ್ತಿಸಿಕೊಂಡಿರುತ್ತಾರೆ. ಸಮಾಜ ದುರ್ನಡತೆಯ ವ್ಯಕ್ತಿಗಳ ಗುಣಗಳನ್ನು ಒಪ್ಪಿಕೊಳ್ಳುವುದಿಲ್ಲ. ಒಳ್ಳೆಯ ಗುಣಗಳಿರುವ ವ್ಯಕ್ತಿಗಳನ್ನು ಆದರ್ಶರಾಗಿ ಸ್ವೀಕರಿಸುತ್ತಾರೆ. ಇಂತಹ ಸಂದರ್ಭದಲ್ಲಿ ಒಳ್ಳೆಯ ಗುಣಗಳಿಂದ ಪ್ರಖ್ಯಾತಿ ಪಡೆದಂತಹ ವ್ಯಕ್ತಿಗಳ ಹೆಸರುಗಳನ್ನು ಸಮಾಜದಲ್ಲಿನ ವ್ಯಕ್ತಿಗಳು ಬಳಸುವುದನ್ನು ಕಾಣುತ್ತೇವೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಮ | ಸೀತೆ |
| ಲಕ್ಷ್ಮಣ | ಕೌಸಲ್ಯ |
| ಭರತ | ಕುಂತಿ |
| ಭೀಮ | ಭಾನುಮತಿ |
| ಅರ್ಜುನ | ಸುಭದ್ರೆ |
| ಕೃಷ್ಣ | ರುಕ್ಮಿಣಿ |
| ನಕುಲ | ಊರ್ಮಿಳೆ |
| ಸಹದೇವ | |

**೪.೧.೧೭. ನಕಾರಾತ್ಮಕ ಗುಣಗಳ ವ್ಯಕ್ತಿನಾಮಗಳು ಆದರ್ಶರೆನಿಸಿದರೂ ಕೂಡ ಅವರ ಜೀವನದಲ್ಲಿನ ಕಷ್ಟಗಳಿಂದಾಗಿ ಕೆಲವು ಹೆಸರುಗಳು ನಿಷಿದ್ಧ**

ಈ ಹಿಂದೆ ಹೇಳಿದಂತೆ ನಕಾರಾತ್ಮಕ ಗುಣಗಳಿಂದ ಕೂಡಿದ ವ್ಯಕ್ತಿಗಳು ಒಪ್ಪಿತ ಸಮಾಜದಿಂದ ಬಹಿಷ್ಕೃತರಾದವರಾಗಿರುತ್ತಾರೆ. ಇಂತಹ ಹೆಸರುಗಳನ್ನು ಸಮುದಾಯದಲ್ಲಿ ಕಾಣುವುದ ವಿರಳ ಏಕೆಂದರೆ ಜಗತ್ತಿನ ಪ್ರತಿಯೊಬ್ಬರೂ ಆದರ್ಶರಾಗಿಯೇ ಇರಬೇಕೆಂಬ ಸಂವೇದನೆವುಳ್ಳವರಾಗಿರುತ್ತಾರೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ದುರ್ಯೋಧನ | ಗಾಂಧಾರಿ |
| ದುಶ್ಯಾಸನ | ಶೂರ್ಪನಖಿ |
| ರಾವಣ | ಮಂಥರೆ |
| ಕೀಚಕ | ಕೈಕೆ |

ಈ ಮೇಲಿನ ವಿಷಯಕ್ಕೆ ಪೂರಕವಾದ ಮತ್ತೊಂದು ವಿಷಯವೆಂದರೆ ಸಮಾಜದಲ್ಲಿ ಆದರ್ಶರೆನಿಸಿಕೊಂಡಿದ್ದರೂ ಕೂಡ ಬದುಕಿನಲ್ಲಿ ಬರೀ ನೋವು ಕಷ್ಟ ಕಾರ್ಪಣ್ಯಗಳನ್ನೇ ಅನುಭವಿಸಿ

ರುವವರನ್ನು ಪುರಾಣ ಕಾವ್ಯಗಳಲ್ಲಿ ಕಾಣುತ್ತೇವೆ. ಇಂತಹ ವ್ಯಕ್ತಿಗಳು ಯಾವೊಂದು ತಪ್ಪುಗಳನ್ನು ಮಾಡದಿದ್ದರು ನೋವು ಅನುಭವಿಸುವುದನ್ನು ಕೇಳಿದಂತಹ ಸಮಾಜ ಅವರ ಹೆಸರುಗಳನ್ನು ಬಳಸುವ ಧೈರ್ಯ ಮಾಡುವುದಿಲ್ಲ. ಒಂದು ವೇಳೆ ಅಂತಹ ಹೆಸರುಗಳನ್ನು ಇಟ್ಟುಕೊಂಡರೆ ವ್ಯಕ್ತಿಗಳು ಸಹ ಅವರು ಅನುಭವಿಸಿದ ಕಷ್ಟಗಳನ್ನು ಅನುಭವಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ಹೇಳಬಹುದು.
ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನಳ | ಸೀತೆ |
| ಹರಿಶ್ಚಂದ್ರ | ಜಾಹ್ನವಿ |
| ಲೋಹಿತಾಶ್ವ | ದ್ರೌಪದಿ |
| ವಿದುರ | ಚಂದ್ರಮತಿ |
| | ದಮಯಂತಿ |
| | ಜಾನಕಿ |

**೪.೨. ವ್ಯಕ್ತಿನಾಮಗಳ ಪ್ರಾದೇಶಿಕ ನೆಲೆಗಳು**

ಪ್ರಾಚೀನ ಕಾಲದಿಂದಲೂ ವ್ಯಕ್ತಿನಾಮಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದನ್ನು ಕಾಣಬಹುದಾಗಿದೆ. ಒಂದು ಪ್ರದೇಶದಲ್ಲಿ ರೂಢಿಯಲ್ಲಿರುವ ಕೆಲವು ಹೆಸರುಗಳು ಮತ್ತೊಂದು ಪ್ರದೇಶದಲ್ಲಿ ಬಳಕೆಯಾಗುವುದು ವಿರಳ. ಈ ರೀತಿಯ ವ್ಯತ್ಯಾಸಗಳು ಸಮಾಜದ ಎಲ್ಲಾ ಭಾಗಗಳಲ್ಲಿಯೂ ನಡೆಯುತ್ತಿರುವ ಪ್ರಕ್ರಿಯೆ ಎಂಬುದು ಸಾಮಾನ್ಯ ಸಂಗತಿ. ಈ ರೀತಿಯ ಭಿನ್ನತೆಯನ್ನು ಪಡೆದುಕೊಳ್ಳಲು ಹಲವು ಕಾರಣಗಳಿರುತ್ತವೆ. ಆ ಪ್ರದೇಶದಲ್ಲಿ ಜೀವಿಸುವ ಜನರ ವಿವಿಧ ಧರ್ಮಗಳು, ಜಾತಿಗಳು, ನಂಬಿಕೆ, ಆಚರಣೆ ಮುಂತಾದವುಗಳ ಪ್ರಭಾವಗಳನ್ನು ಕಾರಣಗಳಾಗಿ ಗುರುತಿಸಬಹುದು. ಹಲವು ದೇವರುಗಳು, ಚಾರಿತ್ರಿಕ ವ್ಯಕ್ತಿಗಳು, ಆ ಸಮುದಾಯದಲ್ಲಿನ ನಂಬಿಕೆ ಮುಂತಾದ ಅಂಶಗಳು ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ವ್ಯಕ್ತಿನಾಮಗಳು ಪ್ರದೇಶದಿಂದ ಪ್ರದೇಶಕ್ಕೆ ತನ್ನ ಸ್ವರೂಪದಲ್ಲಿ ವ್ಯತ್ಯಾಸ ಪಡೆದುಕೊಂಡಿವೆ ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಪ್ರಾದೇಶಿಕವಾಗಿ ದಕ್ಷಿಣ ಕರ್ನಾಟಕದ ವ್ಯಕ್ತಿನಾಮಗಳಿಗೂ ಉತ್ತರ ಕರ್ನಾಟಕ ಭಾಗದ ವ್ಯಕ್ತಿನಾಮಗಳಿಗೂ ತುಂಬಾ ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಉತ್ತರ ಕರ್ನಾಟಕದ ವ್ಯಕ್ತಿನಾಮಗಳಿಗೆ ಅಡ್ಡ ಹೆಸರುಗಳು ವ್ಯಕ್ತಿನಾಮಗಳ ಜೊತೆಗೆ ನಿಜನಾಮಗಳಾಗಿಯೇ ಬಳಕೆಯಾಗುತ್ತವೆ. ಆದರೆ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಈ ರೀತಿಯ ಬಳಕೆ ಕಡಿಮೆ ಹಾಗೂ ದಕ್ಷಿಣ ಕರ್ನಾಟಕದ ಭಾಗದ ವ್ಯಕ್ತಿನಾಮಗಳಿಗೆ ಬಹುತೇಕ ನಿಜನಾಮದ ಮುಂದೆ ಅಥವಾ ಆರಂಭದಲ್ಲಿ ತಮ್ಮ ಊರಿನ ಮತ್ತು ತಂದೆಯ ಆದ್ಯಕ್ಷರಗಳನ್ನು ಮಾತ್ರ ಬಳಸುವ ಬಗೆಯನ್ನು ಕಾಣುತ್ತೇವೆ. ಆದರೆ ಉತ್ತರ ಕರ್ನಾಟಕದ

ಭಾಗದಲ್ಲಿ ನಿಜನಾಮದ ಜೊತೆಗೆ ತಂದೆಯ ಅಥವಾ ಮನೆತನದ ಹೆಸರನ್ನು ಬಳಸುವ ವಿಧಾನವನ್ನು ಕಾಣುತ್ತೇವೆ. ದಕ್ಷಿಣಕರ್ನಾಟಕ ಭಾಗದಲ್ಲಿನ ದೈವಗಳ ಹೆಸರುಗಳಿಗೂ ಉತ್ತರ ಕರ್ನಾಟಕ ಭಾಗದ ದೈವದ ಹೆಸರುಗಳಿಗೂ ವ್ಯತ್ಯಾಸಗಳಿದ್ದು ಈ ದೈವದ ಹೆಸರುಗಳು ಆ ಪ್ರದೇಶದ ವ್ಯಕ್ತಿನಾಮಗಳ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ದಕ್ಷಿಣ ಕರ್ನಾಟಕದ ತುಮಕೂರು ಪರಿಸರದ ವ್ಯಕ್ತಿನಾಮಗಳನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದ್ದು ಈ ಪರಿಸರದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳು ಸಾಮಾನ್ಯವಾಗಿ ದಕ್ಷಿಣ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿನ ವ್ಯಕ್ತಿನಾಮಗಳನ್ನು ಪ್ರತಿನಿಧಿಸುತ್ತಿರುತ್ತವೆ. ಆದರೆ ಎಲ್ಲಾ ಸ್ವರೂಪದ ವ್ಯಕ್ತಿನಾಮಗಳೂ ಇದೇ ರೀತಿಯಲ್ಲಿ ಪ್ರತಿನಿಧಿಸುತ್ತಿರುತ್ತವೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಆಯಾ ಪ್ರದೇಶಕ್ಕೆ ಅನುಗುಣವಾಗಿ ವ್ಯಕ್ತಿನಾಮಗಳು ಬಳಕೆಯಾಗುತ್ತಿರುವುದಕ್ಕೆ ಪ್ರಮುಖ ಕಾರಣ ಆ ಪ್ರದೇಶಗಳಲ್ಲಿ ಆರಾಧಿಸಲ್ಪಡುತ್ತಿರುವ ದೈವಗಳು ಆ ಪ್ರದೇಶದಲ್ಲಿನ ಆದರ್ಶ ವ್ಯಕ್ತಿಗಳು, ಕುಲದೈವಗಳು, ಆ ಸಮುದಾಯದಲ್ಲಿನ ಸಾಂಸ್ಕೃತಿಕ ವೀರರು ಮುಂತಾದವರ ಹೆಸರುಗಳು ಆ ಪ್ರದೇಶದಲ್ಲಿನ ಸಮುದಾಯದ ವ್ಯಕ್ತಿನಾಮಗಳ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಲಾಗಿದೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಕುರಿತಂತೆ ದಕ್ಷಿಣಕರ್ನಾಟಕದ ಆಯ್ದ ಜಿಲ್ಲೆಗಳಾದ ತುಮಕೂರು, ಬೆಂಗಳೂರು ನಗರ, ಮೈಸೂರು ಜಿಲ್ಲೆಯಲ್ಲಿನ ವ್ಯಕ್ತಿನಾಮಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದ್ದು, ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ತುಮಕೂರು ಪರಿಸರದ ವ್ಯಕ್ತಿನಾಮಗಳನ್ನು ಕುರಿತು ಹೆಚ್ಚಿನ ಚರ್ಚೆ ನಡೆಸಲಾಗಿದೆ. ಹಾಗಾಗಿ ವ್ಯಕ್ತಿನಾಮಗಳು ಪ್ರದೇಶದಿಂದ ಪ್ರದೇಶಕ್ಕೆ ತನ್ನ ಸ್ವರೂಪದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಬಂದಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

**೪.೨.೧. ದೈವ ಸಂಬಂಧಿ ವ್ಯಕ್ತಿನಾಮಗಳು**

ಪ್ರಾದೇಶಿಕವಾಗಿ ವ್ಯಕ್ತಿನಾಮಗಳ ಮೇಲೆ ಆ ಪ್ರದೇಶದಲ್ಲಿರುವ ಕುಲದೈವಗಳು ಮತ್ತು ಆರಾಧಿಸುವ ದೇವರುಗಳು ಪ್ರಭಾವ ಬೀರಿವೆ. ಅಂದರೆ ಒಂದು ಪ್ರದೇಶದ ವ್ಯಕ್ತಿನಾಮಗಳ ನಿರ್ದೇಶನದಲ್ಲಿ ದೈವಗಳು ಪ್ರಭಾವ ಬೀರಿವೆ ಎಂಬುದನ್ನು ಗುರುತಿಸಲಾಗಿದೆ. ಏಕೆಂದರೆ ತಮ್ಮ ಕುಲದೈವ ಹಾಗೂ ಆರಾಧ್ಯ ದೇವರ ಹೆಸರುಗಳನ್ನು ತಮ್ಮ ಸಮುದಾಯದ ಮಕ್ಕಳಿಗೆ ಇಟ್ಟರೆ ಆ ದೈವದ ಕೃಪೆಗೆ ಪಾತ್ರರಾಗುತ್ತೇವೆ, ಆ ದೇವರು ನಮ್ಮನ್ನು ಕಾಪಾಡುತ್ತಾನೆ ಹಾಗೂ ನಮಗೆ ಶತ್ರುಗಳಿಂದ ರಕ್ಷಿಸಲು ಹೆಸರಿನ ರೂಪದಲ್ಲಿ ಆ ದೇವರೇ ನಮ್ಮ ಜೊತೆ ಇರುತ್ತಾನೆ ಎಂಬ ನಂಬಿಕೆ ಈಗಲೂ ಗ್ರಾಮೀಣ ಪರಿಸರದ ಜನಸಮುದಾಯದಲ್ಲಿ ಇರುವುದನ್ನು ಕಾಣಬಹುದು. ಹಾಗಾಗಿ ದೈವಸಂಬಂಧಿ ಹೆಸರುಗಳು ಈ ಪರಿಸರದ ವ್ಯಕ್ತಿನಾಮಗಳ ಮೇಲೆ ಪ್ರಭಾವ ಬೀರಿವೆ ಎಂದು ನಂಬಬಹುದು. ಈ ರೀತಿಯ ನಂಬಿಕೆಗಳನ್ನು ಈ ಪರಿಸರದಲ್ಲಿ ದೊರೆತ ಹೆಸರುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇಲ್ಲಿ ಚರ್ಚಿಸಲಾಗಿರುವ ವ್ಯಕ್ತಿನಾಮಗಳು ಎರಡನೇ ತಲೆಮಾರಿಗಿಂತ ಹಿಂದಿನ ವ್ಯಕ್ತಿನಾಮಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದು ಪ್ರಸ್ತುತ ಸಂದರ್ಭದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಆಧುನಿಕತೆಯ ಪ್ರಭಾವ ವ್ಯಕ್ತಿನಾಮಗಳ ಮೇಲೆ ಆಗಿರುವುದನ್ನು ಚರ್ಚಿಸಲಾಗಿದೆ.

**ರಂಗನಾಥಸ್ವಾಮಿ:**

ತುಮಕೂರು ಪರಿಸರದಲ್ಲಿ ನೆಲೆಗೊಂಡಿರುವ ಮತ್ತು ಹೆಚ್ಚು ಪ್ರಸಿದ್ಧಿ ಪಡೆದಿರುವ ರಂಗನಾಥಸ್ವಾಮಿ ಎಂಬ ದೈವವು ವಿಷ್ಣುವಿನ ಪ್ರತಿರೂಪದಲ್ಲಿ ಆರಾಧಿಸಲ್ಪಡುತ್ತಿದೆ. ರಂಗನಾಥ ಪರಂಪರೆ ಎಂಬುದು ಸಾವಿರಾರು ವರ್ಷಗಳ ಇತಿಹಾಸವಿರುವ ಮತ್ತು ಆಂಧ್ರ ಪ್ರದೇಶ, ತಮಿಳುನಾಡು, ಕರ್ನಾಟಕದ ಬಹುಪಾಲು ಪ್ರದೇಶಗಳಲ್ಲಿ ಹಲವು ಹೆಸರುಗಳಲ್ಲಿ ಆರಾಧಿಸಲ್ಪಡುತ್ತಿದೆ. ಆದರೆ ತುಮಕೂರು ಪರಿಸರದ ಗುಬ್ಬಿ, ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ, ಕೊರಟಗೆರೆ, ತುಮಕೂರು ಹಾಗೂ ಪಾವಗಡ ತಾಲ್ಲೂಕಿನ ಪರಿಸರದಲ್ಲಿ ರಂಗನಾಥಸ್ವಾಮಿಯ ಅನೇಕ ದೇವಾಲಯಗಳಿದ್ದು ಸಾಕಷ್ಟು ಭಕ್ತ ಸಮೂಹವಿದೆ ಹಾಗೂ ಈ ದೇವರು ಹಲವಾರು ಸಮುದಾಯದ ಕುಲದೈವವಾಗಿಯೂ ಆರಾಧಿಸಲ್ಪಡುತ್ತಿದೆ. ಇದರ ಪರಿಣಾಮ ಸಾಮಾನ್ಯವಾಗಿಯೇ ಆ ಭಕ್ತ ಸಮುದಾಯದ ಮೇಲಾಗಿ ಆ ಸಮುದಾಯದ ವ್ಯಕ್ತಿನಾಮಗಳ ಮೇಲೆಯೂ ಕೂಡ ಪ್ರಭಾವ ಬೀರಿದೆ. ಕರ್ನಾಟಕದಲ್ಲಿ ತುಮಕೂರು ಗಡಿಭಾಗದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಪರಿಸರದಲ್ಲಿಯೂ ಕೂಡ ಈ ದೇವರ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ. ಹಾಗಾಗಿ ಈ ದೇವರ ಹೆಸರುಗಳು ಈ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಕ ವ್ಯಕ್ತಿನಾಮಗಳು** | **ಸ್ತ್ರೀವಾಚಕ ವ್ಯಕ್ತಿನಾಮಗಳು** |
| ರಂಗನಾಥ | ರಂಗಮ್ಮ |
| ರಂಗನಾಥಪ್ಪ | |
| ರಂಗಪ್ಪ | |
| ರಂಗಣ್ಣ | |
| ರಂಗಯ್ಯ | |
| ರಂಗನಾಥಯ್ಯ | |
| ರಂಗಶಾಮಯ್ಯ | |
| ರಂಗಸ್ವಾಮಿ | |
| ರಂಗಸ್ವಾಮಯ್ಯ | |

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದರೆ ಪುರುಷ ವ್ಯಕ್ತಿನಾಮಗಳಲ್ಲಿ 'ರಂಗ' ಎಂಬ ನಿರ್ದಿಷ್ಟ ಘಟಕಕ್ಕೆ ಹಲವಾರು ರೀತಿಯ ವಾರ್ಗಿಕಗಳು ಸೇರಿ ಪೂರ್ಣ ಘಟಕಗಳಾಗಿರುವುದನ್ನು ಕಾಣುತ್ತೇವೆ. ಆದರೆ ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ 'ರಂಗ' ಎಂಬ ನಿರ್ದಿಷ್ಟ ಘಟಕಕ್ಕೆ 'ಅಮ್ಮ' ಎಂಬ ಒಂದೇ ಒಂದು ಬಂಧುವಾಚಿ ವಾರ್ಗಿಕ ಸೇರಿ ಪೂರ್ಣ ಘಟಕ ಆಗಿರುವುದನ್ನು ಕಾಣಬಹುದು. ಅಂದರೆ ಸ್ತ್ರೀನಾಮಗಳಲ್ಲಿ 'ರಂಗಮ್ಮ' ಎಂಬ ಒಂದು ರೂಪ ಮಾತ್ರ ರಂಗನಾಥಸ್ವಾಮಿಯ

ದೇವರನಾಮವಾಗಿ ಈ ಪ್ರದೇಶದಲ್ಲಿ ಬಳಕೆಯಲ್ಲಿದೆ. ಹಾಗೂ ಈ ದೇವರ ಹೆಸರುಗಳನ್ನು ಇಟ್ಟುಕೊಳ್ಳಲು ಯಾವ ಜಾತಿ ಸಮುದಾಯಗಳ ಕಟ್ಟುಪಾಡುಗಳಿಲ್ಲ. 'ರಂಗನಾಥ' ಎಂಬ ಹೆಸರನ್ನು ಲಿಂಗಾಯಿತ ಸಮುದಾಯವನ್ನು ಹೊರತು ಪಡಿಸಿ ಉಳಿದೆಲ್ಲಾ ಸಮುದಾಯಗಳು ಬಳಸುತ್ತವೆ. ಲಿಂಗಾಯಿತ ಸಮುದಾಯದಲ್ಲಿ ಈ ಹೆಸರು ಬಳಕೆಯಾಗಿರುವುದು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಕಂಡುಬಂದಿರುವುದಿಲ್ಲ. ಈ ಮೇಲಿನ ಉದಾಹರಣೆಗಳನ್ನು ಗಮನಿಸಿದರೆ ಇದು ಪುರುಷವಾಚಿ ದೈವವಾಗಿದ್ದು, ಸ್ತ್ರೀವಾಚಿ ಹೆಸರುಗಳ ರೂಪದಲ್ಲಿ ಬಳಕೆಯಾಗಿದೆ ಎಂದು ಹೇಳಬಹುದು.

**ಸಿದ್ದಗಂಗಾ:**

ವ್ಯಕ್ತಿನಾಮಗಳ ನಿರ್ದೇಶನದಲ್ಲಿ 'ಸಿದ್ದಗಂಗಾ' ಎಂಬ ಹೆಸರು ಸಾಕಷ್ಟು ಪ್ರಭಾವವನ್ನು ಈ ಪರಿಸರದ ಜನಸಮುದಾಯದ ಮೇಲೆ ಬೀರಿದೆ. ತುಮಕೂರು ಸಮೀಪದ ಕ್ಯಾತಸಂದ್ರ ಗ್ರಾಮದ ಬಳಿ ಇರುವ ಸಿದ್ದಗಂಗಾ ಮಠದ ಆವರಣದಲ್ಲಿ ಬಂಡೆಯ ಮಧ್ಯಭಾಗದಲ್ಲಿ ನೀರಿನ ಚಿಲುಮೆಯಿದ್ದು ಯಾವ ಕಾಲದಲ್ಲಿಯೂ ಈ ನೀರಿನ ಚಿಲುಮೆ ಬತ್ತಿ ಹೋಗುವುದಿಲ್ಲವೆಂಬ ನಂಬಿಕೆ ಜನಸಮುದಾಯದಲ್ಲಿದೆ. ಹಾಗಾಗಿಯೇ ಈ ಪ್ರದೇಶಕ್ಕೆ ಸಿದ್ದಗಂಗಾ ಎಂಬ ಹೆಸರು ಬಂದಿದೆ ಎಂದು ಹೇಳಲಾಗಿದೆ. ಈ ರೀತಿಯ ನಂಬಿಕೆಯನ್ನು ಜನರಲ್ಲಿ ಉಂಟುಮಾಡಿರುವ ಸಿದ್ದಗಂಗಾ ಒಂದು ಜಲದೇವತೆಯಾಗಿ ಆರಾಧಿಸಲ್ಪಡುತ್ತಿದೆ. ಈ ಪ್ರದೇಶಕ್ಕೆ ಬಂದು ಈ ನೀರಿನ ಚಿಲುಮೆಯಿಂದ ನೀರನ್ನು ಕುಡಿದರೆ ಅಥವಾ ಮುಟ್ಟಿದರೆ ಕಷ್ಟಗಳೆಲ್ಲವೂ ದೂರಾಗುತ್ತವೆ ಎಂಬ ನಂಬಿಕೆ ಇರುವುದರಿಂದ ಈ ದೇವರ ಹೆಸರನ್ನು ತಮ್ಮ ಸಮುದಾಯದ ಮಕ್ಕಳಿಗೆ ಇಡಲಾಗುತ್ತಿದೆ. ಇದು ಸ್ತ್ರೀವಾಚಿ ದೈವವಾಗಿದ್ದು ಪುರುಷವಾಚಿ ಹೆಸರುಗಳಾಗಿಯೂ ಬಳಕೆಯಾಗುತ್ತಿದೆ.

**ಉದಾ:**

| **'ಅ' ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಿದ್ದಗಂಗಯ್ಯ | ಸಿದ್ದಗಂಗಮ್ಮ |
| ಸಿದ್ದಗಂಗಣ್ಣ | ಸಿದ್ದಮ್ಮ |
| ಸಿದ್ದಣ್ಣ | ಗಂಗಾ |
| ಸಿದ್ದಪ್ಪ | ಗಂಗಮ್ಮ |
| ಸಿದ್ದಯ್ಯ | ಸಿದ್ದಗಂಗಾ |
| ಗಂಗಣ್ಣ | |
| ಗಂಗಯ್ಯ | |
| ಗಂಗಪ್ಪ | |

**ಸಿದ್ದಲಿಂಗೇಶ್ವರ:**

ತುಮಕೂರು ಪರಿಸರದ ಕುಣಿಗಲ್, ತುಮಕೂರು, ಗುಬ್ಬಿ ತಾಲೂಕಿನ ಪರಿಸರದಲ್ಲಿ ಸಿದ್ಧಲಿಂಗೇಶ್ವರ ದೇವರ ಹೆಸರುಗಳನ್ನು ವ್ಯಕ್ತಿನಾಮಗಳಾಗಿ ಬಳಸುತ್ತಿರುವುದನ್ನು ಕಾಣುತ್ತೇವೆ. ಸಿದ್ಧಲಿಂಗೇಶ್ವರ ಎಂಬುದು ಪುರಾಣ ಕಥೆಯಲ್ಲಿ ಸಿದ್ಧಲಿಂಗ ಎಂಬ ಒಬ್ಬ ಸಾಧುವಿನ ಹೆಸರಾಗಿದ್ದು ಹಲವು ಪವಾಡಗಳ ಮೂಲಕ ದೈವ ಸ್ವರೂಪ ಪಡೆದುಕೊಂಡನು ಎಂಬ ನಂಬಿಕೆ ಈ ಭಾಗದ ಜನರಲ್ಲಿದೆ. ಹಾಗಾಗಿಯೇ ಈ ದೈವದ ಹೆಸರನ್ನು ಈ ಭಾಗದ ಪರಿಸರದಲ್ಲಿ ಹೆಚ್ಚಾಗಿ ಬಳಸುತ್ತಾರೆ. ಇದು ಪುರುಷವಾಚಿ ದೈವವಾಗಿದ್ದರೂ ಸ್ತ್ರೀಯರ ಹೆಸರುಗಳಲ್ಲಿಯೂ ಬಳಕೆಯಲ್ಲಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಿದ್ದಲಿಂಗ | ಸಿದ್ದಲಿಂಗಮ್ಮ |
| ಸಿದ್ದಲಿಂಗಯ್ಯ | ಲಿಂಗಮ್ಮ |
| ಸಿದ್ದಲಿಂಗೇಶ | ಸಿದ್ದಮ್ಮ |
| ಸಿದ್ದಲಿಂಗಣ್ಣ | |
| ಸಿದ್ದಲಿಂಗಪ್ಪ | |
| ಸಿದ್ದೇಶ | |
| ಲಿಂಗೇಶ | |
| ಸಿದ್ದಲಿಂಗಸ್ವಾಮಿ | |

ಈ ಮೇಲಿನ ಉದಾಹರಣೆಗಳ ಜೊತೆಗೆ ಈ ದೇವರಿರುವ ಯಡಿಯೂರು ಊರಿನ ಹೆಸರು ಸಹ ಹಲವು ಜನಸಮುದಾಯದ ವ್ಯಕ್ತಿನಾಮಗಳ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಕಾಣಬಹುದು. ಆದರೆ ಈ ಸ್ಥಳನಾಮದ ಹೆಸರು ಕೇವಲ ಪುರುಷ ವಾಚಿಯಾಗಿ ಬಳಕೆಯಲ್ಲಿದ್ದು ಸ್ತ್ರೀ ವಾಚಿಯಾಗಿ ಬಳಕೆಯಾಗಿಲ್ಲ.

**ಉದಾ:**

ಯಡಿಯೂರಪ್ಪ

ಯಡಿಯಪ್ಪ

**ಶಿವಗಂಗಾ:**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ಶಿವಗಂಗೆ ಒಂದು ಪ್ರವಾಸಿಗರ ಪ್ರಸಿದ್ದ ಯಾತ್ರಾಸ್ಥಳವಾಗಿದೆ. ಈ ಪ್ರದೇಶವು ಹಲವು ಸ್ಥಳಪುರಾಣಗಳನ್ನು ಹೊಂದಿದ್ದು ಪ್ರಮುಖವಾಗಿ ಹೊಯ್ಸಳರ ರಾಜ ವಿಷ್ಣುವರ್ಧನನ ಹೆಂಡತಿ ರಾಣಿ ಶಾಂತಲೆಯ ಅಚ್ಚುಮೆಚ್ಚಿನ ಸ್ಥಳವಾಗಿತ್ತು ಎಂದು ಇತಿಹಾಸ ಹೇಳುತ್ತದೆ. ಶಾಂತಲೆಯು ಆತ್ಮಹತ್ಯೆ ಮಾಡಿಕೊಂಡದ್ದು ಈ ಶಿವಗಂಗಾ ಬೆಟ್ಟದಲ್ಲಿಯೇ

ಎಂಬುದನ್ನು ಇತಿಹಾಸ ಹೇಳುತ್ತದೆ. ಇಂತಹ ಇತಿಹಾಸ ಹೊಂದಿರುವ ಶಿವಗಂಗೆಯಲ್ಲಿ ಬೆಟ್ಟದ ಮಧ್ಯಭಾಗದಲ್ಲಿ ಬಂಡೆಯ ಮಧ್ಯಭಾಗದಿಂದ ನೀರಿನ ಅಲೆಗಳು ಬರುತ್ತವೆ ಎಂದು ಹೇಳಲಾಗಿದೆ. ಈ ಸ್ಥಳವನ್ನು 'ಒಳಕಲ್ಲು ತೀರ್ಥ' ಎಂದು ಕರೆಯಲಾಗುತ್ತದೆ. ಏಕೆಂದರೆ ಅಲ್ಲಿ ಬಂಡೆಯ ಮಧ್ಯಭಾಗದಲ್ಲಿ ಅರ್ಧ ಅಡಿಯಷ್ಟು ಅಗಲವಾದ ರಂಧ್ರವಿದ್ದು ಅದರೊಳಗೆ ಕೈಯನ್ನಿಟ್ಟು ನೀರನ್ನು ಸ್ಪರ್ಶಿಸಬೇಕು ಎಂಬ ನಂಬಿಕೆ ಇದೆ. ಯಾರಿಗೆ ನೀರು ಸಿಗುತ್ತದೋ ಅವರ ಕಷ್ಟ ಕಾರ್ಪಣ್ಯಗಳು ದೂರಾಗುತ್ತವೆ, ನೀರು ಸಿಗದೆ ಇದ್ದರೆ ಅವರ ಕಷ್ಟಗಳು ಇನ್ನೂ ಪರಿಹಾರವಾಗಿಲ್ಲ ಎಂಬುದರ ಸೂಚನೆ ಎಂದು ನಂಬಲಾಗಿದೆ. ಇಂತಹ ನಂಬಿಕೆಯಿರುವ ಈ ದೇವರ ಹೆಸರಿನ ಪ್ರಭಾವ ಸುತ್ತಮುತ್ತಲಿನ ಸಮುದಾಯದ ವ್ಯಕ್ತಿ ನಾಮಗಳ ಮೇಲೆ ಆಗಿರುವುದನ್ನು ಕಾಣುತ್ತೇವೆ. ಇಲ್ಲಿ ಈ ದೇವರು ಸ್ತ್ರೀವಾಚಿಯಾಗಿದ್ದರು ಹೆಸರುಗಳು ಮಾತ್ರ ಪುರುಷವಾಚಿ ಮತ್ತು ಸ್ತ್ರೀವಾಚಿಗಳೆರಡರಲ್ಲೂ ಬಳಕೆಯಾಗಿವೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶಿವಗಂಗಯ್ಯ | ಶಿವಮ್ಮ |
| ಶಿವಗಂಗಪ್ಪ | ಶಿವಗಂಗಮ್ಮ |
| ಶಿವಗಂಗಣ್ಣ | ಶಿವಗಂಗಾ |
| ಶಿವಪ್ಪ | ಗಂಗಮ್ಮ |
| ಗಂಗಯ್ಯ | ಶಿವಗಂಗೆ |
| ಗಂಗಣ್ಣ | |
| ಶಿವಣ್ಣ | |
| ಶಿವಯ್ಯ | |
| ಗಂಗಪ್ಪ | |

**ನರಸಿಂಹಸ್ವಾಮಿ:**

ತುಮಕೂರು ಪರಿಸರದ ಕೊರಟಗೆರೆ, ತುಮಕೂರು, ಮಧುಗಿರಿ, ಶಿರಾ, ಗುಬ್ಬಿ ಪರಿಸರದಲ್ಲಿ ಹೆಚ್ಚಾಗಿ ಆರಾಧಿಸಲ್ಪಡುವ ದೇವರಾಗಿದೆ. ವಿಷ್ಣುವಿನ ಅವತಾರವೇ ನರಸಿಂಹಸ್ವಾಮಿ ಎಂದು ನಂಬಿದ್ದಾರೆ. ನರಸಿಂಹಸ್ವಾಮಿ ದೇವರು ಈ ಪರಿಸರದಲ್ಲಿ ಹಲವು ವಿಶೇಷಣ ಪದಗಳಿಂದ ಬಳಕೆಯಾಗುತ್ತಿದೆ. ಅಂದರೆ ಉಗ್ರನರಸಿಂಹಸ್ವಾಮಿ, ಯೋಗ ನರಸಿಂಹಸ್ವಾಮಿ, ಭೋಗ ನರಸಿಂಹಸ್ವಾಮಿ, ನಾರಾಯಣಸ್ವಾಮಿ, ಲಕ್ಷ್ಮಿನಾರಾಯಣ ಸ್ವಾಮಿ, ವೀರನಾರಾಯಣಸ್ವಾಮಿ, ವೆಂಕಟರಮಣ ಸ್ವಾಮಿ ಮುಂತಾದ ಹೆಸರುಗಳಲ್ಲಿ ಆರಾಧಿಸಲ್ಪಡುವ ಈ ದೇವರು ಈ ಪರಿಸರದ ಹಲವು ಸಮುದಾಯದ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಹಾಗಾಗಿ ಸಾಮಾನ್ಯವಾಗಿ ಈ ದೇವರ ಹೆಸರುಗಳು ಈ ಸಮುದಾಯದ ವ್ಯಕ್ತಿನಾಮಗಳ

ಮೇಲಾಗಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಈ ದೇವರ ಹೆಸರು ಪುರುಷವಾಚಿಯಾಗಿ ಹೆಚ್ಚಾಗಿ ಬಳಕೆಯಾಗಿರುವುದನ್ನು ಕಾಣಬಹುದು.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನರಸಿಂಹ | ನಾರಾಯಣಮ್ಮ |
| ನರಸಿಂಹಯ್ಯ | ನರಸಮ್ಮ |
| ನರಸಿಂಹಸ್ವಾಮಿ | ಲಕ್ಷ್ಮೀನರಸಮ್ಮ |
| ನಾರಾಯಣಪ್ಪ | ವೆಂಕಟಮ್ಮ |
| ನಾರಾಯಣ | ವೆಂಕಟರಮಣಮ್ಮ |
| ಲಕ್ಷ್ಮೀನರಸಿಂಹ ಮೂರ್ತಿ | |
| ಲಕ್ಷ್ಮೀನರಸಯ್ಯ | |
| ನರಸಪ್ಪ | |
| ಲಕ್ಷ್ಮೀನರಸಪ್ಪ | |
| ನಾರಾಯಣಪ್ಪ | |
| ಯೋಗನರಸಿಂಹ | |
| ನಾರಾಯಣಸ್ವಾಮಿ | |
| ವೆಂಕಟಪ್ಪ | |
| ವೆಂಕಟರಮಣಯ್ಯ | |
| ವೆಂಕಟಪ್ಪ | |
| ವೆಂಕಟೇಶ | |
| ನರಸಿಂಹಮೂರ್ತಿ | |
| ಸೂರ್ಯನಾರಾಯಣ | |

**ಆಂಜನೇಯ:**

ಕರ್ನಾಟಕದ ಬಹುಪಾಲು ಪ್ರದೇಶದಲ್ಲಿ ಅದರಲ್ಲೂ ಪ್ರತಿಯೊಂದು ಗ್ರಾಮಗಳಲ್ಲಿ ಆರಾಧಿಸಲ್ಪಡುವ ಆಂಜನೇಯ ದೇವರು ತುಮಕೂರು ಪರಿಸರದಲ್ಲಿ ಇತರೆ ಪ್ರದೇಶಗಳ ಹೆಸರುಗಳಿಗಿಂತ ಭಿನ್ನವಾಗಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ. ತುಮಕೂರು ಪರಿಸರದ ಕೊರಟಗೆರೆ ತಾಲೂಕಿನಲ್ಲಿ ಆಂಜನೇಯ ದೇವರು ಸೂರ್ಯಾಂಜನೇಯ, ಬಯಲಾಂಜನೇಯ, ಪುಟ್ಟಾಂಜನೇಯ ಎಂಬುದಾಗಿಯೂ, ಪಾವಗಡ ತಾಲ್ಲೂಕಿನ ಅರಸಿಕೆರೆ ಪರಿಸರದಲ್ಲಿ ಗುಜ್ಜಾರ ಆಂಜನೇಯ ಎಂಬುದಾಗಿಯೂ, ಇತರೆ ಪ್ರದೇಶಗಳಲ್ಲಿ ಆಂಜನೇಯ, ಹನುಮಂತರಾಯ ಮುಂತಾದ ಹೆಸರುಗಳಿಂದ

ಗುರುತಿಸಲ್ಪಡುತ್ತಿದೆ. ಈ ದೇವರ ಆರಾಧಕರು ಹಾಗೂ ಕುಲದೈವವನ್ನಾಗಿ ಮಾಡಿಕೊಂಡಿರುವವರು ತಮ್ಮ ಸಮುದಾಯದ ಮಕ್ಕಳಿಗೆ ಈ ದೇವರ ಹೆಸರುಗಳನ್ನು ನಿರ್ದೇಶನ ಮಾಡುವ ಪ್ರಕ್ರಿಯೆ ಇರುವುದನ್ನು ಕಾಣಬಹುದಾಗಿದೆ. ಈ ದೇವರ ಹೆಸರನ್ನು ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ಬಳಸುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಈ ಹೆಸರುಗಳು ಆಂಜನೇಯನಿಗೆ ಇರುವ ಇತರೆ ಹೆಸರುಗಳಿಂದ ನಿರ್ದೇಶಿತವಾಗುತ್ತಿದೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
| --- | --- |
| **ಪುರುಷವಾಚಿ** | **ಸ್ತ್ರೀವಾಚಿ** |
| ಹನುಮಂತಪ್ಪ | ಹನುಮಕ್ಕ |
| ಹನುಮಂತಯ್ಯ | ಹನುಮಂತಮ್ಮ |
| ಹನುಮಂತರಾಜು | ಆಂಜಿನಮ್ಮ |
| ಹನುಮಂತ | ಗುಜ್ಜಾರಮ್ಮ |
| ಆಂಜಿನೇಯ | ಗುಜ್ಜಾರಕ್ಕ |
| ಆಂಜಿನಪ್ಪ | ಗುಜ್ಜಾರ ಹನುಮಕ್ಕ |
| ಅಂಜನಮೂರ್ತಿ | |
| ಹನುಮಯ್ಯ | |
| ಹನುಮೇಶ್ | |
| ಹನುಮಂತರಾಯ | |
| ಸೂರ್ಯಾಂಜನೇಯ | |
| ಸೂರ್ಯಾಂಜಿನಪ್ಪ | |
| ಗುಜ್ಜಾರಪ್ಪ | |
| ಗುಜ್ಜಾರಯ್ಯ | |
| ಗುಜ್ಜಾರಹನುಮಂತಪ್ಪ | |

ಮಣ್ಣಮ್ಮ:

ಉತ್ತರ ಕರ್ನಾಟಕದ ಭಾಗಗಳಲ್ಲಿ ಆರಾಧಿಸಲ್ಪಡುವ ಹುಲಿಗಮ್ಮ, ಗಾಳಮ್ಮ, ಎಲ್ಲಮ್ಮ, ಸುಂಕಲಮ್ಮ ಈ ರೀತಿಯ ದೇವನಾಮಗಳ ರೀತಿಯಲ್ಲಿ ತುಮಕೂರು ಪರಿಸರದ ಗುಬ್ಬಿ, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ ಹೀಗೆ ಹಲವು ಪರಿಸರದಲ್ಲಿ 'ಮಣ್ಣಮ್ಮ' ಎಂಬ ಗ್ರಾಮದೇವತೆ ಹಲವು ಅವತಾರಗಳಲ್ಲಿ ಪೂಜಿಸಲ್ಪಡುತ್ತಿದೆ. ಅಂದರೆ 'ಮಣ್ಣಮ್ಮ' ದೇವಿಯನ್ನು ಮಾರಮ್ಮ, ಊರಮ್ಮ, ರಾಂಪುರದಮ್ಮ ಹೀಗೆ ಹಲವು ಹೆಸರುಗಳಲ್ಲಿ ಆರಾಧಿಸಲ್ಪಡುತ್ತಿದ್ದು ಹಲವು ಸಮುದಾಯದ ಜನರು ಈ ದೇವಿಯ ಭಕ್ತರಾಗಿದ್ದಾರೆ. ಈ ಜನಸಮುದಾಯದ ಹೆಸರುಗಳ ಮೇಲೆ ಈ ದೇವಿಯ ಹೆಸರು

ಪ್ರಭಾವ ಬೀರಿರುವುದನ್ನು ಈ ಪರಿಸರದಲ್ಲಿ ಗುರುತಿಸಲಾಗಿದೆ. ಈ ದೇವಿಯ ಪ್ರಭಾವದಿಂದ ಹಲವು ಜನರು ಈ ದೇವಿಯ ಹೆಸರನ್ನು ತಮ್ಮ ಮಕ್ಕಳಿಗೆ ಇಟ್ಟಿದ್ದಾರೆ. ಒಂದು ಪುರಾಣ ಕಥೆಯ ಪ್ರಕಾರ 'ಮಣ್ಣಮ್ಮ' ಎಂಬ ಹೆಸರಿನಲ್ಲಿ ಏಳು ಜನ ಅಕ್ಕತಂಗಿಯರಿದ್ದು ಏಳು ದಿಕ್ಕಿನಲ್ಲಿ ನೆಲೆಸಿ ತಾವು ನೆಲೆಸಿದ ಪರಿಸರದಲ್ಲಿ ಆ ಪರಿಸರದ ಸಮುದಾಯದ ಜನರ ಮೇಲೆ ಪ್ರಭಾವ ಬೀರಿರುವುದರಿಂದ ವ್ಯಕ್ತಿನಾಮಗಳ ಮೇಲೆ ಸಾಮಾನ್ಯವಾಗಿಯೇ ಇದರ ಪ್ರಭಾವವಾಗಿದೆ. ಈ ದೇವಿಯ ಹೆಸರುಗಳು ಪುರುಷವಾಚಿ ಮತ್ತು ಸ್ತ್ರೀವಾಚಿಯಾಗಿಯೂ ಬಳಕೆಯಲ್ಲಿವೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮಣ್ಣಪ್ಪ | ಮಣ್ಣಮ್ಮ |
| ಮಣ್ಣಯ್ಯ | ಮಣ್ಣಕ್ಕ |
| ಮಾರಣ್ಣ | ಮಾರಕ್ಕ |
| ಮಾರಪ್ಪ | ಮಾರಮ್ಮ |

**ಕೆಂಪಮ್ಮ:**

ತುಮಕೂರು ಜಿಲ್ಲೆಯ ಗುಬ್ಬಿತಾಲ್ಲೂಕಿನ ಪರಿಸರದಲ್ಲಿ ಆರಾಧಿಸಲ್ಪಡುವ 'ಕೆಂಪಮ್ಮ' ಎಂಬ ಗ್ರಾಮದೇವತೆ ಕುರಿತಂತೆ ಸ್ಥಳೀಯರಲ್ಲಿ ಅನೇಕ ನಂಬಿಕೆಗಳಿವೆ. ಈಕೆ ಒಂದು ಶಕ್ತಿದೇವತೆಯಾಗಿದ್ದು ತಪ್ಪು ಮಾಡಿದವರನ್ನು ಕ್ರೂರವಾಗಿ ಹಿಂಸಿಸುತ್ತಾಳೆ ಎಂದು ನಂಬಿದ್ದಾರೆ. ಈ ದೇವಿಯ ಭಕ್ತ ಸಮೂಹ ಸಾಕಷ್ಟಿದ್ದು, ಈ ದೇವಿಯ ಹೆಸರಿನ ಪ್ರಭಾವ ಈ ಸಮುದಾಯದ ಮೇಲಾಗಿರುವುದನ್ನು ಕಾಣಬಹುದಾಗಿದೆ. ಈ ದೇವಿಯ ಹೆಸರು ಪುರುಷವಾಚಿ ಮತ್ತು ಸ್ತ್ರೀವಾಚಿಯಾಗಿಯೂ ಬಳಕೆಯಾಗಿದೆ. ಈ ದೇವಿಯನ್ನು 'ಕೆಂಚಮ್ಮದೇವಿ' ಎಂತಲೂ ಕರೆಯಲಾಗುತ್ತದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೆಂಪಣ್ಣ | ಕೆಂಪಮ್ಮ |
| ಕೆಂಪಯ್ಯ | ಕೆಂಪಕ್ಕ |
| ಕೆಂಪರಾಜ | ಕೆಂಚಮ್ಮ |
| ಕೆಂಚಯ್ಯ | ಕೆಂಚ್ಚಕ್ಕ |
| ಕೆಂಚ್ಚಣ್ಣ | |
| ಕೆಂಚಪ್ಪ | |

**ಕರಿಯಮ್ಮ:–**

ತುಮಕೂರು ಪರಿಸರದ ಗುಬ್ಬಿ, ಚಿಕ್ಕನಾಯಕನಹಳ್ಳಿ, ಶಿರಾ ತಾಲ್ಲೂಕ ಪರಿಸರದಲ್ಲಿ ಆರಾಧಿಸಲ್ಪಡುತ್ತಿರುವ ಕರಿಯಮ್ಮ ದೇವಿಯು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಹಾಗಲವಾಡಿ ಕರಿಯಮ್ಮ, ಸೋರೆಕುಂಟೆ ಕರಿಯಮ್ಮ ಹೀಗೆ ಹಲವು ಸ್ಥಳಗಳಲ್ಲಿ ನೆಲೆಗೊಂಡು ಭಕ್ತ ಸಮೂಹವನ್ನು ಸೃಷ್ಟಿಸಿಕೊಂಡಿದೆ. ಈ ದೇವತೆಯನ್ನು ಆರಾಧಿಸುವ ನೂರಾರು ಗ್ರಾಮಗಳು, ಸಾವಿರಾರು ಕುಟುಂಬಗಳಿವೆ. ಹಾಗಾಗಿ ಈ ದೇವಿಯ ಪ್ರಭಾವ ಈ ಜನಸಮುದಾಯದ ಮೇಲಾಗಿರುವುದನ್ನು ಕಾಣಲಾಗಿದೆ. ಈ ಹಿನ್ನೆಲೆಯಲ್ಲಿ ಈ ಸಮುದಾಯದ ವ್ಯಕ್ತಿನಾಮಗಳ ಮೇಲೆ ಈ ದೇವಿಯ ಹೆಸರು ಪ್ರಭಾವ ಬೀರಿರುವುದು ಈ ಪರಿಸರದಲ್ಲಿ ಬಳಕೆಯಲ್ಲಿರುವ ವ್ಯಕ್ತಿನಾಮಗಳಿಂದ ತಿಳಿದುಬಂದಿದೆ. ಈ ದೇವಿಯು ಸ್ತ್ರೀವಾಚಿಯಾಗಿದ್ದರೂ ಹೆಸರುಗಳಲ್ಲಿ ಪುರುಷವಾಚಿಯಾಗಿಯೂ ಬಳಕೆಯಾಗಿದೆ.

**ಉದಾ:–**

| **‘ಅ’ಪಟ್ಟಿ** | **‘ಬ’ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕರಿಯಣ್ಣ | ಕರಿಯಕ್ಕ |
| ಕರಿಯಪ್ಪ | ಕರಿಯಮ್ಮ |

**ಜುಂಜಪ್ಪ:–**

ಈ ಹೆಸರು ತುಮಕೂರು ಪರಿಸರದ ಎಲ್ಲಾ ತಾಲ್ಲೂಕುಗಳಲ್ಲಿಯೂ ಬಳಕೆಯಲ್ಲಿದೆ. ಈ ಹೆಸರುಗಳನ್ನು ಚಿತ್ರದುರ್ಗ ಪರಿಸರದಲ್ಲಿಯೂ ಕಾಣಬಹುದು. ಈ ಹೆಸರನ್ನು ಸಾಮಾನ್ಯವಾಗಿ **‘ಗೊಲ್ಲ’** ಸಮುದಾಯದವರು ಹೆಚ್ಚು ಬಳಸುತ್ತಾರೆ. ಏಕೆಂದರೆ ಈ ಸಮುದಾಯದವರು ಅವರ ಸಾಂಸ್ಕೃತಿಕ ವೀರ ‘ಜುಂಜಪ್ಪ’ ಎಂದು ನಂಬಿದ್ದಾರೆ. ಈ ಕಾರಣದಿಂದಾಗಿ ‘ಜುಂಜಪ್ಪ’ ಎಂಬ ಪುರುಷವಾಚಕ ವ್ಯಕ್ತಿನಾಮವು ಈ ಸಮುದಾಯದಲ್ಲಿ ದೈವತ್ವವನ್ನು ಪಡೆದುಕೊಂಡಿದೆ. ಈ ಕಾರಣದಿಂದ **‘ಗೊಲ್ಲ’** ಸಮುದಾಯದ ಮೇಲೆ ಈ ದೈವದ ಪ್ರಭಾವವಾಗಿದ್ದು, ಪರಿಣಾಮ ಈ ಸಮುದಾಯದ ವ್ಯಕ್ತಿನಾಮಗಳ ಮೇಲಾಗಿರುವುದನ್ನು ಕಾಣಬಹುದಾಗಿದೆ. ಈ ಹೆಸರನ್ನು ಗೊಲ್ಲ ಸಮುದಾಯವರನ್ನು ಹೊರತುಪಡಿಸಿ ಇತರ ಸಮುದಾಯಗಳಾದ ಕುರುಬ ಮತ್ತು ಕುಂಚಿಟಿಗ ಸಮುದಾಯಗಳು ವಿರಳವಾಗಿ ಬಳಸುತ್ತಿದ್ದಾರೆ. ಇದಕ್ಕೆ ಕಾರಣವಾದ ಅಂಶಗಳನ್ನು ತಿಳಿಯುವ ಅಧ್ಯಯನ ನಡೆಯಬೇಕಿದೆ. ಈ ಹೆಸರನ್ನು ಪುರುಷವಾಚಿ ಮತ್ತು ಸ್ತ್ರೀವಾಚಿಗಳಾಗಿ ಬಳಕೆಯಾಗುತ್ತಿರುವುದನ್ನು ಕಾಣಲಾಗಿದೆ.

**ಉದಾ:–**

| **‘ಅ’ಪಟ್ಟಿ** | **‘ಬ’ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಜುಂಜಣ್ಣ | ಜುಂಜಮ್ಮ |
| ಜುಂಜಪ್ಪ | ಜುಂಜಕ್ಕ |
| ಜುಂಜಯ್ಯ | |

**ಕ್ಯಾತಪ್ಪ:**

ತುಮಕೂರು ಪರಿಸರ ಹಾಗೂ ಗಡಿಭಾಗವಾದ ಚಿತ್ರದುರ್ಗ ಪರಿಸರದಲ್ಲಿ ಹೆಚ್ಚಾಗಿ ಪ್ರಸಿದ್ಧಿ ಪಡೆದಿರುವ 'ಕ್ಯಾತಪ್ಪ' ಎಂಬ ಸಾಂಸ್ಕೃತಿಕ ವೀರ ದೈವತ್ವವನ್ನು ಪಡೆದು ದೇವರಾಗಿ ಆರಾಧಿಸಲ್ಪಡುತ್ತಿದ್ದಾನೆ. ಕ್ಯಾತಪ್ಪ ಎಂಬ ದೇವರು ಗೊಲ್ಲಸಮುದಾಯದ ದೇವರಾಗಿದ್ದಾನೆ. ಈ ದೇವರನ್ನು ಕುಂಚಿಟಿಗಳು, ಕುರುಬರು ಸಹ ತಮ್ಮ ಸಾಂಸ್ಕೃತಿಕ ವೀರನೆಂದು ಪೂಜಿಸುತ್ತಾ ಬಂದಿದ್ದಾರೆ. ಒಟ್ಟಾರೆಯಾಗಿ ಈ ದೈವತ್ವ ಪಡೆದಿರುವ 'ಕ್ಯಾತಪ್ಪ' ಎಂಬ ಹೆಸರಿನ ಪ್ರಭಾವವು ಈ ಪರಿಸರದ ಕೆಲವು ಸಮುದಾಯಗಳ ಮೇಲಾಗಿರುವುದನ್ನು ಗುರುತಿಸಲಾಗಿದೆ. ಈ ಹೆಸರು ಪುರುಷವಾಚಿ ಆಗಿದ್ದರೂ ಸ್ತ್ರೀವಾಚಿ ರೂಪದಲ್ಲಿ ಬಳಕೆಯಲ್ಲಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕ್ಯಾತಪ್ಪ | ಕ್ಯಾತಮ್ಮ |
| ಕ್ಯಾತಯ್ಯ | |
| ಕ್ಯಾತರಾಜು | |
| ಕ್ಯಾತರಾಯ | |
| ಕ್ಯಾತೇಶ್ | |

**ಚಿತ್ತಪ್ಪ:**

'ಚಿತ್ತಪ್ಪ' ಎಂಬುದು ಗೊಲ್ಲ ಸಮುದಾಯದ ಕುಲದೈವವಾಗಿದೆ. ಈ ದೇವರನ್ನು ಈ ಸಮುದಾಯವು ತಮ್ಮ ಸಮುದಾಯದ ಸಾಂಸ್ಕೃತಿಕ ವೀರನೆಂದು ಗುರ್ತಿಸಿಕೊಂಡಿದ್ದಾರೆ. ಚಿತ್ತಪ್ಪ ಎಂಬ ದೇವರ ಹೆಸರನ್ನು ಹಲವು ಬೇರೆ ಬೇರೆ ಹೆಸರುಗಳಿಂದ ಬಳಸುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಚಿತ್ತಪ್ಪ, ಚಿತ್ರಲಿಂಗ ಎಂಬುದಾಗಿ ಇಂದಿಗೂ ಬಳಕೆಯಲ್ಲಿರುವ ದೇವರಾಗಿದೆ. ಈ ಹೆಸರನ್ನು ಪುರುಷವಾಚಿ ಮತ್ತು ಸ್ತ್ರೀವಾಚಿಯಾಗಿ ಬಳಸುತ್ತಿದ್ದಾರೆ. ಈ ಹೆಸರು ಬಳಸುವವರು ಬಹುತೇಕ ಗೊಲ್ಲ ಸಮುದಾಯಕ್ಕೆ ಸೇರಿದವರೇ ಆಗಿರುತ್ತಾರೆ. ಇತರೆ ಸಮುದಾಯದವರಲ್ಲಿ ಈ ಹೆಸರು ತುಂಬಾ ವಿರಳ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಇತರೆ ಸಮುದಾಯಗಳಲ್ಲಿ ಈ ಹೆಸರಿನ ವ್ಯಕ್ತಿಗಳು ಕಂಡುಬಂದಿರುವುದಿಲ್ಲ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಚಿತ್ತಪ್ಪ | ಚಿತ್ತಮ್ಮ |
| ಚಿತ್ತಣ್ಣ | ಚಿತ್ರಲಿಂಗಮ್ಮ |

ಚಿತ್ತಯ್ಯ

ಚಿತ್ತೇಶ

ಚಿತ್ತರಾಜು

ಚಿತ್ರಲಿಂಗ

ಚಿತ್ರಲಿಂಗಯ್ಯ

ಚಿತ್ರಲಿಂಗಣ್ಣ

**ಚಿಕ್ಕಣ್ಣ:**

ತುಮಕೂರು ಪರಿಸರದಲ್ಲಿ ಚಿಕ್ಕಣ್ಣ ಎಂಬ ಹೆಸರಿನ ದೇವರು ಆರಾಧಿಸಲ್ಪಡುತ್ತಿದ್ದು, ಈ ದೇವರನ್ನು ಗೊಲ್ಲ ಸಮುದಾಯವು ಆರಾಧ್ಯ ದೈವವೆಂದು, ತಮ್ಮ ಸಾಂಸ್ಕೃತಿಕ ವೀರ ಪುರುಷನೆಂದು ಗುರುತಿಸಿಕೊಂಡಿದ್ದಾರೆ. ಚಿಕ್ಕಣ್ಣ ಎಂಬುವರು ಸಾಮಾನ್ಯ ವ್ಯಕ್ತಿಯಾಗಿದ್ದು ಕಾಲಾನಂತರದಲ್ಲಿ ದೈವತ್ವ ಪಡೆದಿರುವ ಸಾಧ್ಯತೆಯಿದೆ. ಈಗಾಗಿ ಈ ಹೆಸರಿನ ಪ್ರಭಾವ ಹಲವು ವ್ಯಕ್ತಿಗಳ ಮೇಲಾಗಿರುವುದನ್ನು ಕಾಣಬಹುದು. ಆದರೆ ಈ ಹೆಸರನ್ನು ತುಮಕೂರು ಪರಿಸರದಲ್ಲಿ ಬೇರೆ ಬೇರೆ ಸಮುದಾಯಗಳು ಬಳಸುತ್ತಾರೆ. ಅವರ ಹೆಸರು ನಿರ್ದೇಶನ ಮಾಡುವಲ್ಲಿ ಈ ದೇವರ ಪ್ರಭಾವವಿದೆ ಎಂದು ಹೇಳಲು ಆಧಾರಗಳಿಲ್ಲ. ಹಾಗಾಗಿ ಗೊಲ್ಲ ಸಮುದಾಯದಲ್ಲಿ ಮಾತ್ರ ಈ ದೇವರ ಪ್ರಭಾವದಿಂದ ಹೆಸರುಗಳನ್ನು ನಿರ್ದೇಶನ ಮಾಡುತ್ತಾರೆ ಎಂಬುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಈ ಹೆಸರನ್ನು ಪುರುಷವಾಚಿ ಹಾಗೂ ಸ್ತ್ರೀವಾಚಿಯಾಗಿಯೂ ಬಳಸುತ್ತಾರೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಚಿಕ್ಕಣ್ಣ | ಚಿಕ್ಕಮ್ಮ |
| ಚಿಕ್ಕಪ್ಪ | |
| ಚಿಕ್ಕಯ್ಯ | |
| ಚಿಕ್ಕಪ್ಪಯ್ಯ | |
| ಚಿಕ್ಕರಾಜು | |
| ಚಿಕ್ಕರಾಯ | |
| ಚಿಕ್ಕರಾಯಪ್ಪ | |

ಈ ಮೇಲಿನ ರೂಪಗಳ ಜೊತೆಗೆ ಗೊಲ್ಲ ಸಮುದಾಯವು ತುಮಕೂರು ಪರಿಸರದಲ್ಲಿ ತಮ್ಮ ಸಮುದಾಯದ ನಾಮನಿರ್ದೇಶನದಲ್ಲಿ ಇನ್ನೂ ಹಲವು ರೂಪಗಳಲ್ಲಿ ಬಳಕೆ ಮಾಡುತ್ತಿರುವುದನ್ನು ಗುರುತಿಸಲಾಗಿದೆ. ಈ ಎಲ್ಲಾ ಹೆಸರುಗಳು ಆ ಸಮುದಾಯದ ಸಾಂಸ್ಕೃತಿಕ ವೀರರೆಂದು ನಂಬಲಾಗಿದ್ದು ದೈವತ್ವವನ್ನು ಪಡೆದುಕೊಂಡಿವೆ. ಹಾಗಾಗಿ ಈ ಎಲ್ಲಾ ಹೆಸರುಗಳು ಆ ಸಮುದಾಯದ ವ್ಯಕ್ತಿನಾಮಗಳ

ಮೇಲೆ ಪ್ರಭಾವ ಬೀರಿವೆ. ಈ ಸ್ವರೂಪದ ವ್ಯಕ್ತಿನಾಮಗಳು ಈ ಸಮುದಾಯದಲ್ಲಿ ಮಾತ್ರ ಹೆಚ್ಚಾಗಿ ಕಾಣಬಹುದು. ಈ ಹೆಸರುಗಳನ್ನು ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ಬಳಸಲಾಗುತ್ತಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಎಳೆಯಪ್ಪ | ಎಳೆಯಮ್ಮ |
| ಜಡೆಯಪ್ಪ | ಜಡೆಯಮ್ಮ |
| ಸಿರಿಯಣ್ಣ | ಸಿರಿಯಮ್ಮ |
| ವೀರಗಾರ | ವೀರಮ್ಮ |
| ಕಾಟಯ್ಯ | ಕಾಟಮ್ಮ |
| ಹೀರಣ್ಣ | ಹೀರಮ್ಮ |
| ಹೀರಯ್ಯ | ಕಾಟಹೀರಮ್ಮ |
| ಕಾಟಹೀರಯ್ಯ | ಕಾಟಲಿಂಗಮ್ಮ |
| ಯತ್ತಪ್ಪ | ಪಾತಮ್ಮ |
| ಯತ್ತಣ್ಣ | ಪಾತಲಿಂಗಮ್ಮ |
| ಕಾಟಲಿಂಗಣ್ಣ | ಪಾತಕ್ಕ |
| ಕಾಟಲಿಂಗಯ್ಯ | ಕಾಟಮ್ಮ |
| ಪಾತಲಿಂಗಯ್ಯ | |
| ಪಾತಲಿಂಗ | |
| ಪಾತಣ್ಣ | |
| ಪಾತೇಶ | |
| ಕಾಟೇಶ | |
| ಜಡೆಯಣ್ಣ | |
| ಕಾಟಪ್ಪ | |

**ನಾಗಮ್ಮ:**

ತುಮಕೂರು ಪರಿಸರದ ಕೊರಟಗೆರೆ ಹತ್ತಿರ ವಡ್ಡಗೆರೆ ಗ್ರಾಮದಲ್ಲಿ ನೆಲೆಯೂರಿರುವ 'ನಾಗಮ್ಮ' ಎಂಬ ದೇವಿಯು ಹಲವಾರು ಸಮುದಾಯಗಳ ಕುಲದೈವವಾಗಿದೆ. ಹಾಗಾಗಿ ಈ ಪರಿಸರದ ಕೆಲವು ಸಮುದಾಯಗಳಲ್ಲಿ ಈ ದೇವತೆಯ ಹೆಸರು ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಈ ದೇವತೆಯು ಒಬ್ಬ ಮಹಾಸತಿಯಾಗಿದ್ದು ತನ್ನ ಸಮುದಾಯಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡಳು

ಎಂಬುದು ಅಲ್ಲಿನ ಸ್ಥಳೀಯ ಜನರ ನಂಬಿಕೆಯಾಗಿದೆ(ಹೆಚ್ಚಿನ ಮಾಹಿತಿಗಾಗಿ: ವಡ್ಡಗೆರೆ ನಾಗರಾಜಯ್ಯ.,(ಸಂ), ೨೦೧೦, ವಡ್ಡಗೆರೆ ನಾಗಮ್ಮ : ಮಹಾಸತಿ ಕಾವ್ಯ). ನಂತರ ಈ ಮಹಾಸತಿಯು ದೈವಿಸ್ವರೂಪ ಪಡೆದುಕೊಂಡು ತನ್ನ ರಕ್ತ ಸಂಬಂಧಿಗಳನ್ನು ಭಕ್ತರನ್ನಾಗಿ ಮಾಡಿಕೊಂಡಿದ್ದಾಳೆ ಎಂದು ನಂಬಲಾಗಿದೆ. ಅದಕ್ಕೆ ಪೂರಕವಾಗಿ ಕುಂಚಿಟಿಗ ಸಮುದಾಯದ ಬಸಲೆನವರು ಎಂಬ ಕುಲದ ಕುಲದೈವವಾಗಿದ್ದು, ಆ ಸಮುದಾಯಗಳಲ್ಲಿ ಇಂದಿಗೂ ಈ ದೇವತೆಯ ಹೆಸರನ್ನು ನಿರ್ದೇಶನ ಮಾಡುತ್ತಿರುವುದನ್ನು ಕಾಣಬಹುದು. ಈ ದೇವತೆಗೆ ವೀರನಾಗಮ್ಮ ಎಂತಲೂ ಕರೆಯಲಾಗುತ್ತದೆ. ಈ ದೇವಿಯ ಹೆಸರನ್ನು ಪುರುಷವಾಚಿಯಾಗಿಯೂ ಬಳಸಲಾಗುತ್ತಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನಾಗಪ್ಪ | ನಾಗಮ್ಮ |
| ನಾಗಯ್ಯ | ನಾಗಕ್ಕ |
| ನಾಗಣ್ಣ | ವೀರನಾಗಮ್ಮ |
| ನಾಗರಾಜು | ವೀರನಾಗಕ್ಕ |
| ನಾಗರಾಜಯ್ಯ | ವೀರಮ್ಮ |
| ವೀರನಾಗಪ್ಪ | |
| ವೀರನಾಗಯ್ಯ | |
| ವೀರನಾಗಣ್ಣ | |
| ವೀರಪ್ಪ | |

**ವೀರಕ್ಯಾತರಾಯ:**

ಇದು ಕೊರಟಗೆರೆ, ಪಾವಗಡ, ಮದುಗಿರಿ, ಶಿರಾ ಹಾಗೂ ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆ ಪರಿಸರದಲ್ಲಿ ಹೆಚ್ಚಾಗಿ ಆಚರಣೆಯಲ್ಲಿರುವ ದೇವರಾಗಿದೆ. ವೀರಕ್ಯಾತರಾಯ ಎಂಬುವನು ಕುಂಚಿಟಿಗ ಸಮುದಾಯದ ಒಂದು ಬೆಡಗಿನ ಸಾಂಸ್ಕೃತಿಕ ವೀರನೆಂದು ಗುರುತಿಸಲಾಗಿದೆ. ಇದಕ್ಕೆ ಪೂರಕವಾಗಿ ಗೊಲ್ಲ ಹಾಗೂ ಕುರುಬ ಸಮುದಾಯದ ಕೆಲವು ಉಪ ಪಂಗಡಗಳು ತಮ್ಮ ಸಮುದಾಯದ ಸಾಂಸ್ಕೃತಿಕ ವೀರನೆಂದು ಗುರ್ತಿಸಿಕೊಂಡಿದ್ದಾರೆ. ಒಟ್ಟಾರೆ ವೀರಕ್ಯಾತರಾಯ ಸಾಂಸ್ಕೃತಿಕ ವೀರನಾಗಿದ್ದು, ದೈವತ್ವವನ್ನು ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ. ಹಾಗಾಗಿ ಈ ಸಮುದಾಯಗಳ ಮೇಲೆ ಈ ದೇವರ ಪ್ರಭಾವವಿದೆ. ಪರಿಣಾಮವಾಗಿ ಈ ದೇವರ ಹೆಸರು ಈ ಎಲ್ಲಾ ಸಮುದಾಯಗಳ ಮೇಲಾಗಿರುವುದನ್ನು ಇಂದಿಗೂ ಗುರುತಿಸಬಹುದಾಗಿದೆ. ವಡ್ಡಗೆರೆ ನಾಗರಾಜಯ್ಯ ಎಂಬುವರು 'ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ' ಎಂಬ ಕೃತಿಯಲ್ಲಿ ವೀರಕ್ಯಾತರಾಯ ಕುಂಚಿಟಿಗರಲ್ಲಿ ಒಂದು

ಬೆಡಗಿನವರಾಗಿರುವ ಬಸಲೆನವರ ಕುಲದೈವವಾಗಿದ್ದಾನೆಂದು ಶಾಸನಗಳಲ್ಲಿ ಉಲ್ಲೇಖವಾಗಿದೆ ಎಂದಿದ್ದಾರೆ. ಈತ ಒಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದು ತನ್ನ ಸಮುದಾಯದ ರಕ್ಷಣೆಗಾಗಿ ಹೋರಾಡಿ ದುಡಿದ ವೀರನೆಂದು ಶಾಸನದಲ್ಲಿ ಉಲ್ಲೇಖಿಸಿದ್ದಾರೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ವೀರಕ್ಯಾತರಾಯ ಎಂಬ ಹೆಸರಿ ಪ್ರಭಾವ ಈ ಪರಿಸರದ ಸಮುದಾಯದ ವ್ಯಕ್ತಿನಾಮಗಳ ಮೇಲೆ ವ್ಯಾಪಕವಾಗಿ ಆಗಿರುವುದನ್ನು ಗುರುತಿಸಲಾಗಿದೆ. ಈ ಹೆಸರು ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ನಿರ್ದೇಶಿತವಾಗುತ್ತಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ವೀರಕ್ಯಾತರಾಯ | ವೀರಕ್ಯಾತಮ್ಮ |
| ವೀರಕ್ಯಾತಪ್ಪ | ಕ್ಯಾತಮ್ಮ |
| ಕ್ಯಾತಪ್ಪ | ವೀರಮ್ಮ |
| ಕ್ಯಾತಯ್ಯ | |
| ವೀರಯ್ಯ | |
| ಕ್ಯಾತಣ್ಣ | |
| ಕ್ಯಾತರಾಜು | |
| ವೀರಕ್ಯಾತಣ್ಣ | |

ಈ ಮೇಲಿನ ನಾಗಮ್ಮ ಮತ್ತು ವೀರಕ್ಯಾತರಾಯ ಎಂಬ ದೇವರುಗಳ ಜೊತೆಗೆ ಈ ಸಮುದಾಯಗಳಲ್ಲಿ 'ಮುದ್ದಮ್ಮ' ಎಂಬ ಮಹಾಸತಿಯ ಹೆಸರು ಈ ಪರಿಸರದ ವ್ಯಕ್ತಿನಾಮಗಳಲ್ಲಿ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಈ ಹೆಸರು ಪುರುಷವಾಚಿಯಾಗಿಯೂ ಬಳಕೆಯಾಗಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮುದ್ದಪ್ಪ | ಮುದ್ದಮ್ಮ |
| ಮುದ್ದಯ್ಯ | ಮುದ್ದಕ್ಕ |
| ಮುದ್ದಣ | |

**ನಂಜುಂಡೇಶ್ವರ:**

ನಂಜನಗೂಡಿನಲ್ಲಿರುವ ನಂಜುಂಡೇಶ್ವರನ ಪ್ರಭಾವ ನಾಡಿನ ಬಹುಭಾಗಗಳಲ್ಲಿ ಆಗಿದ್ದರೂ ತುಮಕೂರು ಪರಿಸರದ ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಬಳಕೆಯಾಗುತ್ತಿದೆ. ಈ ಪರಿಸರದಲ್ಲಿ ಈ ದೇವರನ್ನು ಆರಾಧಿಸುವ ಮನೆತನಗಳಿದ್ದು ಅವರುಗಳ ಮೇಲೆ 'ನಂಜುಂಡೇಶ್ವರ' ದೈವ ನಾಮದ

ಪ್ರಭಾವವಾಗಿರುವ ಸಾಧ್ಯತೆಯಿದೆ. ಗುಬ್ಬಿ, ಚಿಕ್ಕನಾಯಕನಹಳ್ಳಿ ಹಾಗೂ ತಿಪಟೂರು ಪರಿಸರದ ಹಲವು ಭಾಗಗಳಲ್ಲಿ ನಂಜುಂಡೇಶ್ವರ ದೇವಸ್ಥಾನಗಳಿದ್ದು ಅಲ್ಲಿನ ಸಮುದಾಯದ ಹೆಸರುಗಳ ಮೇಲೆ ಪ್ರಭಾವ ಬೀರಿವೆ. ಹಾಗಾಗಿ ಈ ದೈವನಾಮವು ಪುರುಷವಾಚಿಯಾಗಿದ್ದರೂ ಸ್ತ್ರೀವಾಚಕವಾಗಿಯೂ ಬಳಕೆಯಲ್ಲಿರುವುದನ್ನು ಕಾಣಲಾಗಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ನಂಜುಂಡಸ್ವಾಮಿ | ನಂಜಮ್ಮ |
| ನಂಜುಂಡಪ್ಪ | ನಂಜುಂಡಮ್ಮ |
| ನಂಜುಂಡೇಶ | |
| ನಂಜುಂಡಯ್ಯ | |

**ಭೈರಪ್ಪ:**

ಗುಬ್ಬಿ ಹಾಗೂ ಚಿಕ್ಕನಾಯಕನಹಳ್ಳಿ ಪರಿಸರದಲ್ಲಿ ಪ್ರಚಲಿತದಲ್ಲಿರುವ ಭೈರಪ್ಪ ಎಂಬ ದೇವರ ಹೆಸರು ಒಕ್ಕಲಿಗ, ಲಿಂಗಾಯಿತ ಮತ್ತು ಕುರುಬ ಸಮುದಾಯದ ವ್ಯಕ್ತಿನಾಮಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುದನ್ನು ಕಾಣಬಹುದು. ಈ ದೇವರ ವಿಶೇಷವೆಂದರೆ ನಾಗದೋಷವಿರುವವರು ಈ ದೇವರಿಗೆ ಹರಕೆ ಮಾಡಿಕೊಂಡು ಹರಕೆ ತೀರಿಸಿದರೆ ದೋಷ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಈಗಲೂ ಈ ಪರಿಸರದಲ್ಲಿದೆ. ಜೊತೆಗೆ ಕುಂಚಿಟಿಗ ಸಮುದಾಯದ 'ಜಾನಕಲ್ಲು' ಬೆಡಗಿನ ಕುಲದೈವವಾಗಿಯೂ ಬಳಕೆಯಲ್ಲಿದೆ. ಹಾಗಾಗಿ ಈ ದೇವರ ಹೆಸರು ಈ ಪರಿಸರದ ವ್ಯಕ್ತಿನಾಮಗಳಾಗಿ ಬಳಕೆಯಾಗುತ್ತಿದ್ದು ಪುರುಷವಾಚಿ ಮತ್ತು ಸ್ತ್ರೀವಾಚಿ ಎರಡು ರೂಪಗಳಲ್ಲಿಯೂ ನಿರ್ದೇಶಿಸಲ್ಪಟ್ಟಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಭೈರಪ್ಪ | ಭೈರಮ್ಮ |
| ಭೈರಣ್ಣ | ಭೈರಕ್ಕ |
| ಭೈರೇಶ | |
| ಭೈರಾಸ್ವಾಮಿ | |
| ಭೈರೇಗೌಡ | |

**ಬಸವಣ್ಣ:**

ಬಸವಣ್ಣ ಎಂಬ ಹೆಸರು ಕೇಳಿದ ತಕ್ಷಣ ಸಾಮಾನ್ಯವಾಗಿ ವಚನಕಾರ ಬಸವಣ್ಣನ ನೆನಪಾಗುತ್ತದೆ ಮತ್ತು ಈತನ ಹೆಸರು ಉತ್ತರ ಕರ್ನಾಟಕದ ಬಹುಭಾಗದಲ್ಲಿ ಪ್ರಭಾವ ಬೀರಿ ವ್ಯಕ್ತಿನಾಮಗಳಾಗಿ

ಬಳಕೆಗೊಳ್ಳುತ್ತಿದೆ. ಆದರೆ ತುಮಕೂರು ಪರಿಸರದಲ್ಲಿ 'ಬಸವಣ್ಣ' ಎಂಬ ವ್ಯಕ್ತಿನಾಮಗಳು ಬಳಕೆಯಲ್ಲಿದ್ದರೂ ಇದು ವಚನಕಾರ ಬಸವಣ್ಣನ ಪ್ರಭಾವದಿಂದ ಬಂದಿರುವುದಲ್ಲ. ಬದಲಾಗಿ ಬಸವಣ್ಣ ಎಂಬ ಪ್ರಾಣಿ ಸೂಚಕವಾಗಿ ಈ ಪರಿಸರದಲ್ಲಿ ಬಳಕೆಯಾಗುತ್ತಿದೆ. ಬಸವಣ್ಣನ ದೇವಸ್ಥಾನಗಳು ತುಮಕೂರು ಪರಿಸರದಲ್ಲಿ ಗ್ರಾಮಕ್ಕೊಂದರಂತೆ ನಿರ್ಮಾಣವಾಗಿರುವುದನ್ನು ಕಾಣಬಹುದು. ಹಾಗಾಗಿ ಪ್ರಾಣಿಸೂಚಕವಾದ ಬಸವಣ್ಣ ಎಂಬ ಹೆಸರಿನ ಪ್ರಭಾವ ಇಲ್ಲಿನ ಸಮುದಾಯದ ವ್ಯಕ್ತಿನಾಮಗಳ ಮೇಲೆ ಆಗಿದೆ. ಬಸವಣ್ಣ ಎಂಬ ಹೆಸರನ್ನು ಪುರುಷವಾಚಕವಾಗಿಯೂ ಮತ್ತು ಸ್ತ್ರೀವಾಚಕವಾಗಿಯೂ ಬಳಸಲಾಗುತ್ತಿದೆ.

ಉದಾ:

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬಸವಣ್ಣ | ಬಸಮ್ಮ |
| ಬಸವಯ್ಯ | ಬಸವಮ್ಮ |
| ಬಸಪ್ಪ | ಬಸವಕ್ಕ |
| ಬಸಣ್ಣ | ದೊಡ್ಡಬಸಮ್ಮ |
| ಬಸವರಾಜು | ಸಣ್ಣಬಸಮ್ಮ |
| ಬಸವಪ್ಪ | ಗೋಣಿಬಸಮ್ಮ |
| ದೊಡ್ಡ ಬಸಪ್ಪ | |
| ಸಣ್ಣ ಬಸಪ್ಪ | |
| ಗೋಣಿ ಬಸಪ್ಪ | |

**ಸಿದ್ದರಾಮೇಶ್ವರ:**

ತುಮಕೂರು ಪರಿಸರದ ಚಿ.ನಾ ಹಳ್ಳಿ, ತಿಪಟೂರು, ತುಮಕೂರು, ಗುಬ್ಬಿ ಪರಿಸರದಲ್ಲಿ ಈ ದೇವರು ಹೆಚ್ಚು ಪ್ರಸಿದ್ಧಿ ಪಡೆದುಕೊಂಡಿದೆ. ಕುರುಬ ಮತ್ತು ಲಿಂಗಾಯಿತ ಸಮುದಾಯಗಳಲ್ಲಿ ಹೆಚ್ಚಾಗಿ ಈ ದೇವರನ್ನು ಆರಾಧಿಸುತ್ತಿದ್ದು ಕೆಲವರ ಕುಲದೈವವಾಗಿಯೂ ಆರಾಧನೆಯಲ್ಲಿದೆ. ಹಾಗೂ ಕೆಲವು ಸಮುದಾಯಗಳಲ್ಲಿ ಇಷ್ಟದೈವವಾಗಿಯೂ ಆರಾಧನೆಗೊಳ್ಳುತ್ತಿದೆ. ಈ ದೇವರ ಹೆಸರು ಇತರೆ ಸಮುದಾಯುಗಳ ಮೇಲಾಗಿರುವುದನ್ನು ಗುರುತಿಸಬಹುದಾಗಿದೆ. ಈ ಹೆಸರು ಈ ಎಲ್ಲಾ ಸಮುದಾಯಗಳಲ್ಲಿ ಪುರುಷವಾಚಕವಾಗಿ ಮಾತ್ರ ಬಳಕೆಯಲ್ಲಿದ್ದು, ಸ್ತ್ರೀವಾಚಕವಾಗಿ ಬಳಕೆಯಾಗಿರುವುದು ತುಂಬಾ ಕಡಿಮೆ. ಮುಂದಿನ ದಿನಗಳಲ್ಲಿ ಬಳಕೆಯಾಗಲೂಬಹುದು. ಜೊತೆಗೆ ಇದೇ ದೇವರು ರೇವಣ್ಣಸಿದ್ದೇಶ್ವರ ಎಂದು ಕುಣಿಗಲ್ ಪರಿಸರದಲ್ಲಿ ಹೆಚ್ಚು ಬಳಕೆಯಲ್ಲಿದ್ದು ಅದರ ಹೆಸರು ವ್ಯಕ್ತಿನಾಮಗಳಾಗಿರುವುದನ್ನು ಕಾಣಬಹುದು.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಿದ್ದರಾಮ | ರೇವಮ್ಮ |
| ಸಿದ್ದರಾಮಯ್ಯ | ರೇವಣ್ಣಸಿದ್ದಮ್ಮ |
| ಸಿದ್ದರಾಮೇಶ | ಸಿದ್ದಮ್ಮ |
| ಸಿದ್ದೇಶ | |
| ರಾಮೇಶ | |
| ಸಿದ್ದಯ್ಯ | |
| ರಾಮಯ್ಯ | |
| ರೇವಣಸಿದ್ದಪ್ಪ | |
| ರೇವಣ್ಣ | |
| ರೇವಣ್ಣಸಿದ್ದ | |
| ಸಿದ್ದಪ್ಪ | |
| ಸಿದ್ದಯ್ಯ | |
| ರೇವಣ್ಣ ಸಿದ್ದೇಶ | |
| ರೇವಣಯ್ಯ | |

**ಬೀರಲಿಂಗೇಶ್ವರ:**

ಚಿ.ನಾ.ಹಳ್ಳಿ ಹಾಗೂ ಗುಬ್ಬಿ ಪರಿಸರದಲ್ಲಿ ಹೆಚ್ಚಾಗಿ ಪ್ರಸಿದ್ಧಿ ಪಡೆದಿರುವ ಈ ದೇವರು ಗೊಲ್ಲ, ಕುರುಬ ಮತ್ತು ಒಕ್ಕಲಿಗ ಸಮುದಾಯದಲ್ಲಿ ಹೆಚ್ಚು ಆರಾಧಿಸಲ್ಪಡುತ್ತಿದೆ. ಈ ಸಮುದಾಯದ ಕುಲದೈವವಾಗಿಯೂ ಬೀರಲಿಂಗೇಶ್ವ ಆರಾಧಿಸಲ್ಪಟ್ಟಿದೆ. ಹಾಗಾಗಿ ಈ ಸಮುದಾಯದಲ್ಲಿನ ಹೆಸರುಗಳ ಮೇಲೆ ಈ ದೇವರ ಹೆಸರಿನ ಪ್ರಭಾವವಾಗಿರುವುದನ್ನು ಇಂದಿಗೂ ಕಾಣಬಹುದಾಗಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬೀರಲಿಂಗೇಶ | ಬೀರಮ್ಮ |
| ಬೀರಲಿಂಗಯ್ಯ | ಲಿಂಗಮ್ಮ |
| ಬೀರಯ್ಯ | ಬೀರಲಿಂಗಮ್ಮ |
| ಬೀರಪ್ಪ | |

ಬೀರಲಿಂಗಪ್ಪ

ಬೀರಣ್ಣ

ಲಿಂಗಪ್ಪ

ಲಿಂಗಯ್ಯ

ಲಿಂಗೇಶ

ಲಿಂಗಣ್ಣ

ಲಿಂಗರಾಜು

**ಜಲ್ದಪ್ಪ:**

ಗುಬ್ಬಿ ಹಾಗೂ ಶಿರಾ ತಾಲ್ಲೂಕು ಮತ್ತು ಚಿತ್ರದುರ್ಗ ಪರಿಸರದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದು ಕುಂಚಿಟಿಗ, ಗೊಲ್ಲ ಸಮುದಾಯದ ಕುಲದೈವವಾಗಿ ಆರಾಧಿಸಲ್ಪಡುತ್ತಿದೆ. 'ಜಲ್ದಪ್ಪ' ಎಂಬ ದೇವರು ಆರಂಭದಲ್ಲಿ ಈ ಸಮುದಯದ ಸಾಂಸ್ಕೃತಿಕ ವೀರನಾಗಿದ್ದು ನಂತರ ದೈವತ್ವಕ್ಕೇರಿದ ವ್ಯಕ್ತಿಯಾಗಿದ್ದಾನೆಂದು ಹೇಳಲಾಗುತ್ತಿದೆ. ಹಾಗಾಗಿ ಈ ದೈವದ ಪ್ರಭಾವ ಈ ಸಮುದಾಯದ ವ್ಯಕ್ತಿನಾಮಗಳ ಮೇಲಾಗಿರುವುದನ್ನು ಮತ್ತು ಬಳಕೆಯಲ್ಲಿರುವುದನ್ನು ಗುರುತಿಸಲಾಗಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಜಲ್ದಪ್ಪ | ಜಲ್ದಮ್ಮ |
| ಜಲ್ದಯ್ಯ | ಜಲ್ದಕ್ಕ |
| ಜಲ್ದಣ್ಣ | |
| ಜಲ್ದೇಶ್ | |
| ಜಲ್ದೇಗೌಡ | |
| ಜಲ್ದರಾಜ | |

**ಸಿದ್ದಪ್ಪ:**

ಗುಬ್ಬಿ ಮತ್ತು ಶಿರಾ ಪರಿಸರದಲ್ಲಿ ಆರಾಧಿಸಲ್ಪಡುತ್ತಿರುವ ಈ ದೈವದ ಪ್ರಭಾವವು ಕೆಲವು ಸಮುದಾಯಗಳ ಮೇಲಾಗಿದ್ದು ಒಕ್ಕಲಿಗ, ಕುರುಬ ಹಾಗೂ ಇನ್ನು ಕೆಲವು ಸಮುದಾಯಗಳು ಈ ದೇವರನ್ನು ಕುಲದೈವವಾಗಿ ಆರಾಧಿಸುತ್ತಿದ್ದಾರೆ. ಚಿತ್ರದುರ್ಗ ಪರಿಸರದ ಹಿರಿಯೂರು, ಚಳ್ಳಕೆರೆ ಪರಿಸರದಲ್ಲಿಯೂ 'ಸಿದ್ದಪ್ಪ' ದೇವರನ್ನು ಆರಾಧಿಸುವ ಸಮುದಾಯಗಳಿರುವುದನ್ನು ಕಾಣಬಹುದು. ಹಾಗಾಗಿ ಈ ಎಲ್ಲಾ ಸಮುದಾಯಗಳ ಮೇಲೆ 'ಸಿದ್ದಪ್ಪ' ದೈವನಾಮವು ಪ್ರಭಾವ ಬೀರಿದ್ದು ಈ ಪರಿಸರದಲ್ಲಿನ ವ್ಯಕ್ತಿನಾಮಗಳಲ್ಲಿ ಅವನ್ನು ಗುರುತಿಸಬಹುದಾಗಿದೆ.

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸಿದ್ದಪ್ಪ | ಸಿದ್ದಮ್ಮ |
| ಸಿದ್ದೇಶ | ಸಿದ್ದಕ್ಕ |
| ಸಿದ್ದಯ್ಯ | |
| ಸಿದ್ದಣ್ಣ | |
| ಸಿದ್ದರಾಜು | |

**ಗುಬ್ಬಿಯಪ್ಪ:**

ಈ ಹೆಸರು ಸ್ಥಳವಾಚಿಯಾಗಿಯೂ, ಪಕ್ಷಿವಾಚಿಯಾಗಿಯೂ ಇರುವುದನ್ನು ಕಾಣಬಹುದು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕೇಂದ್ರದಲ್ಲಿ ಗುಬ್ಬಿಯಪ್ಪ ಎಂಬ ದೇವಸ್ಥಾನ ಇರುವುದನ್ನು ಕಾಣುತ್ತೇವೆ. ಇಲ್ಲಿ ಚನ್ನಬಸವೇಶ್ವರವೆಂಬ ದೇವಾಲಯವಿದ್ದರೂ ಕೂಡ ಅದಕ್ಕೆ ಗುಬ್ಬಿಯಪ್ಪ ಎಂಬ ಮತ್ತೊಂದು ಹೆಸರಿನಿಂದ ಕರೆಯಲಾಗುತ್ತಿದೆ. ಈ ಸ್ಥಳಕ್ಕೆ ಗುಬ್ಬಿ ಎಂದು ಬರಲು ಪುರಾಣ ಕಥೆಯೊಂದು ಇದೆ. ಈ ಪ್ರದೇಶದಲ್ಲಿ ಸಾಧುಗಳ ಆಶ್ರಮವೊಂದು ಇದ್ದು ಅಲ್ಲಿ ಎರಡು ಗುಬ್ಬಿ (ಪಕ್ಷಿಗಳು)ಗಳಿಗೆ ಆಶ್ರಯವನ್ನು ನೀಡಲಾಗಿತ್ತು. ಅವುಗಳು ಅಕಾಲಿಕ ಮರಣ ಹೊಂದಿದ್ದರಿಂದ ಅಲ್ಲಿನ ಸಾಧುಗಳು ಆ ಗುಬ್ಬಿಗಳ ಅಂತ್ಯ ಕ್ರಿಯೆಯನ್ನು ಇದೇ ಆಶ್ರಮದಲ್ಲಿ ಮಾಡಿದರಂತೆ, ಅಂದಿನಿಂದ ಆ ಸ್ಥಳಕ್ಕೆ ಗುಬ್ಬಿ ಎಂದು ನಾಮನಿರ್ದೇಶನ ಮಾಡಲಾಯಿತಂತೆ. ಈ ಸ್ಥಳದಲ್ಲಿಯೇ ಚನ್ನಬಸವೇಶ್ವರನ ದೇವಾಲಯವು ಇಂದಿಗೂ ಇದೆ. ಹಾಗಾಗಿ ದೇವರ ಆರಾಧಕರ ಮೇಲೆ ಪ್ರಭಾವ ಬೀರಿರುವುದನ್ನು ಅವರ ವ್ಯಕ್ತಿನಾಮಗಳ ಬಳಕೆಯಲ್ಲಿ ಕಾಣಬಹುದು.

ಉದಾ:

| 'ಅ'ಪಟ್ಟಿ | 'ಬ'ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗುಬ್ಬಿಯಪ್ಪ | ಗುಬ್ಬಿಯಮ್ಮ |
| ಗುಬ್ಬಿಯಣ್ಣ | ಗುಬ್ಬಮ್ಮ |
| ಗುಬ್ಬಪ್ಪ | |
| ಗುಬ್ಬಣ್ಣ | |

**ಚನ್ನಬಸವೇಶ್ವರ:**

ಈ ಮೇಲೆ ಹೇಳಿದಂತೆ 'ಗುಬ್ಬಿ' ಪಟ್ಟಣದಲ್ಲಿ ಗುಬ್ಬಿಯಪ್ಪನ ಮತ್ತೊಂದು ಹೆಸರಿನಲ್ಲಿ ಚನ್ನಬಸವೇಶ್ವರ ದೇವಾಲಯವಿದೆ. ಈ ದೈವದ ಆರಾಧಕರು ವಿಶೇಷವಾಗಿ ಲಿಂಗಾಯಿತ ಸಮುದಾಯಕ್ಕೆ

ಸೇರಿದವರಾಗಿರುತ್ತಾರೆ. ಜೊತೆಗೆ ಇತರೆ ಸಮುದಾಯದವರು ಇಷ್ಟ ದೈವವಾಗಿ ಆರಾಧಿಸುತ್ತಿದ್ದು ಇದರ ಹೆಸರು ವ್ಯಕ್ತಿನಾಮಗಳ ಮೇಲಾಗಿರುವುದನ್ನು ಗುರುತಿಸಬಹುದು.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಚನ್ನಬಸಪ್ಪ | ಚನ್ನಬಸಮ್ಮ |
| ಚನ್ನಬಸಯ್ಯ | ಚನ್ನಮ್ಮ |
| ಚನ್ನಬಸವ | ಬಸಮ್ಮ |
| ಚನ್ನಬಸವಯ್ಯ | |

**ರಂಗಧಾಮ:**

ಶಿರಾ ತಾಲ್ಲೂಕಿನ ಯಾದಲಡಕು ಗ್ರಾಮದಲ್ಲಿರುವ ಈ ದೇವರು ಈ ಪರಿಸರದ ಕುಂಚಿಟಿಗ, ಗೊಲ್ಲ ಸಮುದಾಯದವರ ಕುಲದೈವವಾಗಿದ್ದು ಇದರ ಪ್ರಭಾವವು ಈ ಸಮುದಾಯದ ಹೆಸರುಗಳ ಮೇಲಾಗಿರುವುದನ್ನು ಗಮನಿಸಬಹುದಾಗಿದೆ. ಜೊತೆಗೆ ಇಲ್ಲಿನ ಪರಿಸರದ ಇತರ ಸಮುದಾಯಗಳ ಇಷ್ಟದೈವವಾಗಿಯೂ ಆರಾಧಿಸಲ್ಪಡುತ್ತಿದ್ದು ಈ ಸಮುದಾಯದ ಹೆಸರುಗಳ ನಿರ್ದೇಶನದಲ್ಲಿ ಈ ದೇವರ ಹೆಸರು ಪ್ರಭಾವ ಬೀರಿದೆ. ಇದು ಸ್ತ್ರೀ–ಪುರುಷವಾಚಿಯಾಗಿ ಬಳಕೆಯಲ್ಲಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಂಗಧಾಮ | ರಂಗಧಾಮಕ್ಕ |
| ರಂಗಧಾಮಣ್ಣ | ಧ್ಯಾಮಕ್ಕ |
| ರಂಗಧಾಮಯ್ಯ | ಧ್ಯಾಮಮ್ಮ |
| ರಂಗಧಾಮಪ್ಪ | ರಂಗಮ್ಮ |

**ಮಲ್ಲಪ್ಪ:**

ತುಮಕೂರು ಪರಿಸರದ ಹಾವಿನಾಳು ಗ್ರಾಮದಲ್ಲಿರುವ ಮಲ್ಲಪ್ಪ ದೇವರು ಕುಂಚಿಟಿಗ ಸಮುದಾಯದ ಎಮ್ಮೆನವರು ಎಂಬ ಬೆಡಗಿನ ಮೂಲ ಪುರುಷನೆಂದು ನಂಬಲಾಗಿದೆ. ಹಾಗಾಗಿ ಈತನನ್ನು ತನ್ನ ಸಮುದಾಯದ ಸಾಂಸ್ಕೃತಿಕ ವೀರನೆಂದು ಗುರ್ತಿಸಿಕೊಂಡು ಇವನಿಗೆ ದೈವದ ಸ್ಥಾನವನ್ನು ಕಲ್ಪಿಸಿ ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ. ಇಂದಿಗೂ ಈ ದೇವರ ಪ್ರಭಾವ ಈ ಸಮುದಾಯದ ಮೇಲಾಗಿರುವುದನ್ನು ಗುರುತಿಸಲಾಗಿದೆ. ಹಾಗಾಗಿ ಈ ಸಮುದಾಯದ ವ್ಯಕ್ತಿನಾಮಗಳಲ್ಲಿ ಈ ದೇವರ ಹೆಸರು ನಿರ್ದೇಶನಗೊಂಡಿರುವುದನ್ನು ಕಾಣಬಹುದು.

ಉದಾ:

| | |
|---|---|
| **'ಅ'ಪಟ್ಟಿ** | **'ಬ'ಪಟ್ಟಿ** |
| **ಪುರುಷವಾಚಿ** | **ಸ್ತ್ರೀವಾಚಿ** |
| ಮಲ್ಲಯ್ಯ | ಮಲ್ಲಕ್ಕ |
| ಮಲ್ಲಪ್ಪ | ಮಲ್ಲಮ್ಮ |
| ಮಲ್ಲಣ್ಣ | |
| ಮಲ್ಲೇಶ | |

**೪.೩. ವ್ಯಕ್ತಿನಾಮಗಳ ಸಾಮಾಜಿಕ ನೆಲೆಗಳು**

ಹೆಸರಿಗೂ ಮತ್ತು ಸಮಾಜಕ್ಕೂ ಪರಸ್ಪರ ಸಂಬಂಧವಿದೆ. ಅದೇ ರೀತಿ ಮತ್ತು ಸಮಾಜದಲ್ಲಿ ಜೀವಿಸುವ ಸಮುದಾಯದ ಜಾತಿ, ವೃತ್ತಿ, ಸಂಸ್ಕೃತಿ, ಆರ್ಥಿಕತೆ, ಧರ್ಮ, ಲಿಂಗ ಮುಂತಾದವುಗಳಿಗೂ ಪರಸ್ಪರ ಸಂಬಂಧವಿದೆ. ಈ ಹೇಳಿಕೆಗೆ ಪೂರಕವಾಗಿ ಒಂದು ಪದ್ಯವನ್ನು ನೋಡಬಹುದು.

ಅಯ್ಯನಾರ ಹುಡುಗ
'ಬಸಯ್ಯ' ಅಂತ
ಗೌಡರ ಹುಡುಗ
'ಬಸವನಗೌಡ' ಅಂತ
ಬಣಜಗೇರು (ಉಳಿದ ಲಿಂಗಾಯಿತ) ಹುಡುಗ
'ಬಸವರಾಜ' ಅಂತ
ಆ ಕುರುಬರ ಹುಡುಗ
ಬಸಪ್ಪ ಅಂತ
ನಾ 'ಬಸ್ಯ' ಅಂತ
ಯಾಕಂದ್ರ ನಾ ಹೊಲ್ಯಾ ಅಂತ (ಮೂಲ: ಸಿದ್ಧನಗೌಡಪಾಟೀಲ, ನಾ ಬಸ್ಯಾ ಅಂತ, ೧೯೮೩, ಪು.೨೩, ಉಲ್ಲೇಖ:ಕಲಬುರ್ಗಿ ಎಂ.ಎಂ., ೨೦೧೦, ಕನ್ನಡ ನಾಮ ವಿಜ್ಞಾನ, ಪು.೨೩).

ಈ ಮೇಲಿನ ಪದ್ಯವನ್ನು ಗಮನಿಸಿ ಹೇಳುವುದಾದರೆ ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ವ್ಯಕ್ತಿನಾಮಗಳು ಸಹಾಯಕವಾಗುತ್ತವೆ. ಹಾಗಾಗಿ ಹೆಸರುಗಳು ವ್ಯಕ್ತಿ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತವೆ. ವ್ಯಕ್ತಿನಾಮಗಳು ಸಂಪ್ರದಾಯಬದ್ಧವಾಗಿದ್ದು ವಂಶಪಾರಂಪರ್ಯವಾಗಿ ಬಳಕೆಯಲ್ಲಿರುತ್ತವೆ. ವ್ಯಕ್ತಿನಾಮಗಳು ಸಮುದಾಯದ ನಂಬಿಕೆಯ ಭಾಗವಾಗಿಯೂ ಬಳಕೆಯಲ್ಲಿವೆ.

ವ್ಯಕ್ತಿನಾಮಗಳು ಸಮುದಾಯದ ಪ್ರತಿನಿಧಿಗಳೆಂದು ತಿಳಿದುಬರುತ್ತವೆ. ಏಕೆಂದರೆ ಸಮುದಾಯದಲ್ಲಿ ಬ್ರಾಹ್ಮಣ, ಲಿಂಗಾಯಿತ, ಕುರುಬ, ನಾಯಕ, ಗೌಡ, ಗೊಲ್ಲ, ಮಾದಿಗ, ತಿಗುಳ, ಕುಂಬಾರ ಹೀಗೆ

ಮುಂತಾದ ಜಾತಿಗಳು ನಿರ್ದೇಶಿಸಿಕೊಳ್ಳುವ ಹೆಸರುಗಳೇ ಆ ಹೆಸರಿಗೆ ಕಾರಣವಾಗುತ್ತವೆ. ಹೆಸರುಗಳೊಂದಿಗೆ ಬರುವ ವಾರ್ಗಿಕಗಳು, ಅವುಗಳ ರಚನೆ, ಕಾಲಾಂತರದಲ್ಲಿ ಬದಲಾವಣೆ ಹೊಂದಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿವೆ. ಈ ಸಮುದಾಯಗಳು ನಿರ್ವಹಿಸಿದ ವೃತ್ತಿಗಳೆ ಮುಂದೆ ಜಾತಿಗಳಾಗಿ ಮಾರ್ಪಾಡಾಗಿವೆ. ಈ ಎಲ್ಲಾ ಸಂಗತಿಗಳು ಸಮುದಾಯದ ಪ್ರಾಚೀನ ಸಾಮಾಜಿಕ ಸಂಸ್ಕೃತಿಯೊಂದರ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿವೆ.

"ಸಮಾಜ ಜೀವಿಗಳಾದ ಮನುಷ್ಯರ ಪ್ರತ್ಯೇಕ ಅಸ್ತಿತ್ವದ ಗುರುತಿಸುವಿಕೆಗೆ ಇರುವ ಭಾಷಿಕ ಘಟಕಗಳು ಎಂದರೆ ವ್ಯಕ್ತಿನಾಮಗಳು"(ನಾರಾಯಣ ಕೆ.ವಿ., (ಸಂ)೨೦೦೦, ವ್ಯಕ್ತಿನಾಮಗಳು:ಸ್ವರೂಪ ಮತ್ತು ವಿಶ್ಲೇಷಣೆ, ಪು.೪೧) ಎನ್ನುವಷ್ಟರ ಮಟ್ಟಿಗೆ ವ್ಯಕ್ತಿನಾಮಗಳು ಸಾಮಾಜಿಕವಾಗಿ ಬೆಸೆದುಕೊಂಡಿವೆ. ವ್ಯಕ್ತಿ ಮತ್ತು ಸಮಾಜದ ನಡುವೆ ಸಂಪರ್ಕದ ಸೇತುವೆಯಾಗಿ ವ್ಯಕ್ತಿನಾಮಗಳು ಕಾರ್ಯನಿರ್ವಹಿಸುತ್ತವೆ. ಇಷ್ಟೊಂದು ಮಹತ್ವ ಹೊಂದಿರುವ ವ್ಯಕ್ತಿನಾಮಗಳ ನಿರ್ದೇಶಿಸುವಿಕೆಯ ಹಿಂದೆ ವ್ಯಕ್ತಿಯ ಜನಾಂಗದ ಭಾಷೆ, ಸಂಸ್ಕೃತಿ, ಧರ್ಮ, ನಂಬಿಕೆ, ವೃತ್ತಿ, ಜಾತಿ ಮುಂತಾದ ಅಂಶಗಳು ಪ್ರಭಾವ ಬೀರಿವೆ. ಸಮಾಜದಲ್ಲಿ ಧರ್ಮ, ಜಾತಿ, ವೃತ್ತಿ, ಆರ್ಥಿಕ ಸ್ಥಿತಿ, ಸಾಮಾಜಿಕ ಅಂತಸ್ತು, ಅಕ್ಷರಸ್ಥ, ಅನಕ್ಷರಸ್ಥ, ಗ್ರಾಮೀಣ, ನಗರ ಮುಂತಾದ ಅಂಶಗಳು ವ್ಯಕ್ತಿನಾಮಗಳ ಸ್ವರೂಪದ ಮೇಲೆ ಪ್ರಭಾವ ಬೀರುವ ಸಾಮಾಜಿಕ ಅಂಶಗಳಾಗಿವೆ. ಈ ಎಲ್ಲಾ ಅಂಶಗಳ ಜೊತೆಗೆ "ಬದಲಾಗುತ್ತಿರುವ ಮಾಧ್ಯಮಗಳು ಮತ್ತು ಅನ್ಯ ಭಾಷಾ ಸಂಸ್ಕೃತಿಗಳ ಪ್ರಭಾವ ವ್ಯಕ್ತಿನಾಮಗಳ ಮೇಲೂ ಕಾಣಿಸುತ್ತಿವೆ" (ನಾರಾಯಣ ಕೆ.ವಿ.,(ಸಂ)೨೦೦೦, ವ್ಯಕ್ತಿನಾಮಗಳು:ಸ್ವರೂಪ ಮತ್ತು ವಿಶ್ಲೇಷಣೆ, ಪು.೪೮) ಎಂಬುದನ್ನು ಒಪ್ಪಲೇಬೇಕು.

ಈ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳ ಸ್ವರೂಪ ಸಾಮಾಜಿಕ ನೆಲೆಗಳಲ್ಲಿ ಹೇಗಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಈ ಸಂದರ್ಭದಲ್ಲಿ ಮಾಡಲಾಗಿದೆ. ಹಾಗಾಗಿ ಸಾಮಾಜಿಕ ಸ್ವರೂಪವನ್ನು ತಿಳಿಯಬೇಕೆಂದರೆ ವ್ಯಕ್ತಿನಾಮಗಳನ್ನು ಸಮುದಾಯದ ವಿವಿಧ ಜಾತಿ, ವೃತ್ತಿ, ವರ್ಗ, ಗ್ರಾಮೀಣ, ನಗರ, ಅಕ್ಷರಸ್ಥ, ಅನಕ್ಷರಸ್ಥ ಇತ್ಯಾದಿ ವಿಭಾಗಗಳಾಗಿ ವರ್ಗೀಕರಣ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಈ ವಿಭಾಗಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದಾಗಿದೆ.

### ೪.೩.೧. ವೃತ್ತಿವಾಚಿ ವ್ಯಕ್ತಿನಾಮಗಳು

ಸಾಮಾಜಿಕವಾಗಿ ವ್ಯಕ್ತಿನಾಮಗಳು ಒಂದು ಸಮುದಾಯದ, ಜನಾಂಗದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿರುತ್ತವೆ ಎಂಬ ಅಂಶವನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ವ್ಯಕ್ತಿನಾಮಗಳ ಸಾಮಾಜಿಕ ಆಯಾಮಗಳನ್ನು ತಿಳಿಯಬೇಕೆಂದರೆ ನಮಗೆ ಕಾಣುವ ಪ್ರಮುಖ ವಿಚಾರವೆಂದರೆ ವ್ಯಕ್ತಿಯ ಜಾತಿ ಮತ್ತು ಆತನ ವೃತ್ತಿ. ಹಿಂದೆ ವ್ಯಕ್ತಿಯು ಮಾಡುವ ವೃತ್ತಿಯಿಂದ ಅವರನ್ನು ವೃತ್ತಿವಾಚಿ ಹೆಸರುಗಳಿಂದ ಗುರುತಿಸಲಾಗುತ್ತಿತ್ತು. ಆದರೆ ಅದು ಬಳಕೆಯ ನೆಲೆಯಲ್ಲಿದ್ದು ಒಬ್ಬರಿಂದ ಇನ್ನೊಬ್ಬರನ್ನು ಬೇರ್ಪಡಿಸಿ ಗುರುತಿಸುವ ಸಂದರ್ಭದಲ್ಲಿ ಆತ ಯಾರು ಎನ್ನುವ ಸಮಸ್ಯೆ ಎದುರಾದಾಗ ಆತ ನಿರ್ವಹಿಸುತ್ತಿದ್ದ ವೃತ್ತಿಯಿಂದ ಗುರುತಿಸಲಾಗುತ್ತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ವ್ಯಕ್ತಿಯು ತಾನು ಮಾಡುವ

ವೃತ್ತಿಯನ್ನು ತಾನೇ ತನ್ನ ಹೆಸರಿನ ಮುಂದೆ ಸೇರಿಸಿಕೊಳ್ಳುತ್ತಾನೆ. ಇಲ್ಲವೆ ತನ್ನ ಮಕ್ಕಳಿಗೆ ನಿರ್ದೇಶಿಸುತ್ತಾನೆ. ಮುಂದುವರೆದು ಒಂದು ಕುಟುಂಬದಲ್ಲಿ ಯಾರೋ ಒಬ್ಬ ವ್ಯಕ್ತಿ ಯಾವುದೋ ಒಂದು ವೃತ್ತಿ ಮಾಡುತ್ತಿದ್ದು ಅದರಿಂದ ಆ ವ್ಯಕ್ತಿ ಪ್ರಸಿದ್ಧಿ ಪಡೆದಿದ್ದರೆ ಆತನ ಕುಟುಂಬದವರೆಲ್ಲರೂ ಆ ವೃತ್ತಿವಾಚಿ ಹೆಸರನ್ನು ತಮ್ಮ ಹೆಸರಿನೊಂದಿಗೆ ನಿರ್ದೇಶಿಸಿಕೊಳ್ಳುತ್ತಾರೆ. ಆಗಾಗಿ ತುಮಕೂರು ಪರಿಸರದ ಸಾಮಾಜಿಕ ವ್ಯವಸ್ಥೆಯಲ್ಲಿ ವೃತ್ತಿವಾಚಿ ವ್ಯಕ್ತಿನಾಮಗಳು ಕಂಡುಬರುತ್ತಿವೆ. ಇದಕ್ಕೆ ಪೂರಕವಾದ ಒಂದು ವಚನ ನೋಡುವುದಾದರೆ.

**ಉದಾ:**

"ಕಾಸಿ ಕಮ್ಮಾರನಾದ
ಬೀಸಿ ಮಡಿವಾಳನಾದ
ಹಾಸನಿಕ್ಕೆ ಸಾಲಿಗನಾದ
ವೇದವನೋದಿ ಹಾರುವನಾದ
ಕರ್ಣದೊಳು ಜನಿಸಿದವರುಂಟೆ"(ನಾರಾಯಣ ಕೆ.ವಿ., (ಸಂ)೨೦೦೦, ವ್ಯಕ್ತಿನಾಮಗಳು:ಸ್ವರೂಪ ಮತ್ತು ವಿಶ್ಲೇಷಣೆ, ಪು.೨೯)

**ಆಚಾರಿ**

'ಆಚಾರಿ' ಎಂಬುದು ವಿಶ್ವಕರ್ಮ ಜನಾಂಗದ ಒಂದು ವೃತ್ತಿಯಾಗಿದ್ದು ಈ ಪರಿಸರದಲ್ಲಿ ಇವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರು ಆಭರಣ ತಯಾರಿ ಮಾಡುವುದು, ಶಿಲ್ಪ ಕೆತ್ತನೆ ಮಾಡುವುದು, ಮೂರ್ತಿಗಳನ್ನು ಸಿದ್ಧಪಡಿಸುವುದು ಈ ರೀತಿಯ ಕೆಲಸ ಮಾಡುತ್ತಿದ್ದು ಇವರುಗಳ ಹೆಸರುಗಳಲ್ಲಿ ತಮ್ಮ ವೃತ್ತಿಯನ್ನು ಅಭಿಮಾನದ ಸಂಕೇತವಾಗಿಯೋ ಅಸ್ಮಿತೆಯ ದೃಷ್ಟಿಯಿಂದಲೋ ಬಳಸುತ್ತಾರೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಭೀಮಾಚಾರಿ | ಮಂಜುಳಾಚಾರಿ |
| ನಾರಾಯಣಚಾರಿ | ತೇಜಸ್ವಿನಿ ಆಚಾರಿ |
| ಶೇಖರಾಚಾರಿ | ಮಮತಾ ಆಚಾರಿ |
| ವೀರಭದ್ರಾಚಾರಿ | ಸುಖನ್ಯಾಚಾರಿ |
| ರಂಗಾಚಾರಿ | ಹರ್ಷಿತಾಚಾರಿ |
| ನಾಗರಾಜಾಚಾರ್ | ರಂಜಿತಾಚಾರಿ ಮುಂತಾದವು. |

ಈ ಎಲ್ಲಾ ಹೆಸರುಗಳಲ್ಲಿ ಕೆಲವು ನಾಮಕರಣ ಸಂದರ್ಭದಲೇ ಬಂದವುಗಳಾದರೆ ಇನ್ನು ಕೆಲವು ತದನಂತರದಲ್ಲಿ ಸೇರ್ಪಡೆಯಾಗಿವೆ.

**ಪಟೇಲ:**

ಪಟೇಲ ಎಂಬುದು ವೃತ್ತಿಯಾಗಿದ್ದು ಬ್ರಿಟೀಷರ ಕಾಲದಲ್ಲಿ ಹಾಗೂ ತದನಂತರದಲ್ಲಿ ಇವರು ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು ನೋಡಿಕೊಳ್ಳುತ್ತಿದ್ದರು. ಇವರು ಪಹಣಿ, ಪಟ್ಟ, ಜಮೀನು ನೋಂದಣಿ, ಕ್ರಯಪತ್ರ ಬರೆಯುವುದು, ಪಾಲುಪಟ್ಟಿ, ವಂಶವೃಕ್ಷ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಅಂದರೆ ಇಂದು ಕಂದಾಯದ ಗ್ರಾಮಲೆಕ್ಕಿಗ ಮಾಡುತ್ತಿರುವ ಕೆಲಸಗಳನ್ನು ಅಂದು ಪಟೇಲರು ಮಾಡುತ್ತಿದ್ದರು.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಂಗಪ್ಪ ಪಟೇಲ | ರಾಜೇಶ್ವರಿ ಪಟೇಲ |
| ಅನಂತ ಪಟೇಲ | ಆನಂದಿ ಪಟೇಲ |
| ಚಂದ್ರಪ್ಪ ಪಟೇಲ | ಶೃತಿ ಪಟೇಲ |
| ಶ್ರೀಧರ ಪಟೇಲ | ಅರ್ಪಿತ ಪಟೇಲ |
| ನಿಂಗರಾಜು ಪಟೇಲ | ಅಂಕಿತ ಪಟೇಲ |
| ಜೀವನ್ ಪಟೇಲ | ಆದ್ಯ ಪಟೇಲ |

**ಗಾಣಿಗ:**

ತುಮಕೂರು ಪರಿಸರದಲ್ಲಿ **'ಗಾಣಿಗ'** ಎಂಬುದು ವೃತ್ತಿವಾಚಕವಾಗಿದ್ದು ತದನಂತರ ಅದು ಜಾತಿವಾಚಿಯಗಿ ಬಳಕೆಯಲ್ಲಿದೆ. ಗಾಣದಿಂದ ಎಣ್ಣೆ ಉತ್ಪಾದಿಸಿ ಮಾರಾಟ ಮಾಡುವವರನ್ನು ಗಾಣಿಗರು ಎಂದು ಕರೆಯಲಾಗುತ್ತದೆ. ಎರಡನೇ ತಲೆಮಾರಿನ ಹಿಂದೆ ಗಾಣದ ಮೂಲಕ ಎಣ್ಣೆ ತೆಗೆಯುತ್ತಿದ್ದುದನ್ನು ಕಾಣಬಹುದಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ಎಣ್ಣೆ ತೆಗೆಯುವ ಗಿರಣಿಗಳ ಆವಿಷ್ಕಾರದಿಂದ ಗಾಣದಿಂದ ಎಣ್ಣೆ ತೆಗೆಯುವುದು ಸಂಪೂರ್ಣವಾಗಿ ನಿಂತುಹೋಗಿದೆ ಎಂದೇ ಹೇಳಬಹುದು. ಆದರೆ ಈ ವೃತ್ತಿ ಮಾಡುತ್ತಿದ್ದ ಜನರು ಇಂದಿಗೂ ತಮ್ಮ ಹೆಸರಿನಲ್ಲಿ **'ಗಾಣಿಗ'** ಎಂಬ ವೃತ್ತಿವಾಚಿ ವಾರ್ಗಿಕಗಳನ್ನು ಬಳಸುತ್ತಿರುವುದನ್ನು ಗುರುತಿಸಲಾಗಿದೆ. ಇವುಗಳಲ್ಲಿ ಕೆಲವು ನಾಮಕರಣದ ಸಂದರ್ಭದಲ್ಲಿ ಬಂದಿದ್ದರೆ, ಇನ್ನು ಕೆಲವು ತಾವೇ ನಿರ್ದೇಶಿಸಿ ಕೊಂಡಂತವುಗಳಾಗಿವೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗೋಪಾಲ ಗಾಣಿಗ | ಸ್ಮಿತಾ ಗಾಣಿಗ |
| ಓಂಕಾರ ಗಾಣಿಗ | ಚಂದನ ಗಾಣಿಗ |
| ಲೋಕೇಶ್ ಗಾಣಿಗ | ಮಂಜುಳ ಗಾಣಿಗ |
| ಮಧುಸೂದನ್ ಗಾಣಿಗ | ಮಾನಸ ಗಾಣಿಗ |

**ಶಾನುಭೋಗ:**

ಶಾನುಭೋಗ ಎಂಬುದು ಬ್ರಾಹ್ಮಣ ಸಮುದಾಯದಲ್ಲಿ ಕಂಡುಬರುವ ವೃತ್ತಿಯಾಗಿದ್ದು ಪ್ರಸ್ತುತ ಅದು ಜಾತಿವಾಚಿಯಾಗಿ ಬಳಕೆಯಾಗುತ್ತಿದೆ. ಅಂದರೆ ಗ್ರಾಮದ ಲೆಕ್ಕ ಪತ್ರಗಳನ್ನು ಬರೆಯುವವನಿಗೆ ಶಾನುಭೋಗ ಎನ್ನುತ್ತಿದ್ದರು. ಶಾನುಭೋಗ ಎಂಬುದು ಗೌಡ, ಪಟೇಲಗಳ ಹಾಗೆ ಹುದ್ದೆಯನ್ನು ಸೂಚಿಸುವ ಪದವಾಗಿದೆ. ಈ ವೃತ್ತಿಯನ್ನು ಮಾಡುವವರು ಬ್ರಾಹ್ಮಣರೇ ಆಗಿದ್ದು, ಅವರನ್ನು ಶಾನುಭೋಗ ಎಂದು ಕರೆಯಲಾಗುತ್ತಿತ್ತು. ಹಾಗಾಗಿ ಅವರ ಹೆಸರಿನ ಮುಂದೆ ವೃತ್ತಿವಾಚಿ ವಾರ್ಗಿಕ ಅಂದಿನಿಂದ ಇಂದಿನವರೆಗೂ ಬಳಕೆಯಲ್ಲಿದೆ. ಇವು ಸಾಮಾನ್ಯವಾಗಿ ಪುರುಷವಾಚಿ ನಾಮಗಳಲ್ಲಿ ಹೆಚ್ಚಾಗಿ ಬಳಕೆಯಾಗುವಂತಹದ್ದು ಎಂದು ಗುರುತಿಸಲಾಗಿದೆ.

**ಉದಾ:**

ಸುಬ್ಬರಾವ್ ಶಾನುಭೋಗ
ನಾಗರಾಜ ಶಾನುಭೋಗ
ಮಾದವರಾವ್ ಶಾನುಭೋಗ
ಜನಾರ್ಧನ್ ಶಾನುಭೋಗ
ನಾಗಭೂಷಣ್ ಶಾನುಭೋಗ
ನಾರಾಯಣ ಶಾನುಭೋಗ
ಗಣೇಶ ಶಾನುಭೋಗ

**ಕುಂಬಾರ:**

ಮಣ್ಣಿನ ಮಡಕೆ ಮಾರುವವರನ್ನು ಕುಂಬಾರರು ಎಂದು ಕರೆಯಲಾಗುತ್ತದೆ. ತುಮಕೂರು ಪರಿಸರದಲ್ಲಿ ಈ ವೃತ್ತಿ ಮಾಡುವಂತಹವರು ಇಂದಿಗೂ ಇದ್ದಾರೆ. ಇವರ ಈ ವೃತ್ತಿಯು ಇಂದು ಜಾತಿವಾಚಿಯಾಗಿಯೂ ಬಳಕೆಯಲ್ಲಿದೆ. ಇಂದಿನ ಈ ಸಮುದಾಯದವರು ತಮ್ಮ ಹೆಸರುಗಳಲ್ಲಿ ಈ ವೃತ್ತಿಯ ಹೆಸರನ್ನು ಸೇರಿಸಿ ಕೊಳ್ಳುತ್ತಿದ್ದಾರೆ. ಇವು ಸ್ತ್ರೀ ಪುರುಷರಿಬ್ಬರಲ್ಲೂ ಕಂಡುಬಂದಿವೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಚಂದ್ರಪ್ಪ ಕುಂಬಾರ | ರೇಣುಕಾ ಕುಂಬಾರ |
| ರೇಣುಕ ಪ್ರಸಾದ್ ಕುಂಬಾರ | ಸಾವಿತ್ರಿ ಕುಂಬಾರ |
| ಗಂಗಾಧರ ಕುಂಬಾರ | ಶ್ವೇತಾ ಕುಂಬಾರ |
| ದೃವಕುಮಾರ್ ಕುಂಬಾರ | ಮಲ್ಲಿಕಾ ಕುಂಬಾರ ಮುಂತಾದವು. |

**ತಳವಾರ:**

'ತಳವಾರ' ಎಂಬುದು ವೃತ್ತಿವಾಚಿ ವಾರ್ಗಿಕವನ್ನು ಸೂಚಿಸುವಂತಹದ್ದು. 'ತಳವಾರ' ಎಂಬುದು ಆರಂಭದ ಕಾಲದಿಂದ ವೃತ್ತಿಯಾಗಿಯೇ ಬೆಳೆದುಕೊಂಡುಬಂದಿದೆ. ಇದು ಗ್ರಾಮದ ದೇವತಾ

ಕಾರ್ಯಗಳಲ್ಲಿ, ಶುಭಾ ಸಮಾರಂಭಗಳಲ್ಲಿ ಗ್ರಾಮದ ಜನರಿಗೆ ಸುದ್ದಿಯನ್ನು ತಿಳಿಸುವ ಕೆಲಸವಾಗಿತ್ತು. ಇದನ್ನು ತಳವಾರಿಕೆ ಎಂದು ಕರೆಯಲಾಗುತ್ತದೆ. ಆದರೆ 'ತಳವಾರಿಕೆ' ಎಂಬ ವೃತ್ತಿವಾಚಿಯನ್ನು ಇಂದು ಪರಿಶಿಷ್ಟ ಪಂಗಡ 'ನಾಯಕ' ಜಾತಿಗೆ ಸೇರಿಸಲಾಗಿದೆ. ವೃತ್ತಿಯಲ್ಲಿ ತಳವಾರವಾಗಿಲ್ಲದಿದ್ದರು ತನ್ನ ಹಿರಿಯರು ಈ ಕೆಲಸ ಮಾಡುತ್ತಿದ್ದರೆಂಬ ಅಭಿಮಾನದಿಂದಲೊ ಅಸ್ಮಿತೆಯ ದೃಷ್ಟಿಯಿಂದಲೊ ಈ ವೃತ್ತಿವಾಚಿ ವಾರ್ಗಿಕಗಳನ್ನು ಹೆಸರಿನ ಮುಂದೆ ನಿರ್ದೇಶಿಸಿಕೊಳ್ಳಲಾಗುತ್ತಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಗಂಗರಾಜು ತಳವಾರ | ಪಾರ್ವತಿ ತಳವಾರ |
| ಗುಡ್ಡಣ್ಣ ತಳವಾರ | ಭಾವನ ತಳವಾರ |
| ರಾಮಯ್ಯ ತಳವಾರ | ಮಂಜುಳ ತಳವಾರ |
| ಜಯಣ್ಣ ತಳವಾರ | ರಕ್ಷಿತಾ ತಳವಾರ |
| ನೀಲಗಿರಿ ತಳವಾರ | ಭಾಗ್ಯಲಕ್ಷ್ಮಿ ತಳವಾರ |
| ವಿಜಯಕುಮಾರ ತಳವಾರ | |
| ಮಾರುತಿ ತಳವಾರ ಮುಂತಾದವು. | |

**ಕಮ್ಮಾರ:**

ಕಬ್ಬಿಣ ಕೆಲಸ ಮಾಡುವವರನ್ನು 'ಕಮ್ಮಾರ'ರು ಎಂದು ಕರೆಯಲಾಗುತ್ತಿದೆ. ಇಂದು ಕಬ್ಬಿಣ ಕೆಲಸವನ್ನು ಎಲ್ಲಾ ಸಮುದಾಯದವರು ಮಾಡುತ್ತಿರುವುದನ್ನು ಕಾಣಬಹುದು. ಆದರೆ ಹಿಂದಿನ ಕಾಲದಿಂದ ಕುಲುಮೆಗಳಲ್ಲಿ ಕಬ್ಬಿಣದ ಕೆಲಸಮಾಡುತ್ತಿದ್ದ ಕುಟುಂಬಗಳು ಇಂದಿಗೂ ಇವೆ. ಇವರ ಸಮುದಾಯವನ್ನು ಸರ್ಕಾರ 'ಕಮ್ಮಾರ' ಜಾತಿ ಎಂದು ಗುರುತಿಸಿದೆ. ಇವರ ಸಮುದಾಯದಲ್ಲಿ ಆರಂಭದಿಂದ ಸಂಬೋಧನೆಯಲ್ಲಿ ಅಥವಾ ಬಳಕೆಯ ನೆಲೆಯಲ್ಲಿ ವ್ಯಕ್ತಿಯನ್ನು ಗುರುತಿಸಲು 'ಕಮ್ಮಾರ' ವಾರ್ಗಿಕವನ್ನು ಹೆಸರಿನ ಆರಂಭದಲ್ಲಿ ಹೇಳಲಾಗುತ್ತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ಈ ಸಮುದಾಯದ ಹೆಸರುಗಳಿಗೆ ಉತ್ತರ ಘಟಕದಲ್ಲಿ 'ಕಮ್ಮಾರ' ವಾರ್ಗಿಕ ಬಳಕೆಯಾಗುತ್ತದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಮಚಂದ್ರ ಕಮ್ಮಾರ | ಅಶ್ವಿನಿ ಕಮ್ಮಾರ |
| ಭೀಮಪ್ಪ ಕಮ್ಮಾರ | ಪಾರ್ವತಿ ಕಮ್ಮಾರ |
| ಹನುಮಂತಯ್ಯ ಕಮ್ಮಾರ | ಚೇತನ ಕಮ್ಮಾರ |
| ಚಿರಂಜೀವಿ ಕಮ್ಮಾರ | ಭಾವನ ಕಮ್ಮಾರ |

| | |
|---|---|
| ಮಂಜುನಾಥ ಕಮ್ಮಾರ | ಮಂಧಾರ ಕಮ್ಮಾರ |
| ಚಂದನ್ ಕಮ್ಮಾರ | ಅನ್ನಪೂರ್ಣ ಕಮ್ಮಾರ ಮುಂತಾದವು. |

ಈ ಮೇಲಿನ ಎಲ್ಲಾ ವೃತ್ತಿಗಳ ಜೊತೆಗೆ ತುಮಕೂರು ಪರಿಸರದಲ್ಲಿ ಇನ್ನು ಹಲವು ವೃತ್ತಿವಾಚಿ ಹೆಸರುಗಳು ಬಳಕೆಯಲ್ಲಿವೆ. ಅವುಗಳಲ್ಲಿ ಬಡಗಿ, ಬಳೆಗಾರ, ಬೆಸ್ತರು, ಕೋಲಕಾರ, ನೇಕಾರ, ಮಡಿವಾಳ, ಟೈಲರ್ ಮುಂತಾದವುಗಳನ್ನು ಹೆಸರಿಸಬಹುದು. ಈ ಎಲ್ಲಾ ವೃತ್ತಿವಾಚಿಗೆ ಸಂಬಂಧಿಸಿದ ವ್ಯಕ್ತಿನಾಮಗಳೆಲ್ಲವು ವ್ಯಕ್ತಿಯ ಹುಟ್ಟು ಹೆಸರುಗಳಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವು ಮಾತ್ರ ಹಿರಿಯರಿಂದ ನಾಮಕರಣ ಸಂದರ್ಭದಲ್ಲಿ ಬಂದಿದ್ದು, ಉಳಿದ ಹೆಚ್ಚಿನ ಹೆಸರುಗಳು ವ್ಯಕ್ತಿಯು ತಾನೇ ನಿರ್ದೇಶಿಸಿಕೊಂಡಂತಹವುಗಳಾಗಿವೆ. ಈ ರೀತಿಯ ಬದಲಾವಣೆ ಯಾವುದೇ ಸೌಲಭ್ಯ ಗಳಿಂದಲೋ ಅವಕಾಶಗಳಿಂದನೋ ಆದಂತಹದ್ದಲ್ಲ. ವ್ಯಕ್ತಿಯ ಆಸಕ್ತಿಯಿಂದಾಗಿ ಸಮುದಾಯದಲ್ಲಿ ತನ್ನ ವೃತ್ತಿಯ ಆಸ್ಮಿತತೆಯ ದೃಷ್ಟಿಯಿಂದ ಬದಲಾಗಿರುವ ಸಾಧ್ಯತೆಯಿದೆ. ಇಲ್ಲಿ ಹೇಳಲಾದ ವೃತ್ತಿವಾಚಿ ವ್ಯಕ್ತಿನಾಮಗಳ ಜೊತೆಗೆ ಇನ್ನುಳಿದ ವೃತ್ತಿವಾಚಿ ವ್ಯಕ್ತಿನಾಮಗಳನ್ನು ಇಲ್ಲಿ ನೋಡಬಹುದಾಗಿದೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಸ್ವಾಮಿ ಮಡಿವಾಳ | ರೇಖಾ ಮಡಿವಾಳ |
| ಮಂಜುನಾಥ ಮಡಿವಾಳ | ರಮಾದೇವಿ ಮಡಿವಾಳ |
| ರವಿ ಭಜಂತ್ರಿ | ಉಮಾ ಭಜಂತ್ರಿ |
| ಮಂಜುನಾಥ ಭಜಂತ್ರಿ | ರಂಜನಿ ಭಜಂತ್ರಿ |
| ಲೋಕೇಶ್ ಕೋಲಕಾರ | ರಜನಿ ಕೋಲಕಾರ |
| ರಂಗನಾಥ ಕೋಲಕಾರ | ಅನಿತಾ ಕೋಲಕಾರ |
| ಸೋಮಸುಂದರ್ ಬಳೆಗಾರ | ಭಾಗ್ಯ ಬಳೆಗಾರ |
| ಭೀಮಣ್ಣ ಬಡಗಿ | ಮುಂತಾದವುಗಳು. |

**೪.೩.೨. ಜಾತಿವಾಚಿ ವ್ಯಕ್ತಿನಾಮಗಳು:**

ವ್ಯಕ್ತಿನಾಮಗಳು ಆರಂಭದ ಕಾಲಮಾನದಲ್ಲಿ ಸಂವಹನಕ್ಕಾಗಿ ಮಾತ್ರ ಬಳಕೆಯಾಗುತ್ತಿದ್ದವು. ಅದರೆ ಕಾಲಾನಂತರ ಇವು ಸಮುದಾಯದಲ್ಲಿ ಹಲವಾರು ದೃಷ್ಟಿಕೋನಗಳಲ್ಲಿ ಬಳಕೆಯಾಗುತ್ತಿವೆ. ಅದರಲ್ಲೂ ಪ್ರಮುಖವಾಗಿ ಜಾತಿಗಳ ಸೃಷ್ಟಿಯಿಂದ ವ್ಯಕ್ತಿನಾಮಗಳು ತನ್ನ ಸ್ವರೂಪದಲ್ಲಿ ಸಂಕುಚಿತತೆಯನ್ನು ಪಡೆದುಕೊಂಡಿವೆ. ಏಕೆಂದರೆ ಸಮುದಾಯದ ನಿರ್ದಿಷ್ಟ ಜಾತಿಯವರು ನಿರ್ದಿಷ್ಟ ಹೆಸರುಗಳನ್ನು ಬಳಸಬೇಕೆಂದು ಒಂದು ಕಾಲದಲ್ಲಿದ್ದ ಸಂಪ್ರದಾಯದ ಪರಿಣಾಮವಾಗಿ ಈ ರೀತಿಯ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಈ ರೀತಿಯ ಬದಲಾವಣೆಗಳು ಸಂಪೂರ್ಣವಾಗಿ ಎಲ್ಲಾ ಜಾತಿಗಳಲ್ಲಿಯೂ ಆಗಿವೆ ಎಂದು ಹೇಳಲಾಗದು. ಏಕೆಂದರೆ ಕೆಲವು ಜಾತಿಗಳು ಇಂದಿಗೂ

ತನ್ನ ಅಸ್ಮಿತೆಯನ್ನು ಹೆಸರುಗಳ ಮೂಲಕ ಕಾಯ್ದುಕೊಳ್ಳುವ ಪ್ರಯತ್ನ ಮಾಡುತ್ತಿವೆ. ಇದಕ್ಕೆ ವಿರುದ್ಧವಾಗಿ ಕೆಲವು ಜಾತಿಗಳು ಪ್ರಾಚೀನವಾದಂತಹ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ಹೆಸರುಗಳನ್ನು ಇಟ್ಟುಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡಿವೆ. ಆದರೆ, ಮೇಲ್ಜಾತಿ ಮತ್ತು ಕೆಳಜಾತಿ ಎಂದು ಗುರುತಿಸಲಾಗಿರುವ ಈ ಸಮುದಾಯಗಳಲ್ಲಿ ಹೆಸರಿಡುವಿಕೆಯು ಭಿನ್ನತೆಯಿಂದ ಕೂಡಿರುತ್ತದೆ. ಮೇಲ್ಜಾತಿ ಹಾಗೂ ಮೇಲುಸ್ತರದ ಸಮುದಾಯಗಳು ಕೆಳಸ್ತರದ ಹಾಗೂ ಕೆಳಜಾತಿಯ ಹೆಸರುಗಳನ್ನು ಸ್ವೀಕರಿಸುವ ಮನೋಭಾವನೆ ಹೊಂದಿರುವುದು ತೀರಾ ವಿರಳ. ಆದರೆ "ಕೆಳಸಮುದಾಯಗಳು ಮೇಲು ಸಮುದಾಯಗಳ ಹೆಸರುಗಳನ್ನು ಸ್ವೀಕರಣೆ ಮಾಡಿರುತ್ತಾರೆ. ಇದಕ್ಕೆ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಅಂಶಗಳು ಅಸಮತೋಲನ ಕಾರಣವಾಗಿರಲೂ ಬಹುದು" (ಸಣ್ಣಪಾಪಯ್ಯ, ೨೦೧೦, ಪು.೫೧). ಒಟ್ಟಾರೆಯಾಗಿ ಸಮುದಾಯದಲ್ಲಿನ ಯಾವ ಜಾತಿಗಳು ಯಾವ ಸ್ವರೂಪದ ಹೆಸರುಗಳನ್ನು ವಿಶೇಷವಾಗಿ ಬಳಸುತ್ತಿದ್ದಾರೆ ಎಂಬುದನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ. ಹಾಗಾಗಿ ವಿವಿಧ ಜಾತಿಯ ಹೆಸರುಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

**ಒಕ್ಕಲಿಗ:**

ಕರ್ನಾಟಕದಲ್ಲಿರುವ ಜಾತಿಗಳಲ್ಲಿ ಒಕ್ಕಲಿಗ ಜಾತಿಯು ಪ್ರಮುಖವಾದುದು. ಒಕ್ಕಲಿಗ ಜಾತಿಯಲ್ಲಿ ನೂರಕ್ಕು ಹೆಚ್ಚು ಉಪಜಾತಿಗಳಿವೆ ಎಂದು ಹೇಳಲಾಗುತ್ತಿದೆ. ಅವುಗಳಲ್ಲಿ ಗಂಗಟಗಾರ ಒಕ್ಕಲಿಗ, ಹಾಲಕ್ಕಿ ಒಕ್ಕಲಿಗ, ಭಂಟ ಒಕ್ಕಲಿಗ, ಉಪ್ಪಿನ ಕೊಳಗದ ಒಕ್ಕಲಿಗ, ಉತ್ತಮ ಕೊಳಗದ ಒಕ್ಕಲಿಗ, ಸರ್ಪಒಕ್ಕಲಿಗ, ಕುಂಚಿಟಿಗ ಒಕ್ಕಲಿಗ, ನೊಣಬ ಒಕ್ಕಲಿಗ, ಮುಂತಾದವುಗಳನ್ನು ಗುರುತಿಸಲಾಗಿದೆ.

ತುಮಕೂರು ಪರಿಸರದಲ್ಲಿ ಹೆಚ್ಚಾಗಿ ಕುಂಚಿಟಿಗ ಒಕ್ಕಲಿಗರು ಕಂಡುಬರುತ್ತಾರೆ. ಕುಣಿಗಲ್ ಗುಬ್ಬಿ, ಸಿ.ಎಸ್.ಪುರ, ತುಮಕೂರು ತಾಲೂಕಿನ ದಕ್ಷಿಣ ಭಾಗದಲ್ಲಿ ಮಾತ್ರ ಗಂಗಟಗಾರ ಒಕ್ಕಲಿಗರು ಕಂಡುಬರುತ್ತಾರೆ. ಉಳಿದಂತೆ ಎಲ್ಲಾ ತಾಲೂಕಿನ ಬಹುಭಾಗದಲ್ಲಿ ಕುಂಚಿಟಿಗ ಒಕ್ಕಲಿಗರೇ ಕಂಡುಬರುತ್ತಾರೆ.

'ಕುಂಚಿಟಿಗ' ಎಂದರೆ ಶಬ್ದಶಃ ಅರ್ಥ ತೊಗರಿಕಾಳನ್ನು ಬೇಳೆಮಾಡಿ ಮಾರುವವನು ಎಂಬರ್ಥವನ್ನು ಹೊಂದಿದೆ. ಇದಕ್ಕೆ ಇನ್ನು ಕೆಲವು ಅರ್ಥಗಳಿರುವುದುಂಟು. ಕುಂಚಿಟಿಗ ಎಂದರೆ "ಕಂಚಿನಾಡಿನವರು, ಕಂಚಿಯನ್ನಾಳುತ್ತಿದ್ದ ಪಲ್ಲವರು, ಯುದ್ಧದಲ್ಲಿ ಸೋತು ಪಲಾಯನಗೈದು ಜೀವ ಉಳಿಸಿಕೊಳ್ಳಲು ಹೇಳಿದ ಹೆಸರೇ ಕಂಚಿನಾಟುಗಾರ್ (ಕುಂಚಿಟಿಗರು)>ಕಂಚಿಟ್ಟುಗ>ಕುಂಚಿಟಿಗ ಆಗಿದೆ" (ನಾ ಕುಂಚಿಟಿಗ, ಕನ್ನಡ ಮಾಸಪತ್ರಿಕೆ ಫೆಬ್ರವರಿ ೨೦೧೩, ಪು.೩) ಎಂದು ಹೇಳಲಾಗುತ್ತದೆ. ಒಟ್ಟಾರೆಯಾಗಿ ಕುಂಚಿಟಿಗ ಎಂಬುದು ಒಕ್ಕಲಿಗ ಜಾತಿಯಲ್ಲಿ ಉಪಜಾತಿಯಾಗಿ ತುಮಕೂರು ಪರಿಸರದಲ್ಲಿದೆ. ಈ ಉಪಜಾತಿಯಲ್ಲಿ ೪೮ ಬೆಡಗುಗಳಿವೆ ಎಂದು ಹಿರಿಯರು ಹೇಳುತ್ತಾರೆ. ಅವುಗಳೆಂದರೆ

| | | |
|---|---|---|
| ಅಂಡೆನವರು | ಹಾಲೆನವರು | ಮಾಯಿನವರು |
| ಬೆಳ್ಳೆನವರು | ಸೂರೆನವರು | ಹೊಳಕಲ್ಲೋರು |
| ಜೀರಿಗೆನವರು | ದಸಲೆನವರು | ಧಾನ್ಯದವರು |

| | | |
|---|---|---|
| ಕಠಾರದವರು | ವುಳ್ಳೆನವರು | ಅಳುವನವರು |
| ಜಲದಿನವರು | ಅಷ್ಟೆನವರು | ಕರಡೆನವರು |
| ಆವಿನವರು | ಕೆಂಗ್ಗೆನವರು | ಜರಿಯವರು |
| ರಾಗೇನವರು | ಕಕ್ಕೆನವರು | ಗಾಳೆನವರು |
| ಹಟ್ಟೆನವರು | ಮೀಸಲುನವರು | ಒಡಲವನವರು |
| ಉಂಡೆನವರು | ಸಹಸ್ತ್ರದವರು | ವನಮನವರು |
| ಜಾನಕಲ್ಲುನವರು | ಬಸಲೆನವರು | ಕಾಗೆನವರು |
| ಅರಸನವರು | ಎಮ್ಮೆನವರು | ಮಾಣಸೆನವರು |
| ಶೆಟ್ಟಿನವರು | ಹುಳಿಯಾರರು | ರಾವುತದವರು |
| ಗೋಣೇನವರು | ಯರೆನವರು | ಹುತ್ತದವರು |
| ಅಲ್ಪೆನವರು | ಕಂಬಳಿಯವರು | ಗುಡಿಯವರು |
| ಎರಡು ಕೆರೆಯವರು | ಯಲೆಯವರು | ಅರಳೇನವರು |
| ಗರಿಕೆನವರು | ಸಾರಂಗದವರು | ದಮನಗುತ್ತೇರು |

ಈ ಮೇಲಿನ ಪಟ್ಟಿಯಲ್ಲಿರುವ ಕುಂಚಿಟಿಗ ಕಸಮುದಾಯದ ೪೮ ಬೆಡಗುಗಳಲ್ಲಿಯೂ ಬೇರೆ-ಬೇರೆ ಕುಲದೇವರು ಇರುವುದನ್ನು ಗುರುತಿಸಬಹುದು. ಈ ಕುಲದೇವರ ಹೆಸರುಗಳು ವ್ಯಕ್ತಿನಾಮಗಳಾಗಿ ಬಳಕೆಯಾಗುತ್ತಿರುವುದನ್ನು ತಿಳಿಯಬಹುದು. ಈ ಬೆಡಗುಗಳ ಜೊತೆಗೆ ಇನ್ನೂ ೫೩ ಬೆಡಗುಗಳಿವೆ ಎಂದು ಊಹಿಸಲಾಗಿದೆ(ನಾಗರಾಜ ಎಂ.ಎಚ್., ೨೦೦೩, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಪು.೨೪). ಈ ಎಲ್ಲಾ ಬೆಡಗುಗಳಲ್ಲಿ ಬಳಸಲ್ಪಡುತ್ತಿರುವ ಹೆಸರುಗಳು ಸಾಕಷ್ಟು ವ್ಯತ್ಯಾಸಗಳಿಂದ ಕೂಡಿರುವುದು ಕಂಡುಬಂದಿದೆ. ಅವುಗಳನ್ನು ಇಲ್ಲಿ ಗುರುತಿಸಲಾಗಿದೆ.

**ಅಂಡೇನವರು** ಮೈಲಾರಲಿಂಗೇಶ್ವರ, ಕಣಿವೆ ಮಾರಕ್ಕ, ಈರ ಚಿಕ್ಕಮ್ಮ, ರಂಗನಾಥಸ್ವಾಮಿ ದೇವರುಗಳನ್ನು ಕುಲದೇವರಾಗಿ ಆರಾಧಿಸುತ್ತಿದ್ದು ಈ ಸಮುದಾಯ ವ್ಯಕ್ತಿಗಳಿಗೆ ಈ ದೇವರ ಹೆಸರುಗಳನ್ನು ನಿರ್ದೇಶಿಸುತ್ತಿರುವುದನ್ನು ಕಾಣಬಹುದು.

**ಉದಾ:** ಮೈಲಾರಪ್ಪ, ಮೈಲಾರಮ್ಮ, ಕಣಿಮಯ್ಯ, ಕಣಿಮಕ್ಕ, ಈರಪ್ಪ, ಈರಮ್ಮ, ಈರಚಿಕ್ಕಪ್ಪ, ಈರಚಿಕ್ಕಮ್ಮ, ರಾಮಪ್ಪ, ರಾಮಕ್ಕ, ರಂಗನಾಥಪ್ಪ, ರಂಗಮ್ಮ

**ಉಂಡೇನವರು** ಅರೇರಂಗನಾಥ, ದೊರೆಸಿದ್ದಪ್ಪ, ಹನುಮಂತರಾಯ ದೇವರುಗಳನ್ನು ಕುಲದೈವವಾಗಿ ಆರಾಧಿಸುತ್ತಿದ್ದು ಆ ದೇವರ ಹೆಸರುಗಳನ್ನು ಈ ಸಮುದಾಯದ ವ್ಯಕ್ತಿಗಳಿಗೆ ನಿರ್ದೇಶಿಸಲಾಗುತ್ತಿದೆ.

**ಉದಾ:** ದೊರೆಸಿದ್ದಪ್ಪ, ಸಿದ್ದಮ್ಮ, ಹನುಮಂತರಾಯ, ಹನುಮಕ್ಕ, ರಂಗನಾಥ

**ಜಾನಕಲ್ಲೋರು:** ಬೈರಪ್ಪ, ಬೈರಮ್ಮ, ಸಿದ್ದಪ್ಪ, ಸಿದ್ದಮ್ಮ, ಗುಜ್ಜಾರಪ್ಪ, ಗುಜ್ಜಾರಮ್ಮ

**ಅರಸನವರು:** ನಂಜುಂಡಪ್ಪ, ನಂಜುಡಮ್ಮ, ಅಮ್ಮಾಜಮ್ಮ, ಅಮ್ಮಾಜಪ್ಪ

**ಜಲ್ದೇನವರು:** ಜಲ್ದಪ್ಪ, ಜಲ್ದಮ್ಮ, ಬೊಪ್ಪಣ್ಣ, ಬೊಪ್ಪಯ್ಯ, ಮುದ್ದಯ್ಯ, ಮುದ್ದಮ್ಮ, ಬಂಡಿರಂಗಪ್ಪ

**ಹಾವಿನವರು:** ನರಸಿಂಹಯ್ಯ, ಗೋಪಾಲಯ್ಯ, ವೀರಯ್ಯ, ವೀರಮ್ಮ, ವೀರಚಿಕ್ಕಣ್ಣ

**ರಾಣೇನವರು:** ಮಲ್ಲೇಶಪ್ಪ, ಮಲ್ಲಯ್ಯ, ಮಲ್ಲಮ್ಮ

**ಅಟ್ಟೇನವರು:** ಮಾಳಯ್ಯ, ಈರಮಾಳಯ್ಯ, ಈರಮಾಳಮ್ಮ

**ಧಾನ್ಯದವರು:** ತಾರಮಲ್ಲಯ್ಯ, ತಾರಮ್ಮ

**ಅಳುವನವರು:** ಹನುಮಂತರಾಯಪ್ಪ, ಗುಜ್ಜಾರಪ್ಪ, ಗುಜ್ಜಾರಮ್ಮ, ಹನುಮಕ್ಕ, ಮದ್ದಯ್ಯ, ಮದ್ದಕ್ಕ

**ಕರಡೇನವರು:** ಭೂವಯ್ಯ, ಭೂವಮ್ಮ

**ಎರಡು ಕೆರೆಯವರು:** ಮಲ್ಲೇಶ, ಮಲ್ಲಯ್ಯ, ಮಲ್ಲಮ್ಮ, ಮಹಾಲಿಂಗಯ್ಯ

**ಎಲೆನವರು:** ಲಿಂಗೇಶ, ಲಿಂಗೇಶಯ್ಯ, ಲಿಂಗಮ್ಮ, ಮಾರಣ್ಣ, ಮಾರಕ್ಕ,

**ಸೂರೇನವರು:** ಸೂರಪ್ಪ, ಜಲ್ದಪ್ಪ, ರಂಗಪ್ಪ

**ಬಸಲೇನವರು:** ವೀರನಾಗರಾಜ, ವೀರಪ್ಪ, ವೀರಮ್ಮ, ನಾಗರಾಜಯ್ಯ, ವೀರಕ್ಯಾತರಾಯ, ನಾಗಮ್ಮ, ಮದ್ದಮ್ಮ, ಮದ್ದಪ್ಪ, ಹೆಂಜಾರಪ್ಪ, ಹೆಂಜಾರಮ್ಮ, ಸಿದ್ದರಾಮೇಶ, ಸಿದ್ದರಾಮ

**ಎಮ್ಮೆನವರು:** ರಂಗಧಾಮ, ರಂಗಧಾಮಯ್ಯ, ರಂಗನಾಥ, ರಂಗಮ್ಮ, ರಂಗಯ್ಯ

**ಹುಳಿಯಾರರು:** ಹನುಮಕ್ಕ, ಹನುಮಂತರಾಯ, ರಂಗನಾಥ, ರಂಗಮ್ಮ

**ಯರ್ರೇನವರು:** ಕೋಡಿರಂಗಪ್ಪ, ಕೋಡಿರಂಗಮ್ಮ

**ಶೆಟ್ಟೆನವರು:** ನರಸಿಂಹಯ್ಯ, ಕಾವಲಯ್ಯ, ಕಾವಲಮ್ಮ, ಜಲ್ದಪ್ಪ, ಜಲ್ದಮ್ಮ

**ಗೋಣೆನವರು:** ಅಮ್ಮಾಜಮ್ಮ, ಹನುಂತಯ್ಯ

**ಅಲ್ವೇನವರು:** ಮರಡಿರಂಗನಾಥ, ಮರಡಪ್ಪ, ಮರುಡಮ್ಮ, ರಂಗನಾಥ, ಅಮಾಜಮ್ಮ

**ಬೆಳ್ಳೇನವರು:** ಸೂರಮ್ಮ, ಸೂರಪ್ಪ, ವೀರಬುಡ್ಡಣ್ಣ, ವೀರಬುಡ್ಡಮ್ಮ

**ಜೀರಿಗೆನವರು:** ಸಿದ್ದೇಶ, ಸಿದ್ದಪ್ಪ, ಸಿದ್ದಯ್ಯ, ಸಿದ್ದಮ್ಮ

**ಕತಾರದವರು:** ಈರಕೆಂಚಮ್ಮ, ಈರಕೆಂಪಯ್ಯ

**ವನಮನವರು:** ಹೊನ್ನೇಶ, ಹೊನ್ನಮ್ಮ, ಹೊನ್ನಪ್ಪ, ಹೊನ್ನಯ್ಯ, ಕರಿಯಪ್ಪ, ಕರಿಯಣ್ಣ, ಕರಿಯಮ್ಮ

**ಕಾಗೇನವರು:** ಜವಲಿಂಗಮ್ಮ, ಜವರಮ್ಮ, ಜವರಯ್ಯ, ಕರಿಯಮ್ಮ

**ಮಾಣಸೇನವರು:** ಮಲ್ಲೇಶಪ್ಪ, ಮಲ್ಲಮ್ಮ

**ಕಂಬಳಿಯವರು:** ಮದ್ದಮ್ಮ, ಮದ್ದಯ್ಯ

**ಯಲೆನವರು:** ಬೊಮ್ಮಲಿಂಗಯ್ಯ, ಬೊಮ್ಮಯ್ಯ, ಬೊಮ್ಮಕ್ಕ

**ಮಾಯಿನವರು:** ಲಕ್ಷ್ಮಯ್ಯ, ಲಕ್ಷ್ಮಮ್ಮ, ಆಂಜನಪ್ಪ, ಆಂಜನಮ್ಮ

**ಅರಳೇನವರು:** ರಾಮಯ್ಯ, ರಾಮಕ್ಕ, ಜಲ್ದಪ್ಪ, ಜಲ್ದಮ್ಮ, ಹನುಮಕ್ಕ

**ಗರಿಕೇನವರು:** ಜಲ್ದಪ್ಪ, ಜಲ್ದಮ್ಮ, ಆಂಜಿನಮ್ಮ, ನಾಗಮ್ಮ, ನಾಗಪ್ಪ

**ಸಾರಂಗದವರು:** ಜಲ್ದಪ್ಪ, ಜಲ್ದಮ್ಮ, ನರಸಯ್ಯ, ನರಸಮ್ಮ

**ರಾವುತದವರು:** ಗುಜ್ಜಾರಪ್ಪ, ಗುಜ್ಜಾರಮ್ಮ, ಹನುಮಂತಯ್ಯ, ಹನುಮಕ್ಕ

**ಹುತ್ತದವರು:** ವೀರಚಿಕ್ಕಣ್ಣ, ಜಲದಪ್ಪ, ಜಲ್ದಮ್ಮ

**ಗುಡಿಯವರು:** ನರಸಿಂಹಯ್ಯ, ನರಸಿಂಹಮೂರ್ತಿ, ಸರಸಮ್ಮ, ಹನುಮಂತಯ್ಯ

**ಜರಿಯವರು:** ವೀರಭದ್ರಯ್ಯ, ವೀರಭದ್ರಮ್ಮ

**ಗಾಳೇನವರು:** ಮಾಳಮ್ಮ, ಗಂಗಮಾಳಯ್ಯ, ಮಾಳಪ್ಪ

**ಬಡವನವರು:** ಚೌಡಪ್ಪ, ಚೌಡಮ್ಮ

**ದಸಲೇನವರು:** ಹನುಮಂತಪ್ಪ, ಹನುಮಕ್ಕ, ರಂಗನಾಥಯ್ಯ, ರಂಗಮ್ಮ

**ವುಳ್ಳೇನವರು:** ಲಕ್ಷ್ಮಯ್ಯ, ಲಕ್ಷ್ಮಮ್ಮ, ಈರಮಲ್ಲಮ್ಮ, ಈರಮಲ್ಲಯ್ಯ

**ಅಷ್ಟೇನವರು:** ಲಕ್ಷ್ಮಮ್ಮ, ಲಕ್ಷ್ಮಯ್ಯ

**ಸಹಸ್ರದವರು:** ವೆಂಕಟಯ್ಯ, ವೆಂಕಟಮ್ಮ, ವೆಂಕಟರಾಮಯ್ಯ, ರಮಣಮ್ಮ

**ದಮಗತ್ತಿಯವರು:** ಹನುಮಂತಯ್ಯ, ಹನುಮಕ್ಕ, ಜಲ್ದಪ್ಪ, ಜಲ್ದಮ್ಮ

**ಕಗ್ಗೆನವರು:** ಮಂದಯ್ಯ, ಮಂದಮ್ಮ

**ಮೀಸ್ಲೇನವರು:** ರಂಗನಾಥ, ರಂಗಪ್ಪ, ಜಲ್ದಮ್ಮ, ಜಲ್ದಪ್ಪ

**ಒಳಕಲ್ಲುನವರು:** ಭೈರಪ್ಪ, ಬೈರಮ್ಮ, ಸಿದ್ದಪ್ಪ, ಸಿದ್ದಮ್ಮ, ಮಾರಮ್ಮ, ಮಾರಪ್ಪ, ರಂಗಪ್ಪ, ರಂಗಮ್ಮ

ಈ ಮೇಲಿನ ಎಲ್ಲಾ ಬೆಡಗುಗಳು ಒಕ್ಕಲಿಗ ಸಮುದಾಯದ ಕುಂಚಿಟಿಗ ಎಂಬ ಉಪಜಾತಿಯಲ್ಲಿ ಬರುವಂತಹವುಗಳಾಗಿದ್ದು ಈ ಬೆಡಗುಗಳಲ್ಲಿ ಈ ರೀತಿಯ ಹೆಸರುಗಳು ಬಳಕೆಯಲ್ಲಿವೆ. ಈ ಎಲ್ಲಾ ಹೆಸರುಗಳು ಹೆಚ್ಚಾಗಿ ಎರಡನೇ ತಲೆಮಾರಿನ ಹಿಂದಕ್ಕೆ ಹೆಚ್ಚು ಬಳಕೆಯಾಗಿದ್ದು ಮೂರನೆಯ ತಲೆಮಾರಿನಲ್ಲಿ ಈ ರೀತಿಯ ಹೆಸರುಗಳು ಬಳಕೆಯಲ್ಲಿಲ್ಲ. ಮತ್ತು ಈ ತಲೆಮಾರಿನ ಹೆಸರುಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಸಂಸ್ಕೃತ ಮೂಲದ ಹಾಗೂ ಭಾವ ಸೂಚಕ ಹೆಸರುಗಳು ಹೆಚ್ಚು ಬಳಕೆಯಲ್ಲಿದ್ದು ಅವುಗಳಿಗೆ ವಾರ್ಗಿಕವಾಗಿ 'ಗೌಡ' ಎಂಬ ಪ್ರತ್ಯಯ ಸೇರಿಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ಅಂದರೆ ಒಕ್ಕಲಿಗ ಕರ್ನಾಟಕದ ಒಂದು ಪ್ರಮುಖ ಸಮುದಾಯ. ಒಕ್ಕಲಿಗ ಎಂದರೆ ಸಂಸಾರಿ, ಕುಟುಂಬ ಜೀವಿ, ಬೇಸಾಯಗಾರ ಎಂಬರ್ಥಗಳಿವೆ, ಒಕ್ಕಲಿಗರು ಮೂಲತಃ ಕೃಷಿಕರು. ಒಕ್ಕಲಿಗ ಎಂಬ ಪದ ಕರ್ನಾಟಕದಲ್ಲಿ ಗೌಡರು ಎಂಬ ಸಂಕುಚಿತ ಅರ್ಥಕ್ಕೆ ಒಳಗಾಗಿದೆ. ದಕ್ಷಿಣ ಕರ್ನಾಟಕದ ಪ್ರತಿಹಳ್ಳಿಗಳಲ್ಲಿ ಒಕ್ಕಲಿಗರಿದ್ದಾರೆ. ಒಕ್ಕಲಿಗ ಪದಕ್ಕೆ 'ಗೌಡ' ಎಂಬ ಪ್ರತ್ಯಯ ಬಳಕೆಗೆ ಬಂದು ಅದು ಒಂದು ಸಮುದಾಯವಾಗಿ ದಕ್ಷಿಣ ಕರ್ನಾಟಕದ ಭಾಗದಲ್ಲಿ ರೂಪಗೊಂಡಿದೆ. ಆದರೆ ಉತ್ತರಕರ್ನಾಟಕದ ಕೆಲವು ಭಾಗಗಳಲ್ಲಿ ಲಿಂಗಾಯಿತ, ಗೊಲ್ಲ, ಕುರುಬ ಮುಂತಾದ ಸಮುದಾಯಗಳ ಹೆಸರುಗಳಲ್ಲಿ 'ಗೌಡ' ಪ್ರತ್ಯಯ ಬಳಕೆಯಾಗುತ್ತಿದೆ. ಈ ಪ್ರತ್ಯಯವು ಪ್ರಾಚೀನ ಕಾಲದಿಂದಲೇ ರೂಢಿಯಲ್ಲಿತ್ತು ಎಂಬುದಕ್ಕೆ ಶಾಸನಗಳಲ್ಲಿ ದಾಖಲೆಗಳು ಸಿಗುತ್ತವೆ. ಗೌಡ ಎಂದರೆ ಯಜಮಾನ, ನಾಯಕ, ಒಡೆಯ, ಎಂಬರ್ಥಗಳೂ ಇದ್ದು ಗಾವುಡ, ಗೌಡ ಎಂದೂ ಕರೆಯಲಾಗಿದೆ. ಗೌಡ ಎಂಬುದಕ್ಕೆ ಗಾವುಂಡ, ಗೌಡ, ಊರಿನ ಮುಖಂಡ ಮುಂತಾದ ಅರ್ಥಗಳಿವೆ. ಇವು

ಆರಂಭದ ಕಾಲದಿಂದ ಅಧಿಕಾರವಾಚಿಗಳಾಗಿದ್ದು ನಂತರ ವೃತ್ತಿವಾಚಿಗಳಾಗಿ ಪ್ರಸ್ತುತ ಒಂದು ಜಾತಿಗೆ ಸೀಮಿತವಾಗಿರುವುದನ್ನು ಕಾಣಬಹುದಾಗಿದೆ. ತುಮಕೂರು ಪರಿಸರದಲ್ಲಿನ ಎರಡನೆಯ ತಲೆಮಾರಿನವರೆಗಿನ ವ್ಯಕ್ತಿನಾಮಗಳಲ್ಲಿ ಹೆಚ್ಚು 'ಗೌಡ' ಪ್ರತ್ಯಯ ಬಳಕೆಯಾಗಿಲ್ಲ. ಆದರೆ ಆಧುನಿಕ ಸಂದರ್ಭದಲ್ಲಿ 'ಗೌಡ' ಪ್ರತ್ಯಯವನ್ನೊಳಗೊಂಡ ಹೆಸರುಗಳು ಒಕ್ಕಲಿಗ ಸಮುದಾಯದಲ್ಲಿ ಹೆಚ್ಚಾಗಿ ಬಳಕೆಯಲ್ಲಿವೆ.

**ಉದಾ:–**

| **'ಅ' ಪಟ್ಟಿ** | **'ಬ' ಪಟ್ಟಿ** |
| --- | --- |
| **ಪುರುಷವಾಚಿ** | **ಸ್ತ್ರೀವಾಚಿ** |
| ರಂಜಿತ್‌ಗೌಡ | ಪ್ರಿಯಾಂಕಗೌಡ |
| ಮನುಗೌಡ | ತೇಜಸ್ವಿನಿಗೌಡ |
| ರಮೇಶ್‌ಗೌಡ | ಪ್ರಕೃತಿಗೌಡ |
| ಉಲ್ಲಾಸ್‌ಗೌಡ | ಐಶ್ವರ್ಯಗೌಡ |
| ಜೀವನ್‌ಗೌಡ | ಪೃಥ್ವಿಗೌಡ |
| ಪ್ರೀತಮ್‌ಗೌಡ | ಹರ್ಷಿತಾಗೌಡ |
| ವರ್ಣಿತ್‌ಗೌಡ | ಸುಪ್ರಿಯಗೌಡ |

**ಲಿಂಗಾಯಿತ**

ಕರ್ನಾಟಕದ ಬಹುಸಂಖ್ಯಾತ ಸಮುದಾಯಗಳಲ್ಲಿ ಒಂದಾದ ಲಿಂಗಾಯಿತ ಸಮುದಾಯವು ತುಮಕೂರು ಪರಿಸರದಲ್ಲಿ ಸಂಖ್ಯಾನುಪಾತದಲ್ಲಿ ಮೊದಲನೆಯ ಸ್ಥಾನದಲ್ಲಿದೆ ಎಂದು ಸರ್ಕಾರದ ಸಮೀಕ್ಷೆಗಳಿಂದ ತಿಳಿದುಬಂದಿದೆ. ಬಹುಸಂಖ್ಯಾತರನ್ನೊಳಗೊಂಡಿರುವ ಈ ಸಮುದಾಯದಲ್ಲಿ ಹಲವು ಉಪ ಪಂಗಡಗಳಿದ್ದು ಅದರಲ್ಲಿ ಪ್ರಮುಖವಾಗಿ ವೀರಶೈವ ಲಿಂಗಾಯಿತ, ಬಣಜಿಗ ಲಿಂಗಾಯಿತ, ನೊಣಬ ಲಿಂಗಾಯಿತ, ಸಾದು ಲಿಂಗಾಯಿತ ಪಂಗಡದ ಜನರು ತುಮಕೂರು ಪರಿಸರದಲ್ಲಿ ಹೆಚ್ಚು ಇದ್ದಾರೆ. ಈ ಎಲ್ಲಾ ಪಂಗಡಗಳು ಸಾಮಾನ್ಯವಾಗಿ ಒಂದೇ ಸಂಸ್ಕೃತಿಯನ್ನು ಅನುಸರಿಸುತ್ತಿದ್ದು ಶಿವನ ಆರಾಧಕರಾಗಿದ್ದಾರೆ. ಆದರೆ ವೈವಾಹಿಕ ಸಂಬಂಧಗಳ ವಿಷಯದಲ್ಲಿ ಮಾತ್ರ ಭಿನ್ನತೆಗಳಿರುವುದು ಕಂಡುಬಂದಿದೆ. ಈ ಸಮುದಾಯದವರು ಶಿವ, ಬಸವ ಮತ್ತು ವೀರಭದ್ರ ದೇವರ ಮತ್ತು ಶರಣರನ್ನು ಆರಾಧ್ಯ ದೈವವನ್ನಾಗಿಸಿಕೊಂಡಿದ್ದಾರೆ. ಇವುಗಳ ಜೊತೆಗೆ ಸಾಧುಸಂತರ, ಸ್ವಾಮೀಜಿಗಳ ಪ್ರಭಾವ ಈ ಸಮುದಾಯಗಳ ಮೇಲೆ ಆಗಿರುವುದನ್ನು ಕಾಣಬಹುದು. ಅಂದರೆ ತುಮಕೂರಿನ ಶಿವಕುಮಾರ ಸ್ವಾಮಿ, ಸಿದ್ಧಲಿಂಗ ಸ್ವಾಮಿ, ಶಿವಾನಂದ ಶಿವಾಚಾರ್ಯ ಸ್ವಾಮಿ, ಗೌರಿಶಂಕರ ಸ್ವಾಮಿ, ಯಡಿಯೂರಿನ ಸಿದ್ಧಲಿಂಗ ಯತಿಗಳು ಹಾಗೂ ತುಮಕೂರು ಜಿಲ್ಲೆಯಲ್ಲಿರುವ ಸಿದ್ಧರಾಮೇಶ್ವರ, ನಂಜುಂಡೇಶ್ವರ ವೀರಭದ್ರೇಶ್ವರ ಮುಂತಾದ ದೇವರ ಪ್ರಭಾವ ಈ ಸಮುದಾಯಗಳ ಮೇಲಾಗಿರುವುದು ಅವರು ಇಟ್ಟುಕೊಂಡಿರುವ ಹೆಸರುಗಳಿಂದ ತಿಳಿದುಬರುತ್ತದೆ.

ಈ ಸಮುದಾಯದ ವ್ಯಕ್ತಿನಾಮಗಳು ಇತರೆ ಸಮುದಾಯಗಳಿಗಿಂತ ಭಿನ್ನತೆಯಿಂದ ಕೂಡಿರುವುದು ತಿಳಿದುಬಂದಿದೆ. ಅಂದರೆ ಅವರ ವ್ಯಕ್ತಿನಾಮಗಳು ಹೆಚ್ಚು ಶಿವನ ಇತರೆ ಹೆಸರುಗಳಿಂದ ಕೂಡಿದ್ದರೆ, ಸ್ತ್ರೀವಾಚಿ ಹೆಸರುಗಳು ಪಾರ್ವತಿ, ಅಕ್ಕಮಹಾದೇವಿ, ಗಂಗಾಂಬಿಕ, ನೀಲಾಂಬಿಕೆ ಮುಂತಾದ ಹೆಸರುಗಳಿಂದ ಕೂಡಿದೆ. ಇವುಗಳ ಜೊತೆಗೆ ಈ ಸಮುದಾಯದ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳಾಗಿ ಸ್ವಾಮಿ, ಆರಾಧ್ಯ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ. ಈ ಎಲ್ಲಾ ರೀತಿಯ ವ್ಯಕ್ತಿನಾಮಗಳನ್ನು ಪ್ರಾಚೀನ ಕಾಲದಿಂದ ಇಂದಿನ ಎರಡನೇ ತಲೆಮಾರಿನ ವ್ಯಕ್ತಿನಾಮಗಳವರೆಗೂ ಗುರುತಿಸಬಹುದು. ಆದರೆ ಆಧುನಿಕ ಸಂದರ್ಭದಲ್ಲಿ ಈ ರೀತಿಯ ಹೆಸರುಗಳು ಕಡಿಮೆಯಾಗಿದ್ದು ಆ ಜಾಗದಲ್ಲಿ ಆಧುನಿಕ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಭಾವನಾಮ ಸಂಬಂಧಿ ವ್ಯಕ್ತಿನಾಮಗಳು ಬಳಕೆಯಾಗುತ್ತಿವೆ. ಲಿಂಗಾಯಿತ ಸಮುದಾಯದ ವ್ಯಕ್ತಿನಾಮಗಳನ್ನು ಈ ಕೆಳಕಂಡಂತೆ ಕಾಣಬಹುದು.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರೇಣುಕಾರಾಧ್ಯ | ಪಾರ್ವತಮ್ಮ |
| ತೊಂಟಾರಾಧ್ಯ | ಪಾರ್ವತಿ |
| ವೀರಭದ್ರಯ್ಯ | ವಿಶಾಲಾಕ್ಷಿ |
| ಸಿದ್ದರಾಮಯ್ಯ | ಗೌರಮ್ಮ |
| ಕುಮಾರಸ್ವಾಮಿ | ಶಿವರುದ್ರಮ್ಮ |
| ಶಂಕರಪ್ಪ | ಶಿವಮ್ಮ |
| ಈಶ್ವರ | ಸಿದ್ದಗಂಗಮ್ಮ |
| ನಂದೀಶ್ | ಸಿದ್ದಲಿಂಗಮ್ಮ |
| ಗುರುರೇಣುಕಾರಾಧ್ಯ | ಬಸಮ್ಮ |
| ಶಶಿಧರ | ಗಂಗಾಂಬಿಕೆ |
| ಪಂಚಾರಕ್ಷರಸ್ವಾಮಿ | ನೀಲಾಂಬಿಕೆ |
| ಬಸವರಾಜ | ಅಕ್ಕಮಹಾದೇವಿ |
| ಸಿದ್ದರಾಮಣ್ಣ | ಶರಣಮ್ಮ |
| ಶಿವಕುಮಾರ | ಚನ್ನಮ್ಮ |
| ಶಿವಕುಮಾರಸ್ವಾಮಿ | ಈಶ್ವರಿ |
| ಸಿದ್ದಲಿಂಗಯ್ಯ | |
| ಸಿದ್ದರಾಮೇಶ | |
| ಸಿದ್ದಲಿಂಗಸ್ವಾಮಿ | |

ನಂಜುಂಡಯ್ಯ

ನಂಜುಂಡಸ್ವಾಮಿ

ಉಜ್ಜನಿಸ್ವಾಮಿ

ನೀಲಕಂಠ

ಪರಮೇಶ

ವೀರಭದ್ರಯ್ಯ

ವೀರಭದ್ರಸ್ವಾಮಿ

ಗಂಗಾಧರ

ಗಂಗಾಧರಸ್ವಾಮಿ

ಗೌರಿಶಂಕರ

ಚಂದ್ರಶೇಖರ

**ಗೊಲ್ಲ**

ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಗೊಲ್ಲ ಸಮುದಾಯ ಪ್ರಮುಖವಾದುದು. ಈ ಸಮುದಯವು ಆಧುನಿಕ ಸಂದರ್ಭದಲ್ಲಿ ಇತರೆ ಸಮುದಾಯಗಳೊಂದಿಗೆ ಬೆರೆತು ಜೀವಿಸುತ್ತಿದ್ದರು ಇವರ ಮೂಲ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಈ ಸಮುದಾಯದವರು ತುಮಕೂರು ಪರಿಸರದಲ್ಲಿ ಬಹುಸಂಖ್ಯಾತರಾಗಿದ್ದು ರಾಜಕೀಯವಾಗಿಯೂ ನಿರ್ಣಾಯತ ಪಾತ್ರ ವಹಿಸಿದ್ದಾರೆ. ಈ ಸಮುದಾಯದ ಹೆಸರುಗಳು ಇತರೆ ಸಮುದಾಯದ ವ್ಯಕ್ತಿನಾಮಗಳಿಗಿಂತ ಭಿನ್ನವಾಗಿವೆ. ಅವರ ಹೆಸರುಗಳಿಂದ ಸುಲಭವಾಗಿ ಅವರನ್ನು ಗೊಲ್ಲ ಸಮುದಾಯಕ್ಕೆ ಸೇರಿದವರೆಂದು ಗುರುತಿಸಬಹುದು. ಅಷ್ಟೊಂದು ವಿಶೇಷತೆಯಿಂದ ಕೂಡಿದೆ. ಈ ಬುಡಕಟ್ಟು ಸಮುದಾಯದ ಪ್ರಮುಖದೈವ ಶ್ರೀಕೃಷ್ಣ, ಶ್ರೀಕೃಷ್ಣನನ್ನು ವಿವಿಧ ಹೆಸರುಗಳಿಂದ ವಿವಿಧ ದೇವರನ್ನು ಮಾಡಿಕೊಂಡು ಆರಾಧಿಸುತ್ತಾ ಬಂದಿದ್ದಾರೆ. ಹಾಗೆಯೇ ಈ ಸಮುದಾಯದ ಮತ್ತೊಂದು ವಿಶೇಷವೆಂದರೆ ಈ ಸಮುದಾಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಂಸ್ಕೃತಿಕ ವೀರರನ್ನು ಕಾಣಬಹುದು. ಈ ಸಮುದಾಯದಲ್ಲಿದ್ದಷ್ಟು ಸಾಂಸ್ಕೃತಿಕ ವೀರರು ತುಮಕೂರು ಪರಿಸರದ ಬೇರಾವ ಸಮುದಾಯಗಳಲ್ಲಿಯೂ ಕಾಣಲಾಗದು. ಹಾಗಾಗಿ ಇವರ ಹೆಸರುಗಳು ಹೆಚ್ಚಾಗಿ ಈ ಸಾಂಸ್ಕೃತಿಕ ವೀರರ ಹೆಸರುಗಳಿಂದಲೇ ಕೂಡಿರುತ್ತವೆ. ಈ ಸಮುದಾಯಗಳಲ್ಲಿ ಸ್ತ್ರೀದೇವತೆಗಳು ಕಡಿಮೆ ಎಂದೇ ಹೇಳಬಹುದು. ಇವರ ವ್ಯಕ್ತಿನಾಮಗಳಲ್ಲಿ ಸಾಂಸ್ಕೃತಿಕ ವೀರರ ಹೆಸರುಗಳನ್ನೇ ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ಬಳಕೆಯಾಗುತ್ತಿವೆ. ಆದರೆ ಈ ರೀತಿಯ ಎಲ್ಲಾ ಹೆಸರುಗಳು ಎರಡನೇ ತಲೆಮಾರಿನವರೆಗೆ ಹೆಚ್ಚು ಬಳಕೆಯಲ್ಲಿದ್ದು ಮೊದಲನೇ ತಲೆಮಾರಿನ ಹೆಸರುಗಳಲ್ಲಿ ಆಧುನಿಕತೆಯ ಪ್ರಭಾವವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂದರೆ ಮೂರನೆಯ ತಲೆಮಾರಿನ ವ್ಯಕ್ತಿನಾಮಗಳಲ್ಲಿ ಹೆಚ್ಚು ಭಾವನಾಮ ಸಂಬಂಧಿ ಹೆಸರುಗಳೇ ಬಳಕೆಯಾಗುತ್ತಿದ್ದು ಹಿಂದಿನ ಸಾಂಸ್ಕೃತಿಕ ವೀರರ, ದೈವದ ಹೆಸರುಗಳ

ಬಳಕೆ ಕಡಿಮೆಯಾಗಿವೆ ಎಂದು ಹೇಳಬಹುದು. ಈ ಸಮುದಾಯದಲ್ಲಿ ಎರಡನೆಯ ತಲೆಮಾರಿನವರೆಗೆ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಈ ಕೆಳಕಂಡಂತೆ ತಿಳಿಯಬಹುದಾಗಿದೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಜುಂಜಪ್ಪ | ಜುಂಜಮ್ಮ |
| ಕೃಷ್ಣಪ್ಪ | ಕಾಟಮ್ಮ |
| ಕೃಷ್ಣಯ್ಯ | ಚಿಕ್ಕಮ್ಮ |
| ನಾರಾಯಣಪ್ಪ | ಚಿತ್ತಮ್ಮ |
| ಕ್ಯಾತಪ್ಪ | ಸಿರಿಯಮ್ಮ |
| ಚಿತ್ತಪ್ಪ | ಹೀರಮ್ಮ |
| ಚಿತ್ರಲಿಂಗಯ್ಯ | ಯತ್ತಮ್ಮ |
| ಚಿಕ್ಕಪ್ಪಯ್ಯ | ಪಾತಲಿಂಗಮ್ಮ |
| ಚಿಕ್ಕಣ್ಣ | ಜಲ್ದಮ್ಮ |
| ಎಳೆಯಪ್ಪ | |
| ಕಾಟಯ್ಯ | |
| ಕಾಟ್ಟಣ್ಣ | |
| ಸಿರಿಯಣ್ಣ | |
| ಹೀರಣ್ಣ | |
| ಯತ್ತಪ್ಪ | |
| ಕಾಟಲಿಂಗಯ್ಯ | |
| ಪಾತಲಿಂಗಯ್ಯ | |
| ಜಡೆಯಣ್ಣ | |
| ಜಡೆಯಪ್ಪ | |
| ಕಾಟಪ್ಪ | |
| ಪಾತಣ್ಣ | |
| ವೀರಗಾರಯ್ಯ | |
| ನರಸಿಂಹಯ್ಯ | |
| ಲಕ್ಷ್ಮೀನಾರಾಯಣ | |
| ಕಾಟೇಶ | |

ಜಲ್ದಯ್ಯ

ಜಲ್ದಪ್ಪ

ಬೊಮ್ಮಯ್ಯ

ಭೂತಪ್ಪ

**ಬ್ರಾಹ್ಮಣ**

ತುಮಕೂರು ಪರಿಸರದಲ್ಲಿ ಬ್ರಾಹ್ಮಣ ಸಮುದಾಯದವರು ಅಲ್ಪಸಂಖ್ಯಾತರಾಗಿದ್ದಾರೆ. ಇವರು ವಿಷ್ಣ ಮತ್ತು ಶಿವನ ಆರಾಧಕರಾಗಿರುವುದು ಅವರು ಇಟ್ಟುಕೊಂಡಿರುವ ಹೆಸರುಗಳಿಂದ ತಿಳಿಯುತ್ತದೆ. ಈ ಸಮುದಾಯದಲ್ಲಿ ವಿಷ್ಣುವಿನ ಸಹಸ್ರ ನಾಮಗಳನ್ನು ಹೆಚ್ಚಾಗಿ ಬಳಕೆ ಮಾಡುತ್ತಿರುವುದು ಕಂಡುಬರುತ್ತದೆ. ಈ ಸಮುದಾಯದ ಸ್ತ್ರೀನಾಮಗಳಲ್ಲಿ ಲಕ್ಷ್ಮಿ, ಪಾರ್ವತಿ, ರುಕ್ಮಿಣಿ, ಸುಭದ್ರ ಮುಂತಾದ ದೈವನಾಮ ಮತ್ತು ಪುರಾಣ ನಾಮಗಳನ್ನು ಹೆಚ್ಚಾಗಿ ಬಳಸುತ್ತಿರುವುದನ್ನು ಗುರುತಿಸಲಾಗಿದೆ. ಬ್ರಾಹ್ಮಣ ಸಮುದಾಯದ ಸ್ತ್ರೀನಾಮಗಳಲ್ಲಿನ ಕೆಲವು ಹೆಸರುಗಳಲ್ಲಿ 'ಬಾಯಿ' ಎಂಬ ವಾರ್ಗಿಕ ಬಳಕೆಯಾಗಿರುವುದನ್ನು ಕಾಣಬಹುದು. ಬ್ರಾಹ್ಮಣ ಸಮುದಾಯದ ಪುರುಷವಾಚಕ ಹೆಸರುಗಳಲ್ಲಿ ರಾವ್, ಅಯ್ಯಂಗಾರ್, ಶಾಸ್ತ್ರಿ, ಆಚಾರ್ಯ, ಹೆಗ್ಗಡೆ, ಶರ್ಮ, ಭಟ್, ರಾಯ ಮುಂತಾದ ವಾರ್ಗಿಕಗಳು ಹೆಸರುಗಳೊಂದಿಗೆ ಸೇರಿಕೊಂಡಿವೆ. ಈ ಸಮುದಾಯದಲ್ಲಿ ವಿಷ್ಣುವಿನ ಜೊತೆಗೆ ಗುರುರಾಘವೇಂದ್ರಸ್ವಾಮಿ, ಆಂಜನೇಯಸ್ವಾಮಿ ಹಾಗೂ ಕೆಲವರು ಶಿವನ ಆರಾಧಕರಾಗಿರುವುದನ್ನು ಈ ಪರಿಸರದಲ್ಲಿ ಕಾಣಬಹುದು. ಈ ಸಮುದಾಯಗಳಲ್ಲಿಯೂ ಕೂಡ ಈ ಎಲ್ಲಾ ರೀತಿಯ ಹೆಸರುಗಳು ಮೊದಲನೆ ಮತ್ತು ಎರಡನೆಯ ತಲೆಮಾರಿನವರೆಗೆ ಮಾತ್ರ ಹೆಚ್ಚಾಗಿ ಬಳಕೆಯಾಗಿದ್ದು ಮೂರನೆಯ ತಲೆಮಾರಿನ ಸಂದರ್ಭದ ಹೊತ್ತಿಗೆ ಇವುಗಳ ಬಳಕೆ ಕಡಿಮೆಯಾಗಿದ್ದು ಆ ಜಾಗದಲ್ಲಿ ಭಾವನಾಮ ಸಂಬಂಧಿ ವ್ಯಕ್ತಿನಾಮಗಳು ಹೆಚ್ಚು ಪ್ರವೇಶ ಪಡೆದಿವೆ. ಎರಡನೆಯ ತಲೆಮಾರಿನವರೆಗೆ ಬಳಕೆಯಲ್ಲಿದ್ದ ಈ ಸಮುದಾಯದ ಹೆಸರುಗಳನ್ನು ಈ ಕೆಳಕಂಡಂತೆ ನೋಡಬಹುದು.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮಾಧವರಾವ್ | ಜಾನಕಮ್ಮ |
| ನಾಗರಾಜರಾವ್ | ರುಕ್ಮಿಣಮ್ಮ |
| ಕೃಷ್ಣಶಾಸ್ತ್ರಿ | ಪಾರ್ವತಮ್ಮ |
| ರಂಗಾಚಾರ್ಯ | ಪಾರ್ವತಿಬಾಯಿ |
| ಶ್ರೀನಿವಾಸ ಅಯ್ಯಂಗಾರ್ | ಜಾನಕಿಬಾಯಿ |
| ಗೋಪಾಲಭಟ್ಟ | ಸುಭದ್ರಮ್ಮ |
| ರಾಮಚಂದ್ರಶರ್ಮ | ಸುಬ್ಬಮ್ಮ |

| | |
|---|---|
| ನಾಗಭೂಷಣ ಸ್ವಾಮಿ | ರಮಾಮಣಿ |
| ಸುಬ್ಬರಾವ್ | ಲಕ್ಷ್ಮಮ್ಮ |
| ಕೃಷ್ಣಶಾಸ್ತ್ರಿ | ಲಕ್ಷ್ಮಿದೇವಿ |
| ರಾಧಾಕೃಷ್ಣ ಹೆಗ್ಗಡೆ | ಸೀತಮ್ಮ |
| ರಾಮಕೃಷ್ಣಭಟ್ | ಶ್ಯಾಮಲಮ್ಮ |
| ಹರೀಶ್‌ಭಟ್ | |
| ರಾಘವೇಂದ್ರರಾಯ | |
| ವಿಷ್ಣುಶರ್ಮ | |
| ನಾರಾಯಣಪ್ಪ | |
| ತಿರುಮಲ್ಲಯ್ಯ | |
| ರಂಗಪ್ಪ | |
| ಪಾಂಡುರಂಗಯ್ಯ | |
| ಸತ್ಯನಾರಾಯಣ | |
| ಲಕ್ಷ್ಮೀನಾರಾಯಣ | |
| ನರಸಿಂಹಶಾಸ್ತ್ರಿ | |
| ವೆಂಕಟಜೋಯಿಸ | |
| ನರಹರಿಶಾಸ್ತ್ರಿ | |
| ನಂಜುಂಡಸ್ವಾಮಿ | |

**ಕುರುಬ**

ಕರ್ನಾಟಕದ ಬಹುಸಂಖ್ಯಾತ ಸಮುದಾಯವಾದ ಕುರುಬ ಜನಾಂಗವು ತುಮಕೂರು ಪರಿಸರದಲ್ಲಿ ನೆಲೆಸಿದ್ದಾರೆ. ಇವರ ಮೂಲಕಸುಬು ಕುರಿಸಾಗಾಣಿಕೆಯಾಗಿದ್ದು ನಂತರದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಸಮುದಾಯದಲ್ಲಿ ನೂರಕ್ಕು ಹೆಚ್ಚು ಉಪಪಂಗಡಗಳಿವೆ ಎಂದು ಗುರುತಿಸಲಾಗಿದೆ(ಬಿರಾದಾರ ಬಿ.ಜಿ, ೨೦೦೭, ಕುರುಬರ ಗುರು ಒಡೆಯರು:ಸಾಂಸ್ಕೃತಿಕ ಅಧ್ಯಯನ). ಇವರುಗಳಲ್ಲಿ ಸಾಕಷ್ಟು ಸಾಂಸ್ಕೃತಿಕ ವೀರರಿರುವುದನ್ನು ತುಮಕೂರು ಪರಿಸರದಲ್ಲಿ ಅವರು ಆಚರಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ತಿಳಿಯುತ್ತದೆ. ಅದರಲ್ಲಿ ಬೀರಲಿಂಗೇಶ್ವರ, ಕಾಡಸಿದ್ದೇಶ್ವರ, ರೇವಣ ಸಿದ್ದೇಶ್ವರ, ಬೀರಪ್ಪ, ಜಲ್ದಪ್ಪ, ಬೊಪ್ಪರಾಯ, ಮೈಲಾರೇಶ್ವರ ಪ್ರಮುಖವಾದವುಗಳಾಗಿವೆ. ಈ ಸಾಂಸ್ಕೃತಿಕ ವೀರರ ಹೆಸರುಗಳು ಈ ಸಮುದಾಯದ ಹೆಸರುಗಳಲ್ಲಿ ಬಳಕೆಯಾಗುತ್ತಿದ್ದು ಸ್ತ್ರೀ ಮತ್ತು ಪುರುಷವಾಚಿ ಎರಡರಲ್ಲೂ ಕಂಡುಬಂದಿವೆ. ಈ ರೀತಿಯ ದೈವವಾಚಿ ಮತ್ತು ಸಾಂಸ್ಕೃತಿಕ ವೀರರ ಹೆಸರುಗಳು ಎರಡನೇ ತಲೆಮಾರಿನವರೆಗೆ ವ್ಯಾಪಕವಾಗಿ ಬಳಕೆಯಾಗುತ್ತಿದ್ದು, ನಂತರದ ದಿನಗಳಲ್ಲಿ ಅವುಗಳ ಬಳಕೆಯ ಪ್ರಮಾಣ ಕಡಿಮೆಯಾಗಿದೆ. ಅಂದರೆ ಆಧುನಿಕ ಸಂದರ್ಭದಲ್ಲಿ

ಮೊದಲನೆಯ ತಲೆಮಾರಿನ ಹೆಸರುಗಳು ಸಾಮಾನ್ಯವಾಗಿ ಇತರೆ ಎಲ್ಲಾ ಸಮುದಾಯಗಳಲ್ಲಿ ಕಂಡುಬರುವಂತಹವುಗಳೇ ಆಗಿವೆ. ಎರಡನೆಯ ತಲೆಮಾರಿನವರೆಗೆ ಬಳಕೆಯಲ್ಲಿದ್ದಂತಹ ಹೆಸರುಗಳನ್ನು ಈ ಕೆಳಕಂಡಂತೆ ನೋಡಬಹುದು.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಬೀರಪ್ಪ | ಬೀರಮ್ಮ |
| ಬೀರಲಿಂಗಪ್ಪ | ಬೀರಲಿಂಗಮ್ಮ |
| ಬೀರಲಿಂಗಯ್ಯ | ರೇವಮ್ಮ |
| ರೇವಣ್ಣ | ರೇವಣ್ಣಸಿದ್ದಮ್ಮ |
| ರೇವಣ್ಣಸಿದ್ದಪ್ಪ | ಹಾಲಮ |
| ರೇವಣ್ಣಸಿದ್ದಯ್ಯ | ಮೈಲಾರಮ್ಮ |
| ಹಾಲಪ್ಪ | ಜಲ್ದಮ್ಮ |
| ಮೈಲಾರಪ್ಪ | |
| ಕಾಡ ಸಿದ್ದಪ್ಪ | |
| ಜಲ್ದಪ್ಪ | |
| ಬೊಪ್ಪರಾಯ | |
| ಬೊಪ್ಪಣ್ಣ | |

**ತಿಗುಳ**

ಕರ್ನಾಟಕದ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ತಿಗಳ ಸಮುದಾಯವೂ ಒಂದು ತುಮಕೂರು ಪರಿಸರದಲ್ಲಿ ಇಂದಿಗೂ ಈ ಸಮುದಾಯದ ಜನರಿದ್ದಾರೆ. ಇವರ ವೃತ್ತಿ ಕೃಷಿ ಉತ್ಪನ್ನ, ತರಕಾರಿ, ಹೂ ಇತ್ಯಾದಿಗಳನ್ನು ಮಾರಾಟ ಮಾಡುವುದಾಗಿದೆ. ಆದರೆ ಇವರು ತಾವು ಕ್ಷತ್ರೀಯ(ಅಗ್ನಿ) ವಂಶದವರೆಂದು ಕರೆದುಕೊಳ್ಳುತ್ತಾರೆ. ಇವರು ಮಹಾಭಾರತದ ಪಾಂಡವ ವಂಶಸ್ಥರೆಂದು ಕರೆದುಕೊಳ್ಳುತ್ತಾರೆ. ಅಂದರೆ ಆ ಸಮುದಾಯದಲ್ಲಿ ಪಾಂಡವರನ್ನು ಸಾಂಸ್ಕೃತಿಕ ವೀರರೆಂದು ಗುರುತಿಸಿಕೊಳ್ಳಲಾಗಿದ್ದು ಆ ಹೆಸರುಗಳನ್ನು ಇಂದಿಗೂ ಆ ಸಮುದಾಯ ಬಳಸುತ್ತಿರುವುದನ್ನು ಕಾಣಬಹುದು. ಆದರೆ ಆಧುನಿಕ ಸಂದರ್ಭದಲ್ಲಿ ಈ ಹೆಸರುಗಳ ಬಳಕೆ ಕಡಿಮೆಯಾಗಿ ಆಧುನಿಕತೆಯಲ್ಲಿ ಬಳಸಲ್ಪಡುತ್ತಿರುವ ಹೆಸರುಗಳು ಬಳಕೆಯಾಗುತ್ತಿವೆ. ಈ ಸಮುದಾಯದಲ್ಲಿ ಬಳಕೆಯಲ್ಲಿದ್ದ ಸಾಂಸ್ಕೃತಿಕ ಹೆಸರುಗಳನ್ನು ಈ ಕೆಳಕಂಡಂತೆ ನೋಡಬಹುದು.

ಉದಾ:

| ‘ಅ’ ಪಟ್ಟಿ | ‘ಬ’ ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಧರ್ಮರಾಯಪ್ಪ | ಕುಂತಮ್ಮ |
| ಧರ್ಮಪ್ಪ | |
| ಭೀಮಪ್ಪ | |
| ಅರ್ಜುನಪ್ಪ | |
| ಸಹದೇವಪ್ಪ | |
| ನಕುಲಯ್ಯ | |
| ಅಶ್ವತ್ಥಾಮ | |
| ಬಲರಾಮ | |
| ಕೃಷ್ಣಪ್ಪ | |

**ನಾಯಕ**

‘ಬೇಡ’, ‘ತಳವಾರ’, ‘ವಾಲ್ಮೀಕಿ’, ‘ಕಿರಾತ’ ಎಂಬ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ನಾಯಕ ಸಮುದಾಯವು ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖವಾದುದಾಗಿದೆ. ಈ ಸಮುದಾಯವು ತುಮಕೂರು ಪರಿಸರದಲ್ಲಿರುವುದನ್ನು ಕಾಣಬಹುದು. ತುಮಕೂರು ಪರಿಸರದಲ್ಲಿರುವ ಈ ಸಮುದಾಯವು ಕೃಷಿಯನ್ನು ಅವಲಂಭಿಸಿದೆ. ಈ ಸಮುದಾಯದಲ್ಲಿ ಪ್ರಮುಖವಾಗಿ ಗ್ರಾಮದೇವತೆಗಳ ಹಾಗೂ ಸಾಂಸ್ಕೃತಿಕ ವೀರರನ್ನು ಆರಾಧಿಸುತ್ತಾ ಬಂದಿದ್ದಾರೆ. ಈ ಆರಾಧ್ಯ ದೈವವಾಗಿರುವ ಗ್ರಾಮದೇವತೆಗಳು ಮತ್ತು ಸಾಂಸ್ಕೃತಿ ವೀರರ ಹೆಸರುಗಳು ಈ ಸಮುದಾಯದ ಹೆಸರುಗಳ ಮೇಲಾಗಿರುವುದು ಕಂಡುಬರುತ್ತದೆ. ಇವುಗಳ ಜೊತೆಗೆ ಪ್ರಾದೇಶಿಕವಾಗಿ ಹೆಚ್ಚು ಪ್ರಭಾವ ಬೀರಿರುವ ದೇವರ ಹೆಸರುಗಳನ್ನು ಈ ಸಮುದಾಯದ ಹೆಸರುಗಳಲ್ಲಿ ಕಾಣಬಹುದು. ಈ ರೀತಿಯ ಹೆಸರುಗಳು ಎಲ್ಲಾ ಸಮುದಾಯಗಳಂತೆ ಎರಡನೆಯ ತಲೆಮಾರಿನವರೆಗೆ ಹೆಚ್ಚು ಬಳಕೆಯಲ್ಲಿದ್ದು ನಂತರದ ಕಾಲದಲ್ಲಿ ಇವುಗಳ ಬಳಕೆ ಕಡಿಮೆಯಾಗಿ ಆ ಜಾಗವನ್ನು ಆಧುನಿಕ ಹೆಸರುಗಳು ಸೇರಿಕೊಂಡಿವೆ. ಪ್ರಾಚೀನ ಕಾಲದಲ್ಲಿ ಕೆಲವು ಸಮುದಾಯಗಳಿಗೆ ನಿರ್ದಿಷ್ಟ ಹೆಸರುಗಳು ಸೀಮಿತವಾಗಿದ್ದವು ಎಂದು ಹೇಳುತ್ತಾರೆ. (ಕಲಬುರ್ಗಿ, ಎಂ.ಎಂ., ೨೦೧೦, ಕನ್ನಡ ನಾಮ ವಿಜ್ಞಾನ, ಪು.೨೦) ಆದರೆ ಆಧುನಿಕ ಸಂದರ್ಭದಲ್ಲಿ ಈ ಎಲ್ಲಾ ಕಟ್ಟುಪಾಡುಗಳನ್ನು ಮೀರಿ ಎಲ್ಲಾ ಸಮುದಾಯಗಳು ಅಂದರೆ ಮೇಲು ಜಾತಿ ಎಂದು ನಿರ್ಧರಿತವಾದಂತಹವರು ಬಳಸುವಂತಹ ಹೆಸರುಗಳನ್ನು ಇಂದು ಕೆಳಸಮುದಾಯಗಳೆಂದು ನಿರ್ಧರಿತವಾದಂತಹ ಜನಾಂಗದವರು ಬಳಸುತ್ತಿರುವುದನ್ನು ಕಾಣುತ್ತೇವೆ. ಹಿಂದೆ ಈ ಸಮುದಾಯವು ಬಳಸುತ್ತಿದ್ದ ಪ್ರಮುಖ ಹೆಸರುಗಳನ್ನು ಇಲ್ಲಿ ನೋಡಬಹುದಾಗಿದೆ.

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೆಂಪಯ್ಯ | ಕೆಂಪಮ್ಮ |
| ಕರಿಯಪ್ಪ | ಕರಿಯಮ್ಮ |
| ಮಾರಣ್ಣ | ಮಾರಮ್ಮ |
| ಮಾರಯ್ಯ | ಓಬಮ್ಮ |
| ಓಬಯ್ಯ | ಬೊಮ್ಮಕ್ಕ |
| ಬೊಮ್ಮಯ್ಯ | ರಾಮಕ್ಕ |
| ರಾಮಯ್ಯ | |

**ಮಾದಿಗ**

ಹರಿಜನ, ಆದಿಕರ್ನಾಟಕ, ಮಾದಿಗ ಎಂಬ ಹೆಸರುಗಳಿಂದ ಕರೆಯುವ ಈ ಸಮುದಾಯವು ತುಮಕೂರು ಪರಿಸರದಲ್ಲಿ ಇದೆ. ಈ ಸಮುದಾಯ ಹೆಚ್ಚು ಕೃಷಿ ಅವಲಂಬಿತವಾಗಿದ್ದು ಜೊತೆಗೆ ಕಾರ್ಮಿಕ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಈ ಸಮುದಾಯ ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಹೊಂದಿದೆ. ಏಕೆಂದರೆ ಈ ಸಮುದಾಯ ಹೆಚ್ಚಾಗಿ ಶಕ್ತಿ ದೇವತೆಗಳ ಆರಾಧಕರಾಗಿದ್ದಾರೆ. ಜೊತೆಗೆ ಗ್ರಾಮದೇವತೆಗಳನ್ನು ಹೆಚ್ಚು ಪೂಜಿಸುತ್ತಾರೆ. ಇವರು ಮಾರಿ, ದುರ್ಗಿ, ಚೌಡಿ, ಶಕ್ತಿದೇವತೆಗಳನ್ನು ಪೂಜಿಸುತ್ತಿದ್ದು ಈ ದೇವತೆಗಳ ಹೆಸರುಗಳನ್ನು ತನ್ನ ಸಮುದಾಯದ ವ್ಯಕ್ತಿಗಳಿಗೆ ಹೆಸರುಗಳಾಗಿ ಬಳಸುತಾರೆ. ಈ ಸಮುದಾಯ ಇವುಗಳ ಜೊತೆಗೆ ಗ್ರಾಮ ದೇವತೆಗಳಾದ ಕೆಂಪಮ್ಮ, ಕರಿಯಮ್ಮ, ಮಣ್ಣಮ್ಮ, ಸುಂಕ್ಲಮ್ಮ, ಪ್ಲೇಗಮ್ಮ, ಪುರದಮ್ಮ, ಮುಂತಾದ ದೇವತೆಗಳ ಆರಾಧಕರಾಗಿದ್ದು ಇವುಗಳ ಹೆಸರುಗಳು ಈ ಸಮುದಾಯದಲ್ಲಿ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಪ್ರಾದೇಶಿಕವಾಗಿ ಪ್ರಭಾವ ಬೀರಿರುವ ದೇವತೆಗಳ ಹೆಸರು ಸಹ ಈ ಸಮುದಾಯದ ವ್ಯಕ್ತಿನಾಮಗಳ ಮೇಲಾಗಿರುವುದು ಕಾಣಬಹುದಾದರೂ ಈ ಹೆಸರುಗಳು ಆಯಾ ಪ್ರದೇಶಕ್ಕೆ ಸೀಮಿತವಾಗಿರುತ್ತದೆ. ಈ ಎಲ್ಲಾ ಹೆಸರುಗಳು ಎರಡನೆಯ ತಲೆಮಾರಿನವರೆಗೆ ಹೆಚ್ಚಾಗಿ ಬಳಕೆಯಲ್ಲಿದ್ದು ಆಧುನಿಕ ಸಂದರ್ಭದಲ್ಲಿ ಇವುಗಳ ಬಳಕೆಯ ಪ್ರಮಾಣ ಕಡಿಮೆಯಾಗಿದೆ. ಅಂದರೆ ಒಂದು ಕಾಲದಲ್ಲಿ ಈ ಸಮುದಾಯದಕ್ಕೆ ಇಂತಹದ್ದೇ ಹೆಸರಿರಬೇಕು ಎಂಬ ಕಟ್ಟುಪಾಡುಗಳಿದ್ದವೆಂದು ಹೇಳಲಾಗಿದ್ದರೂ ಕೂಡ ಆಧುನಿಕ ಸಂದರ್ಭದಲ್ಲಿ ಎಲ್ಲಾ ಸಮುದಾಯದವರಂತೆ ಈ ಸಮುದಾಯವೂ ಆಧುನಿಕ ಸಂದರ್ಭದಲ್ಲಿ ಸಮಾಜದಲ್ಲಿ ಬಳಕೆಯಾಗುತ್ತಿರುವ ಹೆಸರುಗಳನ್ನು ಬಳಸುತ್ತಿದೆ. ಎರಡನೇ ತಲೆಮಾರಿನವರೆಗೂ ಬಳಕೆಯಲ್ಲಿದ್ದ ವ್ಯಕ್ತಿನಾಮಗಳೂ ಈ ಕೆಳಗಿನಂತೆ ನೋಡಬಹುದು.

ಉದಾ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮಾರಪ್ಪ | ಮಾರಮ್ಮ |
| ದುರ್ಗಯ್ಯ | ಮಣ್ಣಮ್ಮ |
| ಚೌಡಪ್ಪ | ದುರ್ಗಮ್ಮ |
| ಕೆಂಪಯ್ಯ | ಕೆಂಪ್ಪಮ್ಮ |
| ಕರಿಯಪ್ಪ | ಕರಿಯಮ್ಮ |
| ಮಣ್ಣಪ್ಪ | ಚೌಡಮ್ಮ |
| ಸುಂಕ್ಲಯ್ಯ | ಸುಂಕ್ಲಮ್ಮ |
| ರಂಗಯ್ಯ | |
| ಗುಡ್ಡಯ್ಯ | |

**ಇತರೆ ಸಮುದಾಯಗಳು**

ತುಮಕೂರು ಪರಿಸರದಲ್ಲಿ ಇಲ್ಲಿಯವರೆಗೂ ಚರ್ಚಿಸಲಾದ ಸಮುದಾಯಗಳನ್ನು ಹೊರತುಪಡಿಸಿ ಇನ್ನೂ ಹಲವು ಸಮುದಾಯಗಳು ಇರುವುದನ್ನು ತಿಳಿಯಬಹುದಾಗಿದೆ. ಅಂದರೆ ಹಿಂದೂಧರ್ಮಕ್ಕೆ ಸೇರಿದ ಸಮುದಾಯಗಳೆಂದು ಗುರುತಿಸುವುದಾದರೆ, ಬೋವಿ, ಹೊಲೆಯ, ಲಂಬಾಣಿ, ಕುಂಬಾರ, ಕಮ್ಮಾರ, ಚಮ್ಮಾರ, ಮಡಿವಾಳ, ಬಜಂತ್ರಿ, ವಿಶ್ವಕರ್ಮ, ನೇಕಾರ, ಉಪ್ಪಾರ, ಇನ್ನೂ ಮುಂತಾದ ಸಮುದಾಯಗಳಿದ್ದು ಪ್ರತಿಯೊಂದು ಸಮುದಾಯವೂ ಸಹ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಸಂಸ್ಕೃತಿಗೆ ತಕ್ಕಂತೆ ಸಾಂಸ್ಕೃತಿಕ ವೀರರನ್ನು, ದೇವರನ್ನು ಆರಾಧಿಸುತ್ತಿದ್ದಾರೆ. ಹೀಗೆ ಆರಾಧಿಸಲ್ಪಡುವ ದೇವತೆಗಳ ಹೆಸರುಗಳನ್ನು ತಮ್ಮ ಸಮುದಾಯದ ವ್ಯಕ್ತಿಗಳಿಗೆ ಇಟ್ಟುಕೊಳ್ಳುವ ಸಂಪ್ರದಾಯವನ್ನು ಎಲ್ಲಾ ಸಮುದಾಯಗಳಲ್ಲಿಯೂ ಕಾಣಬಹುದು. ಆದರೆ ಇಲ್ಲಿ ಗುರುತಿಸಲಾದ ಸಮುದಾಯಗಳು ಸಂಖ್ಯೆಯ ದೃಷ್ಟಿಯಿಂದ ತುಮಕೂರು ಪರಿಸರದಲ್ಲಿ ಅಲ್ಪಸಂಖ್ಯಾತರೆನಿಸಿಕೊಂಡಿದ್ದಾರೆ. ಆದಾಗ್ಯೂ ಪ್ರತಿಯೊಂದು ಸಮುದಾಯದ ವ್ಯಕ್ತಿನಾಮಗಳು ವಿಶಿಷ್ಟತೆಯಿಂದ ಕೂಡಿರುವುದು ಎರಡನೆಯ ತಲೆಮಾರಿನವರೆಗೂ ಗೋಚರಿಸುತ್ತದೆ. ಆಧುನಿಕ ಸಂದರ್ಭದಲ್ಲಿ ಆ ರೀತಿಯ ಹೆಸರುಗಳ ಬಳಕೆ ಕಡಿಮೆಯಾಗುತ್ತಾ ಬಂದಿದೆ. ಸಮಾಜದ ಎಲ್ಲಾ ಸಮುದಾಯದವರು ಬಳಸುವ ಹೆಸರುಗಳನ್ನು ಈ ಎಲ್ಲಾ ಸಮುದಾಯಗಳು ಬಳಸುತ್ತಾ ಬಂದಿವೆ. ಆಧುನಿಕ ಸಂದರ್ಭದಲ್ಲಿ ನಿಜನಾಮಗಳು ಅಂದರೆ ನಿರ್ದಿಷ್ಟಗಳು ಎಲ್ಲಾ ಸಮುದಾಯಗಳಲ್ಲಿ ಕಂಡುಬಂದಿದ್ದರೂ ಸಹ ವಾರ್ಗಿಕಗಳಾಗಿ ಅವರ ವೃತ್ತಿ ಅಥವಾ ಜಾತಿಗಳು ಪುನಃ ಪ್ರವೇಶ ಪಡೆದಿರುವುದು ಸಮಾಜದ ಎಲ್ಲಾ ಸಮುದಾಯಗಳಲ್ಲಿ (ಬ್ರಾಹ್ಮಣ ಮತ್ತು ಲಿಂಗಾಯಿತ ಸಮುದಾಯ ಹೊರತುಪಡಿಸಿ) ಕಾಣಬಹುದು.

೪.೩.೩. ವರ್ಗವಾರು ವ್ಯಕ್ತಿನಾಮಗಳಲ್ಲಿ ವ್ಯತ್ಯಾಸ

ಪ್ರಾಚೀನ ಕಾಲದಿಂದಲೂ ಬೆಳೆದುಬಂದಿರುವ ಬಡವ ಮತ್ತು ಬಲ್ಲಿದ ಎಂಬ ಪರಿಕಲ್ಪನೆ ಇಂದಿನವರೆಗೂ ಬೆಳೆದು ಬಂದಿದೆ. ಸಮಾಜದಲ್ಲಿ ಅಂದಿನಿಂದಲೂ ಉಳ್ಳವರು ಮತ್ತು ಇಲ್ಲದವರು ಎಂಬ ಎರಡು ವರ್ಗಗಳು ಇದ್ದು ಅವನ್ನು ಮೇಲ್ವರ್ಗ ಮತ್ತು ಕೆಳವರ್ಗವೆಂದು ಆರ್ಥಿಕ ಶ್ರೇಣೀಕರಣದಲ್ಲಿ ಗುರುತಿಸಬಹುದು. ಆರ್ಥಿಕವಾಗಿ ಪ್ರಬಲರಾಗಿರುವವರು ಸಾಮಾಜಿಕವಾಗಿಯೂ ಪ್ರಬಲರಾಗಿರುತ್ತಾರೆ ಎಂಬ ಕಲ್ಪನೆ ಸತ್ಯವೇ ಆಗಿದೆ. ಹಾಗಾಗಿ ಆರ್ಥಿಕವಾಗಿ ಸಬಲರಾದವರು ಸಾಮಾಜಿಕವಾಗಿ ಸಮಾಜದೊಂದಿಗೆ ಎಲ್ಲಾ ರೀತಿಯಲ್ಲಿ ಬೆರೆತುಕೊಂಡಿರುವುದರಿಂದ ಆ ವರ್ಗದ ಜೀವನ ವಿಧಾನಗಳು ಕೂಡ ಸುಧಾರಿಸಲ್ಪಟ್ಟಿರುತ್ತವೆ. ಹೀಗಾಗಿ ಅವರ ಹೆಸರಿಡುವ ವಿಧಾನವೂ ಆಧುನಿಕತೆಗೆ ಹೊಂದಿಕೊಂಡಿದ್ದು ಸಮಾಜದಲ್ಲಿ ಆಧುನಿಕವಾದ ಹೆಸರೆನಿಸಿಕೊಂಡಂತಹ ಹೆಸರುಗಳನ್ನು ಮೇಲ್ವರ್ಗದವರು ಬಳಸುವುದನ್ನು ಇಂದಿಗೂ ಕಾಣುತ್ತೇವೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಆರ್ಥಿಕವಾಗಿ ದುರ್ಬಲರೆನಿಸಿಕೊಂಡವರು ಸಾಮಾಜಿಕವಾಗಿ ಇತರೆ ಸಮುದಾಯಗಳೊಂದಿಗೆ ಹೊಂದಿಕೊಳ್ಳಲು ಕಷ್ಟಸಾಧ್ಯವಾದ ಕಾರಣ ಅವರು ಅವರ ಮೂಲ ಸಂಸ್ಕೃತಿ ಸಂಪ್ರದಾಯಗಳಿಗೆ ಅನಿವಾರ್ಯವಾಗಿ ಹೊಂದಿಕೊಳ್ಳಬೇಕಾಗುತ್ತದೆ. ಇದರ ಪ್ರಭಾವ ಅವರ ಹೆಸರುಗಳ ಇಟ್ಟುಕೊಳ್ಳುವಲ್ಲಿಯೂ ಆಗುತ್ತದೆ ಎಂದರೆ ತಪ್ಪಾಗಲಾರದು. ಈ ರೀತಿಯ ಬದಲಾವಣೆಗಳು ಸಾಮಾಜದ ಎಲ್ಲಾ ಸಮುದಾಯಗಳಲ್ಲಿಯೂ ಆಗುತ್ತದೆ. ಹಾಗೆಯೇ ತುಮಕೂರು ಪರಿಸರದಲ್ಲಿಯೂ ಈ ಬದಲಾವಣೆಗಳನ್ನು ಗುರುತಿಸಬಹುದಾಗಿದೆ.

೪.೩.೪. ಅಕ್ಷರಸ್ಥರು ಮತ್ತು ಅನಕ್ಷರಸ್ಥರ ವ್ಯಕ್ತಿನಾಮಗಳಲ್ಲಿ ವ್ಯತ್ಯಾಸ

ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ಎಂಬುದು ಮನುಷ್ಯರನ್ನು ಸಮಾಜ ಮುಖಿಯನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಅಂದರೆ ಯಾರು ಶಿಕ್ಷಣ ಪಡೆದು 'ಜ್ಞಾನ ಸಂಪಾಧಿಸಿಕೊಳ್ಳುತ್ತಾರೋ ಅವರು ಸಮಾಜದೊಂದಿಗೆ ಹೊಂದಿಕೊಳ್ಳುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಹೀಗೆ ಯಶಸ್ವಿಯಾದ ಶಿಕ್ಷಿತರು ತಮ್ಮ ಎಲ್ಲಾ ಬದುಕಿನ ವಿಧಾನಗಳಲ್ಲಿ ನೈಪುಣ್ಯತೆಯನ್ನು ಕಂಡುಕೊಳ್ಳುತ್ತಾರೆ. ಈ ವಿಧಾನವನ್ನು ತಮ್ಮ ಸಮುದಾಯದಲ್ಲಿ ಅಥವಾ ತಮ್ಮ ಕುಟುಂಬದಲ್ಲಿ ಹೆಸರಿಡುವಲ್ಲಿಯೂ ಬಳಸಿಕೊಳ್ಳುತಾರೆ. ಯಾವುದೇ ಮಗುವಿಗೆ ಹೆಸರಿಡಬೇಕೆಂದರೆ ಶಿಕ್ಷಿತರಾದವರು ಅರ್ಥಪೂರ್ಣವಾದ ಹೆಸರನ್ನು ಹುಡುಕುತ್ತಾರೆ. ಆದರೆ ಇದಕ್ಕೆ ವಿರುದ್ಧವಾಗಿ ಅನಕ್ಷರಸ್ಥರಾದವರು ಈ ಎಲ್ಲಾ ವಿಧಾನಗಳಿಂದ ವಂಚಿತರಾಗಿ ಇವರು ಸಮುದಾಯಕ್ಕೆ ಹೊಂದಿಕೊಳ್ಳಲು ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಹೆಸರಿಡುವ ಸಂದರ್ಭದಲ್ಲಿ ಅನಕ್ಷರಸ್ಥರು ಬೇರೊಬ್ಬರನ್ನು ಆಶ್ರಯಿಸಬೇಕಾಗುತ್ತದೆ. ಇಲ್ಲವೆ ಹಿಂದಿನಿಂದ ಬಂದಂತಹ ಹೆಸರುಗಳನ್ನೋ ಅಥವಾ ತಮ್ಮ ಕುಲದೈವ/ ಇಷ್ಟದೈವದ ಹೆಸರನ್ನೋ ವ್ಯಕ್ತಿನಾಮವಾಗಿ ಇಡುವುದನ್ನು ಕಾಣುತ್ತೇವೆ. ಇದರ ಜೊತೆಗೆ ಇವರಲ್ಲಿ ಮತ್ತೊಂದು ವ್ಯತ್ಯಾಸವನ್ನು ಗುರುತಿಸಬಹುದು. ಅಂದರೆ ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳಿಗೆ ವೃತ್ತಿವಾಚಿ ಮತ್ತು ಜಾತಿವಾಚಿ ವಾರ್ಗಿಕಗಳು ಸೇರುವುದನ್ನು ಕಾಣುತ್ತೇವೆ. ಈ ರೀತಿಯ ವೃತ್ತಿವಾಚಿ

ಮತ್ತು ಜಾತಿವಾಚಿ ವಾರ್ಗಿಕಗಳು ಅನಕ್ಷರಸ್ಥರಿಗಿಂತ ಅಕ್ಷರಸ್ಥ ವಲಯದಲ್ಲಿ ಹೆಚ್ಚು ಬಳಕೆಯಾಗುತ್ತಿರುವುದನ್ನು ಕಾಣಬಹುದು. ಹೆಸರಿನ ಮುಂದೆ ತಮ್ಮ ವೃತ್ತಿಯ ಹೆಸರನ್ನೋ, ಜಾತಿಯ ಹೆಸರನ್ನೋ, ಊರಿನ ಹೆಸರನ್ನೋ, ತಂದೆಯ ಹೆಸರನ್ನೋ, ಗಂಡನ ಹೆಸರನ್ನೋ ಇಟ್ಟುಕೊಳ್ಳುವ ವಿಧಾನ ಇಂದಿನ ಶಿಕ್ಷಿತ ವಲಯದಲ್ಲಿಯೇ ಹೆಚ್ಚಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಬಹುದಾಗಿದೆ.

**೪.೩.೫. ಗ್ರಾಮೀಣ ಮತ್ತು ನಗರ ಪ್ರದೇಶದ ವ್ಯಕ್ತಿನಾಮಗಳಲ್ಲಿ ವ್ಯತ್ಯಾಸ**

ವ್ಯಕ್ತಿನಾಮಗಳು ಇಂದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತಿರುವುದನ್ನು ಕಾಣಬಹುದು. ಈ ರೀತಿಯ ವ್ಯತ್ಯಾಸಗಳು ಪ್ರಾದೇಶಿಕವಾಗಿ ಹೇಗೆ ಬದಲಾವಣೆಗಳಾಗುತ್ತವೆ ಎಂಬುದನ್ನು ಪ್ರಸ್ತುತ ಅಧ್ಯಯನದ ಪ್ರಾದೇಶಿಕ ನೆಲೆಗಳು ಎಂಬಲ್ಲಿ ಚರ್ಚಿಸಲಾಗಿದೆ. ಆದರೆ ಇಲ್ಲಿ ಸಾಮಾಜಿಕವಾಗಿ ವ್ಯಕ್ತಿನಾಮಗಳು ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದಲ್ಲಿ ವ್ಯತ್ಯಾಸಗಳಾಗುತ್ತಿವೆ ಎಂಬುದನ್ನು ತಿಳಿಯಬಹುದು. ತುಮಕೂರು ಪರಿಸರದ ವ್ಯಕ್ತಿನಾಮಗಳನ್ನು ಗಮನಿಸಿ ಹೇಳುವುದಾದರೆ ಆಧುನಿಕ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ವ್ಯಕ್ತಿನಾಮಗಳು ಎರಡನೆಯ ತಲೆಮಾರಿನವರೆಗೆ ತನ್ನ ಮೂಲ ಸಂಸ್ಕೃತಿಗೆ ಅನುಗುಣವಾಗಿ ಹೆಸರನ್ನು ಉಳಿಸಿಕೊಂಡು ಬಂದಿದ್ದು ಮೂರನೆಯ ತಲೆಮಾರಿನಲ್ಲಿ ಮಾತ್ರ ಹೆಚ್ಚಾಗಿ ಬದಲಾವಣೆ ಮಾಡಿಕೊಂಡಿರುವುದನ್ನು ಕಾಣಬಹುದು. ಆದರೆ ನಗರ ಪ್ರದೇಶದಲ್ಲಿ ಈ ರೀತಿಯ ಬದಲಾವಣೆ ಮೊದಲನೆಯ ತಲೆಮಾರಿನಲ್ಲೇ ಮಾಡಿಕೊಂಡಿರುವುದು ಗೊತ್ತಾಗುತ್ತದೆ. ಆದ್ದರಿಂದ ಆಧುನಿಕ ಸಂದರ್ಭದಲ್ಲಿ ಬಳಕೆಯಾಗುವ ಹೆಸರುಗಳು ಎರಡನೆಯ ತಲೆಮಾರಿನಲ್ಲಿ ಬಳಕೆಗೆ ಬಂದಿರುವುದನ್ನು ಕಾಣಬಹುದು. ಅಂದರೆ ವ್ಯಕ್ತಿನಾಮಗಳ ಬದಲಾವಣೆಯು ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿ ವೇಗವಾಗಿ ಆಗುತ್ತಿರುವುದನ್ನು ಇದರ ಮೂಲಕ ತಿಳಿಯಬಹುದು.

ವ್ಯಕ್ತಿನಾಮಗಳನ್ನು ಸಾಮಾಜಿಕ ಆಯಾಮಗಳಲ್ಲಿ ನೋಡಿದಾಗ ವ್ಯಕ್ತಿಯ ಹೆಸರಿಗೂ ಮತ್ತು ಸಮಾಜಕ್ಕೂ ಪರಸ್ಪರ ಸಂಬಂಧ ಇದೆ ಎಂದು ಗೊತ್ತಾಗುತ್ತದೆ. ವ್ಯಕ್ತಿನಾಮಗಳು ವ್ಯಕ್ತಿಯ ಜಾತಿ, ವೃತ್ತಿ, ಸಂಸ್ಕೃತಿ, ಆರ್ಥಿಕತೆ, ಶ್ರೇಣೀಕರಣ ಮುಂತಾದ ಅಂಶಗಳೊಂದಿಗೆ ಪರಸ್ಪರ ಸಂಬಂಧ ಹೊಂದಿವೆ ಎಂಬುದು ಸ್ಪಷ್ಟವಾಗುತ್ತದೆ. ವ್ಯಕ್ತಿನಾಮಗಳನ್ನು ಸಾಮಾಜಿಕವಾಗಿ ನೋಡುವಾಗ ಆರಂಭದ ದಿನಗಳಲ್ಲಿ ವ್ಯಕ್ತಿಯ ವೃತ್ತಿಗೂ ಮತ್ತು ವ್ಯಕ್ತಿಯ ಹೆಸರಿಗೂ ನಿಕಟವಾದ ಸಂಬಂಧವಿರುತ್ತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ತಾನು ಮಡುವ ವೃತ್ತಿಗೂ, ತಾನು ಹೆಸರಿನ ಮುಂದೆ ಬಳಸುವ ವೃತ್ತಿವಾಚಿ ವಾರ್ಗಿಕಕ್ಕೂ ಯಾವುದೇ ಸಂಬಂಧಗಳಿರುವುದಿಲ್ಲ. ಅಂದರೆ ಆರಂಭದ ದಿನಗಳಲ್ಲಿ ಹೆಸರಿನಲ್ಲಿ ಕುಂಬಾರ ಎಂದು ವಾರ್ಗಿಕ ಬಳಕೆಯಲ್ಲಿದ್ದರೆ ಆತನ ವೃತ್ತಿಯೂ ಕೂಡ ಮಡಕೆ ಮಾಡುವುದೇ ಆಗಿರುತ್ತಿತ್ತು. ಆದರೆ ಇಂದು ಕುಂಬಾರ ಎಂಬ ವಾರ್ಗಿಕ ಇಟ್ಟುಕೊಂಡಿರುತ್ತಾರೆ. ವೃತ್ತಿ ಮಾತ್ರ ಬೇರೆಯೇ ಆಗಿರುತ್ತದೆ. ಈ ಪ್ರಕ್ರಿಯೆಯೂ ಎಲ್ಲಾ ವೃತ್ತಿಗಳಲ್ಲಿಯೂ ಕಂಡುಬರುವಂತಹದ್ದೇ ಆಗಿದೆ. ವ್ಯಕ್ತಿನಾಮಗಳನ್ನು ಸಾಮಾಜಿಕವಾಗಿ ಗಮನಿಸುವಾಗ ಹಲವಾರು ಜಾತಿಗೆ ಸೇರಿದ ವ್ಯಕ್ತಿನಾಮಗಳು ಕಂಡುಬರುತ್ತವೆ. ಇಲ್ಲಿ ಕಂಡುಬರುವ ಪ್ರತಿಯೊಂದು ಜಾತಿಯು ತನ್ನದೇ ಆದ ಸಂಸ್ಕೃತಿಯನ್ನು,

ದೇವರನ್ನು ಹೊಂದಿರುತ್ತವೆ. ಹಾಗಾಗಿ ಅವರ ಹೆಸರುಗಳಲ್ಲಿಯೂ ವ್ಯತ್ಯಾಸಗಳಿರುವುದನ್ನು ಗುರುತಿಸಲಾಗಿದೆ. ಆದರೆ ವ್ಯಕ್ತಿನಾಮಗಳು ಆಧುನಿಕ ಸಂದರ್ಭದಲ್ಲಿ ವೃತ್ತಿವಾಚಿಯಾಗಿ ಮತ್ತು ಜಾತಿವಾಚಿಯಾಗಿ ವ್ಯಾಪಕವಾಗಿ ಬಳಕೆಯಾಗುತ್ತಿರುವುದು ವಿಶೇಷ. ಅಂದರೆ ನಿಜನಾಮವು (ನಿರ್ದಿಷ್ಟ) ಆಧುನಿಕ ಸಂದರ್ಭದಲ್ಲಿ ಎಲ್ಲಾ ಸಮುದಾಯದಲ್ಲಿ ಒಂದೇ ರೀತಿಯಲ್ಲಿದ್ದರೂ ಕೂಡ ವಾರ್ಗಿಕದಲ್ಲಿ ತಮ್ಮ ವೃತ್ತಿ, ಜಾತಿ, ಊರು ಇನ್ನಿತರೆ ಅಂಶಗಳನ್ನು ಸೇರಿಸಿಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ಈ ರೀತಿಯ ವ್ಯತ್ಯಾಸಗಳು ಅನಕ್ಷರಸ್ಥರಿಗಿಂತ, ಅಕ್ಷರಸ್ಥರಲ್ಲಿಯೂ, ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿಯೂ, ಕೆಳವರ್ಗದವರಿಗಿಂತ ಮೇಲ್ವರ್ಗದವರಲ್ಲಿಯೂ ಹೆಚ್ಚಾಗಿ ಕಂಡುಬರುವುದನ್ನು ಗುರುತಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರತಿಯೊಂದು ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಕೆಲಸಗಳು ಇನ್ನೂ ಆಗಬೇಕಿದೆ. ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಹೆಸರುಗಳು ಸಾಮಾಜಿಕವಾಗಿ ಹೇಗೆ ಬಳಕೆಯಾಗುತ್ತಿವೆ ಎಂಬುದನ್ನು ಗುರುತಿಸಲಾಗಿದೆ.

**೪.೪. ವ್ಯಕ್ತಿನಾಮಗಳ ಆಧುನಿಕ ನೆಲೆಗಳು**

ಮನುಷ್ಯನ ಉಗಮ ಮತ್ತು ವಿಕಾಸ ಯಾವ ಕಾಲಘಟ್ಟದಲ್ಲಿ ಆಯಿತು ಎಂಬುದನ್ನು ನಿಖರವಾಗಿ ಹೇಳಲು ಇಂದಿಗೂ ಸಾಧ್ಯವಾಗಿಲ್ಲ. ಮನುಷ್ಯ ಸಂವಹನಕ್ಕಾಗಿ ಭಾಷೆಯನ್ನು ಕಲಿತ ನಂತರ ಆ ಭಾಷೆಯ ಘಟಕಗಳಾಗಿ ಹೆಸರುಗಳು ಬಳಕೆಗೆ ಬಂದವು. ಇಂತಹ ಹೆಸರುಗಳನ್ನು ಮನುಷ್ಯರು ಬೌದ್ಧಿಕವಾಗಿ ವಿಕಾಸವಾದಂತೆಲ್ಲ ಅದರ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಆರಂಭದಲ್ಲಿ ಜನಸಂಖ್ಯೆ ಕಡಿಮೆ ಇದ್ದ ಕಾರಣ ಕೇವಲ ಅನ್ವರ್ಥಕ ನಾಮಗಳಿಂದಲೇ ಒಬ್ಬರಿಂದ ಮತ್ತೊಬ್ಬರನ್ನು ಗುರುತಿಸಲು ಸಾಧ್ಯವಾಗುತ್ತಿತ್ತು. ನಂತರದ ದಿನಗಳಲ್ಲಿ ಜನಸಂಖ್ಯಾ ಪ್ರಮಾಣ ಅಧಿಕವಾಗುತ್ತಾ ಅನ್ವರ್ಥಕ ನಾಮಗಳಿಂದಲೇ ವ್ಯಕ್ತಿಯಿಂದ ವ್ಯಕ್ತಿಯನ್ನು ಬೇರ್ಪಡಿಸಿ ಗುರುತಿಸಲು ಸಾಧ್ಯವಾಗಿರಲಿಕ್ಕಿಲ್ಲ. ಅಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಇತರೆ ಮೂಲದ ಹೆಸರುಗಳು ಬಳಕೆಗೆ ಬಂದಿರಬಹುದು. ಹಾಗಾಗಿ ಅಂಕಿತನಾಮಗಳು ಪ್ರವೇಶ ಪಡೆದಿಬಹುದೆಂದು ಆರಂಭದಲ್ಲಿಯೇ ತಿಳಿಯಲಾಗಿದೆ. ಹೀಗೆ ಮನುಷ್ಯ ನಾಗರೀಕನಾಗಿ, ಸಂಘಜೀವಿಯಾಗಿ, ಸಮಾಜದೊಂದಿಗೆ ನಿಕಟ ಸಂಪರ್ಕ ಹೊಂದಿದ ಪರಿಣಾಮವಾಗಿ ಅವರು ಬಳಸುತ್ತಿದ್ದ ಹೆಸರುಗಳಲ್ಲಿಯೂ ಬದಲಾವಣೆಗಳಾಗಿರುವುದನ್ನು ಗುರುತಿಸಲಾಗಿದೆ. ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ವ್ಯಕ್ತಿಗಳು ಅವರ ವೃತ್ತಿ, ಜಾತಿ, ಅಧಿಕಾರ, ತಾನು ಆರಾಧಿಸುವ ದೈವದ ನಂಬಿಕೆ, ಗುರು ಹಿರಿಯರ ಮೇಲಿನ ಭಕ್ತಿ, ಪುರಾಣ, ಕಾವ್ಯ, ಕಥೆಗಳಿಂದ ಪಡೆದ ಜ್ಞಾನ ಮುಂತಾದ ಅಂಶಗಳಿಂದ ಹೆಸರುಗಳನ್ನು ಬಳಸುತ್ತಿದ್ದರು. ನಂತರದ ದಿನಗಳಲ್ಲಿ ಈ ಎಲ್ಲಾ ಪ್ರಕಾರದ ಹೆಸರುಗಳಲ್ಲಿ ನವೀನತೆಯನ್ನು ಕಂಡುಕೊಂಡು ವ್ಯಕ್ತಿನಾಮಗಳ ರಚನೆಯಾಗಿವೆ. ಮುಖ್ಯವಾಗಿ "ವ್ಯಕ್ತಿನಾಮಗಳ ಆಧುನಿಕತೆಗೆ ಜಾತಿ, ವೃತ್ತಿ, ಚರಿತ್ರೆ, ದೈವ, ಭಾಷಿಕ ಸಂದರ್ಭ, ಧರ್ಮ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ, ಸಿನಿಮಾ, ತಂತ್ರಜ್ಞಾನ, ವಿಜ್ಞಾನ,

ನಗರೀಕರಣ ಮುಂತಾದ ಅಂಶಗಳು ಕಾರಣವಾಗುತ್ತವೆ."(ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರ ವ್ಯಕ್ತಿನಾಮಗಳು, ಪು.೩೦೭). ಈ ಎಲ್ಲಾ ಅಂಶಗಳ ಜೊತೆಗೆ ಮನುಷ್ಯ ಇಂದು ನಗರೀಕರಣಕ್ಕೆ ಒಳಗಾಗಿ, ನವಮಾಧ್ಯಮಗಳ ಪ್ರಭಾವದಿಂದ ವಿಭಿನ್ನವಾದ, ವಿಚಿತ್ರವಾದ ವ್ಯಕ್ತಿನಾಮಗಳನ್ನು ನಿರ್ದೇಶನ ಮಾಡುತ್ತಿರುವುದನ್ನು ಗುರುತಿಸಲಾಗಿದೆ.

ವ್ಯಕ್ತಿನಾಮಗಳು ಆಧುನಿಕ ಸಮಾಜದಲ್ಲಿ ಒಂದು ಸಮುದಾಯದ ಜನರ ಸಂಸ್ಕೃತಿಯನ್ನು, ಸಾಂಸ್ಕೃತಿಕ ಆಯಾಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೂ ಆ ಸಮಾಜದ ಜನರ ಮನೋಧೋರಣೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಬದಲಾವಣೆ ಎಂಬುದು ಸಾರ್ವಕಾಲಿಕವಾದುದು ಮತ್ತು ಸಾರ್ವತ್ರಿಕವಾದುದು. ಆಯಾ ಸಂದರ್ಭಕ್ಕೆ ತಕ್ಕಂತೆ ಬದಲಾವಣೆ ಎಂಬುದು ಅನಿವಾರ್ಯವೂ ಹೌದು. ಇಂತಹ ಬದಲಾವಣೆಯು ವ್ಯಕ್ತಿನಾಮಗಳ ಬಳಕೆಯ ವಲಯದ ಮೇಲಾಗಿರುವುದು ವಿಶೇಷವೇನೂ ಅಲ್ಲ. ಆದರೆ ಈ ಬದಲಾವಣೆಯು ಸಮಾಜದ ಮೂಲ ಸಂಸ್ಕೃತಿಯಿಂದ ದೂರಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಪರಿಣಾಮಕಾರಿಯಾಗಿ ಬೆಳೆಯುತ್ತಿರುವ ವೈಜ್ಞಾನಿಕ, ತಾಂತ್ರಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ವಲಯದಲ್ಲಿ ಆದಂತಹ ಬದಲಾವಣೆಗಳು ಜನರ ಬದುಕಿನೊಂದಿಗೆ ಬೆರೆತುಹೋಗಿವೆ. ಹಾಗಾಗಿ ಸಮಾಜ ಹೇಗೆ ಬದಲಾಗುತ್ತದೊ ಹಾಗೆ ಮನುಷ್ಯನು ಬದಲಾಗಲೇಬೇಕಾಗುತ್ತದೆ. ಈ ಎಲ್ಲಾ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳು ಹೇಗೆ ಬದಲಾವಣೆ ಮಾಡಿಕೊಂಡಿವೆ ಎಂಬುದನ್ನು ವಿವರಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳ ಬದಲಾವಣೆ ಪ್ರಕ್ರಿಯೆಯು ಹಲವು ಆಯಾಮಗಳಲ್ಲಿ ಆಗಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

**೪.೪.೧. ದೈವನಾಮಗಳ ಆದ್ಯಕ್ಷರದಿಂದ ವ್ಯಕ್ತಿನಾಮಗಳ ರಚನೆ**

ಮನುಷ್ಯ ದೇವರನ್ನು ಸೃಷ್ಟಿಸಿಕೊಂಡ ದಿನದಿಂದಲೂ ಆ ದೈವದ ಹೆಸರು ವ್ಯಕ್ತಿಗಳ ಹೆಸರುಗಳಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸುತ್ತೇವೆ. ಅಂದರೆ ದೇವರ ಹೆಸರನ್ನು ವ್ಯಕ್ತಿಗಳಿಗೆ ನಿರ್ದೇಶಿಸಿದರೆ ಆ ದೇವರ ಆಶೀರ್ವಾದ ಸದಾ ಆತನ ಮೇಲಿರುತ್ತದೆ ಎಂಬ ನಂಬಿಕೆ ಹಿಂದಿನಿಂದಲೂ ಜನರಲ್ಲಿರುವುದನ್ನು ಗುರುತಿಸುತ್ತೇವೆ. ಹೀಗಾಗಿ ದೈವ ಸಂಬಂಧಿ ಹೆಸರುಗಳು ವ್ಯಕ್ತಿನಾಮಗಳ ಬಳಕೆಯಲ್ಲಿ ಪ್ರಭಾವ ಬೀರಿರುವುದನ್ನು ಒಪ್ಪಲೇಬೇಕು. ಯಾವ ಯಾವ ಪ್ರದೇಶದಲ್ಲಿ ಯಾವ ದೇವರು ಆಚರಣೆಯಲ್ಲಿದೆಯೊ ಹಾಗೂ ಯಾವ ಸಮುದಾಯದ ಜನರು ಕುಲದೈವವಾಗಿ ಆರಾಧಿಸುತ್ತಾರೊ ಅವರುಗಳ ಹೆಸರಿನ ಮೇಲೆ ಆ ದೈವದ ಹೆಸರು ಪ್ರಭಾವ ಬೀರಿದೆ. ಈ ಪ್ರಭಾವವು ತುಮಕೂರು ಪರಿಸರದಲ್ಲಿನ ವ್ಯಕ್ತಿನಾಮಗಳಿಗೂ ಅನ್ವಯವಾಗುತ್ತದೆ.

ಆಧುನಿಕ ಸಂದರ್ಭದಲ್ಲಿ ದೈವದ ಮೇಲಿನ ನಂಬಿಕೆ ಈಗಲೂ ಇದೆ. ಆದರೆ ಆಧುನಿಕತೆಯ ಪರಿಣಾಮವಾಗಿ ಹೊಸ ಹೆಸರುಗಳನ್ನು ಯೋಚಿಸುತ್ತಾ ಹಿಂದಿನ ಸಂಪ್ರದಾಯವನ್ನು ಉಳಿಸಿಕೊಳ್ಳುವ

ಮತ್ತು ಆಧುನಿಕವಾಗಿಯೂ ಇರುವ ಹೆಸರುಗಳನ್ನು ಆಯ್ಕೆಮಾಡಿಕೊಳ್ಳುವ ಸಲುವಾಗಿ ದೇವರ ಹೆಸರಿನ ಮೊದಲ ಅಕ್ಷರವನ್ನು ಬಳಸಿಕೊಂಡು ತಮಗೆ ಇಷ್ಟವಾದ ಹೆಸರನ್ನು ನಿರ್ದೇಶಿಸುವ ಪ್ರಕ್ರಿಯನ್ನು ಇಂದು ಸಮಾಜದಲ್ಲಿ ಕಾಣಬಹುದಾಗಿದೆ. ಅಂದರೆ ಜನರಿಗೆ ದೈವದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳಲು ಇಷ್ಟವಿಲ್ಲ ಮತ್ತು ದೇವರ ಹೆಸರನ್ನು ಯಥಾವತ್ತಾಗಿ ಬಳಸಲು ಆಧುನಿಕತೆಯ ತೊಡಕು. ಈ ಹಿನ್ನೆಲೆಯಲ್ಲಿ ಆ ದೇವರ ಮೊದಲ ಅಕ್ಷರವನ್ನು ತೆಗೆದುಕೊಂಡ ಆ ಅಕ್ಷರದಿಂದ ಆರಂಭವಾಗುವ ತನಗಿಷ್ಟದ, ಆಧುನಿಕ ಸಮಾಜ ಬಯಸುವ ಹೆಸರನ್ನು ಇಟ್ಟುಕೊಳ್ಳುವುದನ್ನು ಗುರುತಿಸಲಾಗಿದೆ. ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಇತ್ತೀಚಿನ ಮೂರು ತಲೆಮಾರಿನ ವ್ಯಕ್ತಿನಾಮಗಳನ್ನು ಉದಾಹರಣೆಯಾಗಿ ಬಳಸಿಕೊಂಡು ವಿವರಿಸುವ ಪ್ರಯತ್ನವನ್ನು ಪ್ರಸ್ತುತ ಮಾಡಲಾಗಿದೆ.

**ಉದಾ:**

| **೧ನೇ ತಲೆಮಾರಿನ ದೈವನಾಮ** | **೨ನೇ ತಲೆಮಾರಿನ ದೈವನಾಮದ ಆದ್ಯಕ್ಷರ ಬಳಕೆ** | **೩ನೇ ತಲೆಮಾರಿನ ದೈವನಾಮದ ಆದ್ಯಕ್ಷರ ಬಳಕೆ** |
|---|---|---|
| ರಂಗಯ್ಯ | ರಮೇಶ | ರಂಜಿತ್ |
| ಮಲ್ಲಯ್ಯ | ಮಲ್ಲೇಶ್ | ಮಲ್ಲಿಕಾ |
| ರಂಗಸ್ವಾಮಿ | ರಂಗನಾಥ್ | ರಕ್ಷಿತಾ |
| ಕೆಂಚಮ್ಮ | ಕೆಂಪಾಂಬಿಕೆ | ಕೇಶವ್ |
| ಕರಿಯಮ್ಮ | ಕಮಲಮ್ಮ | ಕಲ್ಪನಾ |
| ಮಣ್ಣಮ್ಮ | ಮಹಾಲಕ್ಷ್ಮಿ | ಮಮತಾ |
| ಸಿದ್ಧಲಿಂಗಯ್ಯ | ಸಿದ್ಧರಾಜು | ಶಿವಾಲಿಕಾ |
| ವೀರನಾಗಮ್ಮ | ವೀರಮ್ಮ | ವಿನುತ |
| ಪದ್ದಮ್ಮ | ಪದ್ಮಾವತಿ | ಕವಿತ |
| ನಾಗಪ್ಪ | ನಾಗಭೂಷಣ್ | ನಟರಾಜ |
| ವೀರಕ್ಯಾತರಾಯಪ್ಪ | ವೀರೇಶ | ವಿನೋದ್ |
| ಬಸವಯ್ಯ | ಬಸವರಾಜು | ಭಾವನಾ/ಬವನ್ |
| ಮಂಜಣ್ಣ | ಮಲ್ಲಿಕಾರ್ಜುನ | ಮನ್ವಿತ್ |
| ಶಿವಪ್ಪ | ಶಿವರಾಜು | ಶಿಲ್ಪ |
| ಗುಜ್ಜಾರಪ್ಪ | ಗುರುಮೂರ್ತಿ | ಗುಣವಂತ್ |
| ನರಸಿಂಹಪ್ಪ | ನಟರಾಜ | ನವನೀತ್, ನವೀನ್ |
| ಜಲ್ದಪ್ಪ | ಜಲ್ದೇಶ | ಜಲಜ |
| ಭೂತಪ್ಪ | ಭೂತೇಶ್ | ಭುವನ್ |

**೪.೪.೨. ಹಿರಿಯರ ಹೆಸರಿನ ಆದ್ಯಕ್ಷರ ಬಳಸಿ ವ್ಯಕ್ತಿನಾಮ ರಚನೆ**

ಮನುಷ್ಯರು ಸಂಘಜೀವಿಗಳಾಗಿದ್ದು ತಮ್ಮ ಸುತ್ತಮುತ್ತ ತಮ್ಮನ್ನು ಪ್ರೀಸುವವರು, ನಂಬಿದವರು ನಮಗಾಗಿ ಇದ್ದಾರೆ ಎಂಬ ನಂಬಿಕೆಯಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಆ ನಂಬಿಕೆ ಹಲವು ಆಯಾಮಗಳಲ್ಲಿ ಪ್ರಚುರಗೊಳ್ಳುತ್ತದೆ. ಅಂತಹವುಗಳಲ್ಲಿ ವ್ಯಕ್ತಿನಾಮವೂ ಒಂದು. ಅಂದರೆ ತನ್ನ ಜೊತೆಯಲ್ಲಿದ್ದು, ತನಗಾಗಿ ತಮ್ಮ ಜೀವನವನ್ನೂ ಮೀಸಲಿಟ್ಟು ತನ್ನ ಒಳಿತಿಗಾಗಿ ಶ್ರಮಿಸಿದ ಗುರು, ಹಿರಿಯರನ್ನು ಸ್ಮರಿಸುವುದು ಮನುಷ್ಯನ ಮನೋಧೋರಣೆಗಳಲ್ಲಿ ಒಂದು. ಹಾಗಾಗಿ ತನ್ನೊಡನಿದ್ದು ಅಗಲಿದಂತವರನ್ನು ನೆನಪಿಸಿಕೊಳ್ಳಲು ಅವರ ಹೆಸರುಗಳನ್ನು ವ್ಯಕ್ತಿಗಳಿಗೆ ನಿರ್ದೇಶನ ಮಾಡಲಾಗುತ್ತದೆ. ಈ ಹೆಸರಿನ ಮೂಲಕ ಆ ವ್ಯಕ್ತಿ ಸದಾ ನಮ್ಮ ಜೊತೆಯಲ್ಲಿರುತ್ತಾನೆ ಎಂಬ ನಂಬಿಕೆ ಇಂದಿಗೂ ಜನರಲ್ಲಿ ಇದೆ. ಆದರೆ ಆಧುನಿಕತೆಯ ಪ್ರಭಾವದಿಂದಾಗಿ ಹಿರಿಯರ ಹೆಸರನ್ನು ಯತ್ತಾವತ್ತಾಗಿ ಬಳಸದೆ, ಅವರ ಹೆಸರನ್ನು ನಿರ್ಲಕ್ಷಿಸದೆ ಹಿರಿಯರ ಹೆಸರಿನ ಮೊದಲ ಅಕ್ಷರವನ್ನು ಬಳಸಿಕೊಂಡು ತನಗಿಷ್ಟವಾದ ಪೂರ್ಣಹೆಸರನ್ನು ನಿರ್ದೇಶನ ಮಾಡುವ ಪ್ರಕ್ರಿಯೆಯು ಆಧುನಿಕ ಸಂದರ್ಭದಲ್ಲಿ ಕಂಡುಬರುತ್ತಿದೆ.

**ಉದಾ:-**

| **ಹಿರಿಯರ ಹೆಸರು** | **ಆಧುನಿಕ ಸಂದರ್ಭದಲ್ಲಿ ಬಳಕೆಯಾಗುವ/ ಬಳಕೆಯಾಗುತ್ತಿರುವ ಹೆಸರು** |
|---|---|
| ರಂಗನಾಥ | ರಂಜಿತ್ |
| ಗಂಗಾಧರಯ್ಯ | ಗಗನ್ |
| ಸುಬ್ಬಣ್ಣ | ಸುಹಾಸ್ |
| ನರಸಪ್ಪ | ನಹುಷ್ |
| ವೀರಣ್ಣ | ವಿನುತ |
| ಕರಿಯಪ್ಪ | ಕಲ್ಪನ |
| ಗಿರಿಯಪ್ಪ | ಗಿರಿಜಾ |
| ಮಲ್ಲಪ್ಪ | ಮನು |
| ನಿಂಗಯ್ಯ | ನಿಖಿಲ್ |
| ಅಂಜನಪ್ಪ | ಅನಿಲ್ |
| ವೆಂಕಟಪ್ಪ | ವಿವೇಕ್ |
| ಗೋವಿಂದಯ್ಯ | ಗೋವರ್ಧನ್ |
| ಹನುಮಂತಪ್ಪ | ಹರ್ಷಿತ್/ಹರ್ಷಾ |
| ನಾರಾಯಣಮ್ಮ | ನಳಿನ |
| ಸುಬ್ಬಮ್ಮ | ಸುಧಾ |

| | |
|---|---|
| ಚಂದ್ರಪ್ಪ | ಚಂದನ್ |
| ಪಾತಲಿಂಗಪ್ಪ | ಪವನ್ |
| ಚಿತ್ರಲಿಂಗಯ್ಯ | ಚಿನ್ಮಯಿ |

**೪.೪.೩. ಚಾರಿತ್ರಿಕ ವ್ಯಕ್ತಿನಾಮಗಳ ಬಳಕೆ**

ಸ್ವತಂತ್ರ್ಯಕ್ಕಾಗಿ ಹೋರಾಟ ಮಾಡಿದ, ನಮ್ಮ ನಾಡನ್ನು ಆಳಿದ ರಾಜ ಮಹಾರಾಜರ, ಸಮಾಜದಲ್ಲಿ ಆದರ್ಶರೆನಿಸಿಕೊಂಡ ವ್ಯಕ್ತಿಗಳನ್ನು ಚಾರಿತ್ರಿಕ ವ್ಯಕ್ತಿಗಳೆಂದು ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಗುರ್ತಿಸಿಕೊಳ್ಳಲಾಗಿದೆ. ಹಾಗಾಗಿ ಇಂತಹ ಚಾರಿತ್ರಿಕ ವ್ಯಕ್ತಿಗಳ ಹೆಸರುಗಳನ್ನು ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಬಳಸುತ್ತಿರುವುದನ್ನು ಗುರುತಿಸಲಾಗಿದೆ. "ಐತಿಹಾಸಿಕ ಪುರುಷರ ವಂಶಸ್ಥರು ಅಭಿಮಾನಿಗಳು ಈ ಬಗೆಯ ಹೆಸರುಗಳನ್ನು ಇಡುವುದುಂಟು" (ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪು.೩೧೦). ಅಂದರೆ ಇಂತಹ ಹೆಸರುಗಳನ್ನು ಸಾಮಾನ್ಯವಾಗಿ ಚರಿತ್ರೆಯ ಬಗ್ಗೆ ತಿಳುವಳಿಕೆಯುಳ್ಳಂತಹ ಜನ ಸಮುದಾಯ ಹೆಚ್ಚಾಗಿ ಬಳಸುತ್ತಾರೆ. ಚಾರಿತ್ರಿಕವಾಗಿ ರಾಜಮನೆತನದ ಹೆಸರುಗಳಷ್ಟೇ ಅಲ್ಲದೆ, ಸಾಂಸ್ಕೃತಿಕ ವೀರರು, ಕವಿಗಳು, ಸಂಗೀತಕಾರರು, ಕಲಾವಿದರು, ನೃತ್ಯಗಾರರು ಮುಂತಾದ ವರ್ಗದ ಹೆಸರುಗಳನ್ನು ಇಂದು ಬಳಸಲಾಗುತ್ತಿದೆ.

**ಉದಾ:**

| **'ಅ'ಪಟ್ಟಿ** | **'ಬ'ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶ್ರೀವಿಜಯ | ಶಾಂತಲಾ |
| ಮಯೂರ | ಅಬ್ಬಕ್ಕ |
| ಯದುವೀರ | ಹರ್ಷ |
| ಪಂಪ | ಚೆನ್ನಾಂಭಿಕ |
| ಲಕ್ಷ್ಮೀಶ | ಸರೋಜಿನಿ |
| ರನ್ನ | ಅಕ್ಕಮಹಾದೇವಿ |
| ವಿಷ್ಣುವರ್ಧನ | |
| ಬಸವಣ್ಣ | |
| ಹರ್ಷವರ್ಧನ | |
| ಅಶೋಕ | |
| ಧ್ರುವ | |
| ನರಸಿಂಹರಾಜ | |
| ಕನಕ | |
| ಮಹಾವೀರ | |
| ರಾಯಣ್ಣ | |

೪.೪.೪. ವೃತ್ತಿವಾಚಿ ವಾರ್ಗಿಕಗಳ ಬಳಕೆ

ಆಧುನಿಕ ವ್ಯಕ್ತಿನಾಮಗಳಿಗೆ ಜಾತಿವಾಚಿ ವಾರ್ಗಿಕಗಳು ಸೇರುವಂತೆ ವೃತ್ತಿವಾಚಿ ವಾರ್ಗಿಕಗಳೂ ಸೇರುತ್ತವೆ. ಆದರೆ ಜಾತಿವಾಚಿ ವಾರ್ಗಿಕಗಳಷ್ಟು ಪ್ರಧಾನವಾಗಿ ವೃತ್ತಿವಾಚಿ ವಾರ್ಗಿಕಗಳು ವ್ಯಕ್ತಿನಾಮಗಳಿಗೆ ಸೇರುವುದಿಲ್ಲವೆಂಬುದು ವಿಶೇಷ. ಅಂದರೆ ಕೆಲವು ವೃತ್ತಿವಾಚಿಗಳು ಮಾತ್ರ ಅಧುನಿಕ ಸಂದರ್ಭದ ಹೆಸರುಗಳಿಗೆ ಸೇರುತ್ತವೆ ಆದರೆ ಇವು ಈಗ ವೃತ್ತಿವಾಚಿಗಳಾಗಿ ಬಳಕೆಯಲ್ಲಿಲ್ಲ ಎಂಬುದನ್ನು ಗಮನಿಸಬೇಕು. ಚಿದಾನಂದಮೂರ್ತಿ ಅವರು ಒಂದು ಕಡೆ ಸ್ತ್ರೀನಾಮಗಳಿಗೆ ಯಾವುದೇ ವೃತ್ತಿ ಅಥವಾ ಜಾತಿವಾಚಿ ವಾರ್ಗಿಕಗಳು ಸೇರುವುದಿಲ್ಲ ಎಂದಿದ್ದರು (೨೦೦೨, ವಾಗರ್ಥ ಸಂಪು-೨, ಪು.೩೯). ಆದರೆ ಇಂದು ಸ್ತ್ರೀ ನಾಮಗಳಲ್ಲಿಯೂ ಜಾತಿವಾಚಿ ಮತ್ತು ವೃತ್ತಿವಾಚಿ ವಾರ್ಗಿಕಗಳು ಬಳಕೆಯಾಗುತ್ತಿರುವುದನ್ನು ಗುರುತಿಸಲಾಗಿದೆ.

**ಉದಾ:-**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಶಂಕರ ಗೌಡ | ಸ್ಮಿತಾ ಗೌಡ |
| ರಾಮನಾಯಕ | ಕಲ್ಪನ ನಾಯಕ |
| ವಿಠಲ ತಳವಾರ | ಮಂಜುಳ ಆಚಾರಿ |
| ಈರಣ್ಣಕುಂಬಾರ | ಸೌಮ್ಯ ಕಮ್ಮಾರ |
| ರಾಜಣ್ಣ ನಾಯಕ | ಮಾನಸ ಗೌಡ |
| ಶಿವುಮಡಿವಾಳ | ಹರ್ಷಿತ ಗೌಡ |
| ಅನಂತಶಾಸ್ತ್ರಿ | ಸುಜಾತಾ ಪಾಟೀಲ್ |
| ಭಿಮಣ್ಣ ಆಚಾರಿ | ಕಲ್ಪನ ಆಚಾರಿ |
| ಉಮೇಶ ಆಚಾರಿ | |
| ನರಸಿಂಹ ಚಮ್ಮಾರ | |
| ರಂಗಪ್ಪ ಪಟೇಲ್ | |

**೪.೪.೫. ಸಿನಿಮಾ ತಾರೆಯರ ಹೆಸರುಗಳ ಅನುಕರಣೆ**

ಈಗಾಗಲೇ ಹೇಳಿದಂತೆ ನವಮಾಧ್ಯಮಗಳು ವ್ಯಕ್ತಿನಾಮಗಳ ನಿರ್ದೇಶನದಲ್ಲಿ ಸಾಕಷ್ಟು ಪ್ರಭಾವ ಬೀರಿವೆ ಎಂಬುದು ತಿಳಿದ ವಿಷಯ. ಅವುಗಳಲ್ಲಿ ಸಿನಿಮಾ ಕ್ಷೇತ್ರ ನೇರವಾಗಿ ಜನರ ಮೇಲೆ ಪ್ರಭಾವ ಬೀರುತ್ತಿದೆ. ಹಾಗಾಗಿ ಸಿನಿಮಾ ಕ್ಷೇತ್ರದಲ್ಲಿರುವ ನಟ, ನಟಿಯರು, ಸಂಗೀತ ನಿರ್ದೇಶಕರು, ಹಾಡುಗಾರರು, ಸಹ ಕಲಾವಿದರು ಮುಂತಾದವರು ಸಮಾಜದಲ್ಲಿ ಅಭಿಮಾನಿ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ. ಈ ಅಭಿಮಾನಿ ಬಳಗವು ತಮ್ಮ ನಾಯಕರ ಹೆಸರುಗಳನ್ನು ತಮ್ಮ ಮಕ್ಕಳಿಗೆ ನಿರ್ದೇಶಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಅಭಿಮಾನಿಯಲ್ಲದಿದ್ದರೂ ಯಾವುದೊ ಸಿನಿಮಾ ಮೂಲಕ ಸಮಾಜಕ್ಕೆ

ಒಳ್ಳೆಯ ಸಂದೇಶ ನೀಡಿದ ವ್ಯಕ್ತಿಯನ್ನು ಆದರ್ಶವಾಗಿಟ್ಟುಕೊಂಡು ಅವರ ಹೆಸರನ್ನು ತಮ್ಮ ಮಕ್ಕಳಿಗೆ ನಾಮ ನಿರ್ದೇಶನ ಮಾಡುತ್ತಾರೆ. ಇದಕ್ಕೆ ಪೂರಕವಾದ ಒಂದು ವಿಷಯವೆಂದರೆ 'ರಾಜಕುಮಾರ' ಎನ್ನುವ ವ್ಯಕ್ತಿನಾಮ ಆರಂಭದಲ್ಲಿ ಬಳಕೆಯಲ್ಲಿರಲಿಲ್ಲ ಅದು ಕೇವಲ ಕುಟುಂಬಕ್ಕೆ ಸಂಬಂಧಿಸಿದಂತೆ ಬಳಕೆಯಲ್ಲಿತ್ತು. ಸಿನಿಮಾ ಕ್ಷೇತ್ರದಲ್ಲಿ 'ರಾಜಕುಮಾರ್' ಅವರ ಚಲನಚಿತ್ರಗಳು ಆರಂಭವಾದ ನಂತರದಿಂದ ಇಲ್ಲಿಯವರೆಗೂ ಈ ಹೆಸರು ಚಾಲನೆಗೆ ಬಂದು ಇಂದು ಸಮಾಜದಲ್ಲಿ ನೂರಾರು ಸಂಖ್ಯೆಯಲ್ಲಿ ಬಳಕೆಯಲ್ಲಿವೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ರಾಜಕುಮಾರ | ಮಂಜುಳ |
| ವಿಷ್ಣುವರ್ಧನ | ಆರತಿ |
| ಅಂಬರೀಶ | ಭಾರತಿ |
| ರವಿಚಂದ್ರನ್ | ಸುಹಾಸಿನಿ |
| ಸುದೀಪ್ | ಚಾರುಲತಾ |
| ದರ್ಶನ್ | ಜಯಂತಿ |
| ಯಶ್ | ಉಮಾಶ್ರಿ |
| ಅರ್ಜುನ್ ಸರ್ಜಾ | ಮಾಲಾಶ್ರೀ |
| ವಜ್ರಮುನಿ | ಶೃತಿ |
| ದಿಗಂತ್ | ಪ್ರೇಮ |
| ಸೃಜನ್ | ರಕ್ಷಿತಾ |
| ಚಿರಂಜೀವಿ | ರಮ್ಯಾ |
| ಮಹೇಶ್‌ಬಾಬು | ತಾರಾ |
| ರಾಮ್‌ಚರಣ್ | ರುಚಿತ |
| ಚರಣ್‌ರಾಜ್ | ಐಶ್ವರ್ಯ |
| ಜಗ್ಗೇಶ್ | ಮಾಧುರಿ |
| | ಕಲ್ಪನಾ |
| | ಸುಧಾರಾಣಿ |

ಈ ಮೇಲಿನ ಪಟ್ಟಿಯಲ್ಲಿನ ಹೆಸರುಗಳು ಸಿನಿಮಾಕ್ಷೇತ್ರದಲ್ಲಿ ನಾಯಕ ನಾಯಕಿಯಾಗಿ ಪ್ರಸಿದ್ಧಿ ಪಡೆದವರ ಹೆಸರುಗಳಾಗಿದ್ದು ಇವು ಆಧುನಿಕ ಸಮಾಜದ ವ್ಯಕ್ತಿನಾಮಗಳಲ್ಲಿ ಬೆರೆತು ಹೋಗಿವೆ.

ಇವುಗಳ ಜೊತೆಗೆ ರಾಜಕೀಯ ಕ್ಷೇತ್ರ, ಸಾಹಿತ್ಯಕ್ಷೇತ್ರ, ಕ್ರೀಡಾಕ್ಷೇತ್ರ ಮುಂತಾದ ಕ್ಷೇತ್ರದಲ್ಲಿ ಹೆಸರುಮಾಡಿದ ವ್ಯಕ್ತಿಗಳ ಹೆಸರುಗಳನ್ನು ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಬಳಸಲಾಗತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಷಯವನ್ನು ವ್ಯಕ್ತಿನಾಮಗಳ ಚಾರಿತ್ರಿಕ ನೆಲೆಗಳನ್ನು ಕುರಿತು ವಿವರಿಸುವಲ್ಲಿ ಚರ್ಚಿಸಲಾಗಿದೆ.

**೪.೪.೬. ಸಂಸ್ಕೃತ ಮೂಲದ ವ್ಯಕ್ತಿನಾಮಗಳ ಬಳಕೆ**

ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಕಾಣಲಾಗಿದೆ. ಹೆಸರುಗಳ ಬಗ್ಗೆ ಪ್ರಾಚೀನ ಕಾಲದಲ್ಲಿ ಇದ್ದಂತಹ ಮನೋಧೋರಣೆಗಳಾಗಲಿ, ನಂಬಿಕೆ ಪರಂಪರೆಗಳಾಗಲಿ ಜನರಲ್ಲಿ ಇಂದು ಕಡಿಮೆಯಾಗಿದೆ ಎಂದೇ ಹೇಳಬಹುದು. ಅಂದರೆ ಇಂದಿನ ಜನರಲ್ಲಿ ಹೆಸರುಗಳು ಆಕರ್ಷಕವಾಗಿರಬೇಕು, ಸುಂದರವಾಗಿರಬೇಕು ಎಂಬ ಮನೋಧೋರಣೆ ಹೆಚ್ಚಾಗಿದೆ. ಆದ್ದರಿಂದ ಅಂತಹ ಹೆಸರುಗಳು ಕನ್ನಡದಲ್ಲಿ ಕಡಿಮೆ ಇರುವುದರಿಂದ ಸಹಜವಾಗಿಯೇ ಸಂಸ್ಕೃತ ಮೂಲದ ವ್ಯಕ್ತಿನಾಮಗಳನ್ನು ಬಳಸುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಇಂದು ಎಲ್ಲಾ ವರ್ಗದ ಜನರಿಗೂ ಕನ್ನಡ ಮತ್ತು ಸಂಸ್ಕೃತದ ಹೆಸರುಗಳ ಪರಿಚಯ ಇದೆ ಎಂದು ಹೇಳಲಾಗದು. ಗ್ರಾಮೀಣ ಭಾಗದ ಮತ್ತು ಅನಕ್ಷರಸ್ಥ ಸಮುದಾಯಕ್ಕೆ ಇಂದಿಗೂ ಕನ್ನಡ ಮತ್ತು ಸಂಸ್ಕೃತ ಪದಗಳ ಹೆಸರುಗಳನ್ನು ಬೇರ್ಪಡಿಸಿ ಹೇಳಲು ಸಾಧ್ಯವಾಗುವುದಿಲ್ಲ. ಕನ್ನಡ ಮತ್ತು ಸಂಸ್ಕೃತದ ಹೆಸರುಗಳು ಒಂದೇ ಭಾಷೆಯಲ್ಲಿ ಬಳಕೆಯಲ್ಲಿರುವಂತಹವು ಎಂಬ ಕಲ್ಪನೆ ಕೆಲ ಜನರಲ್ಲಿ ಇಂದಿಗೂ ಇದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯನ್ನು ಗಮನಿಸಿದರೆ ಆಧುನಿಕ ಸಂದರ್ಭದ ವ್ಯಕ್ತಿನಾಮಗಳು ಸಾಕಷ್ಟು ಸಂಸ್ಕೃತ ಮೂಲದವುಗಳಾಗಿವೆ ಎಂಬುದನ್ನು ಗಮನಿಸಬಹುದಾಗಿದೆ.

**ಉದಾ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಕೀರ್ತಿ | ಸ್ಮೃತಿ |
| ಹರ್ಷಾ | ಪೃಥ್ವಿ |
| ವರ್ಧನ | ಮೈತ್ರಿ |
| ಪ್ರಕಾಶ | ಪ್ರಾರ್ಥನ |
| ಸಂಕಲ್ಪ | ಪ್ರೀತಿ |
| ಪೃಥ್ವಿ | ಪ್ರೇಮ |
| ವರ್ಣಿತ | ಹರ್ಷಿತ |
| ರಕ್ಷಿತ | ಕಲ್ಪನ |
| ಪ್ರಣೀತ್ | ರಕ್ಷಿತ |

| | |
|---|---|
| ಪ್ರೀತಮ್ | ಅಮೃತ |
| ರಂಜಿತ | ವರ್ಷಿಣಿ |
| ಮನ್ವಿತ್ | ಪ್ರಕೃತಿ |
| ಶ್ರೀಕರ | ಆದ್ಯ |
| ದರ್ಶನ್ | ಅನ್ವಿತ್ |
| ಚಂದನ್ | ವೈಷ್ಣವಿ |
| ಪ್ರಥಮ್ | ಸೌಂದರ್ಯ |
| ಪ್ರಸಾದ್ | ಸ್ವಪ್ನ |

ಈ ಮಾದರಿಯ ಹೆಸರುಗಳಿದ್ದರೂ ಸಹ ಪ್ರಯತ್ನ ಪೂರ್ವಕವಾಗಿ ಅನೇಕ ಕನ್ನಡದ ಹೆಸರುಗಳನ್ನು ಇಟ್ಟುಕೊಂಡಿರುವ ಮಾದರಿಗಳು ಇವೆ. ಉದಾ: 'ನುಡಿ'

**೪.೪.೭. ಲಿಂಗ ಸೂಚಕವಲ್ಲದ ವ್ಯಕ್ತಿನಾಮಗಳು**

ಹಿಂದಿನ ವ್ಯಕ್ತಿನಾಮಗಳನ್ನು ಅವರ ಸ್ವರೂಪದ ಆಧಾರದ ಮೇಲೆ ಅದು ಪುರುಷವಾಚಿ ನಾಮವೊ, ಸ್ತ್ರೀವಾಚಿ ನಾಮವೊ ಎಂಬುದನ್ನು ಗುರುತಿಸಬಹುದಾಗಿತ್ತು. ಅಂದರೆ ಅಂದಿನ ಹೆಸರುಗಳಿಗೆ ಬಂಧುವಾಚಿ ವಾರ್ಗಿಕಗಳು ಸೇರುತ್ತಿದ್ದರಿಂದ ಸುಲಭವಾಗಿ ಯಾವ ಲಿಂಗದ ಹೆಸರು ಎಂಬುದನ್ನು ಗುರುತಿಸಬಹುದಾಗಿತ್ತು. ನಂತರದ ದಿನಗಳಲ್ಲಿ ಬಂಧುವಾಚಕಗಳ ಬದಲಾಗಿ ಪುರುಷವಾಚಕ ಮತ್ತು ಸ್ತ್ರೀವಾಚಕ ಹೆಸರುಗಳನ್ನು ಇತರ ವಾರ್ಗಿಕಗಳು ಮತ್ತು ರಚನೆಯ ಅಧಾರದ ಮೇಲೆ ಗುರುತಿಸಬಹುದಾಗಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳ ಸ್ವರೂಪವನ್ನು ಗಮನಿಸಿದರೆ ಪುರುಷವಾಚಿ ನಾಮವೊ ಸ್ತ್ರೀವಾಚಿ ನಾಮವೊ ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಇದೆಲ್ಲವು ಆಧುನಿಕತೆಯ ಪ್ರಭಾವದಿಂದ ಆಗಿರುವಂತಹದ್ದು. ಹೆಸರುಗಳು ಸುಂದರವಾಗಿರಬೇಕು, ಆಕರ್ಷಕವಾಗಿರಬೇಕು, ಸಮುದಾಯದಲ್ಲಿ ವಿಶೇಷವಾಗಿ ಗುರುತಿಸಲ್ಪಡಬೇಕು ಮುಂತಾದ ಮನೋಧೋರಣೆಯ ಅಂಶಗಳು ಆಧುನಿಕ ಸಂದರ್ಭದ ಜನಸಮುದಾಯದ ಮೇಲೆ ಪ್ರಭಾವ ಬೀರಿ ಈ ರೀತಿಯ ವ್ಯಕ್ತಿನಾಮಗಳು ಬಳಕೆಗೆ ಬಂದಿವೆ.

ಉದಾ:–

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಮೋನಿಷ | ಮೋನಿಷ |
| ಅರುಣ | ಅರುಣ |
| ಚಂದನ | ಚಂದನ |
| ಅಂಜನ | ಅಂಜನ |
| ಅಕ್ಷಯ | ಅಕ್ಷಯ |

| | |
|---|---|
| ಅಕ್ಷರ | ಅಕ್ಷರ |
| ಏಕಾಂತ | ಏಕಾಂತ |
| ಮೈತ್ರಿ | ಮೈತ್ರಿ |
| ನಿಧಿ | ನಿಧಿ |
| ಕಿರಣ್ | ಕಿರಣ್ |
| ನವೀನ | ನವೀನ |

**೪.೪.೮. ಸ್ವರಾಂತ್ಯ ಸ್ತ್ರೀವಾಚಿ ವ್ಯಕ್ತಿನಾಮಗಳು**

ಹಿಂದಿನ ಕಾಲದ ವ್ಯಕ್ತಿನಾಮಗಳಲ್ಲಿ ಬಂಧುವಾಚಕಗಳಾದ ಅಪ್ಪ, ಅಯ್ಯ, ಅಣ್ಣ, ಅಮ್ಮ, ಅಕ್ಕ, ಅವ್ವ ಮುಂತಾದ ವಾರ್ಗಿಕಗಳಿಂದ ಆ ವ್ಯಕ್ತಿಯ ಹೆಸರು ಪುರುಷವಾಚಕವೊ, ಸ್ತ್ರೀವಾಚಕವೊ ಎಂದು ಸುಲಭವಾಗಿ ನಿರ್ಧರಿಸಬಹುದಾಗಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ಬಂಧುವಾಚಿ, ವಾರ್ಗಿಕಗಳೇ ಕಣ್ಮರೆಯಾಗಿರುವುದರಿಂದ ಇಂದಿನ ಹೆಸರುಗಳನ್ನು ಪುರುಷವಾಚಕವೊ, ಸ್ತ್ರೀವಾಚಕವೊ ಎಂದು ಸುಲಭವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಇಂದಿನ ಹೆಸರುಗಳನ್ನು ಸ್ತ್ರೀವಾಚಿ ಮತ್ತು ಪುರುಷವಾಚಿ ಹೆಸರುಗಳೆಂದು ಗುರುತಿಸಲು ಈಗಾಗಲೇ ತಿಳಿದ ಹಾಗೆ ಪುರುಷವಾಚಿ ವ್ಯಕ್ತಿನಾಮಗಳು ವ್ಯಂಜನಾಂತ್ಯದಿಂದ ಕೊನೆಯಾಗುತ್ತವೆ. ಹಾಗೆಯೆ ಸ್ತ್ರೀವಾಚಿ ವ್ಯಕ್ತಿನಾಮಗಳು ಸಾಮಾನ್ಯವಾಗಿ ಸ್ವರಾಂತ್ಯದಿಂದ ಕೊನೆಯಾಗುವುದನ್ನು ಗುರುತಿಸಲಾಗಿದೆ. ಅಂದರೆ ಇಂದಿನ ಹೆಚ್ಚು ಸ್ತ್ರೀವಾಚಿ ವ್ಯಕ್ತಿನಾಮಗಳು 'ಅ', 'ಆ' ಕಾರಾಂತ್ಯ ಅಥವಾ 'ಇ'ಕಾರಂತ್ಯದಿಂದ ಕೊನೆಗೊಳ್ಳುವುದನ್ನು ಕಾಣಬಹುದಾಗಿದೆ.

**ಉದಾ:–**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **'ಅ''ಆ'ಕಾರಾಂತ್ಯ ಸ್ತ್ರೀವಾಚಿ ವ್ಯಕ್ತಿನಾಮಗಳು** | **'ಇ'ಕಾರಾಂತ್ಯ ಸ್ತ್ರೀವಾಚಿ ವ್ಯಕ್ತಿನಾಮಗಳು** |
| ಅಮೃತ/ತಾ | ಅಹರ್ನಿಷಿ |
| ಅಕ್ಷಯ | ಕೀರ್ತಿ |
| ಅಚಲ/ಲಾ | ಶಾಶ್ವತಿ |
| ಅನಿಷಾ | ಪ್ರಕೃತಿ |
| ಅಚಲಾ/ಲ | ಶಾಲಿನಿ |
| ಅಪರ್ಣಾ | ಮಾನಿನಿ |
| ಅರ್ಪಣ | ರಾಣಿ |
| ಚಂಚಲ | ಶೃತಿ |
| ಸಿಂಚನಾ | ಸ್ಮೃತಿ |
| ವ್ಯಂಜನಾ | ಸರಸ್ವತಿ |

| | |
|---|---|
| ಅರಣಾ | ಸ್ಫೂರ್ತಿ |
| ವರುಣಾ | ಪೃಥ್ವಿ |
| ರಂಜಿತ | ಅಂಜಲಿ |
| ವರ್ಣಿತಾ | ವರ್ಷಿಣಿ |
| ಸುಚಿತಾ | ವಿಧುಷಿ |
| ಸುಮಾ | ಪೂರ್ವಿ |
| ಮೋನಿಷಾ | ತನ್ವಿ |
| ಸುಪ್ರಿತ/ತಾ | ಪೂರ್ವಿ |
| ಸಂಗಮ | ರೇವತಿ |
| ಪೂರ್ವಿಕಾ | ಚಿತ್ರಾಲಿ ಮುಂತಾದವು |

**೪.೪.೯. ಭಾವನಾಮ ಸಂಬಂಧಿ ವ್ಯಕ್ತಿನಾಮಗಳು**

ಪ್ರಾಚೀನ ಕಾಲದಿಂದ ಆಧುನಿಕತೆಯ ಆರಂಭದವರೆಗಿನ ಹೆಸರುಗಳ ನಿರ್ದೇಶನದಲ್ಲಿ ದೈವ, ಚರಿತ್ರೆ, ನಂಬಿಕೆ, ಪರಂಪರೆ, ವಸ್ತುಗಳು ಪ್ರಭಾವ ಬೀರಿದ್ದವು. ಅದರೆ ಆಧುನಿಕ ಸಂದರ್ಭದ ಹೆಸರುಗಳಲ್ಲಿ ಇವುಗಳಾವುವು ಅಷ್ಟು ಪ್ರಭಾವ ಬೀರಲಾರವು. ಇಂದಿನ ಹೆಸರುಗಳಿಗೆ ಜನರ ಮನೋಧೋರಣೆಗಳಲ್ಲಿ ಭಾವನೆಗಳು ಮುಖ್ಯ ಪಾತ್ರವಹಿಸುತ್ತಿವೆ. ಆಧುನಿಕತೆಯ ಪ್ರಭಾವದಿಂದ ಹಾಗೂ ಜನರ ಭಾವನೆಯಿಂದ ವ್ಯಕ್ತಿನಾಮಗಳ ನಿರ್ದೇಶನದಲ್ಲಿ ಭಾವನಾಮಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಈ ಭಾವನಾಮಗಳಿಗೆ ಯಾವುದೇ ದೈವದ ಹೆಸರಾಗಲೀ ಚರಿತ್ರಾಕಾರರ ಹೆಸರಾಗಲಿ, ಪರಂಪರಾನುಗತವಾಗಿ ಬಂದ ಹಿರಿಯರ ಹೆಸರುಗಳಾಗಲೀ, ಅಥವಾ ಇತರೆ ಯಾವುದೇ ವಸ್ತುವಿನ ಹೆಸರುಗಳಾಗಲೀ ಪ್ರಭಾವ ಬೀರಿರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಪ್ರಾಚೀನ ಕಾಲದಿಂದ ಇದ್ದಂತಹ ಬಂಧುವಾಚಿ, ವೃತ್ತಿವಾಚಿ, ಅಧಿಕಾರವಾಚಿ, ಗೌರವವಾಚಿ, ಜಾತಿವಾಚಿ ವಾರ್ಗಿಕಗಳಾಗಲೀ, ಗುಣವಿಶೇಷಣಗಳಿಂದ ಕೂಡಿದ ಅನ್ವರ್ಥ ನಾಮಗಳಾಗಲೀ ಬಳಕೆಯಾಗುತ್ತಿಲ್ಲ. ಭಾವನಾಮಗಳು ಇಂದು ನಗರ ಪ್ರದೇಶ, ಅಕ್ಷರಸ್ಥ ಸಮುದಾಯದಲ್ಲಷ್ಟೇ ಕಂಡುಬರದೇ ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಕುಟುಂಬಗಳಲ್ಲಿಯೂ ಕೂಡ ಕಂಡುಬರುತ್ತಿವೆ. ಇದಕ್ಕೆಲ್ಲ ಮುಖ್ಯ ಕಾರಣ ಆಧುನಿಕತೆಯ ಪ್ರಭಾವ ಮತ್ತು ನವಮಾಧ್ಯಮಗಳು ಸಮಾಜದ ಅಂತಿಮ ಹಂತದ ಜನಸಮುದಾಯವನ್ನು ತಲುಪಿರುವುದಾಗಿದೆ.

ಉದಾ:

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| **ಪುರುಷವಾಚಿ** | **ಸ್ತ್ರೀವಾಚಿ** |
| ಅಂಕುರ–ಮೊಳಕೆ, ಚಿಗುರು | ಅಂಕಿತ |
| ಅಂಕುಶ–ಆನೆಪಳಗಿಸುವ ಸಾಧನ | ಅಂಜಲಿ–ಬೊಗಸೆ |

| | |
|---|---|
| ಅಂಜನ್–ಮುಲಾಮು, ಕಾಡಿಗೆ | ಅಂಜನಾ |
| ಅಕುಲ್–ಕುಲವಿಲ್ಲದ | ಅಂಬಿಕೆ–ತಾಯಿ |
| ಅಕ್ಷರ–ಮರಣವಿಲ್ಲದ, ನಾಶವಿಲ್ಲದ | ಅಕ್ಷರಾ |
| ಅಕ್ಷಯ–ನಾಶವಿಲ್ಲದ, ಕ್ಷಯವಿಲ್ಲದ | ಅಕ್ಷಯಾ |
| ಅಕ್ಷತ್–ಮುರಿಯದ | ಅಕ್ಷತಾ |
| ಅವಂತ–ಕೊನೆಯಿಲ್ಲದ | ಅನುಪಮ–ಹೋಲಿಕೆಯಿಲ್ಲದ |
| ಅನಿತ್ಯ–ಸ್ಥಿರವಲ್ಲದ | ಅರುಣ–ಕೆಂಪುಬಣ್ಣ |
| ಅನಿಶಾ–ಬಿಡುವಿಲ್ಲದ | ಅನಿಶಾ |
| ಅನಿಲ–ವಾಯು/ಗಾಳಿ | ಏಕಾಂತ–ಒಂಟಿಯಾದ |
| ಆನಂದ–ಸಂತೋಷ | ಇಂಚರ–ಮಧುರವಾದ ಧ್ವನಿ |
| ಉಲ್ಲಾಸ–ಉತ್ಸಾಹ, ಸಂತೋಷ | ಇಂದು–ಚಂದ್ರ/ಪ್ರಸ್ತುತ ದಿನ |
| ಅಭಿ | ಆಧ್ಯ |
| ಅಭಯ್ | ಅಹರ್ನಿಶಿ |
| ಅಮಿತ್ | ಅಚ್ಯುತಾ |
| ಆರುಶಿ | ರುಚಿತಾ |
| ಅಭಿಲಾಶ್ | ಸಂಜನಾ |
| ಅಭಿನವ | ರಿತಿಕಾ |
| ಅಚಲ್ | ಪರಿಣಿತ |
| ಅಚಿತ್ | ಮೋನಿಕಾ |
| ಅಚಿಂತ್ಯ | ಚಿತ್ರಿತ |
| ಅಚ್ಯುತ | ಚಿತ್ರಾಲಿ |
| ಆದಿ | ನಿಹಾರಿಕಾ |
| ಆಧಿತ್ಯ | ವರುಣಾ |
| ಅಜಿತ್ | ಸುಚಿತಾ |
| ಅಕ್ಷಯ್ | ಶಾಶ್ವತಿ |
| ವ್ಯಂಜನ್ | ಸುಪ್ರೀತ |
| ವರ್ಣಿತ್ | ರಂಜಿತಾ |
| ವರುಣ್ | ಪ್ರತೀಕಾ |
| ನಿವೇದಿತ್ | ನಿಷಾ |
| ಪರಿಣಿತ್ | ಅನಿತಾ |

| | |
|---|---|
| ಪೂರ್ವಿಕ್ | ರೇವತಿ |
| ಪ್ರಥಮ್ | ವರ್ಷ |
| ರಂಜಿತ್ | ವರ್ಷಿಣಿ |
| ಜಗನ್ | ಹರ್ಷಾ |
| ರೂಪೇಶ್ | ದೀಕ್ಷಾ |
| ರಿತ್ವೀಕ್ | ದಿಷಾ |
| ಸುಪ್ರೀತ್ | ಚಂಚಲಾ |
| ಸಂಜಯ್ | ಬೃಂದಾ |
| ಸಾರ್ಥಕ್ | ಆಸ್ಥ |
| ತನ್ವಿತ್ | ಅನುಷಾ |
| ಸಮರ್ಥ | ಅಮೂಲ್ಯ |
| ಮೋನೀಷ್ | ಅಮೃತ |
| ಸಂಜಿತ್ | |
| ರುತಿಕ್ | ಇನ್ನು ಮುಂತಾದವು |

ಈ ಮೇಲಿನ ಪಟ್ಟಿಯಲ್ಲಿರುವ ವ್ಯಕ್ತಿನಾಮಗಳು ಆಧುನಿಕ ಸಮಾಜದಲ್ಲಿ ಯಾವುದೇ ವರ್ಗಗಳಿಗೆ ಜಾತಿಗಳಿಗೆ ಸೀಮಿತವಾಗದೆ ಸಾರ್ವತ್ರಿಕವಾಗಿ ಎಲ್ಲಾ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಅಂದರೆ ಈ ಹಿಂದೆ ಇದ್ದಂತಹ ಇಂತಹ ಜಾತಿಯವರು ಇಂತಹದ್ದೇ ಹೆಸರು ಬಳಸಬೇಕೆಂಬ ನಿರ್ಬಂಧಗಳು ಆಧುನಿಕ ಸಂದರ್ಭದಲ್ಲಿ ಕಂಡುಬರುತ್ತಿಲ್ಲ.

ಆಧುನಿಕ ಸಂದರ್ಭದಲ್ಲಿ ಹೆಸರಿನ ಮುಂದೆ ತನ್ನ ಹಿರಿಯರ, ತಂದೆಯ ಅಥವಾ ಗಂಡನ ಹೆಸರನ್ನು ಬಳಸುವುದನ್ನು ಗುರುತಿಸಲಾಗಿದೆ. ಮದುವೆಗೆ ಪೂರ್ವದಲ್ಲಿ ತಂದೆಯ ಹೆಸರನ್ನು, ನಂತರ ಗಂಡನ ಹೆಸರನ್ನು ಸೇರಿಸಿ ಕೊಳ್ಳುವುದು ಕಂಡುಬರುತ್ತದೆ. ಇದೇ ಮಾದರಿ ತುಮಕೂರು ಪರಿಸರದಲ್ಲಿ ಕಂಡುಬಂದಿದೆ. ಇದೂ ಸಹ ಆಧುನಿಕ ಹೆಸರಿನ ಜೊತೆಯಲ್ಲಿ ಬರುವುದು ತಿಳಿದುಬಂದಿದೆ.

**ಉದಾ:**

ಐಶ್ವರ್ಯ ರಂಗನಾಥ
ಸ್ಮಿತಾ ರಂಗನಾಥ್
ಸೌಂದರ್ಯ ರಮೇಶ
ಶ್ರಾವ್ಯ ಮಹೇಶ
ಅನಿತಾ ಚಿದಾನಂದ್
ವೀಣಾ ಸಾಗರ್
ಶೈಲಾ ನಾಗರಾಜ

ಶೋಭಾ ಲಿಂಗರಾಜ್

ಮಮತಾ ಅಶೋಕ್ ಮುಂತಾದವು

ಒಟ್ಟಾರೆಯಾಗಿ ವ್ಯಕ್ತಿನಾಮಗಳ ಸ್ವರೂಪದಲ್ಲಿ ಪ್ರಾಚೀನ ಕಾಲದಿಂದ ಆಧುನಿಕತೆಯ ಆರಂಭದವರೆಗೂ ಬಳಕೆಯಲ್ಲಿದ್ದಂತಹ ಹೆಸರುಗಳು ತನ್ನ ಸ್ವರೂಪದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬದಲಾವಣೆ ಮಾಡಿಕೊಂಡಿವೆ ಎಂಬುದನ್ನು ಗುರುತಿಸಲಾಗಿದೆ. ಇಂದಿನ ಈ ಬದಲಾವಣೆಗೆ ಹಿಂದೆ ಇದ್ದಂತಹ ದೈವ, ನಂಬಿಕೆ, ಚರಿತ್ರೆ, ರೂಢಿ, ಸಂಪ್ರದಾಯಗಳು ಕಾರಣವಾಗಿಲ್ಲ. ಬದಲಾಗಿ ಆಧುನಿಕರಣದ ಪ್ರಭಾವ, ನವಮಾಧ್ಯಮಗಳ ಬಳಕೆ ಹಾಗೂ ಸಮಾಜದ ಜನರ ಮನೋಧೋರಣೆಗಳು ಬದಲಾಗಿರುವ ಕಾರಣ ಭಾವನೆಗಳಿಗೆ ಹೆಚ್ಚು ಮಹತ್ವ ನೀಡಿದ ಪರಿಣಾಮ ಹೆಸರುಗಳಲ್ಲಿ ಬದಲಾವಣೆಗಳಾದವು ಎಂಬುದನ್ನು ಕಂಡುಕೊಳ್ಳಲಾಗಿದೆ. ಜನರು ಹೆಸರುಗಳ ಸ್ವರೂಪ ಬದಲಿಸಿಕೊಳ್ಳಲು ಹೆಸರು ಇಂಪಾಗಿರಬೇಕು, ಸುಂದರವಾಗಿರಬೇಕು, ಆಕರ್ಷಿತವಾಗಿರಬೇಕು, ಬೇರೆಯವರಿಂದ ಸುಲಭವಾಗಿ ಮತ್ತು ವಿಶೇಷವಾಗಿ ಗುರುತಿಸಲ್ಪಡಬೇಕು. ಇವೇ ಮೊದಲಾದ ಮನೋಧೋರಣೆಯ ಅಂಶಗಳೂ ಕಾರಣವಾಗಿವೆ ಎಂದು ಹೇಳಬಹುದು.

* * *

# ಅಧ್ಯಾಯ ಐದು

# ಸಮಾರೋಪ

## ಅಧ್ಯಾಯ ಐದು

# ಸಮಾರೋಪ

ಹೆಸರುಗಳಿಲ್ಲದ ವ್ಯಕ್ತಿಗಳಿಲ್ಲ, ಮನುಷ್ಯರಿಗೆ ಸಂವಹನ ಮಾಧ್ಯಮವಾಗಿ ಭಾಷೆ ಎಷ್ಟು ಮುಖ್ಯವೋ ವ್ಯಕ್ತಿನಾಂಗಳು ಅಷ್ಟೇ ಮುಖ್ಯ. ಆದರೆ ಇಷ್ಟು ಮಹತ್ವ ಹೊಂದಿರುವ ವ್ಯಕ್ತಿನಾಮಗಳ ಕುರಿತು ಅಧ್ಯಯನಗಳು ನಡೆದಿರುವುದು ತುಂಬಾ ವಿರಳ. ಅದರಲ್ಲೂ ಚಾರಿತ್ರಿಕ ಮಾದರಿಯಲ್ಲಿ ವ್ಯಕ್ತಿನಾಮಗಳನ್ನು ಅಧ್ಯಯನ ಮಾಡುವ ಪ್ರಯತ್ನಗಳು ನಡೆದಿಲ್ಲವೆಂದೇ ಹೇಳಬಹುದು. ಹಾಗಾಗಿ ಪ್ರಸ್ತುತ ಅಧ್ಯಯನ ಆ ನಿಟ್ಟಿನಲ್ಲಿ ಕನ್ನಡದ ಮಟ್ಟಿಗೆ ಮೊದಲ ಪ್ರಯತ್ನವಾಗಿದೆ. ವ್ಯಕ್ತಿನಾಮಗಳನ್ನು ಕುರಿತು ಅಧ್ಯಯನದ ಅವಶ್ಯಕತೆ ಇದೆಯೇ ಎಂಬುದಕ್ಕೆ ಹಲವಾರು ಕಾರಣಗಳಿಂದ ಉತ್ತರ ಕಂಡುಕೊಳ್ಳಬಹುದು. ವ್ಯಕ್ತಿನಾಮಗಳು ಸಾಮಾಜಿಕ ಏಣೀಶ್ರೇಣಿಯನ್ನು ಗುರುತಿಸುವಲ್ಲಿ ಗುಪ್ತಗಾಮಿನಿಯಂತೆ ಕೆಲಸಮಾಡಿವೆ. ಅದರಲ್ಲೂ ಪ್ರಮುಖವಾಗಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಹೆಸರುಗಳನ್ನು ಪ್ರಮುಖವಾಗಿ ಬಳಸಿಕೊಳ್ಳುತ್ತಿದ್ದಾನೆ. ಹೆಸರುಗಳಲ್ಲಿ ವಾರ್ಗಿಕಗಳನ್ನು ಬಳಸಿಕೊಳ್ಳುತ್ತಿರುವುದನ್ನು ಗಮನಿಸಿದರೆ ವ್ಯಕ್ತಿಯು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಎಷ್ಟರ ಮಟ್ಟಿಗೆ ಪ್ರಯತ್ನಿಸಿದ್ದಾನೆ ಎಂಬುದು ಗೊತ್ತಾಗುತ್ತದೆ. ಇವುಗಳೆಲ್ಲದರ ಜೊತೆಗೆ ವ್ಯಕ್ತಿ ಸಮಾಜದಲ್ಲಿ ವ್ಯವಹರಿಸಲು, ಸಂವಹನ ಮಾಡಲು ಹೆಸರು ಅತ್ಯಾವಶ್ಯಕವಾದುದು ಎಂಬುದು ತಿಳಿಯುತ್ತದೆ. ಆದರೆ ಈ ಹೆಸರುಗಳು ಪ್ರಾಚೀನ ಕಾಲದಿಂದ ಆಧುನಿಕ ಸಂದರ್ಭದವರೆಗೂ ಒಂದೇ ಸ್ವರೂಪದಲ್ಲಿ ಇದ್ದವು ಎಂದು ಹೇಳಲಾಗುವುದಿಲ್ಲ. ಕಾಲದಿಂದ ಕಾಲಕ್ಕೆ ಹೆಸರುಗಳ ಸ್ವರೂಪದಲ್ಲಿ ಹಲವಾರು ಬದಲಾವಣೆಗಳಾಗಿರುವುದನ್ನು ಕಾಣಬಹುದು. ಅಂದರೆ ಮನುಷ್ಯ ಆರಂಭದ ಕಾಲದಿಂದ ತನ್ನ ಜೀವನ ವಿಧಾನದಲ್ಲಿ ಹೇಗೆ ಬದಲಾವಣೆ ಮಾಡಿಕೊಂಡು ಒಂದು ನಾಗರೀಕ ಬದುಕನ್ನು ಕಟ್ಟಿಕೊಂಡನೋ ಹಾಗೆಯೇ ತನ್ನ ಸಂವಹನ ಮಾಧ್ಯಮವಾಗಿ ಭಾಷೆಯನ್ನು ಕಲಿತು ಅವರಲ್ಲಿ ವ್ಯವಹಾರದ ಪ್ರಮುಖ ಸಾಧನವಾಗಿ ಹೆಸರನ್ನು ಬಳಸಿಕೊಂಡು ಪ್ರತಿಯೊಬ್ಬ ವ್ಯಕ್ತಿಗೂ ಹೆಸರನ್ನು

ಇಟ್ಟಿರುವುದನ್ನು ಕಾಣಬಹುದು. ಹಾಗಾಗಿ ಪ್ರಸ್ತುತ ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳನ್ನು ಕಾಣಲಾಗದು. ಒಂದು ವೇಳೆ ಹೆಸರುಗಳಿಲ್ಲದ ವ್ಯಕ್ತಿಗಳೇನಾದರು ಇದ್ದರೆ ಅಂತಹವರನ್ನು ಒಟ್ಟು ಸಮೂಹದಿಂದ ಬೇರ್ಪಡಿಸಿ ಗುರುತಿಸಲು ಸಾಧ್ಯವಿಲ್ಲ. ಹಾಗಾಗಿ ವ್ಯಕ್ತಿಯನ್ನು ಒಟ್ಟು ಸಮೂಹದಿಂದ ಬೇರ್ಪಡಿಸಿ ಗುರುತಿಸುವ ಸಾಧನಗಳಲ್ಲಿ ಹೆಸರು ಪ್ರಮುಖವಾದುದು ಮತ್ತು ಪ್ರಾಚೀನವಾದುದು. ಇಷ್ಟೊಂದು ಪ್ರಾಚೀನತೆಯನ್ನು ಹೊಂದಿರುವ ಹೆಸರುಗಳಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ಹಲವಾರು ಬದಲಾವಣೆಗಳು ಆಗಿರುವುದನ್ನು ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡು ವ್ಯಕ್ತಿನಾಮಗಳು ಆರಂಭದ ಕಾಲದಿಂದ ಆಧುನಿಕ ಸಂದರ್ಭದವರೆಗೂ ಯಾವ ರೀತಿಯಲ್ಲಿ ಬದಲಾವಣೆಗಳಾಗಿವೆ ಎಂಬುದನ್ನು ಗುರುತಿಸುವ, ಆ ಮೂಲಕ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ವ್ಯಕ್ತಿನಾಮಗಳು ಹೇಗೆ ಪ್ರಭಾವ ಬೀರಿವೆ ಎಂಬ ಅಂಶಗಳನ್ನು ತಿಳಿಯುವ ಕುರಿತು ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಕಟ್ಟಿಕೊಡಲಾದ ಪ್ರಬಂಧವನ್ನು ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಗಳನ್ನು ಗಮನದಲ್ಲಿಟ್ಟುಕೊಂಡು ಐದು ಅಧ್ಯಾಯಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಅವಶ್ಯಕತೆಯನ್ನು ಕುರಿತಂತೆ ಪ್ರಸ್ತಾವನೆ ಭಾಗದಲ್ಲಿ ತಿಳಿಸಲಾಗಿದ್ದು ಅಧ್ಯಯನದ ಉದ್ದೇಶಗಳು ಏನು, ವ್ಯಾಪ್ತಿ ಎಷ್ಟು, ಅಧ್ಯಯನದ ವೈಧಾನಿಕತೆ ಯಾವುದು ಮತ್ತು ಅಧ್ಯಯನದ ಸ್ವರೂಪ ಹೇಗಿರಬೇಕೆಂದು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಏಕೆಂದರೆ ಯಾವುದೇ ಸಂಶೋಧನೆಗೆ ಮುನ್ನೋಟ ಎಂಬುದು ಮುಖ್ಯವೆನಿಸುತ್ತದೆ. ಹಾಗಾಗಿ ಮೊದಲನೆಯ ಅಧ್ಯಾಯವು ಇಡೀ ಪ್ರಬಂಧದ ಸ್ವರೂಪವನ್ನು ಹಿಡಿದಿಡುವ ಶಕ್ತಿ ಹೊಂದಿದ್ದು ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡು ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಇದುವರೆಗೂ ವ್ಯಕ್ತಿನಾಮಗಳ ಕುರಿತು ಆಗಿರುವ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗಿದೆ. ಅಧ್ಯಯನದಲ್ಲಿ ಸಮೀಕ್ಷೆಯೂ ಕೂಡ ಒಂದು ಪ್ರಮುಖ ಕೆಲಸವಾಗಿದೆ. ಸಮೀಕ್ಷೆಯ ಮೂಲಕ ವ್ಯಕ್ತಿನಾಮಗಳ ಕುರಿತು ಒಟ್ಟು ಅಧ್ಯಯನದ ಸಮಗ್ರ ಚಿತ್ರಣ ದೊರೆಯುವಂತಾಗಿದ್ದು ಈ ಸಂದರ್ಭದಲ್ಲಿ ಕಂಡುಬಂದ ಫಲಿತಗಳನ್ನು ಆಕರವಾಗಿ ಬಳಸಿಕೊಂಡು ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ವ್ಯಕ್ತಿನಾಮಗಳ ರಾಚನಿಕ ಸ್ವರೂಪ ಕುರಿತು ಚರ್ಚಿಸಲಾಗಿದೆ. ವ್ಯಕ್ತಿನಾಮಗಳನ್ನು ರಾಚನಿಕವಾಗಿ ಮತ್ತು ಭಾಷಿಕವಾಗಿ ಗಮನಿಸಲಾಗಿದೆ. ವ್ಯಕ್ತಿನಾಮಗಳು ಆರಂಭದಲ್ಲಿ ಹೇಗೆ ಪ್ರವೇಶ ಪಡೆದವು, ಯಾವ ರೀತಿಯ ಹೆಸರುಗಳ ಬಳಕೆಯಿತ್ತು, ನಿಜನಾಮಗಳ ಬಳಕೆ, ವಾರ್ಗಿಕಗಳ ಪ್ರವೇಶ, ವಾರ್ಗಿಕಗಳಾಗಿ ಯಾವ ಅಂಶಗಳು ಹೆಚ್ಚು ಬಳಕೆಯಲ್ಲಿವೆ, ನಿರ್ದಿಷ್ಟವಾಚಿಗಳ ಸ್ವರೂಪದಲ್ಲಿ ಆದಂತಹ ಬದಲಾವಣೆಗಳನ್ನು ಕುರಿತಂತೆ ರಾಚನಿಕವಾಗಿ ಮತ್ತು ಭಾಷಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಈ ವಿಶ್ಲೇಷಣೆ ಕ್ರಮವನ್ನು ಚಾರಿತ್ರಿಕ ಮಾದರಿಯಲ್ಲಿ ನೋಡಲಾಗಿದ್ದು ಆರಂಭಕಾಲದಿಂದ

ಆಧುನಿಕ ಸಂದರ್ಭದವರೆಗೂ ಹೆಸರುಗಳು ರಾಚನಿಕವಾಗಿ ಹೇಗೆ ಬದಲಾವಣೆಯಾಗಿವೆ ಎಂಬುದನ್ನು ಪ್ರಸ್ತುತ ಭಾಗದಲ್ಲಿ ಕಟ್ಟಿಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪ್ರಸ್ತುತ ಪ್ರಬಂಧದ ಪ್ರಮುಖ ಭಾಗವಾದ ವ್ಯಕ್ತಿನಾಮಗಳ ಚಾರಿತ್ರಿಕ ಸ್ವರೂಪ ಮತ್ತು ವಿಶ್ಲೇಷಣೆ ಘಟಕದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಸಂದರ್ಭದವರೆಗೂ ವ್ಯಕ್ತಿನಾಮ ಸ್ವರೂಪದಲ್ಲಾದ ಬದಲಾಣೆಗಳನ್ನು ವಿವಿಧ ನೆಲೆಗಳಲ್ಲಿ ಅಂದರೆ ಚಾರಿತ್ರಿಕ ನೆಲೆಗಳು, ಪ್ರಾದೇಶಿಕ ನೆಲೆಗಳು, ಸಾಮಾಜಿಕ ನೆಲೆಗಳು ಮತ್ತು ಆಧುನಿಕ ನೆಲೆಗಳು ಎಂದು ವಿಭಾಗ ಮಾಡಿಕೊಂಡು ವಿಶ್ಲೇಷಿಸಲಾಗಿದೆ. ಚಾರಿತ್ರಿಕ ನೆಲೆಯಲ್ಲಿ ವ್ಯಕ್ತಿನಾಮಗಳು ಪ್ರವೇಶ ಪಡೆದ ಬಗೆ, ಕಾಲಾನಂತರದಲ್ಲಿ ಅವುಗಳ ಸ್ವರೂಪದಲ್ಲಾದ ಬದಲಾವಣೆ, ವ್ಯಕ್ತಿನಾಮಗಳ ಮೇಲೆ ಯಾವ ಯಾವ ಅಂಶಗಳು ಪ್ರಭಾವ ಬೀರಿವೆ ಮುಂತಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರಾದೇಶಿಕ ನೆಲೆಯಲ್ಲಿ ತುಮಕೂರು ಪರಿಸರದಲ್ಲಿ ವ್ಯಕ್ತಿನಾಮಗಳ ಮೇಲೆ ಆಗಿನ ಪರಿಸರದಲ್ಲಿರುವ ಸಾಂಸ್ಕೃತಿಕ ವೀರರು, ಸಾಧುಸಂತರು, ಕುಲದೈವ, ಆರಾಧ್ಯದೈವಗಳು, ಚಾರಿತ್ರಿಕ ಸ್ಥಳಗಳ ಹೆಸರುಗಳು ಪ್ರಭಾವ ಬೀರಿರುವುದನ್ನು ಚರ್ಚಿಸಲಾಗಿದೆ. ಸಾಮಾಜಿಕ ನೆಲೆಗಳನ್ನು ಕುರಿತು ವ್ಯಕ್ತಿನಾಮಗಳ ಮೇಲೆ ತುಮಕೂರು ಪರಿಸರದಲ್ಲಿ ವೃತ್ತಿವಾಚಿಯಾಗಿ, ಜಾತಿವಾಚಿಯಾಗಿ ವಾರ್ಗಿಕಗಳು ಬಳಕೆಯಾಗಿರುವ ಸ್ವರೂಪವನ್ನು ಹಾಗೂ ವ್ಯಕ್ತಿನಾಮಗಳು ಅಕ್ಷರಸ್ಥ–ಅನಕ್ಷರಸ್ಥ, ಮೇಲ್ವರ್ಗ–ಕೆಳವರ್ಗ, ನಗರ–ಗ್ರಾಮೀಣ ಹೀಗೆ ಹಲವು ನೆಲೆಗಳಲ್ಲಿ ವ್ಯತ್ಯಾಸಗಳಾಗಿರುವುದನ್ನು ಕಂಡುಕೊಳ್ಳಲಾಗಿದೆ. ಆಧುನಿಕ ಸಂದರ್ಭದಲ್ಲಿ ವ್ಯಕ್ತಿನಾಮಗಳ ಸ್ವರೂಪ ಎರಡು ರೀತಿಯಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಅಂದರೆ ನಿಜನಾಮ ಅಥವಾ ನಿರ್ದಿಷ್ಟದ ಜಾಗದಲ್ಲಿ ಎಲ್ಲಾ ಸಮುದಾಯದವರು ಯಾವ ಹೆಸರನ್ನು ಬೇಕಾದರು ಬಳಸಬಹುದಾದ ಮತ್ತು ಬಳಸಿರುವ ಉದಾಹಣೆಗಳು ಕಾಣುತ್ತೇವೆ. ಎರಡನೆಯದಾಗಿ ಬ್ರಾಹ್ಮಣ ಮತ್ತು ಲಿಂಗಾಯಿತ ಎರಡು ಜಾತಿಯ ಹೆಸರುನ್ನು ಹೊರತು ಪಡಿಸಿ (ಅದರಲ್ಲಿ ಬಳಸುವ ಆರಾಧ್ಯ, ಸ್ವಾಮಿ, ಆಚಾರ್ಯ, ರಾವ್, ಅಯ್ಯಂಗಾರ್, ಭಟ್, ಶಾಸ್ತ್ರಿ, ಜೋಯಿಸ್, ಪಂಡಿತ ಇತ್ಯಾದಿ ಅಂಶಗಳನ್ನು ಹೊರತು ಪಡಿಸಿ) ತುಮಕೂರು ಪರಿಸರದಲ್ಲಿರುವ ಇತರ ಎಲ್ಲಾ ಸಮುದಾಯಗಳು ಹೆಚ್ಚಾಗಿ ಜಾತಿವಾಚಿ ವಾರ್ಗಿಕಗಳನ್ನು ಬಳಸಿರುವುದುನ್ನು ಗುರುತಿಸಲಾಗಿದೆ. ಆಧುನಿಕ ಸಂದರ್ಭದಲ್ಲಿ ಭಾವನಾಮ ಸಂಬಂಧಿ ವ್ಯಕ್ತಿನಾಮಗಳು ಹೆಚ್ಚಾಗಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ. ಹೀಗೆ ನಾಲ್ಕನೆಯ ಅಧ್ಯಾಯದಲ್ಲಿ ಪ್ರಬಂಧದ ಮುಖ್ಯಭಾಗವಾಗಿ ವ್ಯಕ್ತಿನಾಮಗಳ ಚಾರಿತ್ರಿಕ ಸ್ವರೂಪವನ್ನು ನಾಲ್ಕು ಆಯಾಮಗಳಲ್ಲಿ ಕಟ್ಟಿಕೊಡಲಾಗಿದೆ.

ಐದನೆಯ ಅಧ್ಯಾಯದ ಸಮಾರೋಪ ಭಾಗದಲ್ಲಿ ಪ್ರಬಂಧದಲ್ಲಿ ಕಂಡುಕೊಂಡ ಒಟ್ಟಾರೆ ಫಲಿತಗಳನ್ನು ಹಾಗೂ ಅಧ್ಯಯನದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಅಂತಿಮವಾಗಿ ಪ್ರಬಂಧ ಕಟ್ಟಿಕೊಡಲು ಸಹಾಯಕವಾದ ಪರಾಮರ್ಶನ ಗ್ರಂಥ, ಮಾಸಪತ್ರಿಕೆ, ಲೇಖನ, ದಿನ ಪತ್ರಿಕೆ, ಶಾಸನ ಸಂಪುಟ, ನಿಯತಕಲಿಕೆಗಳ ಪಟ್ಟಿ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಮಾಹಿತಿ ನೀಡಿದ ವಕ್ತೃಗಳ

ವಿವರಗಳನ್ನು ನೀಡಲಾಗಿದೆ. ಹೀಗೆ ಅಧ್ಯಯನದ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

**ಅಧ್ಯಯನದ ಫಲಿತಗಳು**

* ವ್ಯಕ್ತಿನಾಮಗಳ ರಾಚನಿಕತೆಯನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿನ ಹೆಸರುಗಳಿಗೂ ಮತ್ತು ಆಧುನಿಕ ಕಾಲದಲ್ಲಿನ ಹೆಸರುಗಳಿಗೂ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿರುವದನ್ನು ಗುರುತಿಸಲಾಗಿದೆ.
* ವ್ಯಕ್ತಿನಾಮಗಳಿಗೆ ಲಿಖಿತ ಆಕರಗಳು ದೊರೆತ ಆರಂಭದಲ್ಲಿ ವಾರ್ಗಿಕಗಳು ಬಳಕೆಯಾಗಿಲ್ಲ ಎಂಬುದನ್ನು ಶಾಸನಗಳಲ್ಲಿ ದೊರೆತ ಹೆಸರುಗಳಿಂದ ತಿಳಿಯಲಾಗಿದ್ದು, ಕೆಲವು ನಿರ್ದಿಷ್ಟ ವ್ಯಕ್ತಿನಾಮಗಳಿಗೆ ಅಧಿಕಾರವಾಚಿ ವಾರ್ಗಿಕಗಳು ಮಾತ್ರ ಬಳಕೆಯಾಗಿದ್ದು, ನಂತರದ ದಿನಗಳಲ್ಲಿ ಬಂಧುವಾಚಿ, ವೃತ್ತಿವಾಚಿ ವಾರ್ಗಿಕಗಳು ಪ್ರವೇಶ ಪಡೆದಿರುವುದನ್ನು ಗುರುತಿಸಲಾಗಿದೆ.
* 'ಗೌಡ' ಎಂಬುದು ಆರಂಭದಲ್ಲಿ ಅಧಿಕಾರ/ವೃತ್ತಿವಾಚಿಯಾಗಿ ಬಳಕೆಯಾಗಿದ್ದು ಪ್ರಸ್ತುತ ತುಮಕೂರು ಪರಿಸರದಲ್ಲಿ ಒಂದು ಜಾತಿಗೆ ಸೀಮಿತವಾಗಿರುವುದನ್ನು ಗುರುತಿಸಲಾಗಿದೆ.
* ಕುಲದೈವಗಳು, ಆರಾಧ್ಯ ದೈವಗಳು, ಸಾಂಸ್ಕೃತಿಕ ವೀರರು, ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು, ಪುರಾಣ ಸಂಬಂಧಿ ವ್ಯಕ್ತಿಗಳು, ಸ್ವಾತಂತ್ರ್ಯ ಹೋರಾಟಗಾರರು, ಹಿರಿಯರ ಹೆಸರು, ರಾಜಕೀಯ ವ್ಯಕ್ತಿಗಳು, ಚರಿತ್ರೆಗೆ ಸಂಬಂಧಿಸಿದ ವ್ಯಕ್ತಿಗಳು ಎರಡನೆಯ ತಲೆಮಾರಿಗಿಂತ ಹಿಂದಿನ ವ್ಯಕ್ತಿನಾಮಗಳ ಬಳಕೆಯಲ್ಲಿ ಹೆಚ್ಚು ಪ್ರಭಾವ ಬೀರಿರುವುದನ್ನು ಗುರುತಿಸಲಾಗಿದೆ.
* ಪ್ರಾದೇಶಿಕವಾಗಿ ವ್ಯಕ್ತಿನಾಮಗಳ ಮೇಲೆ ಆಯಾ ಪ್ರದೇಶದಲ್ಲಿರುವ ಜನರ ಜಾತಿ, ವೃತ್ತಿ, ನಂಬಿಕೆ, ಆಚರಣೆಗಳು ಪ್ರಭಾವ ಬೀರಿವೆ.
* ತುಮಕೂರು ಪರಿಸರದಲ್ಲಿ ವ್ಯಕ್ತಿನಾಮಗಳ ಸ್ವರೂಪ ಪ್ರದೇಶದಿಂದ ಪ್ರದೇಶಕ್ಕೆ ತನ್ನ ಸ್ವರೂಪದಲ್ಲಿ ವ್ಯತ್ಯಾಸವಾಗಿರುವುದನ್ನು ಕಾಣಲಾಗಿದೆ.
* ವ್ಯಕ್ತಿನಾಮಗಳ ಮೇಲೆ ಆಯಾ ಪ್ರದೇಶದಲ್ಲಿರುವ ಕುಲದೈವಗಳು, ಇಷ್ಟದೈವಗಳು, ಸಾಂಸ್ಕೃತಿಕ ವೀರರ ಹೆಸರುಗಳು ಪ್ರಭಾವ ಬೀರಿವೆ.
* ತುಮಕೂರು ಪರಿಸರದಲ್ಲಿ 'ಬಸವ' ಎಂಬ ವ್ಯಕ್ತಿನಾಮವು ಪ್ರಾಣಿವಾಚಿಯಾಗಿದ್ದು ನಂತರ ವ್ಯಕ್ತಿವಾಚಿಯಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಅಂದರೆ ಇಲ್ಲಿ 'ಬಸವ' ಕಲ್ಯಾಣದ ಬಸವನಲ್ಲ ಬದಲಿಗೆ ರೈತರ ಆರಾಧನ ಪ್ರಾಣಿ ಬಸವ.
* ತುಮಕೂರು ಪರಿಸರದಲ್ಲಿ 'ಗೊಲ್ಲ' ಸಮುದಾಯದ ಹೆಸರುಗಳು ಆಧುನಿಕ ಸಂದರ್ಭದವರೆಗೂ ತನ್ನ ಮೂಲ ಹೆಸರುಗಳನ್ನು ಇತರೆ ಸಮುದಾಯಗಳಿಗಿಂತ ಹೆಚ್ಚಿಗೆ ಉಳಿಸಿಕೊಂಡಿವೆ ಎಂಬುದನ್ನು ತಿಳಿಯಲಾಗಿದೆ.
* ತುಮಕೂರು ಪರಿಸರದಲ್ಲಿ 'ರಂಗನಾಥ' ಮತ್ತು 'ಬಸವ' ದೈವದ ಪರಂಪರೆ ಹೆಚ್ಚು ಪ್ರಮಾಣದಲ್ಲಿದೆ. ಆದರೆ 'ಲಿಂಗಾಯಿತ' ಸಮುದಾಯದಲ್ಲಿ 'ರಂಗನಾಥ' ಮತ್ತು ಬ್ರಾಹ್ಮಣ ಸಮುದಾಯದಲ್ಲಿ

'ಬಸವ' ಎಂಬ ಹೆಸರುಗಳನ್ನು ಬಳಸಿರುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿಲ್ಲ.

* ಬ್ರಾಹ್ಮಣ, ಲಿಂಗಾಯಿತ, ಕುರುಬ, ನಾಯಕ, ಗೌಡ, ಗೊಲ್ಲ, ಮಾದಿಗ, ತಿಗುಳ, ಕುಂಬಾರ, ಹೀಗೆ ಮುಂತಾದ ಜಾತಿಗಳು ಇಟ್ಟುಕೊಳ್ಳುವ ಹೆಸರುಗಳು ಆ ಸಮುದಾಯವನ್ನು ಪ್ರತಿನಿಧಿಸುವಂತೆಯೇ ಇವೆ. ಆಧುನಿಕ ಸಂದರ್ಭದಲ್ಲಿ ಇವುಗಳ ಜೊತೆಗೆ ವಾರ್ಗಿಕಗಳಾಗಿ ಜಾತಿಗಳು ಬಳಕೆಯಾಗುತ್ತಿವೆ.
* ವ್ಯಕ್ತಿನಾಮಗಳ ರಚನೆಯಲ್ಲಿ ಸಾಮಾಜಿಕವಾಗಿ ಆಯಾ ಸಮುದಾಯದ ಸಂಸ್ಕೃತಿ, ವೃತ್ತಿ, ನಂಬಿಕೆ, ಜಾತಿ, ಆರ್ಥಿಕ ಸ್ಥಿತಿ, ಸಾಮಾಜಿಕ ಅಂತಸ್ತು, ಸಾಕ್ಷರತೆ, ಪ್ರಾದೇಶಿಕತೆ ಮುಂತಾದ ಅಂಶಗಳು ಪ್ರಭಾವ ಬೀರಿರುವುದು ಕಂಡುಬರುತ್ತದೆ.
* ವ್ಯಕ್ತಿನಾಮಗಳ ಬದಲಾವಣೆಗೆ ಆಧುನಿಕ ಸಂದರ್ಭದಲ್ಲಿ ಮಾಧ್ಯಮಗಳು ಮತ್ತು ಸಿನಿಮಾ ವಲಯ ಹೆಚ್ಚು ಪ್ರಭಾವ ಬೀರಿರುವುದು ಕಂಡುಬರುತ್ತದೆ.
* ವ್ಯಕ್ತಿನಾಮಗಳ ಸ್ವರೂಪದಲ್ಲಿ ಹೆಚ್ಚು ಬದಲಾವಣೆಯಾಗಿರುವುದು ಆಧುನಿಕ ಸಂದರ್ಭದಲ್ಲಿ ಎಂಬುದು ಸ್ಪಷ್ಟ. ಅಂದರೆ ಪ್ರಾಚೀನ ಕಾಲದಿಂದಲೂ ವ್ಯಕ್ತಿನಾಮಗಳ ಬಳಕೆಯಲ್ಲಿ ಆಯಾ ಸಮುದಾಯ, ಧರ್ಮ, ನಂಬಿಕೆ, ವೃತ್ತಿ, ಜಾತಿ, ಸಂಸ್ಕೃತಿ, ಅಧಿಕಾರ, ಆರ್ಥಿಕತೆ, ಸಾಮಾಜಿಕ ಶ್ರೇಣೀಕರಣ, ಸಾಕ್ಷರತೆ ಮುಂತಾದ ಅಂಶಗಳು ಪ್ರಭಾವ ಬೀರಿ ವ್ಯಕ್ತಿನಾಮಗಳಲ್ಲಿ ವ್ಯತ್ಯಾಸಗಳಾಗುತ್ತಿದ್ದುದು ತುಂಬಾ ಕಡಿಮೆ. ಆದರೆ ಆಧುನಿಕ ಸಂದರ್ಭದಲ್ಲಿ ಈ ಎಲ್ಲಾ ಕಟ್ಟುಪಾಡುಗಳಲ್ಲಿ ಮೀರಿ ಯಾವುದೇ ಸಮುದಾಯ ಯಾವ ಹೆಸರನ್ನು ಬೇಕಾದರು ಬಳಸುತ್ತಿರುವುದನ್ನು ಗುರುತಿಸಲಾಗಿದೆ.
* ಆಧುನಿಕ ಸಂದರ್ಭದಲ್ಲಿ ನಿರ್ದಿಷ್ಟವಾಚಿನಾಮಗಳು ಎಲ್ಲಾ ಸಮುದಾಯಗಳಲ್ಲೂ ಒಂದೇ ರೀತಿ ಇದ್ದರೂ ಕೂಡ ವಾರ್ಗಿಕಗಳಲ್ಲಿ ತಮ್ಮ ವೃತ್ತಿಯನ್ನೋ, ಜಾತಿಯನ್ನೋ, ಊರಿನ ಹೆಸರನ್ನೋ, ಕುಟುಂಬದ ಹೆಸರನ್ನೋ, ಇನ್ನಿತರೆ ಹೆಸರುಗಳನ್ನೋ ಬಳಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಅವರ ಅಸ್ಮಿತೆಯನ್ನು ಸಮಾಜದಲ್ಲಿ ಗುರುತಿಸಿಕೊಳ್ಳ ಬೇಕಾಗಿರುವುದೇ ಆಗಿರುತ್ತದೆ ಮತ್ತು ಈ ಬದಲಾವಣೆಯು ಹೆಚ್ಚಾಗಿ ಸಾಕ್ಷರಸ್ಥ ವಲಯದಲ್ಲಿ ಕಂಡುಬಂದಿರುವುದನ್ನು ಗುರುತಿಸಲಾಗಿದೆ.
* ವ್ಯಕ್ತಿನಾಮಗಳನ್ನು ಸಾಮಾಜಿಕವಾಗಿ ನೋಡುವಾಗ ಆರಂಭದ ದಿನಗಳಲ್ಲಿ ವ್ಯಕ್ತಿಯ ವೃತ್ತಿಗೂ ಮತ್ತು ಹೆಸರಿಗೂ ನಿಕಟವಾದ ಸಂಬಂಧವಿರುತ್ತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ತಾನು ಮಡುವ ವೃತ್ತಿಗೂ ಹೆಸರಿನ ಮುಂದೆ ಬಳಸುವ ವೃತ್ತಿವಾಚಿ ವಾರ್ಗಿಕಕ್ಕೂ ಯಾವುದೇ ಸಂಬಂಧಗಳಿರುವುದಿಲ್ಲ. ಉದಾಹರಣೆಗೆ ಆರಂಭದ ದಿನಗಳಲ್ಲಿ ಹೆಸರಿನಲ್ಲಿ ಕುಂಬಾರ ಎಂದು ವಾರ್ಗಿಕ ಬಳಕೆಯಲ್ಲಿದ್ದರೆ ಆತನ ವೃತ್ತಿಯೂ ಕೂಡ ಮಡಕೆ ಮಾಡುವುದೇ ಆಗಿರುತ್ತಿತ್ತು. ಆದರೆ ಇಂದು ಕುಂಬಾರ ಎಂಬ ವಾರ್ಗಿಕ ಇಟ್ಟುಕೊಂಡಿರುತ್ತಾರೆ. ವೃತ್ತಿ ಮಾತ್ರ ಬೇರೆಯೇ ಆಗಿರುತ್ತದೆ. ಈ ಪ್ರಕ್ರಿಯೆಯೂ ಎಲ್ಲಾ ವೃತ್ತಿವಾಚಿ ವ್ಯಕ್ತಿನಾಮಗಳಲ್ಲಿ ಕಂಡುಬರುತ್ತದೆ.
* ವ್ಯಕ್ತಿನಾಮಗಳು ವ್ಯಕ್ತಿಯ ವೃತ್ತಿ, ಜಾತಿ, ಸಂಸ್ಕೃತಿ, ಆರ್ಥಿಕತೆ, ಶ್ರೇಣೀಕರಣ ಮುಂತಾದ ಅಂಶಗಳೊಂದಿಗೆ ಪರಸ್ಪರ ಸಂಬಂಧ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ.

* ಆಧುನಿಕ ಸಂದರ್ಭದಲ್ಲಿ ವ್ಯಕ್ತಿ ನಾಮಗಳಲ್ಲಾಗುತ್ತಿರುವ ಬದಲಾವಣೆಗೆ ಯಾವುದೇ ದೈವ, ನಂಬಿಕೆ, ಸಂಸ್ಕೃತಿ, ಚರಿತ್ರೆ, ಸಂಪ್ರದಾಯಗಳಾಗಲೀ ಪ್ರಭಾವ ಬೀರಿಲ್ಲ. ಬದಲಾಗಿ ಮಾಧ್ಯಮಗಳು, ಸಿನಿಮಾರಂಗ ಹಾಗೂ ಜನರು ಇಂದು ಸಮಾಜದ ಎಲ್ಲಾ ವಲಯದಲ್ಲಿ ಸುಲಭವಾಗಿ ವ್ಯವಹರಿಸುವ ಸಾಧ್ಯತೆಯಿರುವುದರಿಂದ ವ್ಯಕ್ತಿನಾಮಗಳು ಆಧುನಿಕರಣಗೊಳ್ಳಲು ಸಾಧ್ಯವಾಗಿದೆ.
* ಆಧುನಿಕ ಸಂದರ್ಭದ ವ್ಯಕ್ತಿನಾಮಗಳ ಬದಲಾವಣೆಗೆ ಜನರ ಮನೋಧೋರಣೆಗಳು ಕೂಡ ಕಾರಣವಾಗಿರುವ ಸಾಧ್ಯತೆಯಿದೆ. ಜನರು ಆಧುನಿಕ ಸಂದರ್ಭದಲ್ಲಿ ಭಾವನಾಮ ಸಂಬಂಧಿ ಹಾಗೂ ಸಂಸ್ಕೃತಜನ್ಯ ಹೆಸರನ್ನು ಹೆಚ್ಚಾಗಿ ಇಟ್ಟುಕೊಳ್ಳಲು ಆ ಹೆಸರು ಕೇಳಲು ಇಂಪಾಗಿರಬೇಕು, ಸುಂದರವಾಗಿರಬೇಕು, ಆಕರ್ಷಿತವಾಗಿರಬೇಕು, ವಿಶೇಷತೆಗಳಿಂದ ಕೂಡಿರಬೇಕು, ಬೇರೆಯವರಿಂದ ಸುಲಭವಾಗಿ ಮತ್ತು ವಿಶೇಷವಾಗಿ ಗುರುತಿಸಲ್ಪಡಬೇಕು ಮುಂತಾದ ಮನೋಧೋರಣೆಯ ಅಂಶಗಳು ಕಾರಣವಾಗಿವೆ. ಇಲ್ಲಿ ಯಾವುದೇ ಆರ್ಥಿಕ ಅನುಕೂಲಗಳಿಗಾಗಲೀ, ಸರ್ಕಾರದ ಸವಲತ್ತುಗಳಿಗಾಗಲೀ ಹೆಸರುಗಳಲ್ಲಿ ಬದಲಾವಣೆಯಾಗಿರುವ ಸಾಧ್ಯತೆ ಕಡಿಮೆ.
* ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಪುರುಷವಾಚಿ ನಿರ್ದಿಷ್ಟಗಳಿಗೆ ಅಷ್ಟೇ ಅಲ್ಲದೆ ಸ್ತ್ರೀವಾಚಿ ನಿರ್ದಿಷ್ಟಗಳಿಗೂ ಜಾತಿವಾಚಿ, ವೃತ್ತಿವಾಚಿ ವಾರ್ಗಿಕಗಳು ಸೇರಿಕೊಳ್ಳುತ್ತಿವೆ.

ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡತಹ ಫಲಿತಗಳು ಯಾವುವೂ ಅಂತಿಮವಾಗಿರುವುದಿಲ್ಲ. ಸಂಶೋಧನೆಯ ಅವಧಿಯಲ್ಲಿ ಅಧ್ಯಯನದ ವಿಧಿವಿಧಾನಗಳ ಮಿತಿಯಲ್ಲಿ ಕಂಡುಕೊಂಡಂತಹ ಫಲಿತಗಳಾಗಿರುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಫಲಿತಗಳು ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವಂತಿದ್ದು ಕಾಲಾನಂತರದಲ್ಲಿ ಬದಲಾವಣೆ ಆಗಬಹುದಾದ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ.

* * *

# ಪರಾಮರ್ಶನ ಗ್ರಂಥಗಳು


೧. ಅಂಗಡಿ ಎಸ್.ಎಸ್., ೧೯೯೯, ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಅಂಗಡಿ ಎಸ್.ಎಸ್., ೧೯೯೯, ಮಿಶನರಿಗಳ ದ್ವಿಭಾಷಿಕ ನಿಘಂಟುಗಳ ತೌಲನಿಕ ಅಧ್ಯಯನ (ಅ.ಪ್ರ), ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ಅಂಗಡಿ ಎಸ್.ಎಸ್., ೧೯೯೯, ಸಂಬಂಧ ಸೂಚಕಗಳು (ಅಮ್ಮ, ಅಪ್ಪ, ಅಬ್ಬೆ, ಅತ್ತೆ, ಅಳಿಯ ಸೊಸೆ, ನಾದ್ನಿ, ನೆಗ್ಯಾನಿ, ಷಡ್ಡಕೆ, ಮಾವ/ಭಾವ, ಮೈದುನ) ನಮ್ಮ ಕನ್ನಡ ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಸಂಚಿಕೆ – ೩೧,೪೨,

೪. ಅಂಗಡಿ ಎಸ್.ಎಸ್., (ಸಂ) ೨೦೦೦, ಜನಪದ ಸಾಹಿತ್ಯ ಭಾಷೆ, ವಿಕಾಸ ಪ್ರಕಾಶನ, ಹೊಸಪೇಟೆ

೫. ಅಂಗಡಿ ಎಸ್.ಎಸ್., ೨೦೧೫, ಕ್ಷೇತ್ರಕಾರ್ಯ, ವಿಶಾಲಾಕ್ಷಿ ಪಬ್ಲಿಕೇಷನ್, ಬೆಳಗಾವಿ

೬. ಅಮರೇಶ ನುಗಡೋಣಿ, ೨೦೧೧, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಅಮೃತ ಟಿ., ೨೦೧೩, ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ, (ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೮. ಆಂಜನೇಯ, ಮ್ಯಾಸಬೇಡರ ಕನ್ನಡ: ಸಮಾಜೋ ಭಾಷಿಕ ಅಧ್ಯಯನ (ಅ.ಪ್ರ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಆರ್ಕೆ ಮಣಿಪಾಲ, ೧೯೮೯, ಹೆಸರಿನಲ್ಲೇನಿದೆ, ನ್ಯೂಸ್ಟಾರ್ ಪಬ್ಲಿಕೇಶನ್, ಸಾರಕ್ಕಿ ಬೆಂಗಳೂರು

೧೦. ಉಪಾಧ್ಯ ಜಿ.ಎನ್., ೨೦೦೨, ಗೋದಾವರಿವರಂ ಇರ್ದ ಕನ್ನಡ ನಾಡು, ಮುಂಬೈ ವಿಶ್ವವಿದ್ಯಾಲಯ, ಮುಂಬೈ.

೧೧. ಒಡೆಯರ್ ಡಿ. ಹೆಗ್ಗಡೆ, ೨೦೧೨, ಹಾಲುಮತ ಅಧ್ಯಯನಗಳು, ಕಲಾ ಪ್ರಕಾಶನ, ಬೆಂಗಳೂರು
೧೨. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೮೫, ಕರ್ನಾಟಕ ಗ್ರಾಮ ಸೂಚಿ, ಬೆಂಗಳೂರು.
೧೩. ಕರಿಬಸಪ್ಪ ಎ., ೨೦೦೩, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೪. ಕರಿಯಪ್ಪ, ಬಳ್ಳಾರಿ ಜಿಲ್ಲೆಯ ಅವದೂತರು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೫. ಕರಿಶೆಟ್ಟಿ ರುದ್ರಪ್ಪ, ೧೯೯೫, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೬. ಕಲಬುರ್ಗಿ ಎಂ.ಎಂ., ಐತಿಹಾಸಿಕತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
೧೭. ಕಲಬುರ್ಗಿ ಎಂ.ಎಂ., ಏಪ್ರಿಲ್/ಜೂನ್–೧೯೮೦, ಸಾಧನೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಸಂಪುಟ–೯, ಸಂಚಿಕೆ–೨,
೧೮. ಕಲಬುರ್ಗಿ ಎಂ.ಎಂ., ಜುಲೈ ೧೯೮೧, ದೇವೂರದಾಸಿಮಯ್ಯ, 'ಅಂಕಣ' ನಿಯತಕಾಲಿಕೆ, ಕೋದಂಡರಾಮಪುರ, ಬೆಂಗಳೂರು.
೧೯. ಕಲಬುರ್ಗಿ ಎಂ.ಎಂ., ೧೯೮೭, ಮಹಾರಾಷ್ಟ್ರದ ಕನ್ನಡ ಶಾಸನಗಳು, ಮುಂಬೈ ವಿಶ್ವವಿದ್ಯಾಲಯ
೨೦. ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೧. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೧
೨೨. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೨
೨೩. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೩
೨೪. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೪
೨೫. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೫
೨೬. ಕಲಬುರ್ಗಿ ಎಂ.ಎಂ., ೨೦೧೦, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೬
೨೭. ಕಲಬುರ್ಗಿ ಎಂ.ಎಂ., ೨೦೧೨, ಕನ್ನಡ ನಾಮವಿಜ್ಞಾನ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.
೨೮. ಕಲಬುರ್ಗಿ ಎಂ.ಎಂ., ೨೦೧೪, ಕನ್ನಡ ಸಂಶೋಧನಾಶಾಸ್ತ್ರ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.
೨೯. ಕಲಬುರ್ಗಿ ಎಂ.ಎಂ., ೨೦೧೫, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೭

೩೦. ಕಲಬುರ್ಗಿ ಎಂ.ಎಂ., ೨೦೧೬, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂ–೮

೩೧. ಕುಮಾರಸ್ವಾಮಿ ಕೆ.ಎಸ್., ೧೯೯೬, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೨. ಕೃಷ್ಣಭಟ್ಟ ಸೇಡಿಯಾಪು., ೧೯೭೫, ಕೆಲವು ದೇಶನಾಮಗಳು, ಸಾಹಿತ್ಯ ಸಂಘ, ಮಣಿಪಾಲ.

೩೩. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೪. ಕೃಷ್ಣ ಪರಮೇಶ್ವರ ಭಟ್ಟ, ೧೯೯೬, ಕೋಲಾರ ಜಿಲ್ಲೆಯ ಕನ್ನಡ–ತೆಲುಗು ದ್ವಿಭಾಷಿಕ ಪರಿಸರ ಒಂದು ಅಧ್ಯಯನ (ಅಪ್ರ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೫. ಕೆಂಪಯ್ಯ ಜಿ.ಎನ್., ೨೦೧೦, ಉಪ್ಪಿನ ಕೊಳಗ ಒಕ್ಕಲಿಗರು ಒಂದು ಸಾಂಸ್ಕೃತಿಕ ಅಧ್ಯಯನ, ಗೋಧೂಳಿ ಪ್ರಕಾಶನ, ಬೆಂಗಳೂರು

೩೬. ಕೆಂಪೇಗೌಡ ಕೆ., ೧೯೯೬, ಸಾಮಾನ್ಯ ಭಾಷಾ ವಿಜ್ಞಾನ, ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು.

೩೭. ಗುರುವ ಆರ್.ಎನ್., ಬಾದುಬ್ಬೆ, ಕರ್ನಾಟಕ ಭಾರತಿ, ನಿಯತಕಾಲಿಕೆ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ, ಸಂಪುಟ–೬, ಸಂಚಿಕೆ–೩

೩೮. ಗೋಪಾಲ ಕೃಷ್ಣ ವಿ., ೧೯೮೭, ಸ್ಥಳನಾಮಗಳ ಅಧ್ಯಯನ, ವಿದ್ಯಾಗಿರಿ ಪ್ರಕಾಶನ, ಕೋಲಾರ.

೩೯. ಗೋಪಾಲಕೃಷ್ಣ ವಿ., ೧೯೮೯, ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಮಾಜೋ ಭಾಷಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪೦. ಚಕ್ಕರೆ ಶಿವಶಂಕರ್ ಮತ್ತು ಲಿಂಗಯ್ಯ ಡಿ., (ಸಂ)ಗುರುಮೂರ್ತಿ ಕೆ.ಜಿ., (ಲೇ), ೨೦೦೮, ವ್ಯಕ್ತಿನಾಮಗಳು, ಸ್ಥಳನಾಮಗಳ ಅಧ್ಯಯನ ಲೇಖನಗಳ ಸಂಗ್ರಹ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೪೧. ಚಂದ್ರಪೂಜಾರಿ ಎಂ., ೨೦೦೯, ಸಂಶೋಧನೆ ಏನು? ಏಕೆ? ಹೇಗೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಚಿದಾನಂದ ಮೂರ್ತಿ ಎಂ., ೧೯೭೦, ಸಂಶೋಧನಾ ತರಂಗ–೩, ಬೆಂಗಳೂರು ವಿಶ್ವವಿದ್ಯಾಲಯ.

೪೩. ಚಿದಾನಂದ ಮೂರ್ತಿ ಎಂ., ೧೯೯೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೪. ಚಿದಾನಂದ ಮೂರ್ತಿ ಎಂ., ೨೦೦೨, ಕರ್ನಾಟಕ ವ್ಯಕ್ತಿನಾಮಗಳು, ವಾಗರ್ಥ, ಸಪ್ನ ಬುಕ್‌ಹೌಸ್ ಗಾಂಧಿನಗರ, ಬೆಂಗಳೂರು

೪೫. ಚಿದಾನಂದ ಮೂರ್ತಿ ಎಂ., ೨೦೦೨, ದೇಕಬ್ಬೆ ಶಾಸನದ ಸ್ಥಳನಾಮಗಳನ್ನು (ಮತ್ತು ಇತರ ಕೆಲವು ಸಂಗತಿ) ಕುರಿತು, ವಾಗರ್ಥ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೪೬. ಚಿದಾನಂದ ಮೂರ್ತಿ ಎಂ., ೨೦೦೨, ಆದಯ್ಯ ಹೆಸರಿನ ನಿಷ್ಪತ್ತಿ ಮತ್ತು ಅದರಿಂದ ಹೊರಡುವ ಕೆಲವು ಧ್ವನಿಗಳು, ವಾಗರ್ಥ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೪೭. ಚಿದಾನಂದ ಮೂರ್ತಿ ಎಂ., ೨೦೦೨, ತಮ್ಮಕೊನೆಯಲ್ಲಿರುವ ಹೆಸರು, ವಾಗರ್ಥ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೪೮. ಚಿದಾನಂದ ಮೂರ್ತಿ ಎಂ., ೨೦೦೨, 'ಬಾದುಬ್ಬೆ-ಬಾದುಮಯ್ಯ-ಬನಶಂಕರಿ ಪೆಟ್ಟಿಗೆ-ಲಜ್ಜಗೌರಿ', ಜಾನಪದ ಸಂಪ್ರಬಂಧಗಳು, ಜನ-ಜನಪದ-ಜಾನಪದ (ಸಂ-೩), ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೪೯. ಚಿದಾನಂದ ಮೂರ್ತಿ ಎಂ., ೨೦೦೨, ಅಮ್ಮ ಅಬ್ಬೆ, ಅಲ್ಲಮ, ಬಾದುಬ್ಬೆ, ವಾಗರ್ಥ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೫೦. ಚಿದಾನಂದ ಮೂರ್ತಿ, ೨೦೦೭, ಹೊಸತು ಹೊಸತು, ಹೇಮಂತ ಸಾಹಿತ್ಯ, ರಾಜಾಜಿನಗರ, ಬೆಂಗಳೂರು.

೫೧. ಚಿದಾನಂದ ಮೂರ್ತಿ ಎಂ., ೨೦೧೨, ಭಾಷಾ ವಿಜ್ಞಾನದ ಮೂಲತತ್ವಗಳು, ಡಿ.ವಿ.ಕೆ, ಮೂರ್ತಿ ಪ್ರಕಾಶನ, ಮೈಸೂರು.

೫೨. ಚಿದಾನಂದ ಮೂರ್ತಿ ಎಂ., ೨೦೧೬, ಸಂಶೋಧನೆ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೫೩. ಜಂಬುನಾಥನ್ ಎಂ.ವ್ಹಿ., ಅರವತ್ತು ಮೂರು ಪುರಾತನರ ಚರಿತ್ರೆ, ಕರ್ನಾಟಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂಪುಟ-೪,ಸಂಚಿಕೆ-೩.

೫೪. ಜವರೇಗೌಡ ದೇ, ೧೯೭೧, ಬೆರಕೆಸೊಪ್ಪು, ಸುರಭಿ ಪ್ರಕಾಶನ, ಮೈಸೂರು

೫೫. ಜವರೇಗೌಡ ದೇ, ೧೯೭೭, ಜಾನಪದ ಸೌಂದರ್ಯ, ಮೈಸೂರು.

೫೬. ಜವರೇಗೌಡ ದೇ, ೧೯೮೯, ವ್ಯಕ್ತಿ ನಾಮಗಳು, ಜಾನಪದ ಸೌಂದರ್ಯ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೫೭. ಜವರೇಗೌಡ ದೇ, ೧೯೯೦, ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೫೮. ಜವರೇಗೌಡ ದೇ., ೨೦೧೦, ವ್ಯಕ್ತಿನಾಮಗಳು, ಜಾನಪದ ಮಹಾಸಂಪುಟ, ಬಳಕೆರೆ ಪ್ರಕಾಶನ, ಮೈಸೂರು.

೫೯. ಜೈಶೂರ್ ಬಿ.ಜೆ., ೨೦೧೧, ನಕ್ಷತ್ರದನುಸಾರ ಗಂಡು ಮಕ್ಕಳ ಲೇಟೆಸ್ಟ್ ಹೆಸರು, ಶ್ರೀನಿಧಿ ಪಬ್ಲಿಕೇಷನ್ಸ್, ಬೆಂಗಳೂರು

೬೦. ಜೋಗಿನಕಟ್ಟೆ ಮಂಜುನಾಥ, ೨೦೧೨, ಮಸ್ಕಿ ಕನ್ನಡ: ಒಂದು ಭಾಷಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಜ್ಯೋತಿ ಹೊಸೂರು, ೧೯೭೩, ಹೆಸರ ಹೇಳತೀನಿ ಒಡಪಕಟ್ಟಿ,

೬೨. ದೇವೀಂದ್ರಪ್ಪ ಜೆ., ೩೦೦೩, ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೩. ನಂಜಪ್ಪ ಈ, (ಸಂ), ೨೦೦೭, ಹೆಸರಿನಲ್ಲೇನಿದೆ, ಪ್ರಗತಿಪರ ಶಿಕ್ಷಣ ಪ್ರಕಾಶನ, ಜಯನಗರ, ಬೆಂಗಳೂರು.

೬೪. ನಂಜಯ್ಯ ಎಂ., ೨೦೦೦, ಚಾಮರಾಜನಗರ ತಾಲೂಕಿನ ಸ್ಥಳನಾಮಗಳು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೫. ನಟರಾಜ ಡಿ.ಕೆ, ೨೦೦೮, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಥಳನಾಮಗಳು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೬. ನಟರಾಜು ಜೆ.ಆರ್., ೨೦೧೬, ಆಧುನಿಕ ನೆಲೆಯಲ್ಲಿ ವ್ಯಕ್ತಿನಾಮಗಳು, ಕನ್ನಡ ಅಂದು ಇಂದು, (ಸಂ)ಸುರೇಂದ್ರ ಸ್ವಾಮಿ., ಎಸ್.ಎಸ್.ಪುರಂ, ತುಮಕೂರು.

೬೭. ನಾಗಪ್ಪ ಬಸಲಿಂಗಪ್ಪ ಸಂಗಳದ, ೨೦೧೧, ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೮. ನಾಗಭೂಷಣ ಸಿ., ೧೯೯೯, ಕನ್ನಡ ಸಾಹಿತ್ಯ, ಸಂಸ್ಕೃತಿ ಶೋಧನ.

೬೯. ನಾಗರಾಜ, ೨೦೦೮, ಮೈಲಾರ ಲಿಂಗನ ಆಚರಣೆ ಒಂದು ಸಾಮಾಜಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೦. ನಾಗರಾಜು ಎಂ.ಎಚ್., ೨೦೦೩, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಅನಿಕೇತನ ಪ್ರಕಾಶನ, ತುಮಕೂರು

೭೧. ನಾಗರಾಜಯ್ಯ ಹಂಪಾ, ೧೯೭೮, ಹೆಸರಿನ ಸೊಗಸು, ಪ್ರಭಾ ಪಬ್ಲಿಷರ್ಸ್, ಧಾರವಾಡ.

೭೨. ನಾಗರಾಜಯ್ಯ ಹಂಪಾ, ೧೯೯೭, ಚಂದ್ರಕೊಡೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೩. ನಾಗರಾಜಯ್ಯ ಹಂಪಾ, ೧೯೯೭, ದ್ರಾವಿಡ ಭಾಷಾ ವಿಜ್ಞಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭೪. ನಾಗೇಶ್ ಎಚ್.ವಿ., ೧೯೮೧, ಗ್ರಾಮ ವ್ಯಾಸಂಗ, ಚಂದ್ರನಾಥ ಪ್ರಕಾಶನ, ಧಾರವಾಡ.

೭೫. ನಾಗೇಶ್ ಎಚ್.ವಿ., ೧೯೯೬, ಬರಹಬಾಗಿನ (ಹಂಪನಾ ಅಭಿನಂದನ ಗ್ರಂಥ)

೭೬. ನಾರಾಯಣ ಕೆ.ವಿ., ೧೯೯೭, ದ್ವಿಭಾಷಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೭. ನಾರಾಯಣ ಕೆ.ವಿ., ಮತ್ತು ಇತರರು, ೧೯೯೭, ದಿನದಿನ, ಭಾಷಾಧ್ಯಯನ ಮಾಲೆ–೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೮. ನಾರಾಯಣ ಕೆ.ವಿ., ಮತ್ತು ಇತರರು (ಸಂ), ೧೯೯೯, ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೯. ನಾರಾಯಣ ಕೆ.ವಿ., ಮತ್ತು ಇತರರು (ಸಂ), ೧೯೯೯, ಭಾಷೆ ವಿಶ್ವಕೋಶ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೦. ನಾರಾಯಣ ಕೆ.ವಿ., ಮತ್ತು ಇತರರು (ಸಂ), ೨೦೦೦, ವ್ಯಕ್ತಿನಾಮಗಳು: ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೧. ನಾರಾಯಣ ಕೆ.ವಿ., ೨೦೦೯, ಕನ್ನಡ ಜಗತ್ತು ಅರ್ಧಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೨. ನೇಗಿನಹಾಳ್ ಎಂ.ಬಿ., ೧೯೯೯, ನೇಗಿಲಹಾಳರ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩. ಪರಮಶಿವಯ್ಯ ಜಿ.ಶಂ., ೧೯೭೦, ಮೇದರ ಕಲ್ಲು ಮತ್ತು ಇತರ ಪ್ರಬಂಧಗಳು, ಸಾಹಿತ್ಯ ಸಧನ, ಮಾನಸಗಂಗೋತ್ರಿ, ಮೈಸೂರು

೮೪. ಪಾಟೀಲ ಪುಟ್ಟಪ್ಪ, ೨೦೦೦, ಸಮಗ್ರ ಬಾಪೂ ಪ್ರಪಂಚ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೮೫. ಪಾಂಡುರಂಗ ಬಾಬು ಡಿ., ೧೯೯೫, ಆದಿಜಾಂಬವರ ಕನ್ನಡ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೮೬. ಪಾಂಡುರಂಗ ಡಿ.ಆರ್., ೧೯೯೦, ದಕ್ಷಿಣ ಕನ್ನಡ ಜಿಲ್ಲೆಯ ಭೈರರು ಸಾಹಿತ್ಯಿಕ–ಸಾಂಸ್ಕೃತಿಕ ಅಧ್ಯಯನ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ.

೮೭. ಪುಟ್ಟಯ್ಯ ಬಿ.ಎಂ., ೨೦೧೦, ಸಂಶೋಧನೆ ತಾತ್ವಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೮. ಪ್ರಭಾರಾವ್ ಕೆ., ೨೦೧೫, ನಿಮ್ಮ ಮಗುವಿಗೊಂದು ಮುದ್ದಾದ ಹೆಸರು, ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು

೮೯. ಬಸವರಾಜ ಎ.ಕೆ., ೨೦೦೮, ಕೊಟ್ಟೂರು ಗ್ರಾಮಾಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೦. ಬಸವರಾಜ ಕೆ.ಪಿ., ೨೦೦೭, ಸಿರಾ ಸೀಮೆಯ ಸಾಸ್ಕೃತಿಕ ವೀರರು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೧. ಬಸವರಾಜ ಡಿ., ೨೦೦೭, ದಂಡಿ ದುರುಗಮ್ಮ ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೨. ಬಾಳಪ್ಪ ಎ.ಬಿ., ೨೦೧೧, ಕರ್ನಾಟಕ ಕುರುಬರರ ಒಳಪಂಗಡಗಳು : ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿ.ಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೩. ಬಿರಾದಾರ ಬಿ.ಜಿ., ೨೦೦೭, ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿ.ಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೯೪. ಬಿ.ವ್ಹಿ.ಜಿ., ಚೇಂಜ್ ಆಫ್ ನೇಮ್, ಕರ್ನಾಟಕ ಭಾರತಿ, ನಿಯತ ಕಾಲಿಕೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂಪುಟ–೬, ಸಂಚಿಕೆ–೨

೯೫. ಬೆನಗಲ್ ರಾಮರಾವ್ ಮತ್ತು ಇತರರು, ೨೦೦೧, ಪುರಾಣ ನಾಮ ಚೂಡಾಮಣಿ, ಅರೋರ ಪ್ರಕಾಶನ, ಮೈಸೂರು.

೯೬. ಮಧುಸೂಧನ ಕೆ.ಎಸ್., (ಸಂ), ೧೯೮೭, ಹೂಬುಟ್ಟಿ, ಕರ್ನಾಟಕ ಸಂಘ, ಜ್ಞಾನಭಾರತಿ, ಬೆಂಗಳೂರು.

೯೭. ಮರಿಯಪ್ಪ ಭಟ್ ಎಂ., ೧೯೮೧, ಕೆಲವು ಪಕ್ಷಿಗಳ ಹೆಸರುಗಳು, ಬೆಳ್ವೊಲ ಪ್ರಕಾಶನ, ಬೆಳ್ವೊಲ.

೯೮. ಮರಿಸ್ವಾಮಿ ಆರ್., ೨೦೧೪, ಸೋಲಿಗ: ಸಮಾಜೋಭಾಷಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೯೯. ಮಲ್ಲಿಕಾರ್ಜುನ ಹಿರೇಮಠ., ೨೦೦೮, ಬೀಳಗಿ ತಾಲ್ಲೂಕಿನ ಸ್ಥಳನಾಮಾಧ್ಯಯನ, (ಅಪ್ರಕಟಿತ ಎಂ.ಫಿಲ್ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೦. ಮಲ್ಲೇಪುರಂ ಜಿ.ವೆಂಕಟೇಶ., ೨೦೦೧, ಶಂಬಾ ಜೋಷಿ, ಭಾರತೀಯ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೧. ಮಲ್ಲೇಪುರಂ ಜಿ.ವೆಂಕಟೇಶ., (ಸಂ), ೧೯೯೨, ಶಂಬಾ ಕೃತಿ ಸಮೀಕ್ಷೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೦೨. ಮಹಾದೇವಯ್ಯ ಪಿ., ೨೦೦೬, ದಿನದಿನ–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೩. ಮಹಾದೇವಯ್ಯ ಪಿ., ೨೦೦೯, ವ್ಯಕ್ತಿನಾಮಗಳು, ಭಾಷೆ, ವಿಶ್ವಕೋಶ, (ಸಂ) ನಾರಾಯಣ ಕೆ.ವಿ ಮತ್ತು ಇತರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೪. ಮೂರ್ತಿರಾವ್ ಎ.ಎನ್, ಹೆಂಡತಿಯ ಹೆಸರು, ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು., ಸಂಪುಟ–೨೭, ಸಂಚಿಕೆ–೨,

೧೦೫. ಮೇಘರಾಜ ಜಿ., ೨೦೧೭, ಹಂಡಿಜೋಗಿಗಳ ಸಂಸ್ಕೃತಿ ಮತ್ತು ಭಾಷೆ(ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೬. ಮೇಘಾವತ್ ಗೋವಿಂದ ನಾಯ್ಕ, ೨೦೧೨, ಲಂಬಾಣಿ ಜನಾಂಗದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೧೦೭. ಮೇವುಂಡಿ ಮಲ್ಲಾರಿ, ೨೦೧೩, ಕನ್ನಡ ನಾಡಿನ ಶಾಸನ ಕವಿಗಳು, ಕನ್ನಡ ಸಾಹಿತ್ಯ ಷರಿಷತ್ತು, ಬೆಂಗಳೂರು.

೧೧೭. ರಾಮಕೃಷ್ಣ ಆರ್., (ಲೇ), ೧೯೯೬, ಕನ್ನಡ ವ್ಯಕ್ತಿನಾಮಗಳ ಭಾಷಿಕ ವಿಶ್ಲೇಷಣೆ, ಬರೆಹ ಬಾಗಿನ (ಹಂಪನಾ ಅಭಿನಂದನ ಗ್ರಂಥ).

೧೧೮. ರಾಮಕರಷ್ಣ ಆರ್., ೧೯೬೮, ನಾಮದ ಬಲ ಮತ್ತು ಇತರ ಪ್ರಬಂಧಗಳು, ಗೀತಾ ಬುಕ್ ಹೌಸ್, ಮೈಸೂರು.

೧೧೯. ರಾಮಕೃಷ್ಣ ಆರ್., ೨೦೦೦, ಕನ್ನಡ ವ್ಯಕ್ತಿನಾಮಗಳ ಭಾಷಿಕ ವಿಶ್ಲೇಷಣೆ, ಭಾಷಾ ವೀಕ್ಷಣಾ ತೇಜಸ್ವಿ, ಪ್ರಕಾಶನ, ಮೈಸೂರು.

೧೨೦. ರಾಮಕೃಷ್ಣ ಆರ್., ೨೦೦೦, ಕಿಂಕಣಿಯರ ನಾಮ ವಿಶೇಷಣಗಳು, ಭಾಷಾವೀಕ್ಷಣಾ, ತೇಜಸ್ವಿ, ಪ್ರಕಾಶನ, ಮೈಸೂರು.

೧೨೧. ರಾಮಭಟ್ ಪಿ., ಜುಲೈ/ಸೆಪ್ಟಂಬರ್–೧೯೮೦, ಹವ್ಯಕರಲ್ಲಿ ಅಡ್ಡಹೆಸರುಗಳು, ಸಾಧನೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಸಂಪುಟ–೯, ಸಂಚಿಕೆ–೩,

೧೨೨. ಲಲಿತ ಎ.ಸಿ., ೧೯೯೩, ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೩. ಲಾವಣ್ಯ ಸಿ.ಪಿ., ೨೦೧೬, ಕೊಡಗಿನ ಗೌಡ ಕನ್ನಡದ ಭಾಷಿಕ ನೆಲೆಗಳು (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೪. ವಡ್ಡಗೆರೆ ನಾಗರಾಜಯ್ಯ.,(ಸಂ), ೨೦೧೦, ವಡ್ಡಗೆರೆ ನಾಗಮ್ಮ: ಮಹಾಸತಿ ಕಾವ್ಯ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು

೧೨೫. ವಾಸಂತಿ., ೨೦೧೭, ನಿಮ್ಮ ಮುದ್ದು ಮಗುವಿಗೆ ೧೦೦೦೦ ಹೆಸರುಗಳು, ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು

೧೨೬. ವಿಜಯಾ ಸುಬ್ರಮಣ್ಯ., (ಸಂ), ೨೦೧೦, ಪುರಾಣ ಪುರುಷ ರತ್ನಗಳು, ಸಾಧನ ಪ್ರಕಾಶನ, ಬೆಂಗಳೂರು

೧೨೭. ವಿಮಲಾ ಅಮಲಪ್ಪ., ೨೦೦೯, ಕಾಡು ಗೊಲ್ಲರ ಆರ್ಥಿಕ ಸ್ಥಿತಿಗತಿಗಳು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೧೨೮. ವಿಶ್ವನಾಥಯ್ಯ ಸಿ.ಎಂ., ೨೦೦೪, ಕಡೂರು ತಾಲ್ಲೂಕಿನ ಸ್ಥಳನಾಮಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

೧೨೯. ವಿಶ್ವನಾಥ, ೨೦೦೦, ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ, ದೇವಿ ಪ್ರಕಾಶನ ಮೈಸೂರು.

೧೩೦. ವೀರಭದ್ರ ಶರ್ಮ., ೨೦೦೯, ಅಡ್ಡ ಹೆಸರುಗಳು, ಭಾಷೆ ವಿಶ್ವಕೋಶ, (ಸಂ) ನಾರಾಯಣ ಕೆ.ವಿ ಮತ್ತು ಇತರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೧. ಶಂಕನಾರಾಯಣ ತೀ.ನಂ., (ಸಂ), ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೧೩೨. ಶಂಬಾ ಜೋಷಿ, ೧೯೪೭, ಎಡೆಗಳು ಹೇಳುವ ಕಂನಾಡ ಕಥೆ, ಮಾಧವ ಬಲ್ಲಾಳ ಬಂಧುಗಳು, ಧಾರವಾಡ.

೧೩೩. ಶಂಬಾ ಜೋಷಿ, ೨೦೦೯, ಕಂನುಡಿಯ ಹುಟ್ಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩೪. ಶಾಂತ ನಾಡಿಗಾರ, ೨೦೧೫, ಮುದ್ದು ಮಗುವಿಗೊಂದು ಅರ್ಥಪೂರ್ಣ ಹೆಸರು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು

೧೩೫. ಶಿವಪ್ರಕಾಶ ನಾಯ್ಕ, ೨೦೦೬, ಆದೋನಿ ಕನ್ನಡ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೬. ಶಿವಸ್ವಾಮಿ ಎಸ್.ಎನ್., ೧೯೮೫, ಆತನ ಹೆಸರು, ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಂಪುಟ–೪೦, ಸಂಚಿಕೆ–೩.

೧೩೭. ಶುಭಕರಚಾರಿ, ೨೦೧೦, ಕಮ್ಮಾರರ ಬದುಕಿನ ಸ್ಥಿತ್ಯಂತರಗಳು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೧೩೮. ಶೇಖರಾಚಾರಿ ಕೆ., ೨೦೧೦, ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೯. ಶೇಷಗಿರಿರಾವ್ ಎಸ್.ಎಲ್., ಮತ್ತು ಇತರರು, (ಸಂ), ೨೦೦೫, ಬೆಂಗಳೂರು ದರ್ಶನ, ಉದಯಭಾನು ಕಲಾಸಂಘ, ಬೆಂಗಳೂರು, ಭಾಗ–೧.

೧೪೦. ಶೇಷಗಿರಿರಾವ್ ಎಸ್.ಎಲ್., ಮತ್ತು ಇತರರು, (ಸಂ), ೨೦೦೫, ಬೆಂಗಳೂರು ದರ್ಶನ, ಉದಯಭಾನು ಕಲಾಸಂಘ, ಬೆಂಗಳೂರು, ಭಾಗ–೨

೧೪೧. ಶ್ರೀಕಂಠಯ್ಯ ಎ., ೧೯೪೨, ತುಮಕೂರು ಇತಿಹಾಸ, ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಂಪುಟ–೨೪, ಸಂಚಿಕೆ–೧.

೧೪೨. ಶ್ರೀಧರ್ ಎಸ್.ಎನ್., ೧೯೯೫, ಇಂದಿನ ಕನ್ನಡ: ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೩. ಶ್ರೀನಿವಾಸ ಬೇಂದ್ರೆ, ಬೀದರ್ ಕನ್ನಡ ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಬೇಧಗಳು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೪. ಶ್ರೀಲಕ್ಷ್ಮೀ ಪ್ರಕಾಶನ, ೨೦೧೬, ಪುಟ್ಟ ಗಂಡು ಮಗುವಿಗೊಂದು ಮುದ್ದಾದ ಹೆಸರು, ಪುಟಾಣಿ ಸೀರೀಸ್–೧೪

೧೪೫. ಶ್ರೀಲಕ್ಷ್ಮೀ ಪ್ರಕಾಶನ, ೨೦೧೬, ಪುಟ್ಟ ಹೆಣ್ಣು ಮಗುವಿಗೊಂದು ಮುದ್ದಾದ ಹೆಸರು, ಪುಟಾಣಿ ಸೀರೀಸ್–೧೫

೧೪೭. ಶ್ರೀಲಕ್ಷ್ಮೀ ಪ್ರಕಾಶನ, ೨೦೧೬, ಪುಟ್ಟ ಮಗುವಿಗೊಂದು ಮುದ್ದಾದ ಹೆಸರು, ಪುಟಾಣಿ ಸೀರೀಸ್–೧೬

೧೪೮. ಶ್ರುತಿಕುಮಾರ್, ೨೦೧೫, ನಿಮ್ಮ ಮಗುವಿಗೊಂದು ಅಚ್ಚು ಮೆಚ್ಚಿನ ಹೆಸರು, ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು

೧೪೯. ಷಟ್ಟರ್ ಷ., ೨೦೧೪, ಹಳಗನ್ನಡ, ಲಿಪಿ, ಲಿಪಿಕಾರ ಪಿಲಿವ್ಯವಸಾಯ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು.

೧೫೦. ಸಂಗಮೇಶ ಸವದತ್ತಿ ಮಠ, ೧೯೭೩, ಮನೆತನದ ಅಡ್ಡ ಹೆಸರುಗಳು, ಕರ್ನಾಟಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂಪುಟ–೫, ಸಂಚಿಕೆ–೪

೧೫೧. ಸಂಗಮೇಶ ಸವದತ್ತಿ ಮಠ, ೧೯೭೦, ದ್ರಾವಿಡ ಭಾಷಾ ವಿಜ್ಞಾನ, ರೂಪರಶ್ಮಿ ಪ್ರಕಾಶನ, ಕಲಬುರಗಿ.

೧೫೨. ಸಂಗಮೇಶ್ ಸವದತ್ತಿ ಮಠ, ೧೯೯೯, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಕಲಬುರಗಿ.

೧೫೩. ಸಣ್ಣ ಓಬಯ್ಯ ಎಸ್.ಕೆ., ೨೦೦೨, ಮ್ಯಾಸ ಬೇಡ ಮತ್ತು ಕಾಡು ಗೊಲ್ಲ ಬುಡಕಟ್ಟುಗಳು: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫೪. ಸಣ್ಣ ಪಾಪಯ್ಯ ದೇವರ ಹಟ್ಟಿ, ಕನ್ನಡ ಪರಿಸರದ ಮುಸ್ಲಿಂ ವ್ಯಕ್ತಿನಾಮಗಳು, ನಮ್ಮ ಕನ್ನಡ, ೫೦ನೇ ಹೊನ್ನ ಸಂಚಿಕೆ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೫. ಸಣ್ಣಪಾಪಯ್ಯ, ೨೦೧೦, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, (ಪ್ರಕಟಿತ ಪಿಎಚ್.ಡಿ ಪ್ರಬಂಧ), ಬಂಡಾರ ಪ್ರಕಾಶನ, ಮಸ್ಕಿ.

೧೫೬. ಸವಿತಾ, ೨೦೦೫, ಸಂಡೂರು ಪರಿಸರದ ಗ್ರಾಮದೇವಗಳು, (ಪ್ರಕಟಿತ ಎಂ.ಫಿಲ್ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೭. ಸಾಂಬಮೂರ್ತಿ, ೨೦೦೧, ದಿನದಿನ–೨, ಭಾಷಾಧ್ಯಯನ ಮಾಲೆ–೧೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೮. ಸಾಂಬಮೂರ್ತಿ., ೨೦೧೧, ವ್ಯಕ್ತಿನಾಮಗಳ ರಾಚನಿಕ ಅಧ್ಯಯನ, ಕನ್ನಡ ಭಾಷಾ ವಿಜ್ಞಾನ ಸಂಶೋಧನೆ : ಇಂದು, (ಸಂ)ರೇಣುಕಾ ಕೋಡಗುಂಟಿ., ಬಂಡಾರ ಪ್ರಕಾಶನ, ಮಸ್ಕಿ

೧೫೯. ಸುಬ್ಬಣ್ಣ ರೈ ಎ., ೧೯೯೪, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಮುಂಬೈ.

೧೬೦. ಸುಮಂಗಲಾ ಮೇಟಿ, ೨೦೧೩, ಕರ್ನಾಟಕ ಲಿಂಗಾಯತ ರಾಣಿಯರು : ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬೧. ಸುಂದರಂ ಆರ್ಸಿಯಸ್., (ಸಂ), ಕರ್ನಾಟಕದ ಚರಿತ್ರೆ, ಸಂ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬೨. ಸುರೇಶ ಕೆ.ಸಿ., ೨೦೧೧, ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬೩. ಸೂರ್ಯನಾಥ್ ಯು. ಕಾಮತ್ ಮತ್ತು ಇತರರು,(ಸಂ),(ಲೇ), ೧೯೮೬, ತುಮಕೂರು ಪ್ರೇಕ್ಷಣೀಯ ಸ್ಥಳಗಳು. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ–೩.

೧೬೪. ಹಿರೇಮಠ ಬಿ.ಆರ್., ಏಪ್ರಿಲ್/ಜೂನ್–೧೯೮೦, ಶಾಸನೋಕ್ತ ಗುಡ್ಡವ್ವೆ, ಸಾಧನೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಸಂಪುಟ–೯.

೧೬೫. ಹುಲ್ಲೂರು ಶ್ರೀನಿವಾಸ ಜೋಯಿಸ, (ಸಂ), ೧೯೬೮, ಚಿತ್ರದುರ್ಗದ ಬಖೈರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಚಿತ್ರದುರ್ಗ.

೧೬೬. ಹೆಗ್ಡಾಳ್ ಹುಲುಗಪ್ಪ, ೨೦೧೬, ದೈವಸಂಬಂಧಿ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬೭. Murigappa A., 1984, Personal name of Karnataka papers in Kannada linguistics, Brindavamu, Publishers', Mysore-9

೧೬೮. Bhat K.P, 1972, Personal Name's in the Naiks, Proceeding of the second all India Conference of Dravidian Linguistics.

೧೬೯. Bhadri K.M., 1982, Same Interesting Prom, North, Karnataka, The Place Name Society of India, Vol-III.

## ನಿಘಂಟುಗಳು

೧. ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಿಘಂಟು, ಸುಭಾಶ್ ಸ್ಟೋರ್ಸ್, ಮೈಸೂರು
೨. ಇಂಗ್ಲಿಷ್–ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
೩. ಇಗೋ ಕನ್ನಡ, ವೆಂಕಟಸುಬ್ಬಯ್ಯ ಜಿ., ನವಕರ್ನಾಟಕ ಪ್ರಕಾಶನ, ಬೆಂಗಳೂರು
೪. ಕನ್ನಡ–ಇಂಗ್ಲಿಷ್ ನಿಘಂಟು, ವಿ.ಕೃಷ್ಣ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫. ಕನ್ನಡ–ಇಂಗ್ಲಿಷ್ ಡಿಕ್ಷನರಿ, ಕಿಟ್ಟೆಲ್, ಏಷಿಯನ್ ಎಜುಕೇಷನ್ ಸರ್ವಿಸ್, ನ್ಯೂಡೆಲ್ಲಿ
೬. ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು,(ಎಂಟು ಸಂಪುಟಗಳು)
೭. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೮. ಸಂಸ್ಕೃತ–ಕನ್ನಡ ನಿಘಂಟು, ಗೀತಾ ಬುಕ್ ಹೌಸ್, ಮೈಸೂರು

## ನಿಯತಕಾಲಿಕೆಗಳು ಮತ್ತು ದಿನಪತ್ರಿಕೆ

೧. ಅಂಕಣ–ಕನ್ನಡ ಸಾಹಿತ್ಯ ಮತ್ತು ಆಕಾಶವಾಣಿ, 'ಚಿರಂಜೀವಿ', ಹಳೇ ಈಜು ಕೊಳದ ರಸ್ತೆ, ಕೋದಂಡರಾಮಪುರ, ಬೆಂಗಳೂರು
೨. ಇತಿಹಾಸ ದರ್ಶನ – ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
೩. ಕನ್ನಡ ಪ್ರಭ – ದಿನಪತ್ರಿಕೆ, ದಿನಾಂಕ: ೧೨.೦೫.೨೦೧೫
೪. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫. ಕರ್ನಾಟಕ ಭಾರತಿ – ಕರ್ನಾಟಕ ವಿಶ್ವವಿದ್ಯಾಲಯ, ದಾರವಾಡ
೬. ನಮ್ಮ ಕನ್ನಡ ಪತ್ರಿಕೆ – ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ
೭. ಪ್ರಬುದ್ಧ ಕರ್ನಾಟಕ – ಮೈಸೂರು ವಿಶ್ವವಿದ್ಯಾಲಯ, ಮೈಸೂರು
೮. ರುಜುವಾತು – ಅನಂತಮೂರ್ತಿ ಯು.ಆರ್., (ಸಂ) ವಿ ವಿ ಮೊಹಲ್ಲಾ, ಮೈಸೂರು
೯. ಸಂಕ್ರಮಣ – ಸಂಕ್ರಮಣ ಪ್ರಕಾಶನ, ಬೆಂಗಳೂರು
೧೦. ಸಾಕ್ಷಿ – ಅಕ್ಷರ ಪ್ರಕಾಶನ, ಸಾಗರ
೧೧. ಸಾಧನೆ – ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ


## ಶಾಸನ ಸಂಪುಟಗಳು

೧. ಎಫಿಗ್ರಾಫಿಯಾ ಕರ್ನಾಟಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೨. ತುಮಕೂರು ಜಿಲ್ಲಾ ಶಾಸನ ಸಂಪುಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
೩. ಮೈಸೂರು ಜಿಲ್ಲಾ ಶಾಸನ ಸಂಪುಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

## ವಕ್ತೃವಿವರ

| ಕ್ರಸಂ | ಹೆಸರು | ವಯಸ್ಸು | ಜಾತಿ | ವೃತ್ತಿ | ಸ್ಥಳ |
|---|---|---|---|---|---|
| ೧. | ಅರ್ಜುನಪ್ಪ | ೫೦ | ತಿಗುಳ | ವ್ಯವಸಾಯ | ಗೂಳಹರವೆ |
| ೨. | ಅಶ್ವತ್ಥ ಕೆ | ೩೬ | ತಿಗುಳ | ಉಪನ್ಯಾಸಕ | ಹೊಸಹಳ್ಳಿ |
| ೩. | ಕೆಂಪಯ್ಯ | ೬೦ | ನಾಯಕ | ಕೂಲಿ | ಸಾಗಸಂದ್ರ |
| ೪. | ಕೆಂಪಯ್ಯ | ೭೫ | ಮಾದಿಗ | ವ್ಯವಸಾಯ | ಅಳಿಲುಘಟ್ಟ |
| ೫. | ಗೋಪಾಲನಾಯ್ಕ | ೬೬ | ಲಂಬಾಣಿ | ಕೂಲಿ | ಸಿಗೇಮೆಳೆಪಾಳ್ಯ |
| ೬. | ಚಿತ್ರಲಿಂಗಯ್ಯ ಡಿ.ಸಿ | ೩೫ | ಗೊಲ್ಲ | ಸಂಶೋಧನಾರ್ಥಿ | ಮಧುಗಿರಿ |
| ೭. | ಚಿದಾನಂದ | ೩೫ | ಬೋವಿ | ಕಾರ್ಮಿಕ | ಕಲ್ಲಹರದಗೆರೆ |
| ೮. | ಚಿದಾನಂದಕುಮಾರ್ | ೪೨ | ಕುಂಚಿಟಿಗ | ಗ್ರಾಮಲೆಕ್ಕಾಧಿಕಾರಿ | ಬೆಳ್ಳಾರ |
| ೯. | ಜನಾರ್ಧನ | ೫೦ | ಬ್ರಾಹ್ಮಣ | ಶಿಕ್ಷಕರು | ದಾಸರಹಳ್ಳಿ |
| ೧೦. | ನಂಜುಂಡಸ್ವಾಮಿ | ೪೫ | ಬ್ರಾಹ್ಮಣ | ಉಪನ್ಯಾಸಕರು ಮತ್ತು ಪೌರೋಹಿತ್ಯ | ತುಮಕೂರು |
| ೧೧. | ನರಸಿಂಹಯ್ಯ | ೬೫ | ಮಾದಿಗ | ಕೂಲಿ | ಗೊಲ್ಲಹಳ್ಳಿ |
| ೧೨. | ನಾಗರಾಜ | ೩೫ | ನಾಯಕ | ವ್ಯವಸಾಯ | ಮಂಚಲದೊರೆ |
| ೧೩. | ನಾಗರಾಜು.ಎಲ್.ಎಂ | ೩೫ | ಲಂಬಾಣಿ | ಟಿ.ವಿ.ವರದಿಗಾರ | ಲಂಬಾಣಿತಾಂಡ |
| ೧೪. | ಪಂಚಾಕ್ಷರಯ್ಯ | ೫೦ | ಲಿಂಗಾಯಿತ | ಶಿಕ್ಷಕರು | ಸಾಗರನಹಳ್ಳಿ |
| ೧೫. | ಪಾಂಡುರಂಗಯ್ಯ | ೫೫ | ಹೊಲೆಯ | ವಾದ್ಯನುಡಿಸುವವರು | ಬಸವನಪಾಳ್ಯ |
| ೧೬. | ಪಾತಲಿಂಗಯ್ಯ | ೪೨ | ಗೊಲ್ಲ | ವ್ಯವಸಾಯ | ಅರಸೀಕೆರೆ |
| ೧೭. | ಬೀರಪ್ಪ | ೫೨ | ಕುರುಬ | ಕುರಿಸಾಗಣಿಕೆ/ | ಸಿಂಗದಹಳ್ಳಿ |
| ೧೮. | ಬೀರಲಿಂಗಯ್ಯ | ೬೫ | ಕುರುಬ | ವ್ಯವಸಾಯ | ಆಲಮರದಪಾಳ್ಯ |
| ೧೯. | ಮಂಜುನಾಥ | ೩೬ | ಹೊಲೆಯ | ಉಪನ್ಯಾಸಕ | ಲಕ್ಕೇನಹಳ್ಳಿ |

| | | | | | |
|---|---|---|---|---|---|
| ೨೦. | ಮಲ್ಲಯ್ಯ | ೬೨ | ಕುಂಚಿಟಿಗ | ವ್ಯವಸಾಯ | ಹಾವಿನಾಳು |
| ೨೧. | ಮಹೇಶ್ | ೩೮ | ಬೋವಿ | ಶಿಕ್ಷಕ | ಮಾವತ್ತೂರು |
| ೨೨. | ಮಾದವರಾವ್ | ೬೫ | ಬ್ರಾಹ್ಮಣ | ನಿವೃತ್ತ ಶಿಕ್ಷಕರು | ತುಮಕೂರು |
| ೨೩. | ಮೀಟಾನಾಯ್ಕ | ೪೦ | ಲಂಬಾಣಿ | ಶಿಕ್ಷಕ | ಕರಿದೇವನಹಳ್ಳಿ ತಾಂಡ |
| ೨೪. | ರಂಗಯ್ಯ | ೬೦ | ಕುಂಚಿಟಿಗ | ವ್ಯವಸಾಯ | ಜೋಗಿಹಳ್ಳಿ |
| ೨೫. | ರಂಗಯ್ಯ | ೮೦ | ಮಾದಿಗ | ಕೂಲಿಕಾರ | ಹೂವಿನಕಟ್ಟೆ |
| ೨೬. | ರಂಗನಾಥಯ್ಯ | ೭೦ | ಕುಂಚಿಟಿಗ | ವ್ಯವಸಾಯ | ಹೂವಿನಕಟ್ಟೆ |
| ೨೭. | ರಾಮಪ್ಪ | ೪೬ | ನಾಯಕ | ವ್ಯವಸಾಯ | ಕರೇಮಾದನಹಳ್ಳಿ |
| ೨೮. | ರೇವಣ್ಣಸಿದ್ದಪ್ಪ | ೪೮ | ಕುರುಬ | ವ್ಯವಸಾಯ | ಕುಣಿಗಲ್ |
| ೨೯. | ಲಕ್ಷ್ಮೀನಾರಾಯಣ | ೩೫ | ಗೊಲ್ಲ | ವ್ಯವಸಾಯ | ಉಪವಾಸಪುರ |
| ೩೦. | ವಿಶ್ವೇಶ್ವರಯ್ಯ ಕೆ.ಜೆ | ೫೬ | ಕುಂಚಿಟಿಗ | ಪೊಲೀಸ್ | ಕುಂಟೇಗೌಡನಹಳ್ಳಿ |
| ೩೧. | ಶಿವಕುಮಾರಸ್ವಾಮಿ | ೪೦ | ಲಿಂಗಾಯಿತ | ವ್ಯಾಪಾರ | ಹೊಸಕೆರೆ |
| ೩೨. | ಸಹದೇವಯ್ಯ | ೭೦ | ತಿಗುಳ | ವ್ಯವಸಾಯ | ಬುಗುಡನಹಳ್ಳಿ |
| ೩೩. | ಸಿದ್ದರಾಮಯ್ಯ | ೬೦ | ಲಿಂಗಾಯಿತ | ನಿವೃತ್ತ ಪ್ರಾಂಶುಪಾಲರು | ಪೆನ್ನೇನಹಳ್ಳಿ |
| ೩೪. | ಹೀರಣ್ಣ | ೫೦ | ಗೊಲ್ಲ | ಕುರಿಸಾಕಾಣಿಕೆ | ಬೇವಿನಹಳ್ಳಿ |



ಕನ್ನಡ ಅಧ್ಯಯನ ವಿಭಾಗ